ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನ.-ಫೆಬ್ರ.-ಮಾರ್ಚ್, ೨೦೧೭ ಸಂಪಾದಕ : ಡಿ.ಎಸ್.ನಾಗಭೂಷಣ

ಸಂಪುಟ: ೬, ಸಂಚಿಕೆ: ೬-೭-೮

ಮಹಿಳಾ ವಿಶೇಷ ಪುಟಗಳೊಂದಿಗೆ

ವಾರ್ಷಿಕ ಚಂದಾ: ರೂ. ೨೦೦/-(ವ್ಯಕ್ತಿಗಳಿಗೆ) ರೂ. ೩೦೦/-(ಸಂಸ್ಥೆಗಳಿಗೆ) **ಬೆಲೆ:** ಬಿಡಿ ಪ್ರತಿ: ರೂ. ೬೦/- ಪುಟ: ೬೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ **ಸಂಚಾರಿ:** ೯೪೪೮೯ ೪೨೨೮೪ ***ಈ ಮೇಲ್:*** dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಷ್ಟ್ರ ಮಟ್ಟದಲ್ಲಿ ನರೇಂದ್ರ ಮೋದಿಯವರು ಹತ್ತಿರದ ಪ್ರತಿಸ್ಪರ್ಧಿ ಎಂಬುವವರೇ ಇಲ್ಲದೆ ತಮ್ಮ ನಿಜ ಗಾತ್ರಕ್ಕಿಂತ ಬಹುಪಟ್ಟು ಗಾತ್ರದೊಂದಿಗೆ ರಾಷ್ಟ್ರೀಯ ನಾಯಕರಾಗಿ ಬೆಳೆಯುತ್ತಿದ್ದಾರೆ. ಮಧ್ಯಮ ವರ್ಗದ ಜನರ ಕಣ್ಣಿಗೆ ನಾಯಕತ್ವದ ಅತ್ಯುತ್ತಮ ಮಾನದಂಡವೆನಿಸಿರುವ ಭ್ರಷ್ಟಾಚಾರ ರಹಿತ ಆಡಳಿತವೇ ಅವರ ನಾಯಕತ್ವದ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಬಂದಿದೆ ಎಂದೂ ಹೇಳಬಹುದು. ಅವರು ಅಧಿಕಾರಕ್ಕೆ ಬಂದುದೇ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಬೃಹತ್ ಪ್ರಮಾಣದ ಹಲವು ಹಗರಣಗಳನ್ನು ಜನರ ಮುಂದಿರಿಸಿ ತಮ್ಮ ಸರ್ಕಾರ 'ತಿನ್ನುವುದೂ ಇಲ್ಲ, ತಿನ್ನಲೂ ಬಿಡುವುದಿಲ್ಲ' ಎಂಬ ಆಶ್ವಾಸನೆಯ ಮೇಲೇ ತಾನೆ? ಈ ಬಿಂಬವನ್ನು ಒಡೆಯಲು ರಾಹುಲ್ ಗಾಂಧಿ ಎಂಬ ಎಳಸು ನಾಯಕ, ಮೋದಿ ಗುಜರಾತ್ ಮುಖ್ಯ ಮಂತ್ರಿಯಾಗಿದ್ದಾಗ ಸಹಾರಾ ಕಂಪನಿಯಿಂದ ಕೋಟ್ಯಾಂತರ ರೂ.ಗಳ ಲಂಚ ಪಡೆದಿದ್ದಾರೆಂಬುದನ್ನು ಸೂಚಿಸುವ 'ಸಹಾರಾ ಡೈರಿ ಹಗರಣದ ಬಗ್ಗೆ ಬರೀ ಬಾಯಿ ಮಾತಿನ ಬಾಂಬ್ ಹಾಕಿ ಈಗ ಈ ಹಗರಣ ವಿಚಾರಣೆಗೂ ಅರ್ಹವಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿರುವುದರಿಂದ ಹೇಳಿರುವುದರಿಂದ ಹಾಸ್ಯಾಸ್ಪದರಾಗಿದ್ದೂ ಮೋದಿಯವರ ವರ್ಚಸ್ಸನ್ನು ಹೆಚ್ಚಿಸಿತೆಂದೇ ಹೇಳಬೇಕು.

ಹಾಗಾಗಿಯೇ ಮೋದಿ ಮೊನ್ನೆ ಲೋಕಸಭೆಯಲ್ಲಿ ತಮ್ಮ ನೋಟ್‌ಬಂದಿ ಕಾರ್ಯಕ್ರಮವನ್ನು ಜನರ ಲೂಟಿ, ದರೋಡೆಯೆಂದು ಟೀಕಿಸಿದ್ದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ರನ್ನು 'ಈ ಡಾಕ್ಟರ್ ಸಾಹೇಬರಿಗೆ ರೈನ್‌ಕೋಟ್ ಹಾಕಿಕೊಂಡು ಹಾಕಿಕೊಂಡು ಸ್ನಾನ ಮಾಡುವ ಕಲೆ ಕರಗತವಾಗಿದೆ' ಎಂದು ಕಿಚಾಯಿಸಿದಾಗ ದೇಶದ ಜನರಿರಲಿ, ಕಾಂಗ್ರೆಸ್ ಹೊರಾತಾಗಿ ಇನ್ನಾವ ವಿರೋಧ ಪಕ್ಷವೂ ಸೊಲ್ಲೆತ್ತಲಿಲ್ಲ. ಹೀಗೆ ಮೋದಿಯವರು ಸವಾಲಿಲ್ಲದ ಸರದಾರನಾಗಿ ದೇಶವನ್ನು ಆಳಲು ಸಾಧ್ಯವಾಗಿದೆ.

ಆದರೆ ಈ ಆಳ್ವಿಕೆ, ಅವರು ಚುನಾವಣೆಗಳಿಗೆ ಮುನ್ನ ಮತ್ತು ಆನಂತರ ಹುಟ್ಟಿಸಿದ್ದ ಯಾವ ನಿರೀಕ್ಷೆಗಳ ಹತ್ತಿರವೂ ಬರದೆ ನೀರಸವಾಗಿ ಸಾಗಿದೆ. ಅವರ ಅಧಿಕಾರದ ಅರ್ಧ ಅವಧಿ ಮುಗಿದರೂ ಅವರು ಬರಲಿರವವು ಎಂದು ಹೇಳಿದ 'ಅಚ್ಚೇ ದಿನ'ಗಳ ಯಾವ ಸುಳಿವೂ ಕಾಣುತ್ತಿಲ್ಲ! ಮೋದಿ ಸರ್ಕಾರ ಈ ಅವಧಿಯಲ್ಲಿ ಮಾಡಿದ ಏಕೈಕ ಸಾಧನೆ ಎಂದರೆ ರಾಷ್ಟ್ರದ ಆಡಳಿತ ವ್ಯವಸ್ಥೆಯ ಸಕಲ ಅಂಗಸಂಸ್ಥೆಗಳನ್ನೂ-ಧರ್ಮ ನಿರಪೇಕ್ಷ ನಾಗರಿಕ ಸಮಾಜದ ನಾಯಕರು ಮತ್ತು ರಾಜಕೀಯ ಪಕ್ಷಗಳ ವಿರೋಧ-ಪ್ರತಿಭಟನೆಗಳ ನಡುವೆಯೂ-ಪಕ್ಷಪಾತೀಯ ನೇಮಕಾತಿಗಳ ಮೂಲಕ ಕೇಸರೀಕರಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿರುವುದು. ಇದೇನೂ ಕಡಿಮೆ ಮಹತ್ವದ ಅಥವಾ ನಿರ್ಣಾಯಕತ್ವದ ಬೆಳವಣಿಗೆಯಲ್ಲ. ದೇಶದ ಮನಸ್ಸನ್ನೇ, ಅದು ಮೋದಿಯವರು ಇಂದು ಆಳುತ್ತಿರುವ ಭಾರತವೆಂಬ ಈ ರಾಷ್ಟ್ರ ನಿರ್ಮಾಣಕ್ಕೆ ಕಾರಣವಾದ ರಾಷ್ಟ್ರೀಯ ಹೋರಾಟ ಕಟ್ಟಿಕೊಟ್ಟಿದ್ದ ಎಲ್ಲ ಉದಾರ ಮತ್ತು ಉದಾತ್ತ ಮೌಲ್ಯಗಳನ್ನೇ ನಾಶ ಮಾಡುವ ಪ್ರಯತ್ನವಿದು. ಬಿಜೆಪಿ ಎಂಬ ಪಕ್ಷ ತನ್ನ ನಿಜ ಸ್ವರೂಪದೊಂದಿಗೆ ಮತ್ತು ನಿಜ ಗುರಿಗಳೊಂದಿಗೆ ಆಡಳಿತ ನಡೆಸಲು, ಅದನ್ನು ನಿರಂತರಗೊಳಿಸಲು ಈ ನೆಲಗಟ್ಟು ಸಿದ್ಧತೆ ಅಗತ್ಯವಾಗಿತ್ತು. ಇನ್ನರ್ಧ ಅಧಿಕಾರಾವಧಿಯಲ್ಲಿ ಮಾಡಬೇಕಾದ್ದು ಇನ್ನೂ ಇದೆಯಾದರೂ.

ಇತಿಹಾಸದ ವ್ಯಂಗ್ಯ ಎಂದರೆ ಇದು. ಮೋದಿಯವರ ಈ ಕೇಸರೀಕರಣ ಕಾರ್ಯಕ್ರಮ ಯಶಸ್ವಿಯಾಗುತ್ತಿರುವುದು ಮನಮೋಹನ ಸಿಂಗ್‌ರ ಅಭಿವೃದ್ಧಿ ಆಡಳಿತದ ಪರೋಕ್ಷ ಫಲವಾಗಿ ಎಂದರೆ ಆಶ್ಚರ್ಯವಾಗಬಹುದು. ಅವರೇ ಅಲ್ಲವೆ, ತಮ್ಮ ಹೊಸ ಸುಖ ಸಂಪತ್ತುಗಳಿಗೆ ಧಕ್ಕೆ ತರಬಹುದೆಂಬ ಆತಂಕದಿಂದ ರಾಜಕೀಯ ಭ್ರಷ್ಟಚಾರವನ್ನು ಒಂದು ಅಖಂಡ ನೈತಿಕ ಪ್ರಶ್ನೆಯಾಗಿ ಪರಿವರ್ತಿಸಿಕೊಂಡು, ರಾಷ್ಟ್ರಾಡಳಿತದ ಇನ್ನಾವುದೇ ವಿಷಯದ ಬಗ್ಗೆಯೂ ಸೂಕ್ಷ್ಮತೆ ಬೆಳೆಸಿಕೊಳ್ಳಲಾಗದಷ್ಟು ಸುಖಸ್ಥೂಲತೆಯ ನವ ಮಧ್ಯಮ ವರ್ಗವನ್ನು ಸೃಷ್ಟಿಸಿದ್ದು? ಅವರ ಈ ಮುದ್ದು ಮಧ್ಯಮ ವರ್ಗವೇ ಅಲ್ಲವೇ ಮೋದಿಯವರನ್ನು ಸೃಷ್ಟಿಸಿದ್ದು ಮತ್ತು ಈಗ ಭ್ರಷ್ಟಾಚಾರವಿಲ್ಲವೆಂಬ ಒಂದೇ ಕಾರಣದಿಂದ ಮೋದಿಯನ್ನು ಆದರ್ಶ ನಾಯಕನೆಂದು ಬಿಂಬಿಸುವ ಸಂಘಟಿತ ಪ್ರಯತ್ನ ಮಾಡುತ್ತಿರುವುದು. ಈ ಸ್ವಾರ್ಥಪರ ನವ ಮಧ್ಯಮ ವರ್ಗಕ್ಕೆ ತನ್ನ ಸಂಬಳ ಸಾರಿಗೆ, ವ್ಯಾಪಾರ, ಉದ್ಯಮ ಇತ್ಯಾದಿಗಳಿಗೆ ಧಕ್ಕೆಯಾಗದಂತೆ ಆಡಳಿತ ನಡೆದರೆ ಸಾಕು, ಅದು ಒಳ್ಳೆಯ ಆಡಳಿತ. ರಾಷ್ಟ್ರ ನಿರ್ಮಾಣವೆಂಬುದು ತಲೆಮಾರುಗಳ ಸಾತತ್ಯವನ್ನೂ, ಸಮುದಾಯಗಳ ಸೌಹಾರ್ದವನ್ನೂ ಸಾಧಿಸುತ್ತಾ, ರಾಷ್ಟ್ರದ ಕಟ್ಟ ಕಡೆಯ ವ್ಯಕ್ತಿಯೂ ತನ್ನದೇ ಘನತೆ-ಗೌರವಗಳಿಂದ ಬಾಳುವಂತೆ ಮಾಡುವಂತಹ ಆದರ್ಶಗಳನ್ನೂ, ಮೌಲ್ಯಗಳನ್ನೂ ಬಿತ್ತಿ ಬೆಳೆಯುವ ಜವಾಬ್ದಾರಿಯುತ ರಾಜಕಾರಣ ಎಂಬ ಅರಿವಿಗೇ ಎರವಾದ ವರ್ಗವಿದು

ಇದು ನಿಜವಾಗಿಯೂ ಕಾಂಗ್ರೆಸ್ಸಿನ ಸ್ವಯಂಕೃತ ಅಪರಾಧವೇ ಸರಿ. ತಾನು ಗಾಂಧಿ ವಾರಸುದಾರಿಕೆಯ ಪಕ್ಷವೆಂಬ ನೆದರೇ ಇಲ್ಲದೆ ಅದು ಎಂಭತ್ತರ ದಶಕದಲ್ಲಿ ಹಿಡಿದ, ರಾಷ್ಟ್ರದ ಅಭಿವೃದ್ಧಿ ಎಂದರೆ ಆರ್ಥಿಕ ಅಭಿವೃದ್ಧಿ ಎಂಬ (ಅಂತಿಮವಾಗಿ, ಮನಮೋಹನ ಸಿಂಗ್‌ರಿಗೆ ರೈನ್‌ಕೋಟ್ ಹಾಕಿಕೊಂಡು ಸ್ನಾನ ಮಾಡುವ ಕಲೆಯನ್ನು ಕರಗತ ಮಾಡಿಸಿದ) ವಿಕ್ಷಿಪ್ತ ಹಾದಿ ಈಗ ಅದರ ಮೂಲೋತ್ಪಾಟನೆಗೇ ಕಾರಣವಾಗುತ್ತಿರುವಂತಿದೆ. ಅದು ಆತ್ಮಾವಲೋಕನವನ್ನು ಬಾಯುಪಚಾರಕ್ಕೆ ಹೇಳದೆ ಇದು ತನ್ನ ಅಳಿವು ಉಳಿವಿನ ಪ್ರಶ್ನೆಯೆಂದು ಪ್ರಾಮಾಣಿಕ ಪ್ರಯತ್ನ ಮಾಡದಿದ್ದರೆ.

ಇದೆಲ್ಲದರ ಮಧ್ಯೆ ಜನರ ನಿರೀಕ್ಷೆ ಮತ್ತು ತಮ್ಮ ಆಶ್ವಾಸನೆಗಳಿಗೆ ವಿರುದ್ಧವಾದ ಮೋದಿಯವರ ನಿರಾಶಾದಾಯಕ ಆಡಳಿತದ ಬಗ್ಗೆ ಅಸಮಧಾನದ, ಆಕ್ರೋಶದ ದನಿಗಳು ಇಲ್ಲದಿಲ್ಲ. ಹಾಗೆ ನೋಡಿದರೆ ಸ್ವತಃ ಮೋದಿಯವರಿಗೆ ತಮ್ಮ ಆಡಳಿತದ ನೀರಸತೆಯ ಬಗ್ಗೆ ಹತಾಶೆಯಾದಂತಿದೆ. ಕಪ್ಪು ಹಣ ವಾಪಸ್ ತರಲಾಗದ, ಉಗ್ರರ ಉಪಟಳವನ್ನು ತಡೆದು ಕಾಶ್ಮೀರದಲ್ಲಿ ಶಾಂತಿ ನೆಲಸುವಂತೆ ಮಾಡಲಾಗದ, ಉದ್ಯೋಗ ನಿರ್ಮಾಣವಿಲ್ಲದ 'ಅಭಿವೃದ್ಧಿ' ನೀತಿಯನ್ನು ರಿಪೇರಿ ಮಾಡಲಾಗದ, ನಕ್ಸಲರ ಪ್ರಭಾವವನ್ನು ತಗ್ಗಿಸಲಾಗದ ತಮ್ಮ ಆಡಳಿತದ ಮಹಾ ವೈಫಲ್ಯವನ್ನು ಮುಚ್ಚಿಕೊಳ್ಳಲೋ ಎಂಬಂತೆ ಅವರು ದಿಢೀರನೆ ಜಾರಿಗೆ ತಂದ 'ನೋಟುಬಂದಿ' ಕಾರ್ಯಕ್ರಮವೇ ಈಗ ಅವರ ರಾಜಕಾರಣದ ಪ್ರಧಾನ ಭಿತ್ತಿಯಾದಂತಿದೆ. ಇದು ತಾವು ಪರಿಹರಿಸಿ ತೋರಿಸುವೆ ಎಂದು ಜನರಿಗೆ ವಾಗ್ದಾನ ಮಾಡಿದ್ದ ಈ ಎಲ್ಲ ಸಮಸ್ಯೆಗಳಿಗೆ ಸಗಟು ಪರಿಹಾರವೆಂಬಂತೆ ಅವರು ಬಿಂಬಿಸುತ್ತಿರುವ ಈ ಕಾರ್ಯಕ್ರಮದ ಯಶಸ್ಸಿನ ಬಗ್ಗೆ ಸ್ವತಃ ಅವರಿಗೇ ವಿಶ್ವಾಸವಿದ್ದಂತಿಲ್ಲ. ಹಾಗಾಗಿಯೇ ಈ ಕಾರ್ಯಕ್ರಮದ ಆರ್ಥಿಕ ಫಲಗಳೇನು ಎಂಬುದರ ಅಂಕಿ ಅಂಶ ರೂಪದ ಮಾಹಿತಿಯನ್ನು ರಿಸರ್ವ್ ಬ್ಯಾಂಕ್

ಆಗಲೀ,ಸರ್ಕಾರವಾಗಲೀ ಇನ್ನೂ ಬಿಡುಗಡೆ ಮಾಡಿಲ್ಲ. ಯಾವ ಕಪ್ಪು ಹಣವನ್ನು ಪತ್ತೆ ಹಚ್ಚಲು ಈ 'ನೋಟ್‌ಬಂದಿ' ಕಾರ್ಯಕ್ರಮವನ್ನು ಜಾರಿಗೆ ತರಲಾಯಿತೋ ಆ ಕಪ್ಪುಹಣದ ಸ್ವಲ್ಪ ಭಾಗದ ಹೊರತಾಗಿ ಮಿಕ್ಕೆಲ್ಲವೂ ಬಿಳಿಯಾಗಿ ಬ್ಯಾಂಕುಗಳಿಗೆ ವಿವಿಧ ಮೂಲಗಳಿಂದ ಹರಿದು ಬಂದಿದೆ ಎಂಬ ಗುಮಾನಿ ಇದೆ! ಅಷ್ಟೇ ಅಲ್ಲ, ರದ್ದಾದ ಹಳೆ ನೋಟುಗಳ ಬದಲಾಗಿ ಚಲಾವಣೆಗೆ ಬಂದ ಹೊಸ ಮೌಲ್ಯದ ನೋಟುಗಳ ನಕಲಿ ನೋಟುಗಳೂ ಈಗಾಗಲೇ ರಾಷ್ಟ್ರದ ಹಲವು ಕಡೆ ದೊಡ್ಡ ಪ್ರಮಾಣದಲ್ಲಿಯೇ ಚಲಾವಣೆಗೆ ಬಂದಿರುವ ಸುದ್ದಿಗಳು ಬರುತ್ತಿವೆ. ಇದು ಏನನ್ನು ಸೂಚಿಸುತ್ತದೆ? ಮೋದಿ ತಮ್ಮ ಕಟು ನಿಷ್ಠುರ ಸ್ವಚ್ಛ ಆಡಳಿತ ನೀತಿಯ ಎಚ್ಚರಿಕೆಗಳ ಹೊರತಾಗಿಯೂ ಭ್ರಷ್ಟರು ಯಾವುದೇ ಹೆದರಿಕೆ ಇಲ್ಲದೆ ಕಾರ್ಯನಿರತರಾಗಿದ್ದಾರೆ! ನನಗನಿಸುವ ಹಾಗೆ ಇದು ಮೋದಿ ಸರ್ಕಾರದ ನಿರ್ಣಾಯಕ ವೈಫಲ್ಯ. ಇದಕ್ಕೆ ಕಾರಣ, ಮೋದಿಯವರು ಆಡಳಿತ ಸ್ವಚ್ಛತೆಯ ಬಗ್ಗೆ ಮಾತಾಡಿದಾಗ ಒಬ್ಬೊಬ್ಬರಿಗೆ ಒಂದೊಂದು ಅರ್ಥದಲ್ಲಿ ಕೇಳಿಸುತ್ತಿರುವುದು! ಈ ದಿಸೆಯಲ್ಲಿ ಮೊದಲು ಅವರ ಪಕ್ಷ ಸ್ವಚ್ಛವಾಗಬೇಕಿದೆ, ಎಲ್ಲ ಅರ್ಥಗಳಲ್ಲೂ.

ಈ ನೋಟು ಬಂದಿಯಿಂದ ಏನಾಗದಿದ್ದರೂ, ಬಡವ-ಶ್ರೀಮಂತರೆನ್ನದೆ ನಮ್ಮ ಜನರ ನೈತಿಕತೆಯಂತೂ ಬಯಲಾಗಿದೆ. ಎರಡಂಕಿ ದಾಟದ ಠೇವಣಿಗಳ ಲಕ್ಷಾಂತರ ಬ್ಯಾಂಕ್ ಖಾತೆಗಳಲ್ಲಿ ಈಗ ಹಣ ತುಂಬಿ ತುಳುಕುತ್ತಿದೆ! ಈ ದೇಶ ಯಾರ ಮತ್ತು ಯಾವ ಬಡತನದ ನಿವಾರಣೆಗೆ ಹೊರಟಿದೆಯೋ ಎಂದು ಆಶ್ಚರ್ಯವಾಗುತ್ತಿದೆ. ಅಥವಾ ಇದು ಎಲ್ಲ ಸರ್ಕಾರಗಳ ವಿವಿಧ ರೀತಿಗಳ ಬಡತನ ನಿವಾರಣೆಯ ಪ್ರಯತ್ನಗಳಿಗೆ ಜನ ತೋರಿಸಿರುವ ಪ್ರತಿಕ್ರಿಯೆಯೋ ಎಂದು ಯೋಚಿಸುವಂತಾಗುತ್ತದೆ. ಮೋದಿ ದೇಶಕ್ಕೆ ಹೊಸ ದಿಕ್ಕು ತೋರಿಸಿದ್ದಾರೆ ಎಂಬ ಅವರ ಸಮರ್ಥಕರ ಮಾತು ಎಷ್ಟು ಸುಳ್ಳು; ಹಾಗಾಗಿ ಅವರ ಆಡಳಿತ ಜನರಲ್ಲಿ ಯಾವ ಹೊಸ ನಿರೀಕ್ಷೆಯನ್ನೂ ನಿಜವಾಗಿ ಹುಟ್ಟಿಸಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಹೊಸ ಕ್ಯಾಲೆಂಡರ್ ಮೇಲೆ ಚರಕದ ಮುಂದೆ ಗಾಂಧಿ ಜಾಗದಲ್ಲಿ ಮೋದಿ ಕುಳಿತ ಚಿತ್ರ ಹಾಕಿಕೊಂಡು ಸರ್ಕಾರ ಹಾಸ್ಯಾಸ್ಪದತೆಯಲ್ಲಿಯೂ ತನ್ನ ಉನ್ನತ ಸಾಧನೆಯನ್ನು ಮೆರೆದಂತಾಗಿದೆ.

ಆಶ್ಚರ್ಯವೆಂದರೆ, ಈ ನೋಟ್‌ಬಂದಿ ಕಾರ್ಯಕ್ರಮವನ್ನೇ ಮುಂದಿಟ್ಟುಕೊಂಡು ಮೋದಿವರು ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳನ್ನು ಎದುರಿಸುತ್ತಿದ್ದಾರೆ. ಮುಖ್ಯವಾಗಿ ರಾಷ್ಟ್ರದ ಮುಂದಿನ ವರ್ಷಗಳ ರಾಜಕಾರಣದ ಸೂಚನೆಗಳನ್ನು ನೀಡಬಲ್ಲ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶಗಳನ್ನು ರಾಜಕೀಯ ವೀಕ್ಷಕರು ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಒಂದು ಸಂತೋಷದ ಸಂಗತಿ ಎಂದರೆ. ಪರಮ ಜಾತೀಯತೆಯ, ವಂಶ ಪಾರಂಪರ್ಯತೆಯ ಮತ್ತು ಪುಂಡು ಆಡಳಿತಕ್ಕೆ ಇನ್ನೊಂದು ಹೆಸರಿನಂತಿದ್ದ ಮತ್ತು ಸಮಾಜವಾದ ಎಂಬ ಶಬ್ದಕ್ಕೇ ಕಳಂಕ ತರುವಂತಿದ್ದ ಅಲ್ಲಿನ ರಾಜಕಾರಣದಲ್ಲಿ ಒಂದು ದೊಡ್ಡ ಸ್ಥಿತ್ಯಂತರವಾಗಿ ಮುಲಾಯಂ ಸಿಂಗ್ ಯಾದವ್‌ರ ಯಜಮಾನಿಕೆಯ ವಿರುದ್ಧ ಬಂಡೆದ್ದಿರುವ ಅವರ ಮಗ ಅಖಿಲೇಶ್, ರಾಹುಲ್ ಗಾಂಧಿಯವರ ಜೊತೆ ಸೇರಿ ಮೋದಿಗೆ ನಿಜವಾದ ಸವಾಲು ಎಸೆದಿದ್ದಾರೆ ಎಂಬ ಸುದ್ದಿ ಇದೆ. ಅಖಿಲೇಶರ ಈ ಬಂಡಾಯ ಸ್ವಲ್ಪವಾದರೂ ತಾತ್ವಿಕವಾದದ್ದೋ ಅಥವಾ ಕೇವಲ ವ್ಯಾವಹಾರಿಕವಾದದ್ದೋ ಎಂಬುದನ್ನು ಅವರ ರಾಜಕಾರಣವನ್ನು ಬಲ್ಲ ಅಲ್ಲಿನ ಜನತೆ ತೀರ್ಮಾನಿಸಲಿದೆ. ಈ ಬಂಡಾಯ ಪ್ರಮಾಣಿಕವಾದದ್ದು ಎಂದು ಜನಾದೇಶದ ಮೂಲಕ ತೀರ್ಮಾನವಾದರೆ, ಮೋದಿಯವರು ತಮ್ಮ ರಾಜಕಾರಣದ ಹಾದಿಯನ್ನು ಬದಲಿಸಿಕೊಳ್ಳಲು ಒಂದು ಅವಕಾಶ ಒದಗುತ್ತದೆ. ಹಾಗೇ ರಾಷ್ಟ್ರದ ಜನತೆ ವಿಶ್ವಾದ್ಯಂತ ಸಾಂಕ್ರಾಮಿಕ ರೋಗದಂತೆ ಹಬ್ಬುತ್ತಿರುವ ಫ್ಯಾಸಿಸ್ಟ್ ರಾಜಕಾರಣದ ಆತಂಕದಿಂದ ತಾತ್ಕಾಲಿಕವಾಗಿಯಾದರೂ ನಿಟ್ಟಿಸಿರು ಬಿಡುವಂತಾಗುತ್ತದೆ. ಮತ ಎಣಿಕೆಯ ದಿನವಾದ ಮಾರ್ಚ್ ೧೧ಕ್ಕಾಗಿ ರಾಷ್ಟ್ರ ಕುತೂಹಲದಿಂದ ಕಾಯುತ್ತಿದೆ.

ಇನ್ನು ನಮ್ಮ ಸಿದ್ಧರಾಮಯ್ಯನವರ ಸ್ಥಿತಿ ಚಿಂತಾಜನಕವಾಗಿಯೇ ಮುಂದುವರೆದಿದೆ. ಅವರ ಆಪ್ತ ಅಧಿಕಾರಿಗಳು, ಸಚಿವರು, ಶಾಸಕರ ಮನೆಗಳ ಮೇಲೆ ವರಮಾನ ತೆರಿಗೆ ಇಲಾಖೆಯ ನಿರಂತರ ದಾಳಿ ನಡೆದಿದ್ದು ಅವರ ಮನೆಗಳಲ್ಲಿ ಹೊಸ ನೋಟುಗಳ ರೂಪದಲ್ಲಿರುವ ಕೋಟ್ಯಾಂತರ ರೂಪಾಯಿಗಳ ಕಳ್ಳ ಹಣ, ಅಕ್ರಮ ಆಸ್ತಿ ಪತ್ರಗಳು, ಕೇಜಿಗಟ್ಟಲೆ ಚಿನ್ನ ಬೆಳ್ಳಿ ಪತ್ತೆಯಾಗಿ ಅವರು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಾ ಇದೆಲ್ಲದಕ್ಕೂ ತಮಗೂ ಸಂಬಂಧವಿಲ್ಲ ಎನ್ನುತ್ತಿದ್ದಾರೆ. ರಾಜ್ಯದ ಆಡಳಿತ ಜವಾಬ್ದಾರಿಯನ್ನು ಹೊತ್ತ ಮುಖ್ಯಮಂತ್ರಿಯವರ ಈ ಅಮಾಯಕ ಮಾತನ್ನು ಜನ ಮುಖಬೆಲೆಯಲ್ಲಿ ಸ್ವೀಕರಿಸಲಾರರು. ಬಹುಶಃ ಆ ಅತಂಕದಲ್ಲೇ ಅವರು ವಿರೋಧ ಪಕ್ಷಗಳ-ಮುಖ್ಯವಾಗಿ ಜೆಡಿಎಸ್‌ನೊಂದಿಗೆ-ಮುಂದಿನ ಚುನಾವಣೆಗಳನ್ನೂ ಗಮನದಲ್ಲಿಟ್ಟುಕೊಂಡು ರಾಜಿಯಾಗುವ ಸನ್ನಾಹದ ಭಾಗವಾಗಿಯೇ ೨೦೧೧ರ ಕೆಪಿಎಸ್‌ಸಿ ಹಗರಣವನ್ನು ತೆರೆಯ ಹಿಂದಕ್ಕೆ ಸರಿಸಿ ಹಗರಣದಲ್ಲಿ ಭಾಗಿಯಾದವರೆಂದು ಆಪಾದಿತರಾದ ಅಭ್ಯರ್ಥಿಗಳೂ, ಆಯೋಗದ ಅಧ್ಯಕ್ಷ ಮತ್ತು ಸದಸ್ಯರನ್ನೂ ಕ್ಷಮಿಸಿಬಿಡುವ ತೀರ್ಮಾನ ಕೈಗೊಂಡಂತೆ ಕಾಣುತ್ತದೆ. ಎಂತಹ ದುಷ್ಟ ಮತ್ತು ನಿರ್ಲಜ್ಜ ಜಾತಿ ಸಂಯೋಜನೆಗಳ ರಾಜಕಾರಣ ಮಾಡಿದರೂ, ಈ ಜನ ದ್ರೋಹವನ್ನು ಜನ ಕ್ಷಮಿಸಲಾರರು.

-ಸಂಪಾದಕ

ಪ್ರಿಯ ಓದುಗರೇ,

ನನಗೀಗ ವಿಶ್ರಾಂತಿ ಅತ್ಯವಶ್ಯಕವಾಗಿದ್ದು, ಪತ್ರಿಕೆಯನ್ನು ಸ್ವಲ್ಪ ಕಾಲವಾದರೂ ಸ್ಥಗಿತಗೊಳಿಸುವುದು ಅನಿವಾರ್ಯವಾಗಿದೆ. ಇದಕ್ಕಾಗಿ ನಿಮ್ಮ ಕ್ಷಮೆ ಕೋರಿ, ಮತ್ತೆ ಸೂಚನೆ ನೀಡುವವರೆಗೂ ಚಂದಾ ಕಳಿಸಬಾರದಾಗಿ ವಿನಂತಿಸುತ್ತೇನೆ.-ಸಂ.

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ತ್ರೈಮಾಸಿಕವಾಗಿ ಬಂದಿರುವ ಈ ಬಾರಿಯ 'ಹೊಸ ಮನುಷ್ಯ' ಸಂಚಿಕೆಯಲ್ಲಿ ಸಮಕಾಲೀನ ಆಗುಹೋಗುಗಳ ಬಗ್ಗೆ ಹಲವು ಲೇಖನಗಳನ್ನು ಪ್ರಕಟಿಸಿದ್ದೀರಿ. ಕಾವ್ಯ, ಕಥೆ, ಪುಸ್ತಕ ವಿಮರ್ಶೆಗಳಿಗೂ ಹೆಚ್ಚಿನ ಅವಕಾಶ ಸಿಕ್ಕಿದೆ. ಇದನ್ನೆಲ್ಲ ಗಮನಿಇದರೆ, ;ಹೊಸ ಮನುಷ್ಯ' ತ್ರೈಮಾಸಿಕವಾಗಿ ಒಂದು ಒಳ್ಳೆಯ ವೈಚಾರಿಕ ಹಾಗೂ ಸಾಹಿತ್ಯಿಕ ನಿಯತಕಾಲಿಕವಾಗಿ ಓದುಗರ ಮೆಚ್ಚುಗೆ ಪಡೆಯುವುದರಲ್ಲಿ ಅನುಮಾನವಿಲ್ಲ.

-ಗಿರೀಶ್ ವಿ. ವಾಘ್, ಬೆಂಗಳೂರು

'ಹೊಸ ಮನುಷ್ಯ' ಹೊಸ ಗಾತ್ರ ಮತ್ತು ಹೊಸ ಸತ್ವದೊಡನೆ ಕಾಣಿಸಿಕೊಂಡಿದ್ದಾನೆ. ಇದು ಬಲು ಸಂತೋಷದ ಸಂಗತಿ. ಕಷ್ಟವಾದರೂ ಒಳ್ಳೆಯ ಕೆಲಸಗಳನ್ನು ನಿಲ್ಲಿಸಬಾರದು. ಆರೋಗ್ಯದ ಕಡೆ ಗಮನವಿರಲಿ.

-ಡಾ. ಡಿ. ಬಿ. **ರಾಮಚಂದ್ರಾಚಾರ್**, ಮೈಸೂರು

ಪತ್ರಿಕೆ ತ್ರೈಮಾಸಿಕವಾಗಿಯಾದರೂ ಬಂತಲ್ಲ ಎಂಬ ಖುಷಿಯಿಂದ ಪತ್ರ ಬರೆಯುತ್ತಿರುವೆ. ಅರ್ಧ ವಾರ್ಷಿಕ ಚಂದಾ ಕೇಳಿರುವುದು ಆಶ್ಚರ್ಯ. ಯಾಕೆ, ಪತ್ರಿಕೆಯ ಆಯುಷ್ಯದ ಬಗ್ಗೆ ನಿಮಗೆ ವಿಶ್ವಾಸವಿಲ್ಲವೇನು? ಆತಂಕಬೇಡ, ಪತ್ರಿಕೆಯ ವಾಚಕರು ಅದನ್ನು ತುಂಬುತ್ತಾರೆ. ನಾನಂತೂ ಒಂದು ವರ್ಷದ ಚಂದಾ ಕಳಿಸಿದ್ದೇನೆ.

-ಅಮ್ಮೆಂಬಳ ಆನಂದ, ಮಣಿಪಾಲ

'ಹೊಸ ಮನುಷ್ಯ'(ಅಕ್ಟೋ.-ಡಿಸೆಂ, ೨೦೧೬)ದಲ್ಲಿ ನಮ್ಮ ಮಗಳು ನಭ ತನ್ನ ಪದ್ಯ ಮತ್ತು ಚಿತ್ರಗಳನ್ನು ಕಂಡು ತುಂಬ ಖುಷಿಯಾದಳು. ಧನ್ಯವಾದಗಳು.

ತ್ರೈಮಾಸಿಕವಾಗಿಯಾದರೂ ಪತ್ರಿಕೆಯನ್ನು ಮುಂದುವರೆಸಿರುವುದು ಒಳ್ಳೆಯ ನಿರ್ಧಾರ. ನೋಟು ರದ್ದತಿ ಕುರಿತಂತೆ ನಿಮ್ಮ ನಿಲುವುಗಳು ವಿರೋಧ ಪಕ್ಷಗಳ ಕಣ್ಣು ತೆರೆಸುವಂತಿವೆ. ಆದರೆ ಅವುಗಳಿಗೆ ಕಣ್ಣುಗಳಿವೆಯೇ ಎಂಬ ಸಂಶಯವಿದೆ.


-ಎಂ.ಡಿ. ಒಕ್ಕುಂದ, ಧಾರವಾಡ.

. ಸಮಾಜವಾದಿಗಳನ್ನು ಬಡಿದೆಬ್ಬಿಸುವಂತಿರುವ ಹಲವು ಲೇಖನಗಳನ್ನು ಒಳಗೊಂಡ 'ಹೊಸ ಮನುಷ್ಯ' ತ್ರೈಮಾಸಿಕ ತಲುಪಿದೆ ಓದಿ ಆನಂದಪಟ್ಟೆ. ಪತ್ರಿಕೆ ನಿಮ್ಮ ಅಮೂಲ್ಯ ಚಿಂತನೆಗಳ ಲಾಭ ಪಡೆಯಲ್ಲಿ ಎಂದು ಆಶಿಸುತ್ತೇನೆ.

-ಕೆ.ಟಿ. ಮೋಹನ್, ಬೆಂಗಳೂರು

ಹಿರಿಯ ಸಮಾಜವಾದಿಗಳಾದ ಪ್ರೊ. ಎಸ್. ಎಚ್. ಪಟೇಲ್, ಬಿ.ವಿ. ಮೂರ್ತಿ, ನಟರಾದ ಓಂಪುರಿ, ಮಂಜುನಾಥ ಬೆಳಕೆರೆ, ಲೇಖಕಿ ಡಾ. ಎಂ.ಪಿ. ಉಮಾದೇವಿ, ಕವಿ ಮಿತ್ರರಾದ ಎಸ್. ಮಂಜುನಾಥ್ ಮತ್ತು ಜಂಬಣ್ಣ ಅಮರಚಿಂತ ಇತ್ತೀಚೆಗೆ ನಮ್ಮನ್ನಗಲಿ ಹೋಗಿದ್ದಾರೆ. ಇವರೆಲ್ಲರ ನೆನಪಿಗೆ 'ಹೊಸ ಮನುಷ್ಯ' ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ-ಸಂ.

ನಮ್ಮ ಸಮಾಜವಾದಿಗಳು | ಸರಳ ಸಜ್ಜನ ನಾಯಕ ಸುರೇಂದ್ರಮೋಹನ್



೨೦ನೇ ಶತಮಾನ ಮನುಜ ಬುದ್ಧಿ ವಿಕಾಸದಲ್ಲಿ ಬಲು ದೊಡ್ಡ ಮಜಲು. ಖ್ಯಾತ ಮನಶ್ಶಾಸ್ತ್ರಜ್ಞ ಎರಿಕ್ ಫ್ರೋಮ್ ತಿಳಿಸಿದಂತೆ ಸಮಾಜವಾದಿ ಚಳವಳಿ ಆ ಶತಮಾನದ ಅತಿ ಮಹತ್ತಾದ ನೈತಿಕ ಆಂದೋಲನವಾಗಿತ್ತು. ಆದರೆ ಅದರ ತಾತ್ವಿಕ ಪರಿಕರಗಳ ಭಾಗವಾಗಿ ನೈತಿಕತೆ ಇರಲಿಲ್ಲ. ಇದನ್ನು ತುಂಬಿಕೊಡುವ ಅಗತ್ಯವಾಗಿ ಜಯಪ್ರಕಾಶ್ ನಾರಾಯಣ್ ವ್ಯಕ್ತಿ ಸ್ವಾತಂತ್ರ್ಯದೊಡನೆ ಭಾರೀ ಪ್ರಮಾಣದ ಸಾಮಾಜಿಕ ಯೋಜನೆಯನ್ನು ಸರಿಹೊಂದಿಸುವ ರೀತಿಯಲ್ಲಿ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣಗಳನ್ನೊಳಗೊಂಡ ಸಂತುಲಿತ ವ್ಯವಸ್ಥೆಯನ್ನು ವಿಕಸಿತಗೊಳಿಸುವುದು ಅತ್ಯಗತ್ಯ ಎಂದರು. ಈ ಮೌಲ್ಯವನ್ನು ಗಟ್ಟಿಯಾಗಿ ಪ್ರತಿಪಾದಿಸಿ ಜನತಾಂತ್ರಿಕ ಸಮಾಜವಾದದ ದೀವಟಿಗೆಯನ್ನು ಇಂದಿನ ತಲೆಮಾರಿಗೆ ಹಸ್ತಾಂತರಿಸಿದವರು ಸರಳ ಜೀವನದ ಜ್ವಲಂತ ನಿದರ್ಶನವಾಗಿದ್ದ ಸಮಾಜವಾದಿ ಸುರೇಂದ್ರ ಮೋಹನ್.

ನವ ಉದಾರೀಕರಣದ ಭರಾಟೆಗೆ ಎದುರಾಗಿ ಈಜಿದ ಸುರೇಂದ್ರ ಮೋಹನ್ ಅವರಿಗೆ ಬಡ ಹಾಗೂ ಅಂಚುಗಳಲ್ಲಿ ಮರೆಯಾಗಿಹೋಗಿದ್ದ ಜನಸಮೂಹದ ತುಡಿತಗಳೇ ಪ್ರಧಾನವಾಗಿತ್ತು. ಹಾಗಾಗಿಯೇ ಅವರು ದೇಶದಲ್ಲಿ ಉದಾರೀಕರಣದ ವಿರುದ್ಧದ ಚಳವಳಿಯ ಮುಂಚೂಣಿಯಲ್ಲಿ ಕೊನೆಯ ತನಕ ತೊಡಗಿಸಿಕೊಂಡಿದ್ದರು. ಉದಾರೀಕರಣದ ವಿರುದ್ಧದ ಎಲ್ಲ ಶಕ್ತಿಗಳೂ, ಸಹ ಯಾತ್ರಿಗಳು ಎಂದೇ ಅವರು ನಿಶ್ಚಿತವಾಗಿ ನಂಬಿದ್ದರಿಂದ ಅವರ ಮಿತ್ರ ಬಳಗದಲ್ಲಿ ಗಾಂಧೀವಾದಿಗಳಿದ್ದಂತೆ ಎಡಪಂಥೀಯ ಕಾರ್ಯಕರ್ತರೂ ಗಮನಾರ್ಹ ಸಂಖ್ಯೆಯಲ್ಲಿ ಇದ್ದರು. ದಲಿತರು, ಮಹಿಳೆಯರು, ಬುಡಕಟ್ಟು ಜನ, ಅಲ್ಪಸಂಖ್ಯಾತರು, ರೈತರು ಈ ಎಲ್ಲ ವಂಚಿತ ಅಂಚಿನ ಸಮುದಾಯಗಳ ಆಶೋತ್ತರಗಳೊಡನೆ ಗುರುತಿಸಿಕೊಂಡಿದ್ದ ಸುರೇಂದ್ರ ಮೋಹನ್ ತಮ್ಮ ಚಟುವಟಿಕೆಗಳಿಂದ ಸಮಾಜವಾದಿ ವಿಚಾರಧಾರೆಯ ವ್ಯಾಖ್ಯೆಯನ್ನೇ ವಿಸ್ತರಿಸಿದರು. ಸತತವಾಗಿ ಅಂಕಣಗಳ ಮೂಲಕ, ಪತ್ರಿಕೆಗಳಲ್ಲಿ ಬರವಣಿಗೆ ಜತೆಗೆ ಆಂದೋಲನಗಳಲ್ಲಿ ಕ್ರಿಯಾಶೀಲರಾಗಿ ಇರುತ್ತಿದ್ದ ಅವರು, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿದ್ಯಮಾನಗಳ ಜತೆಯೂ ನಿಕಟ ನಂಟನ್ನು ಹೊಂದಿದ್ದರು. ಸುರೇಂದ್ರ ಮೋಹನ್ ಅವರ ಬದುಕಿನ ವಿವಿಧ ಘಟ್ಟಗಳು ದೇಶದ ಸಮಾಜವಾದಿ ಹಾಗೂ ಸ್ವಾತಂತ್ರ್ಯ ಆಂದೋಲನಗಳೊಡನೆ ತಳುಕು ಹಾಕಿಕೊಂಡಿವೆ. ವಿದ್ಯಾರ್ಥಿ ದೆಸೆಯಿಂದಲೇ ದೇಶದ ಈ ಆಂದೋಲನಗಳೊಡನೆ ಎಳೆಯ ಸುರೇಂದ್ರ ಮೋಹನ್ ಗುರುತಿಸಿಕೊಂಡಿದ್ದರು.

ಡಿಸೆಂಬರ್ ೪, ೧೯೨೬ರಲ್ಲಿ ಈಗಿನ ಹರ್ಯಾಣಾದ ಅಂಬಾಲಾದಲ್ಲಿ ಜನಿಸಿದ ಸುರೇಂದ್ರ ಮೋಹನ್‌ಗೆ ೧೯೪೨ರ 'ಕ್ವಿಟ್ ಇಂಡಿಯಾ' ಚಳವಳಿ ಕಾಲದಲ್ಲೇ ಸಮಾಜವಾದಿ ಚಳವಳಿಯೊಡನೆ ನಂಟು ಆರಂಭವಾಯಿತು. ಆಗ ಅವರು ೧೧ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ. ಆಗಲೇ ಆ ಎಳೆಯ ಸುರೇಂದ್ರ ಮೋಹನ್‌ಗೆ ಜಯಪ್ರಕಾಶ್ ನಾರಾಯಣ್, ರಾಮ್‌ಮನೋಹರ್ ಲೋಹಿಯಾ ಅವರ ಹೆಸರು ಪರಿಚಯವಾಗಿ, 'ಕ್ವಿಟ್ ಇಂಡಿಯಾ' ಚಳವಳಿಯಲ್ಲಿನ ಅವರಿಬ್ಬರ ಐತಿಹಾಸಿಕ ಪಾತ್ರದ ಬಗ್ಗೆಯೂ ತಿಳಿದುಕೊಂಡಿದ್ದರು. ೧೯೪೬ರಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ (ಸಿಎಸ್‌ಪಿ) ಜತೆ ಅವರ ಸಂಬಂಧ ಏರ್ಪಟ್ಟಿತು. ಸಿಎಸ್‌ಪಿ ನಾಯಕ ಮುನ್ಷಿ ಅಹ್ಮದ್ ದಿನ್, ಜಲಂಧರ್‌ನ ಡಿಎವಿ ಕಾಲೇಜಿಗೆ ಭೇಟಿ ನೀಡಿದಾಗ, ಸುರೇಂದ್ರ ಮೋಹನ್ ಆ ಕಾಲೇಜಿನಲ್ಲಿ ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿ ಹಾಗೂ ಪಂಜಾಬ್ ವಿದ್ಯಾರ್ಥಿ ಕಾಂಗ್ರೆಸ್‌ನ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ. ೧೯೪೬ರ ಮೇ ತಿಂಗಳಲ್ಲಿ ಪಂಜಾಬ್ ಸಿಎಸ್‌ಪಿಯ ಸಂಘಟಕ ಸರ್ದಾರ್ ಗುರುಭಕ್ಷ್ ಸಿಂಗ್ ಅಂಬಾಲಾಗೆ ಭೇಟಿ ಕೊಟ್ಟು ಅಲ್ಲಿ ಸಿಎಸ್‌ಪಿಯ ಘಟಕ ಸ್ಥಾಪಿಸಿದಾಗ ಸುರೇಂದ್ರ ಮೋಹನ್ ಅದರ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ೧೯೪೮ರಲ್ಲಿ ಸಿಎಸ್‌ಪಿ ಕಾಂಗ್ರೆಸ್‌ನಿಂದ ಹೊರಬಂದು ಸೋಷಿಯಲಿಸ್ಟ್ ಪಾರ್ಟಿ ಸ್ಥಾಪನೆಯಾದಾಗ ಅವರು ತಮ್ಮ ಸ್ವಂತ ಊರು ಅಂಬಾಲಾದಲ್ಲಿ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾಗಿ ನಂತರ ಅದರ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದರು. ೧೯೫೦ರ ಜೂನ್‌ನಲ್ಲಿ ಕೃಷಿ ಕಾರ್ಮಿಕರ ಎತ್ತಂಗಡಿ ವಿರುದ್ಧ ಯಮುನಾ ನಗರದ ಬಳಿಯ ಕರೇಹ್ರಾ ಗ್ರಾಮದಲ್ಲಿ ನಡೆದ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಬಂಧಿತರಾಗುವ ಯುವಕ ಸುರೇಂದ್ರ ಮೋಹನ್ ಎರಡೂವರೆ ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆಗೆ ಗುರಿಯಾಗುತ್ತಾರೆ. ಜಯಪ್ರಕಾಶ್ ನಾರಾಯಣ್ ಹಾಗೂ ಪ್ರೊ. ತಿಲಕ್‌ರಾಜ್ ಛಡ್ಡಾ ಅವರ ಮಧ್ಯಪ್ರವೇಶದಿಂದ ೧೯೫೧ರ ಜನವರಿ ಕೊನೆಗೆ ಏಳು ತಿಂಗಳ ಕಾರಾಗೃಹ ಶಿಕ್ಷೆಯ ನಂತರ ಸುರೇಂದ್ರ ಮೋಹನ್ ಬಿಡುಗಡೆಯಾಗುತ್ತಾರೆ. ನಂತರದಲ್ಲೇ ಅವರು ೧೯೫೨ರ ಜುಲೈನಲ್ಲಿ ರೂಪಡ್‌ನಲ್ಲಿ (ಇಂದಿನ ರೂಪ್‌ನಗರ್) ಪಂಜಾಬ್ ಸೋಷಿಯಲಿಸ್ಟ್ ಪಾರ್ಟಿಯ ರಾಜ್ಯ ಸಮ್ಮೇಳನವನ್ನು ಸಂಘಟಿಸುತ್ತಾರೆ. ಇದನ್ನು ಉದ್ಘಾಟಿಸಿದವರು ಡಾ.ರಾಮ್‌ಮನೋಹರ್ ಲೋಹಿಯಾ.

೧೯೫೨ರ ಅಕ್ಟೋಬರ್‌ನಲ್ಲಿ ಉನ್ನತ ಶಿಕ್ಷಣಕ್ಕಾಗಿ ಡೆಹರಾಡೂನ್‌ಗೆ ತೆರಳಿದ ಸುರೇಂದ್ರ ಮೋಹನ್ ಅವರು ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು ೧೯೫೫ ರಲ್ಲಿ ಕಾಶೀ ವಿದ್ಯಾಪೀಠದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕರಾಗಿ ಸೇರಿಕೊಳ್ಳುತ್ತಾರೆ. ಎರಡು ವರ್ಷ ಬೋಧನೆ ಮಾಡಿ ಅಲ್ಲಿಂದ ಹೊರಬಂದು ಸಮಾಜವಾದಿ ಚಳುವಳಿಯ ಮುಖವಾಣಿ 'ಜನತಾ' ಸಾಪ್ತಾಹಿಕಕ್ಕೆ ಬರೆಯಲಾರಂಭಿಸಿ ಅದರ ಸಹಸಂಪಾದಕರಾಗಿಯೂ ಸೇವೆ ಆರಂಭಿಸುತ್ತಾರೆ. ಪತ್ರಿಕಾ ರಿಜಿಸ್ಟ್ರಾರರು ಒಬ್ಬರೇ ಸಂಪಾದಕರಿರಬೇಕೆಂದು ನಿಯಮ ಹೇರಿದಾಗ ಸಹಸಂಪಾದಕತ್ವದ ಹುದ್ದೆ ಬಿಟ್ಟುಕೊಡುತ್ತಾರೆ.

೧೯೫೮ರ ಜೂನ್‌ನಲ್ಲಿ ಪ್ರಜಾ ಸೋಷಿಯಲಿಸ್ಟ್ ಅಂದಿನ ಜಂಟಿ ಕಾರ್ಯದರ್ಶಿ ಪ್ರೇಮ್ ಭಾಸಿನ್ ಅವರ ಕೋರಿಕೆಯ ಮೇರೆಗೆ ಸಮಾಜವಾದಿ ಯುವಕ ಸಭಾದ (ಎಸ್‌ವೈಎಸ್) ಪೂರ್ಣಾವಧಿ ಕಾರ್ಯಕರ್ತರಾಗಿ ಪಕ್ಷದ ಕೇಂದ್ರ ಕಚೇರಿ ಸೇರುತ್ತಾರೆ. ಪ್ರಜಾ ಸೋಷಿಯಲಿಸ್ಟ್ ಪಕ್ಷ, ಅದರ ನಂತರ ಸಂಯುಕ್ತ ಸೋಷಿಯಲಿಸ್ಟ್ ಪಕ್ಷದ ಅಡಿಯಲ್ಲಿ ಎಸ್‌ವೈಎಸ್‌ನ್ನು ಸಂಘಟಿಸಿ ತಮ್ಮ ಕತೃತ್ವ ಶಕ್ತಿಯನ್ನು ತೋರಿದ ಸುರೇಂದ್ರ ಮೋಹನ್ ೧೯೬೫-೭೧ರ ಅವಧಿಯಲ್ಲಿ ಸೋಷಿಯಲಿಸ್ಟ್ ಪಕ್ಷದ ಮೊದಲ ಜಂಟಿ ಕಾರ್ಯದರ್ಶಿಯಾಗುತ್ತಾರೆ. ಪಕ್ಷ ಸಂಘಟನೆಯಲ್ಲಿ ತಮ್ಮ ಛಾಪನ್ನು ಮೂಡಿಸಿದ ಸುರೇಂದ್ರ ಮೋಹನ್ ೧೯೭೨-೭೭ ರಲ್ಲಿ ಅದರ ಪ್ರಧಾನ ಕಾರ್ಯದರ್ಶಿ ಹುದ್ದೆಯವರೆಗೆ ಏರುತ್ತಾರೆ.

೧೯೭೭ರಲ್ಲಿ ಸೋಷಿಯಲಿಸ್ಟ್ ಪಕ್ಷ ವಿಸರ್ಜನೆಯಾಗಿ ಜನತಾ ಪಕ್ಷದ ಸ್ಥಾಪನೆಯಾದಾಗ ತುರ್ತು ಪರಿಸ್ಥಿತಿಯ ಕಾಲದಲ್ಲಿ ತುರಂಗವಾಸ ಅನುಭವಿಸಿದ್ದ ಸುರೇಂದ್ರ ಮೋಹನ್ ಅದರ ಸ್ಥಾಪಕ ಪ್ರಧಾನಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ನೇಮಕವಾಗಿ, ಇಂದಿರಾ ಗಾಂಧಿ ವಿರುದ್ಧ ಜನತಾ ಪಕ್ಷದ ಐತಿಹಾಸಿಕ ವಿಜಯದಲ್ಲಿ ಗುರುತರ ಪಾತ್ರ ವಹಿಸುತ್ತಾರೆ. ಮೊರಾರ್ಜಿ ದೇಸಾಯಿ ಸರ್ಕಾರದಲ್ಲಿ ಸಚಿವರಾಗುವಂತೆ ಬಂದ ಆಮಂತ್ರಣವನ್ನು ವಿನಯಪೂರ್ವಕ ನಿರಾಕರಿಸಿ ಪಕ್ಷದ ಸಂಘಟನೆಯಲ್ಲೇ ತೊಡಗಿಸಿಕೊಳ್ಳುತ್ತಾರೆ.

೧೯೭೮-೮೪ರವರೆಗೆ ರಾಜ್ಯಸಭಾ ಸದಸ್ಯರಾಗಿ ತಮ್ಮ ಸಂಸದೀಯ ಪಟುತ್ವ ಸಾಬೀತುಪಡಿಸುವ ಸುರೇಂದ್ರ ಮೋಹನ್ ಜನತಾ ಪರಿವಾರದಿಂದ ಹೋಳಾಗಿ ಮೂಡಿದ ವಿಭಿನ್ನ ಗುಂಪುಗಳ ಸಾಕ್ಷಿ ಪ್ರಜ್ಞೆಯಾಗಿದ್ದವರು. ದೇವೇಗೌಡ ಹಾಗೂ ವಿ.ಪಿ.ಸಿಂಗ್ ಪ್ರಧಾನಮಂತ್ರಿಗಳಾಗಿದ್ದಾಗ ಅವರೊಡನೆಯೂ ನಿಕಟವಾಗಿ ಕೆಲಸ ಮಾಡಿ ಮಂಡಲ್ ಆಯೋಗದ ಜಾರಿಯಲ್ಲಿ ಮಹತ್ವದ ಪಾತ್ರ ವಹಿಸಿದರು. ಸಾಮಾಜಿಕ ನ್ಯಾಯದ ಸಾರಥಿಯಾಗಿದ್ದರು. ಜನತಾ ಪಕ್ಷದೊಡನೆ, ಜನತಾ

ದಳ, ನಂತರ ಜನತಾದಳ ಜಾತ್ಯತೀತದೊಡನೆ ಗುರುತಿಸಿಕೊಂಡಿದ್ದರು ಆದರೆ ಕರ್ನಾಟಕದಲ್ಲಿ ಬಿಜೆಪಿ ಜತೆ ಕೂಡಿಕೊಂಡು ಜೆಡಿಎಸ್ ಸರ್ಕಾರ ರಚಿಸಲು ಮಗ ಎಚ್.ಡಿ.ಕುಮಾರಸ್ವಾಮಿ ಅವರಿಗೆ ದೇವೇಗೌಡರು ಮೌನವಾಗಿ ಸಮ್ಮತಿಸಿದ್ದನ್ನು ವಿರೋಧಿಸಿ ದೇವೇಗೌಡರ ಸಖ್ಯ ತೊರೆದು ಸುರೇಂದ್ರ ಮೋಹನ್ ತಮ್ಮದೇ ಹೊಸ ಪಕ್ಷ – ಸೋಷಿಯಲಿಸ್ಟ್ ಜನತಾದಳ ಪಾರ್ಟಿ ಹುಟ್ಟು ಹಾಕಿ ಕೊನೆತನಕ ಅದರ ಅಧ್ಯಕ್ಷರಾಗಿದ್ದರು. ಈ ಮಧ್ಯೆ ಅವರು ೧೯೯೭ ರಿಂದ ೯೮ ರವರೆಗೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದರು.

ಸರಳ ಜೀವನವನ್ನು ಅಕ್ಷರಶಃ ಪಾಲಿಸಿದ ಮೊದಲ ಪೀಳಿಗೆಯ ಭಾರತೀಯ ಸಮಾಜವಾದಿ ನಾಯಕರನ್ನು ಮಾದರಿಯಾಗಿ ಇಂದಿನ ತಲೆಮಾರಿನ ಪ್ರಗತಿಪರರು ಹೊಂದಿರಲೇಬೇಕು ಎಂಬ ನಿಶ್ಚಿತ ವಿಚಾರಕ್ಕೆ ಅಂಟಿಕೊಂಡು ಬದುಕಿ ಬಾಳಿದವರು ಸುರೇಂದ್ರ ಮೋಹನ್. ರಾಜ್ಯಸಭಾ ಸದಸ್ಯರಾಗಿ ಇದ್ದಾಗಲೂ ಅವರ ಮನೆಯಲ್ಲಿ ಸಾಧಾರಣವಾಗಿ ದಾಲ್ ರೋಟಿಯೇ ಬಂದ ಅತಿಥಿಗಳಿಗೂ ಬಡಿಸಲಾಗುತ್ತಿದ್ದ ಸರಳ ಭೋಜನ. ಅದು ಅವರ ನಿತ್ಯದ ಬದುಕಿನ ಸಂಕೇತವೂ ಆಗಿತ್ತು. ಸ್ವಂತದ ಸೂರೂ ಇಲ್ಲದಿದ್ದಾಗ ಗೆಳೆಯರು ಮತ್ತು ಅವರ ಅಭಿಮಾನಿಗಳು ಹಣ ಸಂಗ್ರಹಿಸಿ ಸುರೇಂದ್ರ ಮೋಹನ್ ಮತ್ತು ಮಂಜು ದಂಪತಿಗಳಿಗೆ ತಮ್ಮದೇ ಆದ ಫ್ಲಾಟ್ ಒಂದನ್ನು ದೆಹಲಿಯಲ್ಲಿ ಖರೀದಿಸಿಕೊಟ್ಟರು. ಸ್ವಭಾವ ಜನ್ಯ ಸರಳತೆ ಮತ್ತು ಸಂಪನ್ಮೂಲಗಳ ಕೊರತೆ ಇದ್ದರೂ ಸಂಘಟನೆಗೆ ಹೆಸರಾಗಿದ್ದವರು.

ಸುಮಾರು ೬೫ ವರ್ಷಗಳಿಗೂ ಹೆಚ್ಚು ಕಾಲ ಸಕ್ರಿಯ ರಾಜಕಾರಣದಲ್ಲಿ ದುಡಿದ ಸುರೇಂದ್ರ ಮೋಹನ್ ಅವರಿಗೆ ಕರ್ನಾಟಕದ ಸಮಾಜವಾದಿ ಮಿತ್ರರ ನಿಕಟ ನಂಟೂ ಇತ್ತು. ತರುಣ ರಮೇಶ್ ಬಂದ್‌ಗದ್ದೆ ಆಕಸ್ಮಿಕ ಸಾವಿಗೀಡಾದಾಗ ಸಂತಾಪ ಸೂಚಿಸಲು ರೈಲಿನಲ್ಲಿ ದೆಹಲಿಯಿಂದ ಬೆಂಗಳೂರಿಗೆ ಬಂದಿದ್ದರು.

ಸುರೇಂದ್ರ ಮೋಹನ್ ದೇಶದ ಸಮಾಜವಾದಿ ಚಳವಳಿಯ ಹಾಗೂ ರಾಜಕೀಯ ಇತಿಹಾಸದ ವಿಶ್ವಕೋಶ ಎಂದೇ ಪ್ರಸಿದ್ಧರಾಗಿದ್ದರು. ಚಳವಳಿಯ ವಿವಿಧ ಆಯಾಮಗಳ ಬಗ್ಗೆ ಖಚಿತ ಮಾಹಿತಿ ಕೊಡಬಲ್ಲವರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಮತ್ತೆ ಸೋಷಿಯಲಿಸ್ಟ್ ಪಾರ್ಟಿ ಮರುಹುಟ್ಟಿನ ಕನಸು ಕಂಡಿದ್ದ ಸುರೇಂದ್ರ ಮೋಹನ್ ಎಲ್ಲ ಸಮಾಜವಾದಿ ಧಾರೆಗಳ ಸಂಯೋಜನೆಯಾಗಿ ಸೋಷಿಯಲಿಸ್ಟ್ ಫ್ರಂಟ್‌ನ್ನು ರೂಪಿಸಿ ಅದರ ಸಂಚಾಲಕರಾಗಿ ದೇಶದಲ್ಲಿ ಯುವಪೀಳಿಗೆಯ ನಾಯಕತ್ವದಲ್ಲಿ ಮತ್ತೆ ಸೋಷಿಯಲಿಸ್ಟ್ ಚಳವಳಿ ಹುಟ್ಟು ಹಾಕಬಹುದೆಂಬ ಅಚಲ ವಿಶ್ವಾಸವನ್ನು ಹೊಂದಿದ್ದರು. ೧೯೩೪ರಲ್ಲಿ ತರುಣರಾದ ಜಯಪ್ರಕಾಶ್ ಮತ್ತು ಲೋಹಿಯಾ, ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ ಕಟ್ಟುವ ದಿಟ್ಟತನ ತೋರಿದ್ದನ್ನು ಪದೇ ಪದೇ ನೆನಪು ಮಾಡಿಕೊಡುತ್ತಿದ್ದ ಸುರೇಂದ್ರ ಮೋಹನ್ ಹೊಸದಾಗಿ ಸೋಷಿಯಲಿಸ್ಟ್ ಆಂದೋಲನಕ್ಕೆ ಈಗಲೂ ಅದೇ ರೀತಿ ಚಾಲನೆ ಕೊಡಬಹುದು ಎಂಬ ಗಟ್ಟಿ ವಿಶ್ವಾಸ ಹೊಂದಿದ್ದರು.

ಅವರ ಕೊನೆಯ ಮಹತ್ವದ ಕಾರ್ಯಕ್ರಮವೆಂದರೆ ಡಾ. ರಾಮ್‌ಮನೋಹರ್ ಲೋಹಿಯಾ ಅವರ ಜನ್ಮ ಶತಮಾನೋತ್ಸವವನ್ನು ದೇಶಾದ್ಯಂತ ಯಶಸ್ವಿಯಾಗಿ ನಡೆಸಿದ್ದು ಮತ್ತು ಆ ಸಂದರ್ಭದಲ್ಲಿ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸುವುದರ ಮೂಲಕ ಮತ್ತೆ ಸಮಾಜವಾದಿಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದ್ದು. ಸಾಂಪ್ರದಾಯಿಕ ಆಲೋಚನೆ ಸಮಾಜವಾದಿ ಐಕ್ಯತೆಗೆ ದೊಡ್ಡ ಅಡಚಣೆ ಎಂದೇ ಅವರು ಭಾವಿಸಿದ್ದರು. ದೇಶಕ್ಕೆ ಸಮಾಜವಾದಿ ಎಡಪಂಥೀಯ ಐಕ್ಯತೆಯೇ ಈಗಿನ ನಿರ್ಣಾಯಕ ಆಯ್ಕೆ ಎಂದೇ ಕನಸು ಕಂಡಿದ್ದರು.


ವಿಕಾಸ್ ಕಾ ರಾಸ್ತಾ; ನಯೀ ಆರ್ಥಿಕ್ ನೀತಿಯೋಂ ಕಾ ವಿಶ್ಲೇಷಣ್; ಸಮಾಜವಾದ್, ಧರ್ಮನಿರಪೇಕ್ಷತಾ ಔರ್ ಸಾಮಾಜಿಕ್ ನ್ಯಾಯ್; ವರ್ತಮಾನ್ ರಾಜನೀತೀ ಕೀ ಜ್ವಲಂತ್ ಚುನೌತಿಯಾ ; ಡಾ.ರಾಮ್ ಮನೋಹರ್ ಲೋಹಿಯಾ ಕೀ ನೀತಿಯಾಂ – ಇವು ಅವರ ಕೆಲವು ಮಹತ್ವಪೂರ್ಣ ಪುಸ್ತಕಗಳು.

೨೦೧೧ರ ಡಿಸೆಂಬರ್ ೧೭ ಬೆಳಗಿನ ಜಾವ ನಿದ್ರೆಯಲ್ಲೇ ಅಸುನೀಗಿದ ಸುರೇಂದ್ರ ಮೋಹನ್, ಸ್ವಲ್ಪ ಕಾಲ ಹೃದಯ ಬೇನೆಯಿಂದ ಅಸ್ವಸ್ಥರಾಗಿದ್ದರು. ಸಾಯುವುದಕ್ಕೆ ಒಂದು ವಾರ ಮುಂಚೆ ಮುಂಬೈನಲ್ಲಿದ್ದ ಸುರೇಂದ್ರ ಮೋಹನ್, ಹೊಸ ಸೋಷಿಯಲಿಸ್ಟ್ ಪಾರ್ಟಿಯ ಸ್ಥಾಪನೆ ನಿರ್ಧಾರ ಕೈಗೊಂಡ ಸಮಾಜವಾದಿಗಳ ಸಭೆಯಲ್ಲಿ ಪಾಲ್ಗೊಂಡಿದ್ದರು. ಅವರ ನಿಧನದೊಂದಿಗೆ ಸಮಾಜವಾದಿ ಚಳವಳಿಯ ಆರಂಭದ ದಿನಗಳ ಪ್ರಮುಖ ಕೊಂಡಿಯೊಂದು ಕಡಿದುಹೋಯಿತು. ೮೫ನೇ ವಯಸ್ಸಿನಲ್ಲಿ ಜೀವನಕ್ಕೆ ವಿದಾಯ ಹೇಳುವಾಗಲೂ ಸುರೇಂದ್ರ ಮೋಹನ್ ಅವರ ಕ್ರಿಯಾಶೀಲ ಬದುಕು ಕೊನೆಯ ತನಕ ಒಂದೇ ತೆರನಾಗಿ ಸಮಾಜಕ್ಕೆ ಮುಡಿಪಾಗಿತ್ತು. ತಮ್ಮ ಆರೋಗ್ಯ ಕ್ಷೀಣಿಸುತ್ತಿದ್ದರೂ ಅದನ್ನು ಲೆಕ್ಕಿಸುತ್ತಿರಲಿಲ್ಲ. ಅವರ ಪೀಳಿಗೆಯ ಹಾಗೂ ನಂತರದ ಅನೇಕ ತರುಣರ್‍ಯಾರೂ ಅವರ ಸಕ್ರಿಯ ಜೀವನ ವಿಧಾನಕ್ಕೆ ಸಾಟಿಯಾಗಿಲ್ಲ.

–ಖಾದ್ರಿ ಎಸ್. ಅಚ್ಯುತನ್

ಸಾತ್ವಿಕ ಸಮಾಜವಾದಿ ಕಿಷನ್ ಪಟ್ನಾಯಕ್: ಒಂದು ನೆನಪು

–ಪದ್ಮಾ ಶ್ರೀರಾಮ್



ಅತ್ಯಂತ ಕಿರಿಯ ವಯಸ್ಸಿನಲ್ಲಿ ಒರಿಸ್ಸಾದಿಂದ ಲೋಕಸಭೆಗೆ ಆಯ್ಕೆಯಾಗಿದ್ದ ಸಮಾಜವಾದಿ ಕಿಶನ್ ಪಟ್ನಾಯಕರನ್ನು ನೆನೆದಾಗ, ಅದರೊಂದಿಗೆ ನಾವು ತಾರುಣ್ಯ ಕಾಲದಲ್ಲಿ ಅನುಭವಿಸಿದ ಒಂದು ಅದ್ಭುತ ಕಾಲಘಟ್ಟದ ಅನೇಕ ರಸಚಿತ್ರಗಳು ಮನದಲ್ಲಿ ಮೂಡುತ್ತಿವೆ. ಎಳೆಯರೊಡನೆ ಇವನ್ನು ಸಂಕ್ಷಿಪ್ತವಾಗಿ ಹಂಚಿಕೊಳ್ಳಬೇಕೆನಿಸುತ್ತಿದೆ.

ಎಪ್ಪತ್ತರ ದಶಕದಲ್ಲಿ ನಾನು ಮದುವೆಯಾಗಿ ಮೈಸೂರಿಗೆ ಬರುವವರೆಗೆ ಇದ್ದದ್ದೇ ಒಂದು ಲೋಕದಲ್ಲಿ. ಬಂದು ಸೇರಿದ್ದೇ ಮತ್ತೊಂದು ಲೋಕಕ್ಕೆ. ಇಲ್ಲಿ ಮುಕ್ತ ಮಾತುಕತೆ, ಹೊಸ ರೀತಿಯ ಆಲೋಚನೆ, ನಗು, ಸ್ವಾತಂತ್ರ್ಯಗಳಿಂದ ಕೂಡಿದ ತರುಣ ಮನಸ್ಸುಗಳ ಕೂಟ. ಮಾತೆತ್ತಿದರೆ ಸೋಷಲಿಸ್ಟ್ ಅನ್ನುತ್ತಾರೆ, ಸ.ಯು.ಸ., ಲೋಹಿಯಾ ಅನ್ನುತ್ತಾರೆ. ಹೊಸದಾಗಿ ಬಂದ ನನಗೆ ಬೆರಗು, ಕುತೂಹಲ. ಸದಾ ವಿರೋಧ ಪಕ್ಷವನ್ನು ಎತ್ತಿ ಹಿಡಿಯುತ್ತಿದ್ದ ಜಿಲ್ಲೆಯಿಂದ ಬಂದ ನನಗೆ ಶಾಂತವೇರಿ ಗೋಪಾಲಗೌಡರ ವ್ಯಕ್ತಿತ್ವದ ಪರಿಚಯ ಪರೋಕ್ಷವಾಗಿ ಆಗಿತ್ತು. ಅಸೆಂಬ್ಲಿಯಲ್ಲಿ ಅವರ ವಾಗ್ಝರಿ, ನಿರ್ಭೀತ ನಡವಳಿಕೆಯನ್ನು ಕಣ್ಣಾರೆ ಕಂಡಿದ್ದೆ. ಆಹಾ! ಎಂತಹದೊಂದು ಸ್ನೇಹವಲಯಕ್ಕೆ ಬಂದು ಸೇರಿದೆ ಎಂದು ಅಚ್ಚರಿಪಡುತ್ತಿರುವಾಗಲೇ ಕಿಶನ್ ಪಟ್ನಾಯಕರನ್ನು ನೋಡುವ, ಪರಿಚಯ ಮಾಡಿಕೊಳ್ಳುವ ಸಂದರ್ಭ ಒದಗಿತು.

ಮೈಸೂರಿನಲ್ಲಿ ಎಪ್ಪತ್ತರ ದಶಕದಲ್ಲಿ ಅದ್ಭುತ ಚಾರಿತ್ರಿಕ ಘಟನೆಗಳು ಸಂಭವಿಸಿದವು. ಜಾತಿ ವಿನಾಶ ಸಮ್ಮೇಳನ, ಕಲಾವಿದ, ಬರಹಗಾರರ ಒಕ್ಕೂಟ, ನವ ನಿರ್ಮಾಣ ಕ್ರಾಂತಿ ಇವೆಲ್ಲಾ ನಮ್ಮನ್ನು ಹೊಸದೊಂದು ಜಗತ್ತಿಗೆ ಪರಿಚಯಿಸಿದವು. ಅಲ್ಲಿ ಕಂಡ ಅನೇಕ ವ್ಯಕ್ತಿತ್ವಗಳ ಪೈಕಿ, ಕಿಶನ್ ಪಟ್ನಾಯಕರ ವ್ಯಕ್ತಿತ್ವ ಸೌಮ್ಯ ಪ್ರಕಾಶದಿಂದ ಬಹುಕಾಲ ಉರಿಯುವ ನಂದಾದೀಪದಂತೆ. ಕಿಶನರು



ಹಾಸನದಲ್ಲಿ ಯುವ ಸಮಾಜವಾದಿಗಳೊಂದಿಗೆ (೧೯೮೯)

ಆಗಾಗ್ಗೆ ಮೈಸೂರಿಗೆ ಮತ್ತು ಕರ್ನಾಟಕದಲ್ಲಿ ಸಮಾಜವಾದಿಗಳು ಕರೆದಲ್ಲಿಗೆ ಬರುತ್ತಿದ್ದರು.

ಮೊದಲ ನೋಟಕ್ಕೆ ಕಿಶನ್‌ರು ಒಬ್ಬ ಸಾಧಾರಣ ವ್ಯಕ್ತಿಯಂತಿದ್ದರೂ ಮಾತಾಡಲು ಪ್ರಾರಂಭಿಸಿದರೆ ಯಾವುದೇ ವಿಷಯದಲ್ಲಾಗಲಿ ಅವರಿಗಿದ್ದ ಅಪಾರವಾದ ಜ್ಞಾನ, ಅದನ್ನು ಅವರು ಕೇಳುಗನಿಗೆ ಒಪ್ಪಿತವಾಗುವಂತೆ ಮಂಡಿಸುತ್ತಿದ್ದ ರೀತಿ ಆಶ್ಚರ್ಯಕರವಾಗಿತ್ತು. ತಮ್ಮನ್ನು ವಿರೋಧಿಸಿ ಯಾರಾದರು ಪ್ರಶ್ನಿಸಿದರೂ ಅವರು ಉದ್ವೇಗಗೊಳ್ಳುತ್ತಿರಲಿಲ್ಲ. ಒಬ್ಬ ಕಿರಿಯ ತಮ್ಮನನ್ನು ಸಮಾಧಾನಿಸುವಂತೆ ಮೆಲುದನಿಯಲ್ಲಿ ತಮ್ಮ ವಿಚಾರವನ್ನು ಕೇಳುಗನೊಡನೆ ಹಂಚಿಕೊಳ್ಳುತ್ತಿದ್ದರು. ಅವರ ಮಾತುಕತೆಯಲ್ಲಿ ಒಂದು ಅಪೂರ್ವ ಮುನ್ನೋಟದ ಹೊಳಹು ಇರುತ್ತಿತ್ತು. ಒಮ್ಮೆ ಅವರು ಇಲ್ಲಿನ ಗಾಂಧಿ ಭವನದಲ್ಲಿ ಮಾತಾಡುತ್ತ ಮುಂದೆ ಬರಲಿರುವ ವರ್ಷಗಳಲ್ಲಿ 'ಕನ್ನಡ' ಒಂದು ಉಪಭಾಷೆ (dialect) ಆದರೂ ಆಗಿಬಿಡಬಹುದು ಎಂದರು. ನನಗೆ ನಾವು ಪ್ರೀತಿಸುವ ನಮ್ಮ ಭಾಷೆಗೆ ಈ ಗತಿ ಬರಬಹುದೆ ಎಂದು ಭಯ, ಬೇಸರ ಎಲ್ಲಾ ಉಂಟಾಯ್ತು. ಇಂದು ನಗರ, ಕಾಡು ಮೇಡುಗಳಲ್ಲಿ ಹರಡಿಕೊಂಡಿರುವ ಅನ್ಯಭಾಷಿಕರ ಮೇಲುಗೈ, ಅವರೆದುರಿಗೆ ಆರ್ಥಿಕವಾಗಿ, ಮಾನಸಿಕವಾಗಿ ಪೈಪೋಟಿ ಕೊಡಲಾರದ ನಮ್ಮವರನ್ನು ನೋಡಿದಾಗ ಕಿಶನ್‌ರವರು ಕೆಲವೇ ವರ್ಷಗಳ ಹಿಂದೆ ಆಡಿದ ಮಾತುಗಳು ಹೇಗೆ ನಿಜವಾಗುತ್ತಿವೆ ಎಂದೆನ್ನಿಸುತ್ತದೆ.


ಕಿಶನ್‌ರಿಗೆ ಕರ್ನಾಟಕವೆಂದರೆ, ಇಲ್ಲಿನ ಸಮಾಜವಾದಿಗಳೆಂದರೆ ಹೆಚ್ಚಿನ ಪ್ರೀತಿ ಇತ್ತು. ಅವರು ಆಗಾಗ್ಗೆ ಮೈಸೂರಿಗೆ ಬಂದಾಗ ಅವರ ಸರಳ, ಪ್ರಭಾವೀ ವ್ಯಕ್ತಿತ್ವದ ಪರಿಚಯ ನನಗೆ ಆಗತೊಡಗಿತು. ಅವರದ್ದು ನಿರಾಡಂಬರ ಜೀವನ, ಸಾಧಾರಣ ಉಡಿಗೆ-ತೊಡಿಗೆ, ಮಿತವಾದ ಅವಶ್ಯಕತೆಗಳು. ಬೇಕೆಂದಾಗ ಕಿಶನ್‌ರನ್ನು ನಾವೇ ಕರೆಸಿಕೊಳ್ಳಬೇಕಾಗಿತ್ತು. ಪುನಃ ಕಳಿಸಿಕೊಡಬೇಕು. ಅವರಿದ್ದಷ್ಟೂ ದಿನಗಳು ಎಲ್ಲ ಸಮಾಜವಾದಿಗಳಿಗೊಂದು ಸಂಭ್ರಮ.

1975ರಲ್ಲಿ ತುರ್ತು ಪರಿಸ್ಥಿತಿ ಸಿಡಿಲಿನಂತೆ ಬಂದೆರಗಿತು. ವಿರೋಧಿಗಳ ಮೇಲೆ ಸರ್ಕಾರದ ಕೆಂಗಣ್ಣು, ಅಲ್ಪ ಕಾರಣ ಸಿಕ್ಕಿದರೂ ವಿರೋಧಿಗಳನ್ನು ಜೈಲಿಗೆ ಹಾಕುವ ಸಂಚು. ತಮ್ಮ ಕೆಲಸ ತಾವು ಮಾಡಿಕೊಂಡಿರುತ್ತಿದ್ದ ಸಮಾಜವಾದಿಗಳ ಮೇಲೆ ಗುಪ್ತಚರ್ಯೆ. ಹೀಗಿರುವಾಗ ಕಿಶನ್‌ರು ಕೃಷ್ಣಪ್ರಸಾದ್ ಎಂಬ ಹೊಸ ಹೆಸರನ್ನು ಹೊತ್ತು ಮೈಸೂರಿಗೆ ರವಿವರ್ಮ ಕುಮಾರ್ ಅವರೊಡನೆ ಬಂದರು. ಪ್ರಾರಂಭದಲ್ಲಿ ಕೆಲವು ದಿನ ನಮ್ಮೊಡನೆ ಉಳಿದಿದ್ದರು. ನಮ್ಮೊಡನೆ ಅತ್ಯಂತ ಸಂತೋಷದಿಂದ ಬೆರೆತು, ನಾವು ಒದಗಿಸಿದ ಸರಳ ಊಟೋಪಚಾರದಿಂದ ತೃಪ್ತರಾಗಿ ನಮ್ಮಲ್ಲಿ ಒಬ್ಬರಾದರು. ಆಗ ಅವರು ಅಸ್ತಮಾದಿಂದ ಬಳಲುತ್ತಿದ್ದರು. ಅದಕ್ಕೂ ಔಷಧೋಪಚಾರವಾಯ್ತು. ನಮ್ಮ ಮನೆಗೂ ಬೇಹುಗಾರಿಕೆಯ ಬಿಸಿ ತಟ್ಟಿ, ರಾತ್ರಿ ಹೊತ್ತು ಯಾರ್ಯಾರು ಇದ್ದೀರಿ ಎಂದು ವಿಚಾರಣೆಯೂ ಆಗಿದ್ದರಿಂದ ಇನ್ನು ಕ್ಷೇಮಕರವಲ್ಲವೆಂದು ತಿಳಿದು ಮೈಸೂರು ನಗರದ ಅನಾಮಿಕ ಹೋಟೆಲ್ ಒಂದರಲ್ಲಿ ಪ. ಮಲ್ಲೇಶ್ ಮತ್ತು ಬಿ.ಎನ್. ಶ್ರೀರಾಮ್ ಸೇರಿ, ಕಿಶನ್‌ರಿಗೆ ವಾಸ್ತವ್ಯ ಏರ್ಪಡಿಸಿದರು. ಕೆಲವು ವಾರಗಳ ನಂತರ 'ಕೃಷ್ಣಪ್ರಸಾದ'ರನ್ನು ರವಿವರ್ಮ ಕುಮಾರ್, ಪ.ಮಲ್ಲೇಶ್ ಮತ್ತು ಬಿ.ಎನ್. ಶ್ರೀರಾಮ್ ಸೇರಿ ಕಲ್ಕತ್ತೆಗೆ ಕಳಿಸಿಕೊಟ್ಟರು.

ಆಗೆಲ್ಲ ಎಲ್ಲ ಸಮಾಜವಾದಿ ಗೆಳೆಯರು ಸೇರಿ ತಮ್ಮ ಮಿತವಾದ ಗಳಿಕೆಯಲ್ಲಿ ಅವರ ವೆಚ್ಚವನ್ನು ಭರಿಸುತ್ತಿದ್ದರು. ಆಗಿನ ದಿನಗಳಲ್ಲಿ ಅವರ ಸರಳ, ಉದಾತ್ತ ವ್ಯಕ್ತಿತ್ವದ ಪರಿಚಯ ನನಗೆ ಆಗತೊಡಗಿತು. ಅವರ ಉಡಿಗೆ ತೊಡಿಗೆ, ಊಟ, ಹವ್ಯಾಸ ಎಲ್ಲವು ಎಷ್ಟು ಸರಳವಾಗಿತ್ತೆಂದರೆ ಅವರು ಬಂದಾಗ ಇವರಿಗೆ ಏನೇನು ಉಪಚಾರ ಮಾಡಬೇಕು ಎಂದು ಆತಂಕಪಡುವ ಅಗತ್ಯವೇ ಇರಲಿಲ್ಲ. ಆದರೆ ಕಿಶನ್‌ರ ಅಸ್ತಮಾ ತೊಂದರೆಯಿಂದ ಅವರಿಗೆ ಬಿಸಿನೀರು, ಬಿಸಿ ಊಟ ಕೊಡುವುದರ ಬಗ್ಗೆ ಮಾತ್ರ ಎಚ್ಚರಿಕೆ ವಹಿಸಬೇಕಿತ್ತು. ಇದ್ದುದರಲ್ಲಿ ಅವರು ತೃಪ್ತಿಪಡುತ್ತಿದ್ದರಿಂದ ಇವರು ನಮ್ಮವರು ಎಂಬ ಭಾವನೆ ನನಗೆ ಬರತೊಡಗಿತು. ಕಿಶನ್‌ರು ಒಮ್ಮೆ ಮೈಸೂರಿಗೆ ಬಂದರೆ ಇಲ್ಲಿರುವ ಸಮಾಜವಾದಿ ಗೆಳೆಯರು, ಅವರ ಕುಟುಂಬ ಮಕ್ಕಳು ಎಲ್ಲರ ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದರು. ನಮ್ಮ ಮಕ್ಕಳ ಹೆಸರನ್ನೂ ಕೊನೆವರೆಗೂ ಮರೆತಿರಲಿಲ್ಲ! ಒಮ್ಮೆ ಕಿಶನ್ ಮತ್ತವರ ಪತ್ನಿ ವಾಣಿ ದಕ್ಷಿಣ ಭಾರತದ ಜನಪ್ರಿಯ ತಿಂಡಿ ಇಡ್ಲಿ ತಿನ್ನಬೇಕೆಂದು ಕೇಳಿ ಮಾಡಿಸಿಕೊಂಡು ತಿಂದು ಖುಷಿಪಟ್ಟರು. ಇದೆಲ್ಲಾ ನೋಡಿದಾಗ ಒಬ್ಬ ಲೋಕಸಭಾ ಸದಸ್ಯನಾಗಿದ್ದ ಮನುಷ್ಯ, ಲೋಹಿಯರವರ ಸಹವರ್ತಿ ಇಷ್ಟು ಸೀದಾಸಾದಾ ಇರುವರಲ್ಲಾ ಎಂದು ಆಶ್ಚರ್ಯಪಡುತ್ತಿದ್ದೆ. ಕೆಲವರು ಆದರ್ಶಗಳನ್ನು ಬಾಯಲ್ಲಿ ಹೇಳುತ್ತಾರೆ ಹಾಗೂ ಇದರಿಂದ ಜನ ಪ್ರಭಾವಿತರಾಗಬೇಕೆಂದು ಅಪೇಕ್ಷಿಸುತ್ತಾರೆ. ಕೆಲವರು ತಮ್ಮ ಇರುವಿಕೆಯಿಂದಲೇ, ತಮ್ಮ ವ್ಯಕ್ತಿತ್ವದ ಪ್ರಭೆಯಿಂದಲೇ ಮೌನವಾಗಿ ತಮ್ಮ ಸಂಪರ್ಕಕ್ಕೆ ಬಂದವರನ್ನು ಪ್ರಭಾವಿಸುತ್ತಲೇ ಇರುತ್ತಾರೆ. ಕಿಶನ್ ಪಟ್ನಾಯಕರು ಅಂತಹ ವಿರಳ ವ್ಯಕ್ತಿಯಾಗಿದ್ದರು. "simple living and high thinking"ಗೆ ಅತ್ಯುತ್ತಮ ಮಾದರಿ ಕಿಶನ್‌ರವರೇ.

ಕಿಶನರು ಸ್ವಾತಂತ್ರ್ಯದ ನಂತರದ ಆಗುಹೋಗುಗಳು, 75ರ ತುರ್ತು ಪರಿಸ್ಥಿತಿಯ ಮೊದಲಿನ ಮತ್ತು ನಂತರದ ರಾಜಕೀಯ ವಿದ್ಯಮಾನಗಳನ್ನು ವೀಕ್ಷಿಸುತ್ತಲೇ ಬಂದವರು. ಈ ಏಳುಬೀಳುಗಳನ್ನು ನೋಡಿ ಅವರೆಂದೂ ವಿಚಲಿತರಾಗಲಿಲ್ಲ. ಅವರದ್ದು ಎಂದಿಗೂ ಬತ್ತದ ಆಶಾವಾದ. ಭ್ರಷ್ಟ ವಾತಾವರಣದಲ್ಲಿ ನಾವು ಕೊಳೆಯುತ್ತಿದ್ದರೂ, ನಾವು ಏನಾದರೂ ಮಾಡಬಹುದು. ನಮ್ಮ ಮುಂದಿನ ಎಳೆಯರನ್ನು ತಿಳುವಳಿಕೆಯ ಹೊಸದಾರಿಗೆ ಕೊಂಡೊಯ್ಯಬಹುದು, ಅವರಿಂದ ಏನಾದರು ಸ್ವಚ್ಛ ಬದುಕನ್ನು ಸಾಧಿಸಬಹುದು ಎಂದು ಅವರು ನಂಬಿದ್ದರು. ಅವರು ಮೈಸೂರು, ಬೆಂಗಳೂರು ಕರ್ನಾಟಕದಲ್ಲಿ ಎಲ್ಲಿಗೇ ಬರಲಿ, ಈ ಆಶಾವಾದವನ್ನು ಮುಂದಿಡುತ್ತಿದ್ದರು. ಆದರೂ ಅಂತರಾಳದಲ್ಲಿ ಅವರು ದುಃಖಿತರಾಗಿದ್ದರು. ಅವರಿಗೆ ಇಲ್ಲಿನ ಯುವಜನ, ಬರಹಗಾರರು, ಸಮಾಜವಾದಿಗಳು, ರೈತರು ಯಾರೊಡನೆ ಸಂಪರ್ಕವಿತ್ತೋ ಅವರನ್ನೆಲ್ಲಾ ಅತ್ಯಂತ ಪ್ರೀತಿಸುತ್ತಿದ್ದರು. ಆದರೆ ಒಂದೊಂದು ಬಾರಿ ಕರ್ನಾಟಕಕ್ಕೆ ಬಂದಾಗಲೂ ಅವರು ಪ್ರೀತಿಸುತ್ತಿದ್ದ ಜನ ಕಿತ್ತಾಡುವುದನ್ನು ಅವರು ನೋಡಬೇಕಾಯಿತು. ಎಮರ್ಜೆನ್ಸಿ ಕಾಲದಲ್ಲಿ ಜೆ.ಪಿ ಚಳುವಳಿಯಲ್ಲಿ ಭಾಗವಹಿಸಿದ್ದ ಗೆಳೆಯರನ್ನು ಹೆಸರಾಂತ ಲೇಖಕರೊಬ್ಬರು ಇವರು ಜಾತಿವಾದಿ, ಫ್ಯಾಸಿಸ್ಟ್ ಎಂದು ಟೀಕಿಸಿದರು. ಇದು ತಾವು ಪ್ರೀತಿಸುತ್ತಿದ್ದವರಿಂದ ಕಿಶನ್‌ರಿಗೆ ಬಿದ್ದ ಪೆಟ್ಟು. ಇನ್ನೊಮ್ಮೆ ರೈತನಾಯಕರು ಮತ್ತು ಪತ್ರಿಕಾ ಸಂಪಾದಕರ ಘರ್ಷಣೆ ನೋಡಿ ಮನನೊಂದರು. ಹೀಗೆಯೇ ಒಂದೊಂದು ಬಾರಿ ಬಂದಾಗಲೂ ಸಮಾಜವಾದಿಗಳ ಮುಖ ಮುನಿಸು, ಇನ್ನೊಬ್ಬರ ಅಭಿಪ್ರಾಯಕ್ಕೆ ಬೆಲೆಕೊಡದ ಉದ್ಧಟ ವರ್ತನೆಗಳು ಅವರ ಮನಸ್ಸನ್ನು ಮುಳ್ಳುಗಳಂತೆ ಚುಚ್ಚಿದವು. ಇಷ್ಟೆಲ್ಲಾ ನೋವು ಕೊಟ್ಟರೂ ದಕ್ಷಿಣದಿಂದ ಉತ್ತರಕ್ಕೆ ನಲುಮೆಯ ಕರೆಯ ಚುಂಬಕ ಗಾಳಿ ಬೀಸಿದಾಗ, ಕರೆಗೆ ಓಗೊಟ್ಟು ಅವರು ಬರುತ್ತಲೇ ಇದ್ದರು. ತಮ್ಮ ಅಂತರಾಳದಲ್ಲಿ ನಮ್ಮವರ ವರ್ತನೆಯಿಂದ ಎಷ್ಟೇ ದುಃಖಿತರಾಗಿದ್ದರೂ ಅವರು ಆಶಾವಾದಿಗಳಾಗೇ ಇದ್ದರು. ಕಿರಿಯರ ಮೇಲೆ ಅಪಾರವಾದ ಭರವಸೆಯನ್ನು ಇಟ್ಟೇ ಇದ್ದರು.

ನಮಗೆಲ್ಲರಿಗೂ ಸಮಾನ ಪ್ರೀತಿಯನ್ನು ಹಂಚಿದ್ದ ಕಿಶನ್ ಪಟ್ನಾಯಕ್‌ರು ನಮಗೆಲ್ಲಾ ಒಬ್ಬ ಹಿರಿಯಣ್ಣನಂತೆ ಇದ್ದರು. ಅವರ ಸರಳತೆ, ಒಳಹೊರಗಿನ ವ್ಯಕ್ತಿತ್ವದ ಪಾರದರ್ಶಕತೆಯನ್ನು ನೆನೆದಾಗ ನನ್ನ ಮನಸ್ಸು ಅವರ ಉನ್ನತ ವ್ಯಕ್ತಿತ್ವದ ಬಗ್ಗೆ ಪ್ರೀತಿ, ಗೌರವಗಳಿಂದ ತುಂಬಿ ಬರುತ್ತದೆ.



(ಮೈಸೂರಿನಲ್ಲಿರುವ ಲೇಖಕಿ ಗಿಡಮರ ಹೂಗಳ ಬಗ್ಗೆಯೂ ವ್ಯಾಪಕವಾಗಿ ಬರೆದಿದ್ದಾರೆ)

ಒಂದು ಶ್ರದ್ಧಾಂಜಲಿ

ನಮ್ಮ ಕಾಲದ ಕೊನೆಯ ಕ್ರಾಂತಿಕಾರಿ ಫೀದಲ್ ಕಾಸ್ಟ್ರೋ

–ಡಾ. ರಾಜೇಂದ್ರ ಚೆನ್ನಿ

ಫೀಡಲ್ ಕಾಸ್ಟ್ರೋನ ಸಮಸ್ಯೆಯೆಂದರೆ ಕ್ಯೂಬಾ ರಾಷ್ಟ್ರೀಯತೆಯನ್ನು ಕಟ್ಟುವಾಗ ಈ ದೇಶದಲ್ಲಿದ್ದ ಅಸಮಾನತೆ, ಬಡತನ ಇವುಗಳನ್ನು ಅಲಕ್ಷ್ಯ ಮಾಡದೇ, ಅಮೇರಿಕದ ವಸಾಹತುಶಾಹಿಯನ್ನು ವಿರೋಧಿಸುವುದು. ಇದರಲ್ಲಿ ಅವನು ಸಂಪೂರ್ಣ ಯಶಸ್ವಿಯಾದನೆಂದು ನಾನು ನಂಬಿದ್ದೇನೆ. ಭಾರತದಲ್ಲಿ ಇಂದಿನ ಸಮಸ್ಯೆಯೆಂದರೆ ಪಶ್ಚಿಮ ಕೇಂದ್ರಿತ ಜಾಗತೀಕರಣದಿಂದ ಆಗಿರುವ ಅನಾಹುತಗಳು ಎಲ್ಲರಿಗೂ ಪರಿಚಿತವಿವೆ. ಆದರೆ ಇವುಗಳಿಗೆ ಪರ್ಯಾಯವೆಂದು ನಾವು ರಾಜಕೀಯ ಸಿದ್ಧಾಂತವೇ ಇಲ್ಲದ 'ದೇಶೀ' ಸ್ಥಿತಿಯನ್ನು ತಲುಪುವುದು ಸಾಧ್ಯವೇ? ಇದೇ ಮುಂತಾದ ಚರ್ಚೆಗಳಲ್ಲಿ ನಾವು ಕಾಸ್ಟ್ರೋನನ್ನು ಕಡೆಗಣಿಸುವುದು ಸಾಧ್ಯವೇ ಇಲ್ಲ. ಕಾಸ್ಟ್ರೋನ ಸಿದ್ಧಾಂತವನ್ನು ಒಪ್ಪದವರೂ ಕೂಡ ಅವನ ರಾಜಕೀಯ ಕ್ರಿಯೆಗಳಿಂದ ಕಲಿಯಬಹುದಾಗಿದೆ.



ಮಕ್ಕಳು ಖುಷಿಯಿಂದ ಓದುವ ಕಾಮಿಕ್ಸ್‌ಗಳಲ್ಲಿ 'Aesterix and Obelix' ಕಾಮಿಕ್ಸ್‌ಗಳು ಪ್ರಸಿದ್ಧವಾಗಿವೆ. ನರಪೇತಲ ಕುಳ್ಳನಾದ ಈಸ್ಟೆರಿಕ್ಸ್ ಹಾಗೂ ಭೀಮನ ಅಣ್ಣನಂತಿರುವ ಒಬೆಲಿಕ್ಸ್ ಇವರುಗಳು ಅಪ್ರತಿಮ ಹೋರಾಟಗಾರರು. ಅವರು ರೋಮನ್ ಸಾಮ್ರಾಜ್ಯದ ಅಂಚಿನಲ್ಲಿರುವ ಆದರೆ ಅದರ ವಿರುದ್ಧ ಸತತವಾದ ಒಂದು ಬಗೆಯ ಗೆರಿಲ್ಲಾ ಹೋರಾಟವನ್ನು ಮಾಡುತ್ತ ಬಂದ ಗೌಲ್ (Gaul) ಪ್ರದೇಶದವರು. ರೋಮನ್‌ರು ತಮ್ಮ ಅಪಾರ ಶಿಸ್ತು ಹಾಗೂ ಶಸ್ತ್ರಾಸ್ತ್ರಗಳ ಸೈನಿಕರನ್ನು ಬಳಸಿಕೊಂಡು ಎಂಥ ದಾಳಿ ಮಾಡಿದರೂ ಇವರು ಅವರನ್ನು ಸೋಲಿಸುತ್ತಾರೆ. ಒಟ್ಟಾರೆ ರೋಮನ್ ಸಾಮ್ರಾಜ್ಯದ (ಜೂಲಿಯಸ್ ಸೀಜರ್ ಸೇರಿದಂತೆ) ಅಸ್ತಿತ್ವವನ್ನೇ ಗೇಲಿ ಮಾಡುವ ಅದ್ಭುತ ಹಾಸ್ಯದ ಮೂಲಕ ಅವರ ಪ್ರಾಬಲ್ಯವನ್ನು ಠುಸ್ಸಾಗಿಸುವ ಕಾಮಿಕ್ಸ್‌ಗಳಿವು. ವಿಶ್ವದ ಅತ್ಯಂತ ಪ್ರಬಲ ದೊಡ್ಡಣ್ಣನಾದ ಅಮೇರಿಕವನ್ನು ಮಣಿಸಿದ ಒಂದು ಪುಟ್ಟ ದ್ವೀಪ ದೇಶವಾದ ಕ್ಯೂಬಾದ ಕ್ರಾಂತಿಕಾರಿ ಫೀಡೆಲ್ ಕಾಸ್ಟ್ರೋನ ಸಾಹಸಗಳನ್ನು ನೋಡಿದಾಗ ನನಗೆ ಇವು ನೆನಪಾಗುತ್ತವೆ. ಅವನ ಪ್ರಕಾರ ಅಮೇರಿಕಾದ ಗೂಢಚಾರ ಸಂಸ್ಥೆ CIA ಒಟ್ಟು ಒಂದು ಬಿಲಿಯಲ್ ಡಾಲರ್‌ಗಳನ್ನು ಖರ್ಚುಮಾಡಿ ೬೩೮ ಸಾರಿ ಅವನ ಹತ್ಯೆಯ ಪ್ರಯತ್ನ ಮಾಡಿ ಸೋತಿತು. ಹೀಗಾಗಿ ಹತ್ಯೆ ಪ್ರಯತ್ನಗಳಿಂದ ಬದುಕುಳಿಯುವ ಒಲಂಪಿಕ್ ಸ್ಪರ್ಧೆಯಿದ್ದರೆ ಅದರಲ್ಲಿ ತನಗೇ ಸ್ವರ್ಣ ಪದಕ ಬರಬೇಕಿತ್ತು ಎಂದು ಕಾಸ್ಟ್ರೋ ಹೇಳಿದ್ದ. ಕೊನೆಗೂ ೯೦ ವರ್ಷ ಬದುಕಿ ಯಾವಾಗಲೂ ದೊಡ್ಡಣ್ಣ ಅಮೇರಿಕದ ಪಕ್ಕೆಯಲ್ಲಿ ಮುಳ್ಳಿನಂತಿದ್ದ ಅವನು ವಯಸ್ಸಾಗಿ ತೀರಿ ಹೋದ. ಅವನನ್ನು ಒಬ್ಬ ನಾಸ್ತಿಕ, ಕ್ರೂರಿ ಎಂದು ವರ್ಣಿಸುವ ಒಂದು web ತಾಣದ ಪ್ರಕಾರ ಅವನು ಸತ್ತು ಹೋಗಿ ಬಹಳ ವರ್ಷಗಳಾಗಿದ್ದವಂತೆ. ಬಹುಶಃ ೨೦೦೬ರಲ್ಲಿ ಅವನು ಸತ್ತನಂತೆ. ಆದರೆ ಅವನ ಸಾವನ್ನು ಕ್ಯೂಬಾದ ಸರಕಾರವು ರಹಸ್ಯವಾಗಿ ಇಟ್ಟಿತ್ತಂತೆ. ಅಂದರೆ ಅವನನ್ನು ದ್ವೇಷಿಸುವ ಈ ತಾಣದ ಪ್ರಕಾರ ಕೂಡ ಕಾಸ್ಟ್ರೋ ಸಾವಿನ ನಂತರವೂ ಅಂಥ ಪ್ರಭಾವವುಳ್ಳವನು.

ನೀವು ಹೇಗೆ ನೋಡಿದರೂ ಅವನದು ಅತಿರಂಜಿತವಾದ ವ್ಯಕ್ತಿತ್ವ ಹಾಗೂ ಜೀವನವಾಗಿತ್ತು. ಅವನ ತಂದೆ ಹಾಗೂ ಅವನ ಕೆಲಸದವಳ ವಿವಾಹಬಾಹಿರ ಸಂಬಂಧಕ್ಕೆ ಹುಟ್ಟಿದ ಫೀಡಲ್ ಕಾಸ್ಟ್ರೋ ಕ್ಯೂಬಾ ದೇಶದ, ಅಮೇರಿಕಾದ ಬೆಂಬಲವುಳ್ಳ ಸರ್ವಾಧಿಕಾರಿಯನ್ನು ತನ್ನ ಗೆರಿಲ್ಲಾ ತಂತ್ರಗಳ ಮೂಲಕ ಸೋಲಿಸಿ ಅಧಿಕಾರಕ್ಕೆ ಬಂದದ್ದು ಒಂದು ಪುರಾಣ ಕತೆಯಂತಿದೆ. ಆದರೆ ಅವನ ಬದುಕು ಆಧುನಿಕ ಚರಿತ್ರೆಯ ಸಂಕೀರ್ಣವಾದ ವಾಸ್ತವಗಳ ಅನೇಕ ಎಳೆಗಳಿಂದ ನೇಯ್ಗೆಯಾದದ್ದು. ಶತಮಾನಗಳ ಹಿಂದೆಯೆ ಸ್ಪೇನ್ ದೇಶದ ವಸಾಹತುಶಾಹಿಗೆ ಒಳಪಟ್ಟಿದ್ದ ಕ್ಯೂಬಾ ಜಗತ್ತಿನ ಅತಿದೊಡ್ಡ ಸಕ್ಕರೆ ಉತ್ಪಾದಕ ರಾಷ್ಟ್ರವಾಗಿದ್ದರಿಂದ ಸಹಜವಾಗಿಯೇ ಅಮೇರಿಕದ ಬಂಡವಾಳಶಾಹಿ–ವಸಾಹತುಶಾಹಿಗೆ ಬಲಿಯಾಯಿತು. ಕ್ಯೂಬಾದ ನೆಲ, ಸಂಪನ್ಮೂಲಗಳು ಹಾಗೂ ಉತ್ಪಾದನೆಯ ಬಹುದೊಡ್ಡ ಭಾಗವು ಅಮೇರಿಕದ ಬಂಡವಾಳಶಾಹಿಗಳ ಪಾಲಾಗಿತ್ತು. ಅದರ ಜೊತೆಗೆ ಸುಂದರ ಸಮುದ್ರ ತೀರಗಳ ಕ್ಯೂಬಾ ಅಮೇರಿಕಾ ಹಾಗೂ ಯೂರೋಪಿನ ಮೋಜುಗಾರ ಪ್ರವಾಸಿಗಳಿಗೆ ಜೂಜು, ಕುಡಿತ ಹಾಗೂ ಸಂಭೋಗದ ತಾಣವೂ ಆಗಿತ್ತು. ದಕ್ಷಿಣ ಅಮೇರಿಕದ ಅನೇಕ ರಾಷ್ಟ್ರಗಳಲ್ಲಿಯಂತೆ ಕ್ಯೂಬಾನಲ್ಲಿ ಕೂಡ ಅಮೇರಿಕದ ಬೆಂಬಲವಿದ್ದ ಭ್ರಷ್ಟ, ಸರ್ವಾಧಿಕಾರಿ ಸ್ವಭಾವದ ಮಿಲಿಟರಿ ಆಡಳಿತಗಾರರು ಸರಕಾರ ನಡೆಸುತ್ತಿದ್ದರು. ಮಾರ್ಕ್ಸ್‌ವಾದದ ಅಷ್ಟೇನೂ ಪರಿಚಯವಿಲ್ಲದಿದ್ದ ಕಾಸ್ಟ್ರೋ ವಿದ್ಯಾರ್ಥಿ ದೆಸೆಯಿಂದಲೇ ಬಂಡುಗಾರನಾಗಿದ್ದ. ಕ್ರಮೇಣ ಕ್ಯೂಬನ್ ರಾಷ್ಟ್ರವಾದ ಹಾಗೂ ಭ್ರಷ್ಟಾಚಾರ ವಿರೋಧಿ ನಿಲುವುಗಳ ಬಂಡುಗಾರಿಕೆಯ ಚಿಂತನೆಯನ್ನು ರೂಢಿಸಿಕೊಂಡು ಕ್ಯೂಬಾದ ಸರ್ವಾಧಿಕಾರಿಯ ವಿರುದ್ಧ ಹೋರಾಟ ಆರಂಭಿಸಿ, ಸೆರೆಯಾಗಿ ಜೈಲಿನಲ್ಲಿದ್ದ ಕಾಸ್ಟ್ರೋ ಒಬ್ಬ ರೋಮಾಂಚಕಾರಿ, ಆಕರ್ಷಕ ಸಾಹಸಿಗ ಬಂಡಾಯಗಾರನಾಗಿ ರೂಪುಗೊಂಡ. ಆಶ್ಚರ್ಯವೆಂದರೆ ಪ್ರಬಲ ಅಮೇರಿಕನ್ ಪ್ರಭುತ್ವದ ಬೆಂಬಲವಿದ್ದ ಸರ್ವಾಧಿಕಾರಿಯ ವಿರುದ್ಧ ಎರಡೇ ರೈಫಲ್‌ಗಳಿಂದ ಆರಂಭವಾದ ಕಾಸ್ಟ್ರೋನ ಗೆರಿಲ್ಲಾ ಹೋರಾಟವು ಎಲ್ಲರ ನಿರೀಕ್ಷೆಯನ್ನು ಮೀರಿ ಯಶಸ್ವಿಯಾಯಿತು. ಕಾಸ್ಟ್ರೋ ಕ್ಯೂಬಾದ ನಾಯಕನಾದ.

ಅಷ್ಟರಲ್ಲಿ ಉಗ್ರವಾದ ಕಮ್ಯೂನಿಸ್ಟ್ ವಿರೋಧಿ ನಿಲುವು ಬೆಳಸಿಕೊಂಡಿದ್ದ ಅಮೇರಿಕವು ಕಾಸ್ಟ್ರೋನನ್ನು ತನ್ನ ಪ್ರಥಮ ವೈರಿಯನ್ನಾಗಿ ಗುರುತಿಸಿತು. ಅದಕ್ಕೆ ತಕ್ಕ ಹಾಗೆ ಅವನು ಅಮೇರಿಕನ್ ಬಂಡವಾಳಶಾಹಿಗಳ ಎಲ್ಲಾ ಆಸ್ತಿ ಪಾಸ್ತಿ ಉದ್ಯಮಗಳನ್ನು ಮುಟ್ಟುಗೋಲು ಹಾಕಿಕೊಂಡು ರಾಷ್ಟ್ರೀಕೃತಗೊಳಿಸಿಬಿಟ್ಟ. ಅಷ್ಟೊತ್ತಿಗೆ ಕಾಸ್ಟ್ರೋ state socialism ನ ಸಿದ್ಧಾಂತವನ್ನು ಒಪ್ಪಿಕೊಂಡಿದ್ದ. ಹೇಗೆ ನೋಡಿದರೂ ಅವನು ಎದುರಿಸಿದ ಸವಾಲುಗಳು ಇಪ್ಪತ್ತನೇಯ ಶತಮಾನದ ಯಾವ ನಾಯಕನೂ ಎದುರಿಸದ ಸವಾಲುಗಳಾಗಿದ್ದವು. ಒಂದು ಕಡೆಗೆ ಅಮೇರಿಕವು ಸಂಪೂರ್ಣ ಆರ್ಥಿಕ ನಿರ್ಬಂಧವನ್ನು ಹೇರಿತ್ತು. ಇನ್ನೊಂದೆಡೆಗೆ ಅನಕ್ಷರತೆ, ಬಡತನದ ಸಮಸ್ಯೆಗಳಿದ್ದವು. ಆ ಕಾಲವು ಅಮೆರಿಕ ಹಾಗೂ ರಶಿಯಾದ ನಡುವಣ ಶೀತಲ ಸಮರದ ಕಾಲವಾಗಿದ್ದರಿಂದ ಕಾಸ್ಟ್ರೋ ರಶಿಯಾದ ಸಹಾಯ ಕೇಳುವುದು ಅನಿವಾರ್ಯವಾಗಿತ್ತು. ಅಮೇರಿಕದ ಪ್ರಭುತ್ವವು ಅವನನ್ನು ಕೊಲ್ಲಲು ಹಾಗೂ ಸರಕಾರವನ್ನು ಬೀಳಿಸಲು ಎಡಬಿಡದ ಪ್ರಯತ್ನದಲ್ಲಿತ್ತು.

ಹೀಗಾಗಿ ಕಾಸ್ಟ್ರೋ ರಶಿಯಾದ ಪರವಾಗಿದ್ದುಕೊಂಡು ಅದರ ಅಣ್ವಸ್ತ್ರಗಳನ್ನು ಕ್ಷಿಪಣಿಗಳ ಮೂಲಕ ಉಪಯೋಗಿಸಲು ಸಿದ್ಧನಾಗಬೇಕಾಗಿತ್ತು. ಆ ಸಂದರ್ಭದಲ್ಲಿ ಅವನು ತನ್ನ ಶತ್ರುಗಳನ್ನು, ವಿರೋಧಿಗಳನ್ನು ಮತ್ತು ಸಾವಿರಾರು ವ್ಯಕ್ತಿಗಳನ್ನು ಹಿಂಸೆ ಹಾಗೂ ಹತ್ಯೆಗಳಿಗೆ ಬಲಿಪಶುವನ್ನಾಗಿಸಿದ. ಅವನು ಒಬ್ಬ ನಿರ್ದಯಿ ಸರ್ವಾಧಿಕಾರಿಯೆಂದು ಪಶ್ಚಿಮದ ಮಾಧ್ಯಮಗಳು ಈಗಲೂ ವರ್ಣಿಸುತ್ತವೆ. ಹಿಂಸೆ ಹಾಗೂ ದಬ್ಬಾಳಿಕೆಗಳು ಅವನಿಗೆ ಅನಿವಾರ್ಯವಾಗಿತ್ತೆಂದು ಸುಲಭವಾಗಿ ಸಮಜಾಯಿಶಿ ಕೊಡಬಹುದು. ಲಕ್ಷಾಂತರ ಅಮಾಯಕರು ಚರಿತ್ರೆಯ

ಈ ಹಂತದಲ್ಲಿ ಕ್ಯೂಬಾ ದೇಶವನ್ನು ತೊರೆದಿರಬಹುದು. ಆದರೆ ಬಂಡವಾಳಶಾಹಿಯ ಒಡಲಲ್ಲೇ ಇರುವ ಕ್ರೌರ್ಯವನ್ನು ಮರೆತು ಇದನ್ನು ಚರ್ಚಿಸುವುದು ಕಷ್ಟ.


ಕಾಸ್ಟ್ರೋನ ರಾಜಕೀಯ, ಸಮಾಜವಾದ ಇವುಗಳಿಂದ ಕ್ಯೂಬಾದ ಜನರಿಗೆ ಒಳ್ಳೆಯದಾಯಿತೆ ಎನ್ನುವುದನ್ನು ಖಚಿತವಾಗಿ ಹೇಳುವುದು ಕಷ್ಟ. ಹೀಗಾಗಿ ನಾನು ಫೀಡಲ್ ಕಾಸ್ಟ್ರೋನನ್ನು ಒಬ್ಬ ಪರಿಶುದ್ಧ ಕ್ರಾಂತಿಕಾರಿಯನ್ನಾಗಿ ಅಥವಾ ಹೀರೋ ಆಗಿ ನೋಡಲಾರೆ. ಆದರೆ ಅಮೇರಿಕದ ಬಂಡವಾಳಶಾಹಿ ಹಾಗೂ ವಸಾಹತುಶಾಹಿಯನ್ನು ಅವನ ಹಾಗೆ ಪ್ರತಿಭಟಿಸಿ ಸದಾ ತಳಮಳದಲ್ಲಿ ಇಡುವಂತೆ ಮಾಡಿದ ಇನ್ನೊಬ್ಬ ನನಗೆ ಕಾಣುವುದಿಲ್ಲ. ಇಂದಿನ ಸಂದರ್ಭದಲ್ಲಿ ಅಮೇರಿಕ ಕೇಂದ್ರಿತ ಜಾಗತೀಕರಣಕ್ಕೆ ಪರ್ಯಾಯವೂ ಇಲ್ಲ, ಅದರಿಂದ ಹೊರಬರುವುದು ಸಾಧ್ಯವೂ ಇಲ್ಲ ಎನ್ನುವ ಚಿಂತಕರು ಕಾಸ್ಟ್ರೋನ ರಾಜಕೀಯವನ್ನು ಗಂಭೀರವಾಗಿ ನೋಡುವ ಅವಶ್ಯಕತೆ ಇದೆ.

ಇತ್ತೀಚೆಗೆ ದೇವನೂರ ಮಹಾದೇವರ ಬಗ್ಗೆ ಕುಪ್ಪಳ್ಳಿಯಲ್ಲಿ ಮಾತನಾಡುತ್ತಾ ನಾನು ಅವರ 'ಕುಸುಮಬಾಲೆ'ಯ ಗಾರಸಿದ್ದಮಾವ ನಮ್ಮವನೇ ಆದ ಫೀಡಲ್ ಕಾಸ್ಟ್ರೋ ಎಂದು ಹೇಳಿದೆ. ಕಾರಣವಿಷ್ಟೇ. ಗಾರಸಿದ್ದಮಾವನು ಜಾತಿವಾದಿ ಜಮೀನ್ದಾರಿ ಶಕ್ತಿಗಳನ್ನು ಎದುರಿಸಬಲ್ಲ ಹಾಗೂ ಪ್ರಗತಿಪರರನ್ನೂ ಛೇಡಿಸಬಲ್ಲ ಸಾಮರ್ಥ್ಯ ಹೊಂದಿದ್ದಾನೆ. ಹಾಗೆಯೆ ಕಾಸ್ಟ್ರೋ ಒಬ್ಬ 'ಪರಿಪೂರ್ಣ' ಕಮ್ಯೂನಿಸ್ಟ್ ಅಲ್ಲ, ಆದರೆ ಅವನ ರಾಜಕೀಯವು ಆಧುನಿಕ ಬಂಡವಾಳಶಾಹಿ ವಿರುದ್ಧದ ಅತ್ಯಂತ ಯಶಸ್ವಿ ಪ್ರತಿಭಟನೆಯೂ ಆಗಿತ್ತು.

ಹೀಗೆ ಹೇಳುತ್ತಿರುವುದರ ಅರ್ಥವೆಂದರೆ ಕಾಸ್ಟ್ರೋ ಕೇವಲ ಒಬ್ಬ ಚಾಣಾಕ್ಷ ರಾಜಕೀಯ ಸಾಹಸಿಗನಾಗಿದ್ದ ಎನ್ನುವ ವಾದವನ್ನು ಬೆಂಬಲಿಸುವುದಕ್ಕೆ ಅಲ್ಲ. ಅವನ ಭಾಷಣಗಳನ್ನು, ಸಂದರ್ಶನಗಳನ್ನು ಕೇಳಿದ ಮೇಲೆ ಇದನ್ನು ಒಪ್ಪಲಾಗುವುದಿಲ್ಲ. ನಿಮಗೆ ವಿಚಿತ್ರವೆನಿಸಿದರೂ ನಾನು ಇಲ್ಲಿ ಟಿಪ್ಪುಸುಲ್ತಾನನ್ನು ನೆನಪಿಸಿಕೊಳ್ಳುತ್ತೇನೆ. ಟಿಪ್ಪೂ ಒಬ್ಬ ಮೂಲಭೂತವಾದಿ; ಕ್ರೂರಿ, ಸ್ವಾರ್ಥಿ ಎಂದು ಬಿಂಬಿಸಲಾಗುತ್ತಿದೆ. ಆದರೆ ಇಡೀ ಜಗತ್ತಿನ ಚರಿತ್ರೆಯಲ್ಲಿ ಇಂಗ್ಲೆಂಡ್‌ನ ವಸಾಹತುಶಾಹಿ ರಾಜಕೀಯವನ್ನು ಅವನಷ್ಟು ಸರಿಯಾಗಿ ಗ್ರಹಿಸುವ ಸಾಮರ್ಥ್ಯ ಆ ಕಾಲದ ಇನ್ನಾರಿಗೂ ಇರಲಿಲ್ಲ. ಅದನ್ನು ಅರ್ಥ ಮಾಡಿಕೊಳ್ಳಲಾಗದ ಪೇಶ್ವೆಗಳು, ಮೈಸೂರಿನ ದೊರೆಗಳು, ಹೈದರಾಬಾದ್‌ನ ನಿಜಾಮ್ ಟಿಪ್ಪೂ ವಿರುದ್ಧ ನಿಂತರು. ಈಗ ೨೦೧೭ರಲ್ಲಿ ಅವರೆಲ್ಲ ನಿಜವಾದ ದೇಶದ್ರೋಹಿಗಳೆಂದು ನಮಗೆ ಅರಿವಾಗಿದೆ.

ಇದೇ ರೀತಿಯಲ್ಲಿ ಫೀಡಲ್ ಕಾಸ್ಟ್ರೋನ ಸಮಸ್ಯೆಯೆಂದರೆ ಕ್ಯೂಬಾ ರಾಷ್ಟ್ರೀಯತೆಯನ್ನು ಕಟ್ಟುವಾಗ ಈ ದೇಶದಲ್ಲಿದ್ದ ಅಸಮಾನತೆ, ಬಡತನ ಇವುಗಳನ್ನು ಅಲಕ್ಷ್ಯ ಮಾಡದೇ, ಅಮೇರಿಕದ ವಸಾಹತುಶಾಹಿಯನ್ನು ವಿರೋಧಿಸುವುದು. ಇದರಲ್ಲಿ ಅವನು ಸಂಪೂರ್ಣ ಯಶಸ್ವಿಯಾದನೆಂದು ನಾನು ನಂಬಿದ್ದೇನೆ. ಭಾರತದಲ್ಲಿ ಇಂದಿನ ಸಮಸ್ಯೆಯೆಂದರೆ ಪಶ್ಚಿಮ ಕೇಂದ್ರಿತ ಜಾಗತೀಕರಣದಿಂದ ಆಗಿರುವ ಅನಾಹುತಗಳು ಎಲ್ಲರಿಗೂ ಪರಿಚಿತವಿವೆ. ಆದರೆ ಇವುಗಳಿಗೆ ಪರ್ಯಾಯವೆಂದು ನಾವು ರಾಜಕೀಯ ಸಿದ್ಧಾಂತವೇ ಇಲ್ಲದ 'ದೇಶೀ' ಸ್ಥಿತಿಯನ್ನು ತಲುಪುವುದು ಸಾಧ್ಯವೇ? ಇದೇ ಮುಂತಾದ ಚರ್ಚೆಗಳಲ್ಲಿ ನಾವು ಕಾಸ್ಟ್ರೋನನ್ನು ಕಡೆಗಣಿಸುವುದು ಸಾಧ್ಯವೇ ಇಲ್ಲ. ಕಾಸ್ಟ್ರೋನ ಸಿದ್ಧಾಂತವನ್ನು ಒಪ್ಪದವರೂ ಕೂಡ ಅವನ ರಾಜಕೀಯ ಕ್ರಿಯೆಗಳಿಂದ ಕಲಿಯಬಹುದಾಗಿದೆ. ಅವನು ಅನೇಕ ಲ್ಯಾಟಿನ್ ಅಮೇರಿಕನ್ ಹಾಗೂ ಆಫ್ರಿಕನ್ ದೇಶಗಳಲ್ಲಿ ಅಮೇರಿಕದ ದಬ್ಬಾಳಿಕೆಯ ವಿರುದ್ಧದ ಹೋರಾಟಗಳನ್ನು ಬೆಂಬಲಿಸಿದ. ವಿಶೇಷವಾಗಿ ಅವನ ಸ್ನೇಹಿತ Hugo Savez ನ ನೇತೃತ್ವದಲ್ಲಿ ವೆನೆಜುವಾಲಾ ದೇಶದಲ್ಲಿ. ಅಮೇರಿಕವನ್ನು ಯಶಸ್ವಿಯಾಗಿ ಎದುರಿಸಿದ. ಅವನ ಸಾವಿನ ನಂತರ ಪೆಟ್ರೋಲ್ ಬೆಲೆಯ ಕುಸಿತದಿಂದಾಗಿ ವೆನೆಜುವಾಲಾ ದುಸ್ಥಿತಿಯಲ್ಲಿದೆ. ಜಾಗತಿಕ ಬಂಡವಾಳಶಾಹಿಗೆ ಇವರಿಬ್ಬರ ಸಾವು ದೇವರೇ ಕೊಟ್ಟ ವರವಾಗಿಬಿಟ್ಟಿದೆ.

ಫೀಡಲ್ ಕಾಸ್ಟ್ರೋ ಬಂಡವಾಳಶಾಹಿಯ ವಿರುದ್ಧ ಬಂಡಾಯದ ಸಾಧ್ಯತೆಗಳ ಸಂಕೇತವಾಗಿ ಚರಿತ್ರೆಯಲ್ಲಿ ನೆನಪಾಗುತ್ತಲೇ ಇರುತ್ತಾನೆ.



(ಕುವೆಂಪು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಲೇಖಕರು ಹಿರಿಯ ಸಾಹಿತ್ಯ ಚಿಂತಕರೂ, ರಾಜಕೀಯ ವಿಶ್ಲೇಷಕರೂ ಆಗಿದ್ದು ಶಿವಮೊಗ್ಗದಲ್ಲಿ ನೆಲೆಸಿದ್ದಾರೆ)

ಸಮಕಾಲೀನ-೧

ಭಾರತ-ಪಾಕಿಸ್ತಾನ ಸಂಬಂಧಗಳು ಮತ್ತು ಕಾಶ್ಮೀರ ಸಮಸ್ಯೆ

ಮೂಲ: ಬಿ. ವಿವೇಕಾನಂದನ್
ಕನ್ನಡಕ್ಕೆ: ಬಿ.ವಿ. ಸುರೇಂದ್ರ

ಕಾಶ್ಮೀರ ಸಮಸ್ಯೆ ಹಲವು ಸರ್ಕಾರಗಳ ಹಲವು ಪ್ರಯತ್ನಗಳ ನಂತರವೂ ಪರಿಹಾರದ ಹತ್ತಿರವೂ ಸುಳಿಯದೆ, ಹೆಚ್ಚೆಚ್ಚು ಜಟಿಲವಾಗುತ್ತಿದೆ. ಕಾಶ್ಮೀರ ಸಮಸ್ಯೆ ಬಗ್ಗೆ ಇತರೆಲ್ಲ ರಾಜಕೀಯ ಪಕ್ಷಗಳಿಗೆ ತದ್ವಿರುದ್ಧವಾದ ನಿಲುವು ತಳೆದಿದ್ದ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ತನ್ನ ಈ ನಿಲುವುಗಳನ್ನಾಧರಿಸಿ ನಡೆಸಿದ ಪರಿಹಾರ ಪ್ರಯತ್ನಗಳು ಘರ್ಷಣೆ ಮತ್ತು ಬಿಗುವುಗಳನ್ನು ಇನ್ನಷ್ಟು ಹೆಚ್ಚಿಸುವ ಮೂಲಕ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿ ಸಮಸ್ಯೆಯನ್ನು ಇನ್ನಷ್ಟು ಜಟಿಲ ಮಾಡುವಲ್ಲಿ ಕೊನೆಗೊಂಡಿವೆ. ಅದು ಆರೆಸ್ಸೆಸ್‌ನಿಂದ ಕಡ ಪಡೆದ ತನ್ನ ರಾಜಕೀಯ ತಂತ್ರಜ್ಞ ರಾಮ್ ಮಾಧವ್ ಅವರ ಸಲಹೆಯ ಮೇರೆಗೆ ಆವರೆಗೆ ರಾಷ್ಟ್ರೀಯತೆಯ ಹೆಸರಿನಲ್ಲಿ ತಾನು ಆವರೆಗೆ ಕಟುವಾಗಿ ವಿರೋಧಿಸುತ್ತಿದ್ದ ಪಿಡಿಪಿ ಪಕ್ಷದೊಡನೆ ಮೈತ್ರಿ ಮಾಡಿಕೊಳ್ಳುವ ಮೂಲಕ ರಚಿಸಿಕೊಂಡ ಸಮ್ಮಿಶ್ರ ಸರ್ಕಾರದ ಭಾಗವಾಗಿ ಅದು ರಾಜ್ಯದ ಮೇಲೆ ಹೇರಿದ ಹಲವು ನಿರ್ಧಾರಗಳು ಅಲ್ಲಿನ ಜನರನ್ನು ರಾಷ್ಟ್ರ ಜೀವನದ ಮುಖ್ಯ ಪ್ರವಾಹದಿಂದ ಇನ್ನಷ್ಟು ದೂರ ತೆಗೆದುಕೊಂಡು ಹೋಗಿವೆ. ಈ ಹಿಂದೆ ಕಾಶ್ಮೀರವನ್ನು ಆಳಿದ ಹಿಂದೂ ರಾಜನ ಜನ್ಮದಿನಾಚರಣೆಯನ್ನು ಆಚರಿಸುವ ಸರ್ಕಾರದ ನಿರ್ಧಾರ ಇಂತಹ ಇತ್ತೀಚಿನ ನಿರ್ಧಾರಗಳಲ್ಲೊಂದು.

ಈಗ ಚಳಿಗಾಲವಾದ್ದರಿಂದ ಕಾಶ್ಮೀರ ತಣ್ಣಗಿದ್ದು, ಚಳಿ ಕಡಿಮೆಯಾಗಿ ಹಿಮ ಕರಗತೊಡಗಿದಂತೆ ಹೊರಗಿನ ಶಕ್ತಿಗಳ ಕೈವಾಡ ಮತ್ತೆ ಆರಂಭವಾಗಲಿದ್ದು ರಾಜ್ಯಕ್ಕೆ ಪ್ರಕ್ಷುಬ್ಧತೆ ಮತ್ತೆ ಮರಳಲಿದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಶ್ಮೀರ ಸಮಸ್ಯೆ ಹುಟ್ಟಿ ಬೆಳೆದು ಇಂದಿನ ಸ್ಥಿತಿ ತಲುಪಿರುವ ಪರಿಯನ್ನು ಪ್ರಸ್ತುತಪಡಿಸುವ ಈ ಲೇಖನ-ಸಂ.



ಭಾರತದ ಹಾಲಿ ವಿದೇಶಾಂಗ ಕಾರ್ಯದರ್ಶಿ ಹಾಗು ಜವಾಹರಲಾಲ ನೆಹರು ವಿಶ್ವವಿದ್ಯಾನಿಲಯದ *(ಜೆಎನ್‌ಯು)* ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನ ಪೀಠದ ಹಳೆಯ ವಿಧ್ಯಾರ್ಥಿಯಾದ ಡಾ. ಎಸ್ ಜಯಶಂಕರ್ ಅತ್ಯಂತ ಸ್ಪಷ್ಟ ವಿಚಾರಗಳುಳ್ಳ ಮತ್ತು ಆಳ ತಿಳುವಳಿಕೆಯುಳ್ಳ ವ್ಯಕ್ತಿ. ಅವರು ಇನ್ನೂ ಸಮಯ ನಿಗದಿಯಾಗದ ಮುಂಬರುವ ತಮ್ಮ ಪಾಕಿಸ್ತಾನದ ಸಹವರ್ತಿ ಅವರೊಡನೆಯ ಭೇಟಿಯಲ್ಲಿ ಚರ್ಚಿಸಲು ತಮ್ಮ ಕಾರ್ಯಸೂಚಿಯನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದ ಅಂಶಗಳೆಂದರೆ, ಗಡಿಯಾಚೆಗಿನ ಭಯೋತ್ಪಾದನೆ ಮತ್ತು ಪಾಕ್ ಆಕ್ರಮಿತ ಕಾಶ್ಮೀರವನ್ನು ತೆರವುಗೊಳಿಸುವುದು. ಒಬ್ಬ ಜೆಎನ್‌ಯುವಿನ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನ ಕೇಂದ್ರದ ವಿದ್ಯಾರ್ಥಿಯಾಗಿ ಹಾಗು ಆ ವಿಷಯದ ಮೇಲಿನ ಪರಿಣಿತನಾಗಿ ಡಾ. ಎಸ್ ಜಯಶಂಕರ್ ರವರಿಗೆ, ಕಾಶ್ಮೀರದ ಸಮಸ್ಯೆ, ಪಾಕಿಸ್ತಾನದ, ತೀರಾ ಅಸಮ್ಮತವಾದ ಕಾಶ್ಮೀರದ ಮೇಲಿನ ಹಕ್ಕು ಪ್ರತಿಪಾದನೆ, ಪಾಕಿಸ್ತಾನದೊಂದಿಗೆ ಮಾತುಕತೆಯ ಮೂಲಕ ಚರ್ಚಿಸಿ ಬಗೆಹರಿಸಿಕೊಳ್ಳಬೇಕಾದ ವಿಷಯಗಳು ಮತ್ತು ಉಭಯ ರಾಷ್ಟ್ರಗಳ ನಡುವಿನ ಸಂಬಂಧವನ್ನು ಸುಧಾರಿಸಿಕೊಳ್ಳುವ ಅಗತ್ಯ ಮತ್ತು ಪರಿಗಳ ಬಗ್ಗೆ ಕೂಲಂಕುಷವಾಗಿ ತಿಳಿದಿದೆ ಮತ್ತು ಸ್ಪಷ್ಟವಾದ ಪರಿಕಲ್ಪನೆ ಹೊಂದಿದ್ದಾರೆ. ಇದು ಅವರು ಮುಂದಿನ ಸಭೆಗಾಗಿ ಸಿದ್ಧಪಡಿಸಿರುವ ಕಾರ್ಯಸೂಚಿ ಕೂಡ.

ಕಾಶ್ಮೀರ ಸಮಸ್ಯೆಯ ಹುಟ್ಟು



ಮಹಾರಾಜಾ ಹರಿಸಿಂಗ್ ಶೇಕ್ ಅಬ್ದುಲ್ಲಾ ಜವಾಹರಲಾಲ್ ನೆಹ್ರೂ

ಡಾ.ಜಯಶಂಕರ್‌ರವರು ತಮ್ಮ ಕಾರ್ಯಸೂಚಿಯಲ್ಲಿ ಪ್ರಕಟಿಸಿರುವ ಅಂಶಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ಅರ್ಥ ಮಾಡಿಕೊಳ್ಳಲು ನಾವು ಕಾಶ್ಮೀರ ಸಮಸ್ಯೆಯ ಉದ್ಭವದ ಇತಿಹಾಸವನ್ನೇ ಸರಿಯಾಗಿ ತಿಳಿದುಕೊಳ್ಳಬೇಕಾಗುತ್ತದೆ. ವಿಷಾದದ ಸಂಗತಿ ಏನೆಂದರೆ ನಮ್ಮ ಯಾವ ಜನಪ್ರಿಯ ಮಾಧ್ಯಮಗಳ ಕಾಶ್ಮೀರ ವಿಷಯದ ವಿಶ್ಲೇಷಣೆಯಲ್ಲೂ ಸಮಸ್ಯೆಯ ಹುಟ್ಟಿನ ವಿವರಗಳು ಕಂಡುಬರುವುದಿಲ್ಲ. ಈ ಸಮಸ್ಯೆಯ ಬಗ್ಗೆ ಸರಿಯಾಗಿ ತಿಳಿದುಕೊಂಡಿರಬೇಕಾದ ಒಂದು ನಿರ್ಣಾಯಕ ಅಂಶ ಏನೆಂದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಮೇಲಿನ ಸಾರ್ವಭೌಮ ಅಧಿಕಾರ ಮತ್ತು ಹಕ್ಕು ಯಾವ ದೇಶದ ಸುಪರ್ದಿಯಲ್ಲಿ? ಭಾರತಕ್ಕೋ ಅಥವಾ ಪಾಕಿಸ್ತಾನಕ್ಕೊ? ಎಂಬುದು.

ಸ್ಪಷ್ಟ ಉತ್ತರಕ್ಕಾಗಿ ನಾವು ೧೯೪೭ ರ ಭಾರತ ಸ್ವತಂತ್ರ ವಿಧೇಯಕವನ್ನು ಸ್ವಲ್ಪ ಅಭ್ಯಸಿಸಬೇಕಾಗುತ್ತದೆ. ಈ ವಿಧೇಯಕದ ಪ್ರಕಾರ ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರವನ್ನು ಕೊಡಮಾಡುವ ಪ್ರಕ್ರಿಯೆಯ ಮುನ್ನುಡಿಯಾಗಿ ಭಾರತದ ಎಲ್ಲ ಅರಸೊತ್ತಿಗೆಯ ರಾಜ್ಯಗಳನ್ನು ಬ್ರಿಟೀಷರು ತಮ್ಮ ಆಡಳಿತದ ಹಿಡಿತದಿಂದ ಬಿಡುಗಡೆಗೊಳಿಸಿ ಆ ರಾಜ್ಯಗಳಿಗೆ ಭಾರತ ಅಥವಾ ಪಾಕಿಸ್ತಾನಕ್ಕೆ ಸೇರಿಕೊಳ್ಳುವ ಆಯ್ಕೆಯನ್ನು ಕೊಡಲಾದ ಅನ್ವಯ, ಮೂರು ರಾಜ್ಯಗಳ ಹೊರತಾಗಿ-ಜಮ್ಮು

ಮತ್ತು ಕಾಶ್ಮೀರ, ಹೈದರಾಬಾದ್ ಮತ್ತು ಜುನಾಗಢ- ಉಳಿದೆಲ್ಲ ರಾಜ್ಯಗಳು ಭಾರತ ಅಥವಾ ಪಾಕಿಸ್ತಾನಕ್ಕೆ ೧೫ ಆಗಸ್ಟ್ ೧೯೪೭ ರ ಒಳಗಾಗಿ ವಿಲೀನಗೊಳ್ಳಲು ಸಮ್ಮತಿಸಿದವು. ವಿಲೀನಗೊಳ್ಳಲು ಸಮಾನವಾಗಿ ಅಳವಡಿಸಿಕೊಂಡ ತತ್ವ ಮತ್ತು ವಿಧಾನ ಯಾವುದೆಂದರೆ ಆ ರಾಜ್ಯದ ಮಹಾರಾಜಾ, ರಾಜ್ಯ ಸರಕಾರ ಮತ್ತು ರಾಜ್ಯದ ಅತಿ ದೊಡ್ಡ ರಾಜಕೀಯ ಪಕ್ಷವು ಸೇರಿ ಒಮ್ಮತದಿಂದ ಯಾವ ದೇಶದ ಭಾಗವಾಗಿ ಸೇರಿಕೊಳ್ಳಬೇಕೆಂದು ತೀರ್ಮಾನಿಸುತ್ತಾರೋ ಆ ನಿರ್ಧಾರ ಅಂತಿಮ ಎಂದಾಗಿತ್ತು. ಹೀಗೆ ಸ್ವಾತಂತ್ರ್ಯಕ್ಕೂ ಮುನ್ನ ಸುಮಾರು ೬೦೦ ರಾಜ್ಯಗಳು ಭಾರತ ಅಥವಾ ಪಾಕಿಸ್ತಾನದ ಭಾಗದಲ್ಲಿ ಸೇರಿಕೊಂಡವು. ಜಮ್ಮು ಮತ್ತು ಕಾಶ್ಮೀರವು, ೧೫ ಆಗಸ್ಟ್ ೧೯೪೭ ರಂದು, ತಾನು ಯಾವ ದೇಶದ ಭಾಗಕ್ಕೂ ಸೇರಿಕೊಳ್ಳದೆ ಸ್ವತಂತ್ರ ಅಂಗವಾಗಿಯೆ ಉಳಿದಿತ್ತು.

ವಿಲೀನ ಮತ್ತು ನಂತರ

ಈ ಪರಿಸ್ಥಿತಿಯ ಲಾಭ ಪಡೆದು ೨೦ ಅಕ್ಟೋಬರ್ ೧೯೪೭ ರಂದು ಪಾಕಿಸ್ತಾನದ ವಾಯುವ್ಯ ಗಡಿ ಭಾಗದಿಂದ ಅಲ್ಲಿನ ಸುಮಾರು ೫೦೦೦ ಬುಡಕಟ್ಟು ಲೂಟಿಕೋರರು ಆಗಿನ ಸ್ವತಂತ್ರ ಅಂಗವಾದ ಜಮ್ಮು-ಕಾಶ್ಮೀರದ ಮೇಲೆ ಆಕ್ರಮಣ ಮಾಡಿ ರಾಜ್ಯದಲ್ಲಿ ಕೊಳ್ಳೆ,, ಲೂಟಿ ಮತ್ತು ದರೋಡೆಗಳಲ್ಲಿ ತೊಡಗಿದರು. ಮತ್ತು ರಾಜಧಾನಿ ಶ್ರೀನಗರಕ್ಕೆ ಕೇವಲ ೩೫ ಮೈಲುಗಳಷ್ಟು ಹತ್ತಿರಕ್ಕೆ ಮುನ್ನುಗ್ಗಿದ್ದರು. ಈ ಆಕ್ರಮಣವನ್ನು ಸಮರ್ಥವಾಗಿ ಎದುರಿಸಲು ಸನ್ನದ್ಧತೆ ಇಲ್ಲದೆ ರಾಜ್ಯವು ತತ್ತರಿಸಿತು. ಇಂಥ ಸಂದಿಗ್ಧ ಸಮಯದಲ್ಲಿ ಭಾರತದಿಂದ ಸೇನೆಯ ಸಹಾಯ ಪಡೆದು ಲೂಟಿಕೋರ ಗುಂಪುಗಳನ್ನು ಹಿಮ್ಮೆಟ್ಟಿಸಲು ತನ್ನನ್ನು, ಈ ಹಿಂದೆ ವಿಲೀನ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡ ಅದೇ ತತ್ವ ಮತ್ತು ವಿಧಾನದ ಆಧಾರದಲ್ಲಿ, ವಿಲೀನಗೊಳಿಸಕೊಳ್ಳುವ ವಿಷಯದಲ್ಲಿ ಒಂದು ನಿರ್ಧಾರಕ್ಕೆ ಬರುವ ಅನಿವಾರ್ಯತೆ ಉಂಟಾಯಿತು. ಈ ಅನಿವಾರ್ಯತೆಯಿಂದ ಜಮ್ಮು-ಕಾಶ್ಮೀರದ ಅಂದಿನ ಮಹಾರಾಜಾ ಹರಿಸಿಂಗ್, ರಾಜ್ಯ ಸರಕಾರ ಮತ್ತು ಶೇಕ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಎಂಬ ರಾಜ್ಯದ ಅತಿ ದೊಡ್ಡ ರಾಜಕೀಯ ಪಕ್ಷ ಸೇರಿ ಸರ್ವಾನುಮತದಿಂದ ಜಮ್ಮು-ಕಾಶ್ಮೀರ ರಾಜ್ಯವನ್ನು ಭಾರತ ದೇಶದಲ್ಲಿ ವಿಲೀನಗೊಳಿಸಲು ತೀರ್ಮಾನಿಸಿದರು. ನಂತರ ಈ ನಿರ್ಧಾರಕ್ಕೆ ಭಾರತವೂ ಒಪ್ಪಿ, ೨೬ ಅಕ್ಟೋಬರ್ ೧೯೪೭ ರಲ್ಲಿ ಉಭಯ ಪಕ್ಷದವರು ವಿಲೀನ ಪತ್ರಕ್ಕೆ ಸಹಿ ಹಾಕಿದರು. ಅಂದಿನಿಂದ ಜಮ್ಮು-ಕಾಶ್ಮೀರವು ಭಾರತ ದೇಶದ ಅವಿಭಾಜ್ಯ ಅಂಗವಾಯಿತು. ಹಾಗಾಗಿ, ನಮ್ಮ ಸಂವಿಧಾನದ ೩೭೦ ವಿಧಿನಿಯಮದ ಅನ್ವಯ ಕಾಶ್ಮೀರಕ್ಕೆ ಕಲ್ಪಿಸಿದಂತಹ ವಿಶೇಷ ಸ್ಥಾನಮಾನ ಮತ್ತು ಕೆಲವು ವಿಶೇಷ ಅವಕಾಶಗಳನ್ನು ಬಿಟ್ಟರೆ ಕಾಶ್ಮೀರ ಭಾರತದಲ್ಲಿ ವಿಲೀನಗೊಂಡದ್ದು ಅಂತಿಮ ಮತ್ತು ಮಾರ್ಪಡಿಸಲಾಗದಂತದ್ದು ಹಾಗೂ ಈ ವಿಲೀನ ಪ್ರಕ್ರಿಯೆ ಒಪ್ಪಂದದಲ್ಲಿ ಭಾಗಿಯಾದ ಎಲ್ಲ ಪಕ್ಷಗಳೂ ಕಾನೂನಾತ್ಮಕವಾಗಿ ಬದ್ಧವಾಗಿರುವಂತದ್ದು. ಅಂತರರಾಷ್ಟ್ರೀಯ ಸಮುದಾಯವೂ ಈ ವಿಲೀನವನ್ನು ಮನ್ನಿಸಿ ಗೌರವಿಸಿದೆ. ಹಾಗಾಗಿ ಜಮ್ಮು-ಕಾಶ್ಮೀರದ ಮೇಲಿನ ಸಾರ್ವಭೌಮ ಹಕ್ಕು ಭಾರತಕ್ಕೆ ಮಾತ್ರ ಲಭಿಸಿರುವಂತದ್ದು. ಹಾಗಾಗಿ ಇಡೀ ಜಮ್ಮು-ಕಾಶ್ಮೀರ ಪ್ರಾಂತ್ಯದ ಮೇಲಿನ ಹಕ್ಕು, ಪಾಕ್ ಆಕ್ರಮಿತ ಕಾಶ್ಮೀರವೂ ಸೇರಿ, ಕಾನೂನುಬದ್ಧವಾಗಿ ಭಾರತಕ್ಕೇ ಇರುವಂತದ್ದು ಎನ್ನುವುದು ಪ್ರಶ್ನಾತೀತ. ಅಂದರೆ ಪಾಕಿಸ್ತಾನಕ್ಕೆ ಜಮ್ಮು-ಕಾಶ್ಮೀರದ ಮೇಲೆ ಕಾನೂನಾತ್ಮಕವಾಗಿ ಯಾವ ಹಕ್ಕೂ ಇಲ್ಲ ಎನ್ನುವುದು ಸ್ಪಷ್ಟ ಮತ್ತು ಪಾಕಿಸ್ತಾನವು ಕಾಶ್ಮೀರದ ಕೆಲವು ಭೂಪ್ರದೇಶವನ್ನು ವಶದಲ್ಲಿ ಇಟ್ಟುಕೊಂಡಿರುವುದು(ಪಿಒಕೆ) ಅಕ್ರಮ ಮತ್ತು ಕಾನೂನು ಬಾಹಿರವಾಗಿರುವಂಥದ್ದು.

ಜಮ್ಮು-ಕಾಶ್ಮೀರವು ಭಾರತ ಒಕ್ಕೂಟದಲ್ಲಿ ವಿಲೀನಗೊಂಡ ತದನಂತರದ ಸರಣಿ ಬೆಳವಣಿಗೆಗಳನ್ನೂ ನಾವು ಸರಿಯಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಜಮ್ಮು-ಕಾಶ್ಮೀರದ ವಿಲೀನದ ನಂತರ ಕಾಶ್ಮೀರವನ್ನು ಆಕ್ರಮಿಸಿಕೊಂಡ ಬುಡಕಟ್ಟು ದಾಳಿಕೋರರನ್ನು ಹಿಮ್ಮೆಟ್ಟಿಸಲು ಭಾರತದ ಸೇನೆಯನ್ನು ಕಳಿಸಲಾಯಿತು. ಭಾರತದ ಸೇನೆಯು ದಾಳಿಕೋರರ ವಿರುದ್ಧ ಹೋರಾಡಿ ಯಶಸ್ವಿಯಾಗಿ ಅವರನ್ನು ಹಿಮ್ಮೆಟ್ಟಿಸುತ್ತಿತ್ತು. ಸೇನೆಯು ಮೇಲುಗೈ ಸಾಧಿಸುತ್ತಿದ್ದಂತೆ ಪಾಕಿಸ್ತಾನದ ಈ ಬುಡಕಟ್ಟು ದಾಳಿಕೋರರು ಕಾಶ್ಮೀರದ ಅನೇಕ ಪಟ್ಟಣಗಳಿಂದ ಪಲಾಯನ ಮಾಡಿ ಪಾಕಿಸ್ತಾನ-ಭಾರತ ಅಂತರಾಷ್ಟ್ರೀಯ ಗಡಿಯ ಪಶ್ಚಿಮದ ಕಡೆಗೆ ನುಗ್ಗಿ ಸೇನೆಯಿಂದ ಸೆರೆಹಿಡಿಯಲ್ಪಡುವ ಸಾಧ್ಯತೆಯಿಂದ ತಪ್ಪಿಸಿಕೊಳ್ಳಲು ಪಾಕಿಸ್ತಾನದ ಗಡಿಯಲ್ಲಿ ಆಶ್ರಯ ಪಡೆದರು. ಆದರೆ ಭಾರತ ಸೇನೆ ಈ ಅಕ್ರಮಣಕಾರರನ್ನು ಕಾಶ್ಮೀರದ ಎಲ್ಲ ಪ್ರದೇಶಗಳಿಂದ ಸಂಪೂರ್ಣವಾಗಿ ಹಿಮ್ಮೆಟ್ಟಿಸುವ ಕಾರ್ಯದಲ್ಲಿ ಯಶಸ್ವಿಯಾಗಿ ನಿರತರಾಗಿದ್ದಾಗಲೇ ೧೯೪೮ ಮೇ ತಿಂಗಳಲ್ಲಿ ಅಂದಿನ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರುರವರು ಮಧ್ಯ ಪ್ರವೇಶಿಸಿ ಸೇನೆಯ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಆದೇಶ ಹೊರಡಿಸಿದರು. ಮತ್ತು ಈ ದಾಳಿಕೋರರಿಂದ ಕಾಶ್ಮೀರದ ಕೆಲವು ಭೂಪ್ರದೇಶಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವ ಸೇನೆಯ ಪ್ರಯತ್ನವನ್ನು ತಡೆಯಲಾಯಿತು. ಹಾಗಾಗಿ ಕಾಶ್ಮೀರದ ಎಲ್ಲ ಭೂಪ್ರದೇಶವನ್ನು ದಾಳಿಕೋರರಿಂದ ಮರುವಶ ಪಡೆಯಲು ಆಗಲಿಲ್ಲ. ಇಲ್ಲಿ ಗಮನಿಸಬೇಕಾದಂಥ ಸಂಗತಿ ಏನೆಂದರೆ ನೆಹರುರವರು ಸೇನೆಯ ಕಾರ್ಯಾಚರಣೆಯನ್ನು ನಿಲ್ಲಿಸಲು ಆದೇಶ ಕೊಟ್ಟಾಗ ಅಂದಿನ ಕಾಶ್ಮೀರದಲ್ಲಿನ ಸೇನಾ ಪಡೆಗಳ ದಂಡ ನಾಯಕ ಮೇಜರ್ ಜನರಲ್ ಕಲವಂತ್ ಸಿಂಗ್ ಅವರು ಸೇನಾಕಾರ್ಯಾಚರಣೆಗೆ ಎದುರಾಳಿಯಿಂದ ಯಾವುದೇ ಬಲವಾದ ಪ್ರತಿರೋಧ ಬರುತ್ತಿಲ್ಲವೆಂದೂ, ಅಕ್ರಮಣಕಾರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗುತ್ತಿದೆಯೆಂದೂ, ಆದರೆ ಕಾಶ್ಮೀರದ ಆ ಗಡಿ ಭಾಗ ಭಯಂಕರ ಗುಡ್ಡಬೆಟ್ಟಗಳಿಂದಾವೃತವಾದ ಕ್ಲಿಷ್ಟಕರ ಭೂಪ್ರದೇಶವಾಗಿದ್ದೂ ಕಾಶ್ಮೀರದ ಎಲ್ಲ ಆಕ್ರಮಿತ ಪ್ರದೇಶವನ್ನು ವಶಪಡಿಸಿಕೊಳ್ಳಲು ಇನ್ನೂ ಐದು ದಿನಗಳವರೆಗೆ ಸೇನಾ ಕಾರ್ಯಾಚರಣೆಯನ್ನು ಮುಂದುವರಿಸಲು ನೆಹರುರವರಲ್ಲಿ ಅನುಮತಿಯನ್ನು ಕೋರಿದ್ದರು. ಅದು ಸುಮಾರು ೧೯೪೮ ರ ಮೇ ನಾಲ್ಕನೇ ವಾರದ ಸಮಯ. ಆದರೆ ನೆಹರುರವರು ತಮ್ಮ ನಿರ್ಧಾರದಲ್ಲಿ ಅಚಲವಾಗಿದ್ದರು. ಮತ್ತು ಸೇನಾಕಾರ್ಯಾಚರಣೆಯನ್ನು ಮುಂದುವರಿಸಲು ಅನುಮತಿ ಕೊಡಲಿಲ್ಲ. ಇಲ್ಲಿ ಮುಖ್ಯ ವಿಷಯವೇನೆಂದರೆ, ಈ ನಿರ್ಣಾಯಕ ಘಟ್ಟದಲ್ಲಿ ನೆಹರುರವರು ಮೇಜರ್ ಜನರಲ್ ಕಲವಂತ್ ಸಿಂಗ್ ಅವರಿಗೆ ಅವರ ಕೋರಿಕೆಯಂತೆ ಇನ್ನೈದು ದಿನ ಸೇನಾ ಕಾರ್ಯಾಚರಣೆಯನ್ನು ನಡೆಸಲು ಅವಕಾಶ ಕೊಟ್ಟಿದ್ದರೆ ಕಾಶ್ಮೀರವು ಪಾಕ್ ಆಕ್ರಮಣಕಾರರಿಂದ ಸಂಪೂರ್ಣ ತೆರವುಗೊಂಡು ಕಾಶ್ಮೀರ ಸಮಸ್ಯೆ ಎನ್ನುವುದು ಉದ್ಭವವೇ ಆಗುತ್ತಿರಲಿಲ್ಲ. ಮತ್ತು ಭಾರತವು ಭವಿಷ್ಯದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುವುದರಿಂದ ಮುಕ್ತವಾಗಿರುತಿತ್ತು.

ವಿಶ್ವ ಸಂಸ್ಥೆಯಲ್ಲಿ ಕಾಶ್ಮೀರ

ಈ ನಡುವೆ, ೧ ಜನವರಿ ೧೯೪೮ರಂದು ನೆಹರುರವರು ಕಾಶ್ಮೀರದ ಸಮಸ್ಯೆಯನ್ನು ವಿಶ್ವಸಂಸ್ಥೆಗೆ ಕೊಂಡೊಯ್ದರು. ಆ ಸಂದರ್ಭದಲ್ಲಿ ನೆಹರುರವರ ಈ ಕ್ರಮ ತೀರಾ ಅನಗತ್ಯವಾಗಿತ್ತು. ಏಕೆಂದರೆ ಕಾಶ್ಮೀರದ ಸಮಸ್ಯೆ ಕೇವಲ ಭಾರತ ಒಕ್ಕೂಟದ ಸುರಕ್ಷತೆಗೆ ಸಂಬಂಧಪಟ್ಟ ವಿಷಯವಾಗಿತ್ತು ಮತ್ತು ಪಾಕಿಸ್ತಾನವು ಬುಡಕಟ್ಟು ಗುಂಪುಗಳ ಈ ದಾಳಿಯಲ್ಲಿ ಯಾವುದೇ ರೀತಿಯಲ್ಲಿ ತನ್ನ ಪಾತ್ರವಿಲ್ಲ ಎಂಬುದನ್ನು ಪದೇ ಪದೇ ಧೃಡಪಡಿಸಿತ್ತು. ಹಾಗಾಗಿ ಕಾಶ್ಮೀರಕ್ಕೆ ನುಸುಳಿ ಲೂಟಿಯಲ್ಲಿ ತೊಡಗಿದ್ದ ಪಾಕಿಸ್ತಾನದ ಬುಡಕಟ್ಟು ಗುಂಪನ್ನು ಚದುರಿಸಿ ಬಿಡುಗಡೆಗೊಳಿಸಲು ಸೇನಾ ಕಾರ್ಯಾಚರಣೆಯೊಂದೇ ಸಾಕಾಗಿತ್ತು. ಆದರೆ ಕಾಶ್ಮೀರದ ಮೇಲಿನ ಈ ದಾಳಿಯಲ್ಲಿ ಪಾಕಿಸ್ತಾನದ ಕುಮ್ಮಕ್ಕು ಇದೆ ಎಂದು ಸಾಬೀತುಪಡಿಸಿ ಪಾಕಿಸ್ತಾನಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಛೀಮಾರಿ ಹಾಕಿಸುವ ಯೋಚನೆಯಲ್ಲಿ ನೆಹರೂ ಇದ್ದರು. ಆದರೆ ಪಾಕಿಸ್ತಾನವು ಈ ದಾಳಿಯಲ್ಲಿ ತನ್ನ ಪಾತ್ರವಿಲ್ಲವೆಂದು ೧೫ ಜನವರಿ ೧೯೪೮ರಲ್ಲಿ ಘೋಷಿಸಿಬಿಟ್ಟಿತ್ತು. ಮೇಲಾಗಿ, ಈ ಘಟ್ಟದಲ್ಲಿ, ನೆಹರೂರವರು ಕಾಶ್ಮೀರ ಬಿಕ್ಕಟ್ಟಿನಂಥ ಎರಡು ರಾಷ್ಟ್ರಗಳ ಆಂತರಿಕ ಸಮಸ್ಯೆಗಳಿಗೆ ವಸ್ತುನಿಷ್ಠ ಪರಿಹಾರಗಳನ್ನು ಜಾರಿಗೊಳಿಸುತ್ತದೆಂದು ವಿಶ್ವಸಂಸ್ಥೆಯಂತ ಸಂಘಟನೆಯ ವಿಶ್ವಾಸಾರ್ಹತೆಯನ್ನು ಅತಿಯಾಗಿ ಅಂದಾಜಿಸಿದರು ಮತ್ತು ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿನ ಬಲಿಷ್ಠ ರಾಷ್ಟ್ರಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಇಂಥ ಸಮಸ್ಯೆಗಳನ್ನು ತಿರುಚುವ ಮತ್ತು ಬಳಸಿಕೊಳ್ಳುವ ಕುಶಲತೆಯನ್ನು ಮತ್ತು ಅವುಗಳ ಅಂತರಾಳದ ದುಷ್ಟತನವನ್ನು ಲಘುವಾಗಿ ಪರಿಗಣಿಸಿದ್ದರು. ಕಾಶ್ಮೀರದ ಮೇಲಿನ ದಾಳಿಯಲ್ಲಿ ಪಾಕಿಸ್ತಾನದ ನೇರ ಕುಮ್ಮಕ್ಕು ಮತ್ತು ಸಂಚು ಇದೆ ಎಂದು ವಿಶ್ವಸಂಸ್ಥೆಯ ರಕ್ಷಣಾ ಸಮಿತಿಯಲ್ಲಿ ೧ಜನವರಿ ೧೯೪೮ ರಂದು 'ಜಮ್ಮು ಮತ್ತು ಕಾಶ್ಮೀರದ ಪ್ರಶ್ನೆ' ಎಂಬ ತಲೆಬರಹದಡಿಯಲ್ಲಿ ನೆಹರೂರವರು ದೂರನ್ನು ಸಲ್ಲಿಸಿದ್ದರೂ ರಕ್ಷಣಾ ಸಮಿತಿಯಲ್ಲಿನ ಅಮೇರಿಕಾ ಮತ್ತು ಬ್ರಿಟನ್ ದೇಶದ ಪ್ರತಿನಿಧಿಗಳು - ವಾರೆನ್ ಆಸ್ಟಿನ್ ಮತ್ತು ಗ್ಲಾಡ್ವಿನ್ ಜೆಬ್ಬ್ -ತಮ್ಮ ದುಷ್ಟ ಹುನ್ನಾರಗಳಿಂದ ಅಂದಿನ ಕಾಶ್ಮೀರ ಸಮಸ್ಯೆಯನ್ನು ಗೊಂದಲಗೊಳಿಸಿ, ನೆಹರೂರವರ ದೂರನ್ನು, ಭಾರತ-ಪಾಕಿಸ್ತಾನ ಸಂಬಂಧದಲ್ಲಿನ ಇತರೆ ಸಮಸ್ಯೆಗಳನ್ನು ಒಳಗೊಳಿಸಲು ಭದ್ರತಾ ಸಮಿತಿಯ ಸಭೆಯ ಕಾರ್ಯಸೂಚಿಯಲ್ಲಿ ದೂರಿನ ತಲೆಬರಹವನ್ನು

'ಭಾರತ–ಪಾಕಿಸ್ತಾನ ಪ್ರಶ್ನೆ' ಎಂದು ಬದಲಾಯಿಸಿದರು. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಈ ಕ್ರಮ, ಪಾಕಿಸ್ತಾನಕ್ಕೆ, ಕಾಶ್ಮೀರದ ಮೇಲೆ ಯಾವುದೇ ಕಾನೂನಾತ್ಮಕ ಹಕ್ಕು ಇಲ್ಲದಿದ್ದಾಗ್ಯೂ, ಕಾಶ್ಮೀರದ ಆಕ್ರಮಿತ ಪ್ರದೇಶದಿಂದ ತೆರವುಗೊಳಿಸದೆ ಇರಲು ಸಹಾಯಕವಾಯಿತು. ಇಲ್ಲಿ ಗಮನಾರ್ಹ ಅಂಶವೆಂದರೆ, ವಿಶ್ವಸಂಸ್ಥೆಯು ಒಂದು ಕಡೆ ಜಮ್ಮು–ಕಾಶ್ಮೀರದ ಮೇಲಿನ ಭಾರತದ ಸಾರ್ವಭೌಮ ಹಕ್ಕನ್ನು ಒಪ್ಪಿಕೊಳ್ಳುತ್ತಲೇ ಕಾಶ್ಮೀರದ ಪ್ರಶ್ನೆಯನ್ನು ಭಾರತ–ಪಾಕಿಸ್ತಾನ ಪ್ರಶ್ನೆ ಎಂದು ಮರುವ್ಯಾಖ್ಯಾನಿಸಿ ಸಮಸ್ಯೆಯನ್ನು ಬೇರೆಯೇ ಪಾತಳಿಗೆ ವರ್ಗಾಯಿಸಿ ಪರಿಹಾರವು ಮರೀಚಿಕೆಯಾಗುವಂತೆ ಮಾಡಿತು. ಮತ್ತು ಪಾಕಿಸ್ತಾನವು ಆಕ್ರಮಿತ ಪ್ರದೇಶದಿಂದ ತೆರವುಗೊಳಿಸುವುದನ್ನು ಮುಂದೂಡಲು ಅವಕಾಶ ಮಾಡಿಕೊಟ್ಟಿತು. ಆದ್ದರಿಂದ ಕಾಶ್ಮೀರ ಪ್ರಶ್ನೆಯ ಬಗ್ಗೆ ಪಾಕಿಸ್ತಾನದೊಂದಿಗೆ ಚರ್ಚಿಸಬೇಕಾದ ವಿಷಯವೆಂದರೆ, ಪಾಕ್ ಆಕ್ರಮಿತ ಪ್ರದೇಶವನ್ನು ಶಾಂತಿಯುತವಾಗಿ ಮತ್ತು ನಿರ್ದಿಷ್ಟ ಅವಧಿಯಲ್ಲಿ ತೆರವುಗೊಳಿಸುದರ ರೀತಿ–ನೀತಿಗಳೇ ಆಗಿದೆ ಎಂಬ ಹಾಲಿ ವಿದೇಶಾಂಗ ಕಾರ್ಯದರ್ಶಿ ಡಾ. ಜಯಶಂಕರ್‌ರವರ ನಿಲುವು ಕಾನೂನಾತ್ಮಕವಾಗಿ ಮತ್ತು ತಾಂತ್ರಿಕವಾಗಿ ಸರಿಯಾದದ್ದೇ ಆಗಿದೆ.

ಆದರೆ ಮೂಲಭೂತವಾಗಿ ಇಸ್ಲಾಮಾಬಾದ್‌ನಲ್ಲಿನ ಉನ್ನತ ರಾಜಕೀಯ ವಲಯಗಳಲ್ಲಿ ಎಲ್ಲವನ್ನೂ ತೂಗಿ ನೋಡಿ ಗಟ್ಟಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಇಚ್ಛಾಶಕ್ತಿ ಬೇಕಾಗುತ್ತದೆ. ಪಾಕಿಸ್ತಾನವು ಈ ವಿಷಯದಲ್ಲಿ ಸಕಾರಾತ್ಮಕ ಸ್ಪಂದನೆ ಪ್ರದರ್ಶಿಸಿದಲ್ಲಿ ಆ ದೇಶದ ಅಪಾರವಾದ ಶಕ್ತಿ ಮತ್ತು ಸಂಪನ್ಮೂಲಗಳು ಅನಗತ್ಯ ಪೋಲಾಗುವುದು ಉಳಿಯುತ್ತದೆ ಹಾಗು ಅದನ್ನು ಪಾಕಿಸ್ತಾನದ ಜನರ ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸಬಹುದಾಗಿದೆ ಎನ್ನುವುದು ಒಂದು ವಿಷಯವಾದರೆ ಇನ್ನೊಂದು ನೆಲೆಯಲ್ಲಿ ಪಾಕಿಸ್ತಾನವು ಜಗತ್ತಿನಲ್ಲಿ ಚೀನಾದಂತ ಭಾರತ ವಿರೋಧಿ ರಾಷ್ಟ್ರದ ಜೊತೆ ಕೈ ಜೋಡಿಸಿದೆ ಎಂಬ ಹಣೆಪಟ್ಟಿಯಿಂದ ಬಿಡಿಸಿಕೊಂಡಂತಾಗುತ್ತದೆ. ಇದು ಭಾರತ ಉಪಖಂಡದಲ್ಲಿ ಶಾಂತಿ ನೆಲೆಸಲು ಮಹತ್ವದ ಮುನ್ನುಡಿಯಾಗುತ್ತದೆ.

ಭಾರತ–ಪಾಕಿಸ್ತಾನ ಸಂಬಂಧಗಳು

ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿನ ನೀತಿ ನಿರೂಪಕರು ಭಾರತ–ಪಾಕಿಸ್ತಾನದ ಪ್ರಸಕ್ತ ಸಂಬಂಧಗಳು ಮತ್ತು ಆ ಸಂಬಂಧಗಳ ಭವಿಷ್ಯದ ಗತಿ ದೀರ್ಘಾವಧಿಯಲ್ಲಿ ಹೇಗಿರಬೇಕೆಂದು ಒಂದು ಕಠಿಣ ಮೌಲ್ಯಮಾಪನ ಮಾಡಿದರೆ ಆಗ ಉಭಯ ದೇಶದಲ್ಲಿನ ಇಂದಿನ ವಿದ್ವೇಷದ ಮತ್ತು ವೈರತ್ವದ ಭಾವನೆಗಳು ಪರಸ್ಪರ ವಿನಾಶಕಾರಿಯಾಗಿಯೂ ಹಾಗು ತೀರಾ ಅಸ್ಥಿರವಾದದ್ದೂ ಎಂದು ಸುಲಭವಾಗಿ ತಿಳಿಯುತ್ತದೆ. ಇದೇ ರೀತಿ ಇನ್ನೊಂದು ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ವಿಧಿಯು ಪರಸ್ಪರ ಎಷ್ಟು ಬೆಸೆದುಕೊಂಡಿದೆ, ಭಾರತಕ್ಕೆ ಪಾಕಿಸ್ತಾನವೂ, ಪಾಕಿಸ್ತಾನಕ್ಕೆ ಭಾರತವೂ ಎಷ್ಟು ಮುಖ್ಯ, ತಮ್ಮ ಶ್ರೇಯೋಭಿವೃದ್ಧಿಗಾಗಿ ಪರಸ್ಪರರ ಸಹಕಾರ ಎಷ್ಟು ಮುಖ್ಯ ಎಂದೂ ತಿಳಿದು ಬರುವುದು. ಹಾಗೆ ನೋಡಿದರೆ ಉಭಯ ದೇಶಗಳು ಪರಸ್ಪರ ಶತ್ರುಗಳು ಅಥವಾ ಸಂಭಾವ್ಯ ಶತ್ರುಗಳು ಎಂದು ಬಿಂಬಿಸುವುದೇ ದೊಡ್ಡ ತಪ್ಪಾಗುತ್ತದೆ. ಈ ದೇಶಗಳ ಜನರ ನಡುವಿನ ಸ್ವಾಭಾವಿಕ ಸ್ನೇಹ ಸಂಬಂಧಗಳು ಬೇರೆಯದೇ ಕಥೆ ಹೇಳುತ್ತದೆ. ಈ ಎರಡು ಜನರ ಹೃದಯದಲ್ಲಿ ಒಂದು ರೀತಿಯ ಸಹಜ ಸೆಳೆತ ನೆಲೆಸಿರುವುದನ್ನು ನಾವು ಗಮನಿಸದೆ ಇರಲಾಗದು. ಈ ರೀತಿಯ ಸಂಬಂಧದಿಂದಾಗಿ ಇಲ್ಲಿನ ನಾಗರಿಕರು ಎರಡು ದೇಶದಲ್ಲಿ ಇರುವ ಒಂದೇ ಜನ ಎಂದೆನಿಸುವುದು. ನಮ್ಮ ವಾಘಾ ಗಡಿಯಲ್ಲಿ ನೋಡಿದರೆ ಸಾಮಾನ್ಯವಾಗಿ ಎರಡು ದೇಶಗಳ ನಡುವೆ ಇರುವ ಪ್ರತ್ಯೇಕತೆಯ ಯಾವ ಗುಣಲಕ್ಷಣಗಳೂ ಕಾಣಿಸುವುದಿಲ್ಲ. ಭೂಗೋಳ, ಭಾಷೆ ಮತ್ತು ಸಂಸ್ಕೃತಿ, ಆಹಾರ ಕ್ರಮ, ಉಡುಪು ಮತ್ತು ಇನ್ನೂ ಅನೇಕ ಸಮಾನ ಅಂಶಗಳು ಎರಡೂ ದೇಶದ ಜನರನ್ನು ಭಾವನಾತ್ಮಕವಾಗಿ ಬೆಸೆದು ಒಂದು ರೀತಿಯ ಸಹಜ ಸೆಳೆತವನ್ನು ನಿರ್ಮಿಸಿಬಿಟ್ಟಿದೆ. ಸಂಕಷ್ಟದ ಸಮಯದಲ್ಲಿ ತಮ್ಮ ಸ್ವಯಂಪ್ರೇರಿತ ಅಭಿವ್ಯಕ್ತಿಯಾಗಿ ಎರಡೂ ಜನರ ನಡುವೆ ಐಕಮತ್ಯ ಪ್ರಕಟಗೊಳ್ಳುವುದನ್ನು ನೋಡಿದ್ದೇವೆ. ಇಂಥ ಅಭಿವ್ಯಕ್ತಿಯ ಒಂದು ಉಜ್ವಲ ಉದಾಹರಣೆಯಾಗಿ ಅಂದಿನ ಪಾಕಿಸ್ತಾನದ ಅಧ್ಯಕ್ಷ ಜನರಲ್ ಅಯೂಬ್ ಖಾನ್‌ರವರು ಅಂದಿನ ಭಾರತದ ಪ್ರಧಾನಿ ಲಾಲ್‌ಬಹಾದ್ದೂರ್ ಶಾಸ್ತ್ರಿಯವರ ಸಾವಿನ ಸಂದರ್ಭದಲ್ಲಿ ನಡೆದುಕೊಂಡ ರೀತಿಯಲ್ಲಿ ಕಾಣಬಹುದು. ತಾಷ್ಕೆಂಟ್‌ನಲ್ಲಿ ಶಾಸ್ತ್ರಿಯವರು ದಿಢೀರ್ ಸಾವನ್ನಪ್ಪಿದಾಗ ಅವರ ಶವಪೆಟ್ಟಿಗೆಯನ್ನು ಹೊರಲು ಅಯೂಬ್ ಖಾನ್‌ರು ಸ್ವತಃ ತಾವೇ ಮುಂದೆ ಬಂದು ಭಾರತಕ್ಕೆ ಹೊರಡಲು ಸಿದ್ಧವಾಗಿದ್ದ ವಿಮಾನದವರೆಗೂ ಹೊತ್ತು ತಂದಿದ್ದರು. ಇಂಥಾ ಭಾವನಾತ್ಮಕ ಸೆಳೆತ ಎರಡು ದೇಶದ ಜನರ ನರ–ನಾಡಿಗಳಲ್ಲಿ ಹರಿಯುತ್ತಿರುವುದನ್ನು ನಾವು ಗುರುತಿಸಬೇಕಾಗಿದೆ. ಈ ಸಹಜ ಸೆಳೆತ ಮತ್ತು ಸಂಬಂಧಗಳು ಪಟ್ಟಭದ್ರ ಹಿತಾಸಕ್ತಿಗಳ ವಿದ್ವೇಷದ ರಾಜಕಾರಣ ಮತ್ತು ಪ್ರಚಾರದ ನಡುವೆಯೂ ವರ್ಷಗಳುರುಳಿದರೂ ಉಳಿದುಕೊಂಡು ಬಂದಿದೆ. ಹಾಗಾಗಿ ಈ ಎರಡೂ ದೇಶಗಳ ನಡುವೆ ಸಂಘರ್ಷಾತ್ಮಕ ಸಂಬಂಧವನ್ನು ಯಾವುದೇ ಆಡಳಿತಗಾರರು–ರಾಜಕೀಯ ಅಥವಾ ಸೈನ್ಯ–ತಮ್ಮ ಪಟ್ಟಭದ್ರ ವೈಯಕ್ತಿಕ ಇಲ್ಲ ರಾಜಕೀಯ ಹಿತಾಸಕ್ತಿಗಳಿಗಾಗಿ ಮುಂದುವರಿಸುವುದು ಆ ದೇಶದ ಜನರ ಸದ್ಭಾವನೆಯ ಮಾನಸಿಕತೆಗೆ ಘಾಸಿ ಮಾಡಿದಂತೆ.

ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವ ಇಂಥ ದಟ್ಟವಾದ ಸೆಳೆತ ಮತ್ತು ಸಮಾನ ಅಂಶಗಳಿಗೆ ಹೋಲಿಸಿದರೆ, ಯಾವ ಪಾಕಿಸ್ತಾನ ಮತ್ತು ಚೀನಾ ದೇಶಗಳು ತಮ್ಮ ರಾಜಕೀಯ ಸ್ವಾರ್ಥ ಸಾಧನೆಗೆ ಮಿತ್ರರೆಂದು ತೋರಿಸಿಕೊಳ್ಳುತ್ತಿವೆಯೋ ಆ ದೇಶಗಳ ನಡುವೆ ಇರುವ ಸಾಮಾನ್ಯತೆಯ ಅಂಶಗಳಾದರೂ ಯಾವುವು, ಎಷ್ಟು? ಇಲ್ಲವೇ ಇಲ್ಲವೆನ್ನಿಸುವಷ್ಟು ಅತೀ ಕಡಿಮೆ. ಅದೇನೇ ಇರಲಿ, ಇಸ್ಲಾಮಾಬಾದ್, ಬೀಜಿಂಗ್‌ನೊಟ್ಟಿಗೆ ಅತಿ ನಿಕಟ ಸ್ನೇಹವನ್ನು ಬೆಳೆಸುವ ಮೊದಲು–ಚೀನಾದೊಡನೆ ಆತ್ಮೀಯ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಮಾರ್ಗದರ್ಶನ ನೀಡುವಂತ –ಸುನ್ ತ್ಸು ಎಂಬ ಲೇಖಕನ 'ದಿ ಆರ್ಟ್ ಆಫ್ ವಾರ್' ಎಂಬ ಕೃತಿಯನ್ನು ಅಧ್ಯಯನ ಮಾಡುವುದು ಒಳ್ಳೆಯದು. ಪಾಕಿಸ್ತಾನಕ್ಕೆ ಇದು ಹೆಚ್ಚು ಉಪಯುಕ್ತವಾಗಬಹುದು. ಪಾಕಿಸ್ತಾನವು ತನ್ನ ಸಮೀಪ ದೃಷ್ಟಿದೋಷದಿಂದ ಈಗ ಏನೇ ಮಾಡುತ್ತಿರಲಿ, ಆದರೆ ಭಾರತವು ಆ ದೇಶವನ್ನು ಒಂದು ಸಂಭಾವ್ಯ ಮಿತ್ರ ರಾಷ್ಟ್ರವೆಂದೇ ಪರಿಗಣಿಸಬೇಕು ಮತ್ತು ತನ್ನ ಪ್ರತಿಕ್ರಿಯೆಗಳಲ್ಲಿ ಹೆಚ್ಚಿನ ಸಂಯಮವನ್ನು ಅಳವಡಿಸಿಕೊಳ್ಳಬೇಕು. ಈ ವಿಷಯದಲ್ಲಿ ನವದೆಹಲಿಗೆ ಸ್ನೇಹಶೀಲತೆಯ 'ಗುಜ್ರಾಲ್ ನೀತಿ'ಯು ಮಾರ್ಗದರ್ಶಕವಾಗಬೇಕು.

ಪಾಕಿಸ್ತಾನವನ್ನು ಭಾರತವು ಸಂಭಾವ್ಯ ಮಿತ್ರನೆಂದು ಪರಿಗಣಿಸಲು ಇನ್ನು ಕೆಲವು ಬಲವಾದ ಕಾರಣಗಳು ಇವೆ. ಸ್ವತಂತ್ರ ಭಾರತವು ೧೯೬೨ರಲ್ಲಿ ಚೀನಾದ ಆಕ್ರಮಣವನ್ನು ಎದುರಿಸಬೇಕಾಗಿ ಬಂದ ಸಂದರ್ಭದಲ್ಲಿ ಪಾಕಿಸ್ತಾನವು ಭಾರತಕ್ಕೆ ಅನುಕೂಲಕರವಾದ ಧೋರಣೆಯನ್ನು ಅನುಸರಿಸಿತ್ತು ಎಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು. ಆ ಸಂದರ್ಭದಲ್ಲಿ ಭಾರತ–ಪಾಕಿಸ್ತಾನದ ಗಡಿಯಲ್ಲಿ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕೆಂದು, ಜವಾಹರ್‌ಲಾಲ್ ನೆಹರುರವರ ವಿನಂತಿ ಮೇರೆಗೆ, ಅಂದಿನ ಬ್ರಿಟಿಷ್ ಪ್ರಧಾನಿ ಹೆರಾಲ್ಡ್ ಮ್ಯಾಕ್ ಮಿಲನ್ ಮತ್ತು ಅಮೇರಿಕಾದ ಅಧ್ಯಕ್ಷ ಜಾನ್ ಎಫ್ ಕೆನಡಿಯವರು ಸೇರಿ ಪಾಕಿಸ್ತಾನದ ಅಧ್ಯಕ್ಷ ಜನರಲ್ ಅಯೂಬ್ ಖಾನ್‌ರವರಲ್ಲಿ ಮನವಿ ಮಾಡಿದ್ದರು ಹಾಗು ಅಯೂಬ್ ಖಾನ್‌ರವರು ಸಕಾರಾತ್ಮಕವಾಗಿ ಸ್ಪಂದಿಸಿ ಪಶ್ಚಿಮದ ಗಡಿಯಲ್ಲಿ ಯಾವ ಸಮಸ್ಯೆಯು ಉದ್ಭವವಾಗದ ರೀತಿಯಲ್ಲಿ ನೋಡಿಕೊಂಡರು. ಇದರಿಂದ ಪಶ್ಚಿಮದ ಗಡಿಯಲ್ಲಿ ಬೀಡುಬಿಟ್ಟಿದ್ದ ನಮ್ಮ ಸೇನೆಯ ತುಕಡಿಗಳನ್ನು ಹಿಮಾಲಯದ ಕಡೆಗೆ ಸ್ಥಳಾಂತರಿಸಿ ಚೀನಾದ ಆಕ್ರಮಣವನ್ನು ಎದುರಿಸಲು ಭಾರತಕ್ಕೆ ಅನುಕೂಲವಾಯಿತು.


ಈ ಎಲ್ಲ ವಿಷಯಗಳನ್ನು ಪರಿಗಣಿಸಿ ಪಾಕಿಸ್ತಾನವನ್ನು, ಅದು ಈಗ ಚೀನಾದೊಂದಿಗೆ ಗೆಳೆತನ ಬೆಳೆಸಿಕೊಂಡು ಭಾರತದ ವಿರುದ್ಧ ಅದರ ಬೆಂಬಲವನ್ನು ಕೋರುತ್ತಿರುವುದರ ಹೊರತಾಗಿಯೂ, ತನ್ನ ಸಂಭಾವ್ಯ ಮಿತ್ರನೆಂದೆ ಭಾರತವು ನೋಡಬೇಕು ಮತ್ತು ತನ್ನ ವರ್ತನೆಯಲ್ಲಿ ಅದನ್ನು ಅಭಿವ್ಯಕ್ತಿಸಬೇಕು. ದೀರ್ಘಾವಧಿಯಲ್ಲಿ ಇಂಥ ಧೋರಣೆ ಖಂಡಿತ ಫಲಪ್ರದವಾಗುತ್ತದೆ. ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಪಾಕಿಸ್ತಾನದ ಭದ್ರತೆಯ ವಿಷಯವು ಭಾರತದ ಕಾಳಜಿಯಾಗಬೇಕು ಮತ್ತು ಎರಡೂ ದೇಶಗಳು ತಮ್ಮ ವಿದೇಶಾಂಗ ನೀತಿಯನ್ನು, ಕಾಶ್ಮೀರವು ಒಂದು ವಿವಾದಿತ ವಿಷಯವನ್ನಾಗಿ ಮುಂದುವರೆಸುವುದನ್ನು ಬಿಟ್ಟು, ಇನ್ನೂ ಉದಾತ್ತವಾದ ಆಲೋಚನೆಗಳ ಮತ್ತು ವಿಸ್ತಾರವಾದ ಚೌಕಟ್ಟಿನ ಆಧಾರದಲ್ಲಿ ರೂಪಿಸಿಕೊಳ್ಳಬೇಕು. ಈ ನಿಟ್ಟಿನ ನೀತಿ ನಿರೂಪಣೆಯು ದಿವಂಗತ ಜಯಪ್ರಕಾಶ್ ನಾರಾಯಣ ಅವರು ಸೂಚಿಸಿದ ಹಾಗೆ ಭಾರತ ಮತ್ತು ಪಾಕಿಸ್ತಾನದ ನಡುವೆ ಒಂದು ಒಕ್ಕೂಟ ರಚಿಸಿಕೊಳ್ಳುವುದರ ಮೂಲಕ ಸಾಧಿತವಾಗಬಹುದೋ ಎಂದು ಪರಿಶೀಲಿಸಿ ತಮ್ಮ ವಿಸ್ತಾರವಾದ ಹಿತಾಸಕ್ತಿಗಳಿಗೆ ಅನುಗುಣವಾಗಿ ಮತ್ತು ಭಾರತ ಉಪಖಂಡವನ್ನು ಜಗತ್ತಿನ ಬಲಿಷ್ಠ ರಾಷ್ಟ್ರಗಳು ತಮ್ಮ ಸ್ವಾರ್ಥ ಸಾಧನೆಗೆ, ಪರಿಸ್ಥಿತಿಯನ್ನು ಹದಗೆಡಿಸಿ, ಪರಸ್ಪರರ ನುಡುವೆ ಹಗೆತನವನ್ನು ಬೆಳೆಸುವುದನ್ನು ತಡೆಯಲು ಬಳಸಿಕೊಳ್ಳಬೇಕು.

ಉರಿ ಆಕ್ರಮಣ ಮತ್ತು ಪ್ರತ್ಯಾಕ್ರಮಣ

ಇತ್ತೀಚಿನ ಉರಿ ಸೇನಾ ನೆಲೆಯ ಮೇಲಿನ ಭಯೋತ್ಪಾದಕರ ದಾಳಿ ಮತ್ತು ಭಾರತದ ನಿರ್ದಿಷ್ಟ ಪ್ರತಿದಾಳಿಯಿಂದಾಗಿ ಉಭಯ ದೇಶಗಳ ಸಂಬಂಧ ಸಾಕಷ್ಟು ಹದಗೆಟ್ಟು ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಾಣ ಮಾಡಿದೆ. ಇಂತದ್ದೇ ಪ್ರಕ್ಷುಬ್ಧ ವಾತಾವರಣವು ಎರಡೂ ದೇಶಗಳ ಸಂಬಂಧದಲ್ಲಿ ಈ ಹಿಂದೆ ಕೂಡ –೧೯೪೭, ೧೯೬೫, ೧೯೭೧ ಮತ್ತು ೧೯೯೯ರಲ್ಲಿ ನಿರ್ಮಾಣವಾಗಿದ್ದು ನಿರರ್ಥಕ ಯುದ್ಧದಲ್ಲಿ ಪರ್ಯವಸಾನಗೊಂಡಿತ್ತು. ಉರಿ ಹತ್ಯಾಕಾಂಡವು ಭಾರತೀಯರ ಭಾವನೆಗಳನ್ನು ಸಾಕಷ್ಟು ಕೆರಳಿಸಿದೆ. ಅಪ್ರಬುದ್ಧ ಆಡಳಿತಗಾರರ ಕೈಯಲ್ಲಿ ಇಂಥ ಸನ್ನಿವೇಶವು ಯುದ್ಧದ ಕಿಡಿಯನ್ನು ಸಹ ಹೊತ್ತಿಸಬಲ್ಲದು.

ನಮಗೆಲ್ಲ ಗೊತ್ತಿರುವ ಸಂಗತಿ ಏನೆಂದರೆ, ಪಾಕಿಸ್ತಾನದಲ್ಲಿ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ, ಭಾರತದಲ್ಲಿದ್ದಂತೆ, ಸಂಪೂರ್ಣವಾಗಿ ನಾಗರೀಕ ಆಡಳಿತಗಾರರ ಹಿಡಿತದಲ್ಲಿಲ್ಲ. ಬದಲಾಗಿ ನಾಗರಿಕ ಆಡಳಿತಗಾರರ ಬೆನ್ನ ಹಿಂದಿನಿಂದ ಅಲ್ಲಿನ ಸೇನಾಡಳಿತವು ರಾಜಕೀಯ ಸ್ವರೂಪದ ನಿರ್ಧಾರವನ್ನು ತೆಗೆದುಕೊಂಡು ಅದರ ಸಂಪೂರ್ಣ ಜವಾಬ್ದಾರಿಯನ್ನು ನಾಗರಿಕ ಆಡಳಿತಗಾರರ ಮೇಲೆ ಹೊರಿಸುವಂಥ ಪರಿಪಾಠ ಬೆಳೆದುಬಂದಿದೆ. ೧೯೯೯ರ ಕಾರ್ಗಿಲ್ ಯುದ್ಧ ನೆಡದದ್ದೂ ಹೀಗೇ. ಕಾರ್ಗಿಲ್ ಯುದ್ಧವನ್ನು ಯೋಜಿಸಿ ಜಾರಿಗೊಳಿಸಿದ್ದು ಅಂದಿನ ಪಾಕಿಸ್ತಾನದ ಸೇನಾ ಮುಖ್ಯಸ್ಥ ಪರ್ವೀಜ್ ಮುಶ್ರಫ್ ಮತ್ತು ಯುದ್ಧದ ಈ ನಿರ್ಧಾರವು ಪಾಕಿಸ್ತಾನದ ಅಂದಿನ ಪ್ರಧಾನಿ ನವಾಜ್ ಷರೀಫ್‌ರವರಿಗೇ ತಿಳಿದಿರಲಿಲ್ಲವೆಂಬ ಕಟು ಸತ್ಯವನ್ನು ಅವರೇ ಸ್ವತಃ ಭಾರತದ ಅಂದಿನ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡಿಸ್‌ರವರಲ್ಲಿ ತೋಡಿಕೊಂಡಿದ್ದರು.

ಇಂಥ ಸಾಧ್ಯತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನವದೆಹಲಿಯು ಪಾಕಿಸ್ತಾನದ ವಿಷಯದಲ್ಲಿ ತನ್ನ ಪ್ರತಿಕ್ರಿಯೆಗಳಲ್ಲಿ ಅತ್ಯಂತ ಹೆಚ್ಚಿನ ಸಂಯಮವನ್ನು ಪ್ರದರ್ಶಿಸಬೇಕಾಗುತ್ತದೆ. ಯುದ್ಧವೊಂದೇ ಪರಿಹಾರವಲ್ಲ ಮತ್ತು ಅದನ್ನೇ ವೈಭವೀಕರಿಸುವುದನ್ನು ನಿಲ್ಲಿಸಬೇಕು. ಅಸಂತೋಷ ಮತ್ತು ಆಕ್ಷೇಪಣೆಗಳನ್ನು ಅಭಿವ್ಯಕ್ತಿಸಲು ಬೇರೆ ಮಾರ್ಗಗಳೂ ಇವೆ. ಈಚೆ ೨೦ ಸಾವು ಮತ್ತು ಆಚೆ ೩೮ ಸಾವು ಎನ್ನುವ ರೀತಿಯಲ್ಲಿ ಬಿಕ್ಕಟ್ಟನ್ನು ಎದುರಿಸುವುದರಲ್ಲಿ ಯಾವ ಮಹತ್ಸಾಧನೆ ಇದೆ? ಇಂಥ ವಿಧಾನಗಳು ತೀರಾ ಕೆಳ ಮಟ್ಟದ್ದು. ಪರ್ಯಾಯವಾಗಿ ಇಂಥ ಬಿಕ್ಕಟ್ಟಿನ ಸನ್ನಿವೇಶಗಳಲ್ಲೂ 'ಗುಜ್ರಾಲ್ ನೀತಿ'ಯ ಸ್ಫೂರ್ತಿ ಮತ್ತು ಆಶಯಗಳು ನಮ್ಮ ಪ್ರತಿಕ್ರಿಯೆಗಳನ್ನು ರೂಪಿಸಬೇಕು. ಇಂಥ ನಿಲುವು ದೀರ್ಘಾವಧಿಯಲ್ಲಿ ಖಂಡಿತ ಉತ್ತಮ ಫಲಿತಾಂಶವನ್ನು ನೀಡುತ್ತದೆ. ಭಾರತ–ಪಾಕ್ ಸಂಬಂಧವನ್ನು ಸುಧಾರಿಸಲು ಮತ್ತು ಸ್ನೇಹ ಮತ್ತು ಸಹಕಾರದ ಆಧಾರದ ಮೇಲೆ ಅದನ್ನು ಹೊಸ ದಿಕ್ಕಿನಲ್ಲಿ ಕೊಂಡೊಯ್ಯಲು ಈಗಿನ ಪಾಕ್ ಪ್ರಧಾನಿ ನವಾಜ್ ಷರೀಫ್‌ರವರೇ ಉತ್ತಮ ಆಯ್ಕೆ. ಉಭಯ ದೇಶಗಳ ಸಂಬಂಧದಲ್ಲಿ ಈಗ ಕಂಡುಬರುತ್ತಿರುವ ಸಂಘರ್ಷಾತ್ಮಕ ಧೋರಣೆಯನ್ನು ಕೈಬಿಟ್ಟು, ಅಪಾರವಾದ ಶ್ರಮ ಮತ್ತು ಸಂಪನ್ಮೂಲವನ್ನು, ಕೆಲವೇ ವರ್ಷಗಳಲ್ಲಿ ತುಕ್ಕು ಹಿಡಿದು ಗುಜರಿಗೆ ಸೇರುವಂತಹ, ಶಸ್ತ್ರಾಸ್ತ್ರಗಳನ್ನು ಗುಡ್ಡೆ ಹಾಕಲು ಬಳಸುವುದನ್ನು ನಿಲ್ಲಿಸಿ ದೇಶದ ಜನರ ಕ್ಷೇಮಾಭಿವೃದ್ಧಿಗೆ ಬಳಸುವ ಹೊಸ ನೀತಿಯನ್ನು ಅನುಸರಿಸಲೇಬೇಕಾಗಿದೆ. ಪಾಕಿಸ್ತಾನವು ಕಾಶ್ಮೀರದ ಮೇಲಿನ ತನ್ನ, ತೀರಾ ಅಸಮ್ಮತವಾದ, ಹಕ್ಕನ್ನು ಪ್ರತಿಪಾದಿಸುವುದನ್ನು ಬಿಟ್ಟು ಭಾರತದ ಬಗೆಗಿನ ತನ್ನ ಮೂಲ ನಿಲುವನ್ನು ಸ್ನೇಹ ಮತ್ತು ಸಹಕಾರದ ತಳಹದಿಯಲ್ಲಿ ರೂಪಿಸಿಕೊಳ್ಳಬೇಕು. ಜೆಎನ್‌ಯುನ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನ ಕೇಂದ್ರದಲ್ಲಿ ಕಾಶ್ಮೀರದ ಕಣಿವೆಯಿಂದ ಬಂದ, ನನ್ನ ಒಬ್ಬ ಆತ್ಮೀಯ ವಿದ್ಯಾರ್ಥಿ ಮಿತ್ರ ಹೇಳುತ್ತಿದ್ದುದೇನೆಂದರೆ, ಕಾಶ್ಮೀರಕ್ಕೆ ಪಾಕಿಸ್ತಾನದ ಮೇಲಿನ ಒಲವಿಗೆ ಮುಖ್ಯ ಕಾರಣ ಸುಲಭವಾಗಿ ಎಟಕುವ ಮಾರುಕಟ್ಟೆಗಳು ಮತ್ತು ವ್ಯಾಪಾರದ ಹಿತಾಸಕ್ತಿಗಳೆ ಆಗಿದೆ ಎಂದು. ಹಾಗಾಗಿ ಕಾಶ್ಮೀರದಲ್ಲಿ ಭಾರತ–ಪಾಕ್ ಗಡಿಯನ್ನು ಸಡಿಲವಾಗಿಟ್ಟು ಪಾಕಿಸ್ತಾನದ ಈ ಹಿತಾಸಕ್ತಿಯನ್ನು ಕಾಪಾಡಬೇಕು. ಸಹಕಾರದ ಮತ್ತು ಐಕಮತ್ಯದ ಚೌಕಟ್ಟಿನಲ್ಲಿ ರೂಪಿತವಾದ ಭಾರತ–ಪಾಕಿಸ್ತಾನ ಸಂಬಂಧದಿಂದ ಈ ಕಾರ್ಯ ಅಸಾಧ್ಯವೇನಲ್ಲ.



(ಮೂಲತಃ ಕೇರಳದವರಾದ ಪ್ರೊ. ಬಿ. ವಿವೇಕಾನಂದನ್, ನವದೆಹಲಿಯ ಜವಾಹರಲಾಲ್ ನೆಹ್ರೂ ವಿಶ್ವವಿದ್ಯಾಲಯದಲ್ಲಿ ಬಹು ದೀರ್ಘ ಕಾಲ 'ಅಂತಾರಾಷ್ಟ್ರೀಯ ಸಂಬಂಧಗಳ ಅಧ್ಯಯನ ಕೇಂದ್ರ'ದ ಪ್ರಾಧ್ಯಾಪಕರೂ, ಮುಖ್ಯಸ್ಥರೂ ಆಗಿದ್ದವರು)

(ಕೃಪೆ: *ಜನತಾ*, ೩೦, ಅಕ್ಟೋ. ೨೦೧೬)


ಸಮಕಾಲೀನ-೨

ಟ್ರಂಪ್ ಎಂಬ 'ಸತ್ಯೋತ್ತರ' ವಿದ್ಯಮಾನ

–ಜಿ. ರಾಜಶೇಖರ

ಇತ್ತೀಚಿಗೆ ನಡೆದ ಅಮೆರಿಕಾದ ಅಧ್ಯಕ್ಷೀಯ ಚುನಾವಣೆಗಳಲ್ಲಿ ಎಲ್ಲರ ನಿರೀಕ್ಷೆಗಳನ್ನೂ ಸುಳ್ಳು ಮಾಡಿ ರಿಪಬ್ಲಿಕನ್ ಪಕ್ಷದ ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾಗಿ ಆಯ್ಕೆಯಾಗಿ ಅಧಿಕಾರವನ್ನೂ ಸ್ವೀಕರಿಸಿ ತಮ್ಮ ವಿವಾದಾಸ್ಪದ ತೀರ್ಮಾನಗಳ ಮೂಲಕ ಅಮೆರಿಕಾದೊಳಗೂ ಹೊರಗೂ ಸುದ್ದಿ ಬಿರುಗಾಳಿಯನ್ನೇ ಎಬ್ಬಿಸಿದ್ದಾರೆ. ಮುಖ್ಯವಾಗಿ ಹಿಂದಿನ ಅಧ್ಯಕ್ಷ ಬರಾಕ್ ಒಬಾಮಾ ನೇತೃತ್ವದ ಉದಾರವಾದಿಗಳ ಧರ್ಮನಿರಪೇಕ್ಷ ನೀತಿಗಳಿಂದ ಬಾಧಿತರಾಗಿದ್ದ ಸಂಪ್ರಾದಾಯವಾದಿ ಕ್ರಿಶ್ಚಿಯನ್ ಮತದಾರರ ಸಿಟ್ಟು ಒಂದು ಕಡೆ, ಜಾಗತೀಕರಣದ ವ್ಯಾಪಾರ ಒಪ್ಪಂದಗಳಿಂದ ತೀವ್ರ ನಿರುದ್ಯೋಗ ಮತ್ತು ಕಡಿಮೆ ಕೂಲಿ/ವೇತನಗಳ ಸುಳಿಗೆ ಸಿಕ್ಕಿದ್ದ ಕೆಳ ವರ್ಗಗಳ ಬಿಳಿ ಅಮೆರಿಕನ್ನರ ಕ್ರೋಧ ಇನ್ನೊಂದು ಕಡೆ. ಇವುಗಳನ್ನು ತನ್ನ ಅಬ್ಬರದ ಜನಪ್ರಿಯ ಮಾತುಗಾರಿಕೆಯ ಬಂಡವಾಳದ ಮೂಲಕ–ಇದು ಸುಶಿಕ್ಷಿತ ಅಮೆರಿಕನ್ ಜನತೆಯನ್ನು ಮರುಳು ಮಾಡದು ಎಂಬ ನಂಬಿಕೆಯನ್ನು ಹುಸಿಗೊಳಿಸಿ–ಚುನಾವಣೆಯಲ್ಲಿ ಟ್ರಂಪ್ ಗೆದ್ದೇ ಬಿಟ್ಟರು. ಇದಕ್ಕೆ ಚುನಾವಣೆಗೆ ಮುನ್ನ ಒಂದೊಂದಾಗಿ ಬಯಲಾಗುತ್ತಾ ಬಂದ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗಿದ್ದ ಹಿಲರಿ ಕ್ಲಿಂಟನ್‌ರ ಸುಳ್ಳು, ಕಪಟಗಳ ಭಾನಗಡಿಗಳೂ ಕಾರಣವಾಗಿದ್ದವು ಎಂದರೂ ತಪ್ಪಲ್ಲ. ಅಮೆರಿಕಾದ ಸಾಮಾನ್ಯ ಮತದಾರರು ಕೊನೆಯ ಗಳಿಗೆಯಲ್ಲಿ ಸೋಗಲಾಡಿ ಉದಾರವಾದಿಗಿಂತ ಒರಟಾದರೂ ನೇರ ಮಾತುಗಳ ಬಲಪಂಥೀಯನೇ ಆದೀತೆಂದು ನಿರ್ಧರಿಸಿದರೆಂದು ಕಾಣುತ್ತದೆ. ಭಾರತವೂ ಸೇರಿದಂತೆ ಜಗತ್ತಿನ ಎಲ್ಲ ಕಡೆ ಇತ್ತೀಚೆಗೆ ಬಲಪಂಥೀಯರು ಅಧಿಕಾರಕ್ಕೆ ಬರುತ್ತಿರುವುದೇ ಹೀಗೆ.

ಆದರೆ ಚುನಾವಣೆಗೆ ಮುನ್ನ ಎಂದೂ ಜಾರಿಗೊಳ್ಳಲಾಗದ ಹುಚ್ಚು ಬೆದರಿಕೆಯ ಮಾತುಗಳಂತೆ ಕಾಣುತ್ತಿದ್ದ ಮೆಕ್ಸಿಕೋದಿಂದ ವಲಸೆ ತಪ್ಪಿಸಲು ಎರಡೂ ದೇಶಗಳ ನಡುವೆ ಎತ್ತರದ ಗೋಡೆ ನಿರ್ಮಿಸುವ, ಮುಸ್ಲಿಂ ಬಹುಸಂಖ್ಯಾತ ದೇಶಗಳ ಜನರಿಗೆ ಅಮೆರಿಕಾ ಪ್ರವೇಶದ ತಡೆ, ಹೊರಗುತ್ತಿಗೆ ಸೇವೆಗಳಿಗೆ ಸಂಬಂಧಿಸಿದ ವೀಸಾಗಳ ಮೇಲೆ ನಿರ್ಬಂಧ ಇತ್ಯಾದಿಗಳಿಗೆ ಸಂಬಂಧಿಸಿದ ಟ್ರಂಪ್ ಅವರ ಮಾತುಗಳು ಅವರು ಅಧಿಕಾರ ಸ್ವೀಕರಿಸುತ್ತಿದ್ದಂತೆ ಅಧಿಕೃತ ನೀತಿಗಳಾಗಿ ಜಾರಿಗೆ ತರುತ್ತಿದ್ದಂತೆ ಜನ ಬೆಚ್ಚಿಬಿದ್ದು ಪ್ರತಿಭಟನೆಗಳನ್ನೂ ಆರಂಭಿಸಿದ್ದಾರೆ. ಅಮೆರಿಕಾದ ನ್ಯಾಯಾಂಗ ಕೂಡ ಟ್ರಂಪ್ ವಿರುದ್ಧ ತಿರುಗಿ ಬಿದ್ದಿದೆ. ಇದನ್ನೆಲ್ಲ ನಮ್ಮ ಬಹಳಷ್ಟು ರಾಜಕೀಯ ವಿಶ್ಲೇಷಕರು ಅಮೆರಿಕಾದ ಇತಿಹಾಸದಲ್ಲಿ ಇದೊಂದು ನಿರ್ಣಾಯಕ ಘಟ್ಟವೆಂದು ಬಣ್ಣಿಸುತ್ತಿದ್ದಾರೆ. ಆದರೆ ನಮ್ಮ ರಾಜಕೀಯ ವಿಶ್ಲೇಷಕ ಜಿ. ರಾಜಶೇಖರ್ ಇದೆಲ್ಲ ಮೇಲ್ಮೈ ಮಟ್ಟದ ಸುಲಭ ವಿಶ್ಲೇಷಣೆಗಳು ಎನ್ನುತ್ತಾರೆ.–ಸಂ.



ಖ್ಯಾತ ಚಿಂತಕ ಹಾಗೂ ಭಾಷಾಶಾಸ್ತ್ರಜ್ಞ ನೋಮ್ ಚೋಮ್ಸ್ಕಿ, ಅಮೇರಿಕದ ಸಾಮ್ರಾಜ್ಯಶಾಹಿ ಧೋರಣೆಗಳ ಕಟುವಿಮರ್ಶಕರಾಗಿರುವುದರ ಜೊತೆ, ಅದರ ವಿರುದ್ಧ ಪ್ರತಿಭಟನೆಯಲ್ಲೂ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಕಳೆದ ಶತಮಾನದ ೬೦ರ ದಶಕದಲ್ಲಿ ವಿಯೆಟ್ನಾಮ್ ಮೇಲೆ ಅಮೇರಿಕ ನಡೆಸಿದ ಆಕ್ರಮಣದ ವಿರುದ್ಧ ವಿದ್ಯಾರ್ಥಿಗಳನ್ನು ಸಂಘಟಿಸುವುದರಲ್ಲಿ ಚೋಮ್ಸ್ಕಿ ಬಹು ದೊಡ್ಡ ಪಾತ್ರವಹಿಸಿದ್ದರು. ಅಮೇರಿಕದ ವಿದೇಶಾಂಗ ನೀತಿಯನ್ನು ತಮ್ಮ ಇಳಿವಯಸ್ಸಿನಲ್ಲೂ ಪಾಂಡಿತ್ಯ ಪೂರ್ಣವಾಗಿ ವಿಶ್ಲೇಷಿಸುತ್ತಿರುವ ಚೋಮ್ಸ್ಕಿಯವರನ್ನು ಒಮ್ಮೆ ಒಬ್ಬ ಸಂದರ್ಶಕ, "ನೀವು ಅಮೇರಿಕದ ಅಧ್ಯಕ್ಷರಾಗಿದ್ದರೆ ನಿಮ್ಮ ಧೋರಣೆ ಹೇಗಿರುತ್ತಿತ್ತು?" ಎಂದು ಪ್ರಶ್ನಿಸಿದಾಗ ಚೋಮ್ಸ್ಕಿ "ಈಗಿನ ಅಧ್ಯಕ್ಷರ ಧೋರಣೆಯೇ ನನ್ನದೂ ಆಗಿರುತ್ತದೆ" ಎಂದು ಉತ್ತರಿಸಿದರು. ಅಮೇರಿಕದ ಚುನಾಯಿತ ಅಧ್ಯಕ್ಷ ಸಂಪೂರ್ಣ ಸ್ವಾತಂತ್ರ್ಯದಲ್ಲಿ ಏನನ್ನೂ ತೀರ್ಮಾನಿಸಲಾರ; ಆತ ಅಲ್ಲಿನ ವ್ಯವಸ್ಥೆಯನ್ನು ಮೀರಿ ನಡೆಯುವಂತಿಲ್ಲ. ಅಮೇರಿಕದ ಆಳುವ ವ್ಯವಸ್ಥೆಯನ್ನು ನಿಯಂತ್ರಿಸುವ ಪ್ರಬಲ ಹಿತಾಸಕ್ತಿಗಳು, ಅಲ್ಲಿನ ಚುನಾವಣೆಗಳ ಫಲಿತಾಂಶವನ್ನು ಸಹ ತಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸುತ್ತವೆ. ಹಾಗಾಗಿ ಅಮೇರಿಕದ ಪ್ರಜೆಗಳ ಪ್ರಜಾಸತ್ತಾತ್ಮಕ ಸ್ವಾತಂತ್ರ್ಯ ಕೇವಲ ಮರೀಚಿಕೆಯಾಗಿದೆ. ೧೯೫೩ – ೧೯೬೧ರ ಅವಧಿಯಲ್ಲಿ ಅಮೇರಿಕದ ಅಧ್ಯಕ್ಷರಾಗಿದ್ದ ಐಸೆನ್ ಹೋವರ್, ರಿಪಬ್ಲಿಕನ್ ಪಕ್ಷದವರಾದರೂ, ಆ ಸತ್ಯವನ್ನು ಮನಗಂಡು ಅಮೇರಿಕವನ್ನು ನಿಜಕ್ಕೂ ಆಳುತ್ತಿರುವುದು ಒಂದು ಬಲಿಷ್ಠ ಮಿಲಿಟರಿ ಉದ್ಯಮ ಒಕ್ಕೂಟ–"military industrial Complex" ಎಂದು ಉದ್ಗರಿಸಿದ್ದರು! ಅಮೇರಿಕದ ಈ ಮಿಲಿಟರಿ–ಉದ್ಯಮ ಒಕ್ಕೂಟದ ಜೊತೆ ಸರಕಾರದ ಧೋರಣೆಯನ್ನು ನಿರ್ಣಾಯಕವಾಗಿ ಪ್ರಭಾವಿಸುವಷ್ಟು ಬಲಶಾಲಿಯಾಗಿರುವ ಅಲ್ಲಿನ ಇಸ್ರೇಲ್ ಪರ ಲಾಬಿಯನ್ನೂ ಸಹ ಗಮನಿಸಬೇಕು. ತನ್ನ ಅಧಿಕಾರಾವಧಿಯ ಕೊನೆಯ ದಿನಗಳಲ್ಲಿ ಅಧ್ಯಕ್ಷ ಬರಾಕ್ ಒಬಾಮಾ ಈ ಲಾಬಿಯನ್ನು ಎದುರು ಹಾಕಿಕೊಂಡು, ಇಸ್ರೇಲ್, ಪ್ಯಾಲೆಸ್ತಿನ್‌ನ ಆಕ್ರಮಿತ ಪ್ರದೇಶ ಹಾಗೂ ವಿವಾದಿತ ಜೆರುಸಲೇಮ್ ನಗರದಲ್ಲಿ ಯಹೂದಿ ವಸತಿ ಬಡಾವಣೆಗಳ ನಿರ್ಮಾಣವನ್ನು ವಿರೋಧಿಸಿದ್ದರು. ಆದರೆ ಈ ವಿರೋಧ ಖಂಡನಾ ಹೇಳಿಕೆಗಳಿಗಿಂತ ಮುಂದೆ ಹೋಗಲಿಲ್ಲ. ೧೯೬೧ ರಿಂದ ೧೯೬೩ ನವೆಂಬರ್ ೨೨ರಂದು ಅವರ ಕೊಲೆಯಾಗುವವರೆಗೆ ಅಮೇರಿಕದ ಅಧ್ಯಕ್ಷರಾಗಿದ್ದ ಜಾನ್ ಕೆನೆಡಿ ಬಿಟ್ಟರೆ, ೨೦೦೯–೨೦೧೭ರ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಬರಾಕ್ ಒಬಾಮಾ ಅವರೇ ಅಮೇರಿಕ ಕಂಡ ಅತ್ಯಂತ ಸುಸಂಸ್ಕೃತನೂ, ಉದಾರವಾದಿಯೂ, ಮಾನವತಾವಾದಿಯೂ ಆದ ಅಧ್ಯಕ್ಷರು. ಆದರೆ ಕೆನೆಡಿ ಮತ್ತು ಒಬಾಮಾ ಕೂಡ ತಮ್ಮ ಆಡಳಿತಾತ್ಮಕ ನಿರ್ಧಾರಗಳ ಮಟ್ಟಿಗೆ, ಅಮೇರಿಕದ ವ್ಯವಸ್ಥೆಯನ್ನು ಧಿಕ್ಕರಿಸಿ ನಡೆಯುವಷ್ಟು ಸ್ವತಂತ್ರರಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಅಮೇರಿಕದ ಅಧ್ಯಕ್ಷ, ಆತ ಯಾವುದೇ ಪಕ್ಷದವನಾಗಿರಲಿ, ಒಬ್ಬ ಸ್ವತಂತ್ರ ವ್ಯಕ್ತಿಗಿಂತ ಹೆಚ್ಚಾಗಿ ಒಂದು ವಿದ್ಯಮಾನ, ಅಥವಾ ಇನ್ನೂ ಸರಿಯಾಗಿ ಹೇಳಬೇಕು ಎಂದರೆ ಒಂದು ಉಪಕರಣ.


ಅಮೇರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚುನಾವಣಾ ಪ್ರಚಾರದ ವೈಖರಿ ಮತ್ತು ಅಧಿಕಾರ ವಹಿಸಿಕೊಂಡ ನಂತರ ಅವರ ಕೆಲವು ನಿರ್ಧಾರಗಳು, ಅಮೇರಿಕದ ಮಾತ್ರವಲ್ಲ ಜಗತ್ತಿನಾದ್ಯಂತ ಟೀಕೆಗೊಳಗಾಗಿವೆ. ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ಒಂದೆರಡು ದಿನಗಳಲ್ಲೇ, ಟ್ರಂಪ್, ಇರಾನ್, ಇರಾಕ್, ಲಿಬಿಯಾ, ಸೊಮಾಲಿಯಾ, ಸುಡಾನ್, ಯೆಮೆನ್ ಹಾಗೂ ಸಿರಿಯ ದೇಶಗಳ ಪ್ರಜೆಗಳಿಗೆ ಅಮೇರಿಕದೊಳಗೆ ಪ್ರವೇಶ ನಿರ್ಬಂಧಿಸಿದರು. ಸಿರಿಯಾದ ನಿರಾಶ್ರಿತರಿಗೆ ಅಮೇರಿಕದೊಳಗೆ, ಅನಿರ್ದಿಷ್ಟಾವಧಿಯವರೆಗೂ ಪ್ರವೇಶ ನಿರಾಕರಿಸಲಾಯಿತು. ಟ್ರಂಪ್ ಅವರ ಈ ನಿರ್ಧಾರಗಳಿಗೆ ಅಮೇರಿಕದ ನ್ಯಾಯಾಲಯಗಳು ತಡೆಯಾಜ್ಞೆ ನೀಡಿದವು; ದೇಶದ ಅಟಾರ್ನಿ ಜನರಲ್ ಸ್ಯಾಲಿಯೇಟ್ಸ್ ತನ್ನ ಹುದ್ದೆಗೆ ರಾಜೀನಾಮೆ ನೀಡಿದರು. ಟ್ರಂಪ್ ಅವರ ನಿರ್ಧಾರ ಅತಿರೇಕದ್ದು ನಿಜ; ಆದರೆ ಅದು ಹೇಳುವಷ್ಟು ತಲೆತಿರುಕತನದ್ದಲ್ಲ; ಟ್ರಂಪ್ ಪ್ರವೇಶ ನಿಷೇಧಿಸಿದ ದೇಶಗಳೆಲ್ಲವೂ ಮುಸ್ಲಿಂ ಬಹುಸಂಖ್ಯಾತ ಪ್ರಜೆಗಳ

ರಾಷ್ಟ್ರಗಳಾಗಿದ್ದು, ಸಾರಾಸಗಟಾಗಿ ಮುಸ್ಲಿಮರೆಲ್ಲರನ್ನೂ ಶಂಕಿತ ಭಯೋತ್ಪಾದಕರು ಎಂದು ಭಾವಿಸುವುದು ಖಂಡಿತ ಟ್ರಂಪ್ ಹುಟ್ಟು ಹಾಕಿದ ಪ್ರವೃತ್ತಿ ಅಲ್ಲ. ಇರಾಕ್ ಮತ್ತು ಲಿಬಿಯಾಗಳ ಮೇಲೆ ಆಕ್ರಮಣ ನಡೆಸಿ, ಅಲ್ಲಿನ ಸರಕಾರಗಳನ್ನು ಉರುಳಿಸಿ ಆ ರಾಷ್ಟ್ರಗಳಲ್ಲಿ ನಿರಂತರ ಪ್ರಕ್ಷೋಭೆಗೆ ಕಾರಣವಾದದ್ದು ಟ್ರಂಪ್ ಅಲ್ಲ. ಸಿರಿಯಾದ ಅಧ್ಯಕ್ಷ ತನ್ನ ಪ್ರಭಾವ ವಲಯದಿಂದ ಹೊರಗಿದ್ದು ಇರಾನ್ ಜೊತೆಗಿದ್ದಾರೆ ಎಂಬ ಕಾರಣಕ್ಕೆ ಆ ರಾಷ್ಟ್ರದ ಬಂಡುಕೋರರಿಗೆ ನೆರವು ನೀಡಿ, ಅಲ್ಲಿ ಅಂತರ್ಯುದ್ಧಕ್ಕೆ ಚಾಲನೆ ಕೊಟ್ಟದ್ದು ಟ್ರಂಪ್ ಅಲ್ಲ. ಕರಾಳ ಐ.ಎಸ್.ಐ. ಟ್ರಂಪ್ ಕೊಡುಗೆ ಅಲ್ಲ. ವಾಸ್ತವವಾಗಿ ಪಶ್ಚಿಮ ಏಷ್ಯದ ಮುಸ್ಲಿಮ್ ರಾಷ್ಟ್ರಗಳಲ್ಲಿ ಅಪಾರ ಪ್ರಮಾಣದಲ್ಲಿ ತೈಲ ನಿಕ್ಷೇಪಗಳು ಪತ್ತೆಯಾದಂದಿನಿಂದ, ಮೊದಲು ಪ.ಯುರೋಪ್; ನಂತರ ಅಮೇರಿಕದ ಸಾಮ್ರಾಜ್ಯಶಾಹಿ, ಆ ರಾಷ್ಟ್ರಗಳ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುತ್ತಿವೆ. ೧೯೪೮ರಲ್ಲಿ ಪಶ್ಚಿಮ ಏಷ್ಯದ ಪ್ಯಾಲೆಸ್ತೀನ್‌ನಲ್ಲಿ ಸಾವಿರಾರು ವರ್ಷಗಳಿಂದ ನೆಲೆಸಿದ್ದ ಅರಬ್ ಪ್ರಜೆಗಳನ್ನು ಬಲಾತ್ಕಾರದಲ್ಲಿ ಒಕ್ಕಲೆಬ್ಬಿಸಿ ಆ ನೆಲದಲ್ಲಿ ಇಸ್ರೇಲ್ ಎಂಬ ಯಹೂದಿ ರಾಷ್ಟ್ರ ಸ್ಥಾಪನೆಯಲ್ಲಿ ಪ. ಯುರೋಪ್ ಮತ್ತು ಅಮೇರಿಕ ಪ್ರಧಾನ ಪಾತ್ರವಹಿಸಿದ್ದವು. ಅಂದಿನಿಂದ ಇಂದಿನವರೆಗೆ ಇಸ್ರೇಲ್ ಪ್ಯಾಲೆಸ್ತೀನ್‌ನ ಅರಬ್ ಪ್ರಜೆಗಳನ್ನು ತಮ್ಮ ಊರು ಕೇರಿಗಳಿಂದ ತೆರವುಗೊಳಿಸಿ, ಯಹೂದಿಗಳನ್ನು ಅಲ್ಲಿ ನೆಲೆಗೊಳಿಸುವ, ತನ್ನ ದಬ್ಬಾಳಿಕೆಯನ್ನು ಮುಂದುವರಿಸಿದೆ. ಅಮೇರಿಕ, ಇಸ್ರೇಲ್‌ಗೆ ಅಪಾರವಾದ ಮಿಲಿಟರಿ ಶಸ್ತ್ರಾಸ್ತ್ರ ಹಾಗೂ ಆರ್ಥಿಕ ನೆರವು ನೀಡುವುದರ ಜೊತೆ, ಆ ರಾಷ್ಟ್ರದ ದಮನ, ದುಂಡಾವೃತ್ತಿಗಳನ್ನು ನಿರಂತರವಾಗಿ ಬೆಂಬಲಿಸುತ್ತ ಬಂದಿದೆ. ೨೦೦೧ರ ಸೆಪ್ಟೆಂಬರ್ ೧೧ರಂದು ಅಮೇರಿಕದ ನ್ಯೂಯಾರ್ಕ್ ನಗರದ ವಾಣಿಜ್ಯ ಕೇಂದ್ರದ ಮೇಲೆ ನಡೆದ ವೈಮಾನಿಕ ದಾಳಿಯನ್ನು ನೆವವಾಗಿಸಿಕೊಂಡು ಅಮೇರಿಕ ಅಫ್ಘಾನಿಸ್ತಾನದ ಮೇಲೆ ಹಠಾತ್ತನೆ ಯುದ್ಧ ಸಾರಿ, ಸುಮಾರು ೨೬೦೦೦ ನಾಗರಿಕರ ಸಾವಿಗೆ ಕಾರಣವಾಯಿತು. ಆ ಯುದ್ಧದ ಬೆನ್ನಿಗೇ, ಇರಾಕ್ ಸಮೂಹ ನಾಶದ ಶಸ್ತ್ರಾಸ್ತ್ರಗಳನ್ನು ಹೊಂದಿದೆ ಎಂಬ ಹಸಿ ಸುಳ್ಳನ್ನು ಮುಂದಿಟ್ಟುಕೊಂಡು, ಬ್ರಿಟನ್, ಫ್ರಾನ್ಸ್, ಜರ್ಮನಿಗಳ ನೆರವಿನೊಂದಿಗೆ ಅಮೇರಿಕ ಇರಾಕ್ ಮೇಲೆ ದಾಳಿ ನಡೆಸಿ, ಹತ್ತಿರ ಹತ್ತಿರ ೨ ಲಕ್ಷ ಇರಾಕಿ ಪ್ರಜೆಗಳನ್ನು ಕೊಂದು ಹಾಕಿತು. ಅದಕ್ಕೂ ಮುನ್ನ ೧೯೯೧ರಲ್ಲಿ ರಿಪಬ್ಲಿಕನ್ ಪಕ್ಷದ ಜಾರ್ಜ್ ಬುಷ್ (ಸೀನಿಯರ್) ಅವರ ಅಧಿಕಾರಾವಧಿಯಲ್ಲಿ ಇರಾಕ್, ಕುವೈಟ್ ಎಂಬ ಪುಟ್ಟ ಗಲ್ಫ್ ದೇಶದವನ್ನು ಆಕ್ರಮಿಸಿತು ಎಂಬ ಕ್ಷುಲ್ಲಕ ಕಾರಣಕ್ಕೆ ಅಮೇರಿಕ ಇರಾಕ್ ಮೇಲೆ ಭಾರೀ ಪ್ರಮಾಣದ ವೈಮಾನಿಕ ದಾಳಿ ಪ್ರಾರಂಭಿಸಿತು. (ಕುವೈಟ್ ನೂತನವಾಗಿ ಅಸ್ತಿತ್ವಕ್ಕೆ ಬಂದ ರಾಷ್ಟ್ರವಾಗಿದ್ದು ಅದಕ್ಕೆ ಮೊದಲು, ಅದು ಇರಾಕ್‌ನ ಭಾಗವೇ ಆಗಿತ್ತು.) ಜಾರ್ಜ್ ಬುಷ್‌ನ ನಂತರ ಅಮೇರಿಕದ ಅಧ್ಯಕ್ಷರಾಗಿ ಆಯ್ಕೆಗೊಂಡ ಡೆಮಾಕ್ರೆಟಿಕ್ ಪಕ್ಷದ ಬಿಲ್ ಕ್ಲಿಂಟನ್‌ನ ಅಧಿಕಾರಾವಧಿಗೂ ಮುಂದುವರಿದ ಈ ದಾಳಿ, ಹಾಗೂ ಇರಾಕ್ ವಿರುದ್ಧ ಅಮೇರಿಕ ವಿಧಿಸಿದ ವಾಣಿಜ್ಯ ನಿಷೇಧದಿಂದಾಗಿ ಸುಮಾರು ೫ ಲಕ್ಷ ಮಕ್ಕಳು ಸೂಕ್ತ ಔಷಧಗಳು ಲಭ್ಯವಾಗದೆ ಇರಾಕ್‌ನಲ್ಲಿ ಪ್ರಾಣ ಕಳೆದು ಕೊಂಡವು. ಬಿಲ್ ಕ್ಲಿಂಟನ್‌ನ ವಿದೇಶಾಂಗ ಕಾರ್ಯದರ್ಶಿ ಮ್ಯಾಡೆಲಿನ್ ಆಲ್‌ಬ್ರೈಟ್, ಈ ಸಾವು ನೋವುಗಳನ್ನು ಯುದ್ಧದ 'ಅನಿವಾರ್ಯ ನಷ್ಟ'–Collateral damage ಎಂದು ವಿವರಿಸಿದರು. ಎಲ್ಲಾ ರಾಷ್ಟ್ರ ಪ್ರಭುತ್ವಗಳೂ, ತಾವು ನಡೆಸುವ ನಾಗರಿಕರ ನರಹತ್ಯೆಯನ್ನು ಸಮರ್ಥಿಸುವುದೇ ಹಾಗೆ!

ಅಮೇರಿಕದ 'ಸಾಮಾಜಿಕ ಜವಾಬ್ದಾರಿಯ ವೈದ್ಯರ ಸಂಘಟನೆ'ಯ ಒಂದು ವರದಿ ಪ್ರಕಾರ, ೯/೧೧ರ ದಾಳಿಯ ನಂತರ, ೨೦೦೩ರಿಂದ ೨೦೧೫ರವರೆಗೆ, ಅಮೇರಿಕ ಇರಾಕ್‌ನಲ್ಲಿ ೧೦ ಲಕ್ಷ, ಅಫ್ಘಾನಿಸ್ತಾನದಲ್ಲಿ ೨,೨೦,೦೦೦ ಹಾಗೂ ಪಾಕಿಸ್ತಾನದಲ್ಲಿ ೪,೮೦,೦೦೦ ನಾಗರಿಕರನ್ನು ಕೊಂದಿದೆ. ಅಮೇರಿಕದ ಹಸ್ತಕ್ಷೇಪದಿಂದ ಸಿರಿಯಾದಲ್ಲಿ ಮುಂದುವರೆದಿರುವ ಅಂತರ್ಯುದ್ಧದಲ್ಲಿ ಇದುವರೆಗೆ ೨,೫೦,೦೦೦ ಪ್ರಜೆಗಳು ಸಾವಿಗೀಡಾಗಿದ್ದು ಆ ಸಂಖ್ಯೆಯ ಹಲವು ಪಟ್ಟು ಜನ, ನಿರಾಶ್ರಿತರಾಗಿದ್ದಾರೆ. ಬಿಲ್ ಕ್ಲಿಂಟನ್ ನಂತರ ಅಮೇರಿಕದ ಅಧ್ಯಕ್ಷನಾದ ರಿಪಬ್ಲಿಕನ್ ಪಕ್ಷದ ಜಾರ್ಜ್ ಬುಷ್(ಜ್ಯೂನಿಯರ್)ನ ರಕ್ಷಣಾ ಕಾರ್ಯದರ್ಶಿ ಡೊನಾಲ್ಡ್ ರಮ್ಸ್‌ಫೆಲ್ಡ್ ಇರಾಕ್‌ನಲ್ಲಿ ಸಾವಿಗೀಡಾದ ಅಮೇರಿಕದ ಸೈನಿಕರ ಸಾವಿನ ಸಂಖ್ಯೆಯನ್ನು ಪತ್ರಕರ್ತರಿಗೆ ನೀಡುವ ಸಂದರ್ಭದಲ್ಲಿ ಅಲ್ಲಿನ ನಾಗರಿಕರ ಸಾವು ನೋವಿನ ಕುರಿತು, ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಅದು ತೀರ ಸಹಜವೆಂಬಂತೆ, "ನಾವು ಸತ್ತ ಇರಾಕಿಗಳ ತಲೆ ಲೆಕ್ಕ ಮಾಡುವುದಿಲ್ಲ –we do not count the Iraqi dead" ಎಂದು ಉತ್ತರಿಸಿದರು! ವಾಸ್ತವವಾಗಿ ಅಮೇರಿಕ ಯುದ್ಧದಲ್ಲಿ ಸತ್ತ ಇರಾಕಿ ಪ್ರಜೆಗಳು ಮಾತ್ರವಲ್ಲ, ಅದು ಮಿಲಿಟರಿ ಹಸ್ತಕ್ಷೇಪ ನಡೆಸಿದ ಏಷ್ಯ, ಆಫ್ರಿಕ ಮತ್ತು ದಕ್ಷಿಣ ಅಮೇರಿಕ ಖಂಡದ ಯಾವ ದೇಶದಲ್ಲೂ ಸತ್ತ ನಾಗರಿಕರ ತಲೆ ಲೆಕ್ಕವನ್ನು ಇಟ್ಟಿಲ್ಲ. ೧೯೫೪ರಿಂದ ೧೯೭೫ರವರೆಗೆ ವಿಯೆಟ್ನಾಮ್ ವಿರುದ್ಧ ಅದು ನಡೆಸಿದ ಯುದ್ಧದಲ್ಲಿ ೫೮,೦೦೦ ಅಮೇರಿಕನ್ ಸೈನಿಕರು ಸಾವಿಗೀಡಾದರು. ಆದರೆ ಯುದ್ಧದಲ್ಲಿ ಪ್ರಾಣ ಕಳೆದುಕೊಂಡ ವಿಯೆಟ್ನಾಮ್ ನಾಗರಿಕರ ಸಂಖ್ಯೆ ಎಷ್ಟು? ಒಂದು ಅಂದಾಜಿನಂತೆ ಆ ಸಂಖ್ಯೆ ೩೦ ಲಕ್ಷವನ್ನೂ ಮೀರುತ್ತದೆ! ೧೯೭೩ರಲ್ಲಿ ದ.ಅಮೇರಿಕದ ಚಿಲಿ ದೇಶದ ಚುನಾಯಿತ ಸಮಾಜವಾದಿ ಕಮ್ಯೂನಿಸ್ಟ್ ಒಕ್ಕೂಟದ ಸರಕಾರವನ್ನು ಅಮೇರಿಕ ಚಿಲಿಯ ಸೈನ್ಯದ ಜೊತೆ ಶಾಮೀಲಾಗಿ ಉರುಳಿಸಿ, ಅಧ್ಯಕ್ಷ ಸಾಲ್ವೆಡೋರ್ ಅಲೆಂಡೆಯನ್ನು ಕೊಲ್ಲಿಸುವುದರ ಜೊತೆಗೆ ಚಿಲಿಯ ೪೦,೦೦೦ ನಾಗರಿಕರ ಕಗ್ಗೊಲೆಗೂ ಕಾರಣವಾಯಿತು.

ಅಮೇರಿಕ ಇದು ಯಾವುದರ ಬಗ್ಗೆಯೂ ಎಂದೂ ತಲೆ ಕೆಡಿಸಿಕೊಂಡಿಲ್ಲ. ಟ್ರಂಪ್ ಒಬ್ಬ ಅತಿವಾದಿ, ಮತ್ತು ಮಹಾ ಸುಳ್ಳ, ನಿಜ; ತಾನು ಹೇಳಿದ ಸುಳ್ಳನ್ನೇ ಮತ್ತೆ ಮತ್ತೆ ಹೇಳುವುದರ ಜೊತೆ, ಅವನ ಹಿಂಬಾಲಕರೂ ಅದನ್ನೇ ತಿರುತಿರುಗಿ ಹೇಳುತ್ತ ಸುಳ್ಳನ್ನೇ 'ಸತ್ಯ'ವೆಂದು ನಂಬಿಸಬಲ್ಲವರು. ಡೊನಾಲ್ಡ್ ಟ್ರಂಪ್, ಜಗತ್ತಿಗೆ 'ಸತ್ಯೋತ್ತರ ಯುಗ'ದ ಕೊಡುಗೆ! ಆದರೆ ಟ್ರಂಪ್‌ನನ್ನು ಹೀಗೆಳೆಯುವ ಭರದಲ್ಲಿ ಅಮೇರಿಕದಲ್ಲಿ ಅವರಿಗಿಂತ ಮೊದಲು ಅಧಿಕಾರ ನಿರ್ವಹಿಸಿದ ಅಧ್ಯಕ್ಷರುಗಳ ಪಾಪಕೃತ್ಯಗಳನ್ನು ನಾವು ಮರೆಯಕೂಡದು. ಇರಾಕ್ ಬಳಿ ಸಮೂಹನಾಶದ ಶಸ್ತ್ರಾಸ್ತ್ರಗಳಿವೆ ಎಂಬ ಸುಳ್ಳನ್ನು ದೇಶದ ಒಳಗೆ, ಹೊರಗೆ ಕೊನೆಗೆ ವಿಶ್ವರಾಷ್ಟ್ರ ಸಂಸ್ಥೆಯ ಸಮ್ಮುಖದಲ್ಲಿ ಕೂಡ ಎಗ್ಗಿಲ್ಲದೆ ಹೇಳಿ, ಇರಾಕ್ ವಿರುದ್ಧ ಆಕ್ರಮಣ ನಡೆಸುವುದು ಟ್ರಂಪ್‌ನಂತಹ ಟ್ರಂಪ್‌ಗೆ ಕೂಡ ದಗಾಖೋರತನದಲ್ಲಿ ಕೆಲವು ಪಾಠಗಳನ್ನು ಕಲಿಸಬಹುದು! ಆಳುವ ಸರಕಾರದ 'ಅಪೇಕ್ಷೆಗೆ ಅನುಗುಣವಾಗಿ ಸುಳ್ಳು ಹೊಸೆಯುವ ಮಾಧ್ಯಮಗಳ ಎಂಬೆಡ್ಡೆಡ್ ಪತ್ರಿಕೋದ್ಯಮವೂ ಉದ್ಘಾಟನೆಗೊಂಡದ್ದು ಇರಾಕ್ ಯುದ್ಧದ ಸಂದರ್ಭದಲ್ಲಿಯೇ. ಕೊನೆಗೂ ಗೆಲ್ಲುವುದು ಸತ್ಯವೇ ಎಂದು ಗಾಂಧೀಜಿ ಮುಗ್ಧವಾಗಿ ನಂಬಿದ್ದರು. ಆದರೆ ತಲೆ ಕೆಳಗಾದ ಜಗತ್ತಿನಲ್ಲಿ ಕೊನೆಗೂ ಗೆದ್ದದ್ದೇ ಸತ್ಯವಾಗುತ್ತದೆ ಎಂಬುದಕ್ಕೆ ಅಮೇರಿಕದ ಮಾಧ್ಯಮ ಒಂದು ನಿದರ್ಶನ! ಹೇಗಿದ್ದರೂ ಅಮೇರಿಕ 'ಹಿರಿಯಣ್ಣ'ನಾಗಿರುವ ಜಗತ್ತಿನಲ್ಲಿ 'ಗೆದ್ದವರ ನ್ಯಾಯ' (Victor's Justice) ಬಹು ಕಾಲದಿಂದ ಚಾಲ್ತಿಯಲ್ಲಿದೆ. ಈಗ 'ಗೆದ್ದವರ ಸತ್ಯ', 'ಗೆದ್ದವರ ನ್ಯಾಯ'ವನ್ನು ಹಿಂಬಾಲಿಸಿದೆ! ವಸ್ತು ಸ್ಥಿತಿ ಹೀಗಿರುತ್ತ ಟ್ರಂಪ್‌ನ ಅತಿರೇಕವನ್ನು ಖಂಡಿಸುವ ಅಮೇರಿಕದ ಲಿಬರಲ್ ಮಾಧ್ಯಮಗಳ ನಿಲುವು ಸೋಗಲಾಡಿತನವಲ್ಲದೆ ಮತ್ತೇನು?

ಅಮೇರಿಕ ಮತ್ತು ಪ.ಯುರೋಪ್‌ನ ರಾಷ್ಟ್ರಗಳು ಈಗಾಗಲೇ ಪಶ್ಚಿಮ ಏಷ್ಯದ ದೇಶಗಳ ನಿರಾಶ್ರಿತರಿಗೆ ಪ್ರವೇಶ ನಿರ್ಬಂಧಿಸಿದೆ; ಮತ್ತು ತಮ್ಮ ಅಮಾನುಷತೆಯನ್ನು ಸೋಗಲಾಡಿತನದಲ್ಲಿ ಮರೆ ಮಾಚುತ್ತಿವೆ. ಆದರೆ ಮಹಾ ಒರಟನಾದ ಡೊನಾಲ್ಡ್ ಟ್ರಂಪ್ ನಿರಾಶ್ರಿತರ ಬಗೆಗಿನ ತನ್ನ ದ್ವೇಷ ತಿರಸ್ಕಾರಗಳನ್ನು ಮುಚ್ಚುಮರೆ ಮಾಡುತ್ತಿಲ್ಲ. ಟ್ರಂಪ್ ಜೊತೆಗೆ ಹೋಲಿಸಿದರೆ ಸಭ್ಯನಾಗಿರುವ ಬರಾಕ್ ಒಬಾಮಾ ಅವರ ಅಧಿಕಾರಾವಧಿಯ ೨೦೧೫ರ ಒಂದು ವರ್ಷದಲ್ಲಿ ಅಮೇರಿಕದ ರಕ್ಷಣಾ ಇಲಾಖೆಯೇ ಬಹಿರಂಗಪಡಿಸಿದ ಮಾಹಿತಿ ಪ್ರಕಾರ, ಪ. ಏಷ್ಯದಲ್ಲಿ ಅಮೇರಿಕ ೨೬೧೭೧ ಬಾಂಬ್‌ಗಳನ್ನು ಸಿಡಿಸಿತ್ತು. ಅಂದರೆ ಪ್ರತಿ ಗಂಟೆಗೆ ಮೂರು ಬಾಂಬ್! ಟ್ರಂಪ್ ಅವರನ್ನು ನಾವು ವಿರೋಧಿಸಬೇಕಾಗಿರುವುದು, ಅವರು ಸ್ವಭಾವತಃ ಯುದ್ಧಖೋರ ಎಂಬ ಕಾರಣಕ್ಕೋ ಅಥವಾ ಅವರು ಒಬಾಮಾರಂತೆ ಸಭ್ಯರಲ್ಲ ಎಂದೋ? ಟ್ರಂಪ್ ಒರಟ ನಿಜ; ಆದರೆ ಅಮೇರಿಕದ ವ್ಯವಸ್ಥೆ ಬರುವ ದಿನಗಳಲ್ಲಿ ತನ್ನ ಅಗತ್ಯಕ್ಕೆ ತಕ್ಕಂತೆ ಟ್ರಂಪ್ ಅವರನ್ನು ಪಳಗಿಸಬಹುದು. ಅದು ಹೇಗೂ ಇರಲಿ, ಅಮೇರಿಕ ಜಗತ್ತಿನ ಮೇಲೆ ಕಣ್ಗಾವಲು ಇಟ್ಟು ನಿಯಂತ್ರಿಸುವ 'ಹಿರಿಯಣ್ಣ'ನಾಗಿ ಮುಂದುವರಿಯು ವು –ದಂತೂ ನಿಶ್ಚಯ. ಹಾಗಾಗಿ ಟ್ರಂಪ್ ವಿರುದ್ಧ ಅಮೇರಿಕದಲ್ಲಿ ಈಗ ತಲೆದೋರಿರುವ ನಾಗರಿಕ ಪ್ರತಿರೋಧದ ಬಗ್ಗೆ ನಾವು ಆಶೆ ಇಟ್ಟುಕೊಳ್ಳಲು ಕಾರಣವೇ ಇಲ್ಲ!



(ಉಡುಪಿಯ ಜಿ. ರಾಜಶೇಖರ್ ನಮ್ಮ ನಡುವಿನ ತೀಕ್ಷ್ಣಮತಿಯ ರಾಜಕೀಯ ವಿಶ್ಲೇಷಕರಲ್ಲೊಬ್ಬರು)

ವಿಶೇಷ ಲೇಖನ-೧


ಮಾನವ ಕೇಂದ್ರಿತ ಯುಗದ ದುರಂತಗಳು

ಮೂಲ ಇಂಗ್ಲಿಷ್: ಸಮರ್ ಬಾಗ್ಚಿ
ಕನ್ನಡಕ್ಕೆ: ಟಿ.ಎಲ್. ರೇಖಾಂಬ

೧೯೪೫ರ ಅಕ್ಟೋಬರ್ ೯ ರಂದು ಪಂಡಿತ್ ನೆಹರೂ ಅವರು ಗಾಂಧೀಜಿಗೆ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ: " ನೀವು 'ಹಿಂದ್ ಸ್ವರಾಜ್' ಬರೆದು ೩೬ ವರ್ಷಗಳಾದವು. ಈ ನಡುವೆ ಜಗತ್ತು ಸಂಪೂರ್ಣವಾಗಿ ಬದಲಾಗಿಹೋಗಿದೆ, ಬಹುಶಃ ತಪ್ಪುದಾರಿಯಲ್ಲಿ.... ಇಡೀ ಜಗತ್ತು ಅಥವಾ ಅದರ ಬಹುದೊಡ್ಡ ಭಾಗ ಆತ್ಮಹತ್ಯೆ ಮಾಡಿಕೊಳ್ಳಲು ಸಜ್ಜಾಗಿರುವಂತೆ ಕಾಣುತ್ತಿದೆ ಎಂದು ನೀವು ಹೇಳುತ್ತಿರುವುದು ಸರಿಯಾಗಿಯೇ ಇದೆ. ನಾಗರಿಕತೆಯಲ್ಲಿ ಬಿತ್ತಿದ್ದ ಕೇಡಿನ ಬೀಜವೊಂದು ಬೆಳೆದು ನಿಂತಿರುವುದು ಅನಿವಾರ್ಯ ವಿದ್ಯಮಾನವಾಗಿರಬಹುದು". ಪಶ್ಚಿಮದ ಅಭಿವೃದ್ಧಿ ಮಾದರಿಯು ತಪ್ಪುದಾರಿಯಲ್ಲಿ ನಡೆಯುತ್ತಿದೆ, ಆತ್ಮಹತ್ಯೆಯ ಸನ್ನಾಹದಲ್ಲಿದೆ, ಅದೊಂದು ಕೇಡಿನ ಬೀಜ ಎಂಬುದು ಗೊತ್ತಿದ್ದರೂ ನಾವು ಅದರ ವಿಷವನ್ನು ಕುಡಿದಿದ್ದೇವೆ. ಈಗ ನಾವಿರುವ ಭಾರತವೆಂದರೆ, ತೀವ್ರ ಹಸಿವಿನಲ್ಲಿ ಬದುಕುವ ಜನರಿರುವ, ಪ್ರತಿ ೩ ಸೆಕೆಂಡಿಗೊಂದು ಮಗು ಅಪೌಷ್ಟಿಕತೆಯಿಂದ ಸಾಯುವ, ಈ ಹತ್ತು ವರ್ಷಗಳಲ್ಲಿ ಸುಮಾರು ೧ ಮಿಲಿಯನ್ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ದೇಶ.

ಈಗ ನಾವು ಜೀವಿಸುತ್ತಿರುವ ಭೂವೈಜ್ಞಾನಿಕ ಯುಗವನ್ನು ಹಾಲೋಸೀನ್ ಯುಗವೆಂದು ಕರೆಯುತ್ತಾರೆ. ಇದು ಆರಂಭವಾದದ್ದು ೧೨,೦೦೦ ವರ್ಷಗಳ ಹಿಂದೆ, ಈ ಮುಂಚಿನ ಹಿಮಯುಗ ಕೊನೆಗೊಂಡಾಗ. ಸುಮಾರು ೧೦,೦೦೦ ವರ್ಷಗಳ ಹಿಂದಿನಿಂದ ಈ ಭೂಮಿಯ ಮೇಲೆ ಮಾನವ ನಾಗರಿಕತೆಯು ಬೆಳೆಯುತ್ತಾ ಬಂದಿದೆ. ಅಲ್ಲಿಂದೀಚೆಗೆ ಸುಮಾರು ೧೮ ಮತ್ತು ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಕೈಗಾರಿಕಾ ಕ್ರಾಂತಿ ಆಯಿತು. ಆ ನಂತರ ಮಾನವ ಸಮಾಜದಲ್ಲಿ ಎರಡು ಪ್ರಮುಖ ಬದಲಾವಣೆಗಳಾದವು. ೧೮೩೦ರಲ್ಲಿ ಕೈಗಾರಿಕಾ ಕ್ರಾಂತಿಯು ಕೊನೆಗೊಳ್ಳುವಾಗ ಇದ್ದ ವಿಶ್ವ ಜನಸಂಖ್ಯೆ ಕೇವಲ ೧೦೦೦ ಮಿಲಿಯನ್. ೨೦೦೦ನೇ ಇಸವಿಯ ಹೊತ್ತಿಗೆ ಅದು ೬೦೦೦ ಮಿಲಿಯನ್ ದಾಟಿತು. ನಮ್ಮಂಥಾ ಮಾನವರು(ಉದ್ದ ತಲೆಯ ಎತ್ತರದ ನಿಲುವಿನ ಶಿಲಾಯುಗದ ಮಾನವರು), ಈ ಭೂಮಿಗೆ ಬಂದದ್ದು ಸುಮಾರು ೪೦-೫೦ ಸಾವಿರ ವರ್ಷಗಳ ಹಿಂದೆ. ಮಾನವವಿಕಾಸದ ಹಾದಿಯಲ್ಲಿ ವಿಶ್ವ ಜನಸಂಖ್ಯೆ ೧೦೦೦ ಮಿಲಿಯನ್ ಮುಟ್ಟಲು ಸಾವಿರಾರು ವರ್ಷಗಳು ಬೇಕಾದವು. ಆದರೆ ಈ ಕೈಗಾರಿಕಾ ಕ್ರಾಂತಿಯು ಮನುಷ್ಯನ ಕೈಗೆ ಎಷ್ಟೊಂದು ಉತ್ಪಾದನಾ ಶಕ್ತಿಯನ್ನು ಕೊಟ್ಟಿತೆಂದರೆ, ಕೇವಲ ಈ ೧೭೦ ವರ್ಷಗಳಲ್ಲಿ ೫೦೦೦ ಮಿಲಿಯನ್‌ಗಳಷ್ಟು ಹೆಚ್ಚಿನ ಜನರನ್ನು ಅದು ಈ ಭೂಮಿಗೆ ತಂದುಬಿಟ್ಟಿತು! ಪ್ರಕೃತಿಯಿಂದ ಮರ, ನೀರು, ಖನಿಜ ಇತ್ಯಾದಿಗಳ ಬೇಡಿಕೆಯು, ವಿಶೇಷವಾಗಿ ೧೯೫೦ರ ನಂತರ, ತೀವ್ರವಾಗಿ ಹೆಚ್ಚಾಗುತ್ತಾ ಹೋಯಿತು.

ಮನುಷ್ಯರೇ ಈ ಭೂಮಿಯ ಒಡೆಯರು ಎಂಬುದು ಒಂದು ಯಹೂದೀ ಕ್ರಿಶ್ಚಿಯನ್ ಲೋಕದೃಷ್ಟಿ. ಬೈಬಲ್‌ನ ಹಳೆಯ ಒಡಂಬಡಿಕೆಯ ಸೃಷ್ಟಿಪರ್ವದಲ್ಲಿ ಈ ರೀತಿ ಹೇಳಲ್ಪಟ್ಟಿದೆ: "ದೇವರು ಅವರಿಗೆ ಆಜ್ಞಾಪಿಸಿದರು; ಸಂತಾನಶೀಲರಾಗಿರಿ ಮತ್ತು ಮನುಕುಲವನ್ನು ಬೆಳೆಸಿರಿ. ಭೂಮಿಯನ್ನು ಪುನರ್ನವೀಕರಿಸಿ, ಅಧೀನದಲ್ಲಿಟ್ಟುಕೊಳ್ಳಿರಿ. ನೀರಿನಲ್ಲಿರುವ ಮೀನುಗಳು, ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಮತ್ತು ಈ ಭೂಮಿಯ ಮೇಲಿನ ಎಲ್ಲ ಜೀವದ್ರವ್ಯಗಳ ಮೇಲೆ ನಿಯಂತ್ರಣವನ್ನು ಹೊಂದಿರಿ." ೧೬-೧೮ ನೆಯ ಶತಮಾನಗಳ ನಡುವೆ ಆದ ವೈಜ್ಞಾನಿಕ ಕ್ರಾಂತಿಯ ಸಮಯದಲ್ಲಿ, ವಿಜ್ಞಾನದ ತತ್ವಶಾಸ್ತ್ರವನ್ನು ಜಗತ್ತಿಗೆ ನೀಡಿದವರು, ಇಂಗ್ಲೆಂಡ್‌ನ ತತ್ವಜ್ಞಾನಿ ಫ್ರಾನ್ಸಿಸ್ ಬೇಕನ್ ಮತ್ತು ತತ್ವಜ್ಞಾನಿ, ಗಣಿತಶಾಸ್ತ್ರಜ್ಞ ರೆನೆ ಡಿಕಾರ್ಟ್. ಅವರು ಪ್ರಕೃತಿಯ ಒಡೆಯರಾಗುವ ಬಗೆಗೆ ಚಿಂತನೆ ನಡೆಸಿದರು. 'Discourse on Method' ಎನ್ನುವ ತನ್ನ ಪುಸ್ತಕದಲ್ಲಿ ರೆನೆ ಡಿಕಾರ್ಟ್ ಬರೆಯುತ್ತಾನೆ: "ಕುಶಲಕರ್ಮಿಗಳು ವಿವಿಧ ಕೌಶಲಗಳನ್ನು ಕರಗತ ಮಾಡಿಕೊಂಡಿರುವ ಹಾಗೆ ನಾವು ಬೆಂಕಿ, ನೀರು, ಗಾಳಿ, ನಕ್ಷತ್ರಗಳು, ಸ್ವರ್ಗ ಮತ್ತು ನಮ್ಮನ್ನು ಸುತ್ತುವರಿದಿರುವ ಸಕಲ ಮೂಲಗಳ ಶಕ್ತಿ ಮತ್ತು ಕ್ರಿಯೆಗಳ ಅರಿವಿನ ಮೂಲಕ ಉಪಯುಕ್ತವಾದ ಜ್ಞಾನವನ್ನು ಪಡೆಯಬಹುದು. ಹಾಗೆಯೇ ಅವುಗಳನ್ನು ಸೂಕ್ತವಾದ ಉದ್ದೇಶಗಳಿಗೆ ಬಳಸಿಕೊಳ್ಳುವುದು ನಮಗೆ ಸಾಧ್ಯವಾಗಬಹುದು. ಹೀಗೆ ಕುಶಲಿಗಳಾಗುವ ಮೂಲಕ ನಾವು ಪ್ರಕೃತಿಯ ಒಡೆತನವನ್ನು ಸಾಧಿಸಬಹುದು". ಆದರೆ ತತ್ವಜ್ಞಾನಿ ಬ್ಲೈಸ್ ಪ್ಯಾಸ್ಕಲ್ ಹೇಳಿದ್ದು: "ಮನುಷ್ಯರು ಪ್ರಕೃತಿಯ ಒಡೆಯರಲ್ಲ, ಪ್ರಕೃತಿಯ ಸಂಕೀರ್ಣ ಜಾಲದೊಳಗಿನ ಒಂದು ಕೊಂಡಿ ಮಾತ್ರ" ಎಂದು.



ಎರಡನೇ ಪ್ರಮುಖ ಬದಲಾವಣೆಯಾದದ್ದು, ಜಗತ್ತಿನ ಶ್ರೀಮಂತ ಮತ್ತು ಮಧ್ಯಮವರ್ಗದಲ್ಲಿ ಕೊಳ್ಳುಬಾಕತನದ ಗ್ರಾಹಕೀಕರಣ ಸ್ಫೋಟಗೊಂಡಾಗ. ಒಂದು ಉದಾಹರಣೆಯ ಮೂಲಕ ಇದನ್ನು ಅರ್ಥಮಾಡಿಕೊಳ್ಳಬಹುದು. ಕೈಗಾರಿಕಾ ಕ್ರಾಂತಿಯಾಗುತ್ತಿದ್ದ ಸಮಯದಲ್ಲಿ ಒಬ್ಬ ಅಮೆರಿಕನ್, ಮಾರುಕಟ್ಟೆಗೆ ಹೋದರೆ, ೧೫೦ ಚದರ ಮೀಟರ್ ವಿಸ್ತೀರ್ಣದಲ್ಲಿ ಹೆಚ್ಚೆಂದರೆ ೩೦೦ ವಸ್ತುಗಳ ಆಯ್ಕೆ ಇರುತ್ತಿತ್ತು. ಆದರೆ ೨೦೦೦ದ ಹೊತ್ತಿಗೆ, ೧ ಮಿಲಿಯನ್ ಜನಸಂಖ್ಯೆಯ ಒಂದು ನಗರದಲ್ಲಿ ವಾಸಿಸುವ ಒಬ್ಬ ಅಮೆರಿಕನ್, ಮಾರುಕಟ್ಟೆಗೆ ಹೋದರೆ, ೧.೫ ಮಿಲಿಯನ್ ಚದರ ಮೀಟರ್ ವಿಸ್ತೀರ್ಣದಲ್ಲಿ ೧ ಮಿಲಿಯನ್ ವಸ್ತುಗಳ ಆಯ್ಕೆ ಇರುತ್ತದೆ. ಇದೇ ಕಾರಣಕ್ಕೆ ಮಾರ್ಕ್ ಟ್ವೈನ್ ಈ ರೀತಿ ಬರೆಯುತ್ತಾನೆ: "ನಾಗರಿಕತೆಯೆಂದರೆ, ಅನಗತ್ಯ ಅವಶ್ಯಕತೆಗಳ ಮಿತಿಯಿಲ್ಲದ ಬೆಳವಣಿಗೆ". ದೆಹಲಿ, ಮುಂಬೈ, ಕೋಲ್ಕತ್ತಾಗಳಂತಹ ದೊಡ್ಡ ನಗರಗಳಲ್ಲಿ ವೇಗವಾಗಿ ಬೆಳೆಯುತ್ತಿರುವ ಶಾಪಿಂಗ್ ಮಾಲುಗಳನ್ನು ನೋಡಿದರೆ ಪರಿಸ್ಥಿತಿಯ ಅರಿವಾಗುತ್ತದೆ. ನೀವು ಈ ಶಾಪಿಂಗ್ ಮಾಲುಗಳಿಗೆ ಹೋದರೆ ಅಲ್ಲಿ ಒಬ್ಬ ರಾವ್ ಕೈಬರ್ತ್ಯನಾಗಲೀ(ಕೆಳಜಾತಿಯವ), ಒಬ್ಬ ಹನ್ಸ್ದಾ ಅಥವಾ ಒಬ್ಬ ತೂಡೂ(ಬುಡಕಟ್ಟಿನವ) ಆಗಲೀ ಕಾಣಸಿಗುವುದಿಲ್ಲ. ಜಗತ್ತಿನ ಕೆಲವೇ ಶ್ರೀಮಂತರ ಕೊಳ್ಳುಬಾಕತನವನ್ನು ತೃಪ್ತಿಗೊಳಿಸುವುದಕ್ಕಾಗಿ ಮತ್ತು ಸ್ವಂತ ಲಾಭಕ್ಕಾಗಿ ಉದ್ಯಮಿಗಳು ಮಿತಿಮೀರಿ ಉತ್ಪಾದಿಸುತ್ತಿರುವುದರಿಂದ, ಹಿಮನದಿಗಳು ಮತ್ತು ಆರ್ಕ್ಟಿಕ್‌ನಲ್ಲಿನ ಮಂಜುಗಡ್ಡೆಯು ಕರಗುತ್ತಲೂ ಮತ್ತು ಮರಳುಗಾಡು ಹಿಗ್ಗುತ್ತಲೂ ಇರುವುದರ ಜೊತೆಗೆ ಭೂಮಿಯು ತನ್ನಲ್ಲಿರುವ ಕಾಡು, ನೀರು, ಮಣ್ಣು ಮತ್ತು ಜೀವವೈವಿಧ್ಯವನ್ನು ಅತ್ಯಂತ ವೇಗವಾಗಿ ಕಳೆದುಕೊಳ್ಳುತ್ತಿದೆ. ಇಂತಹ ಉಪಭೋಗ್ಯ ವಸ್ತುಗಳ ಉತ್ಪಾದನೆಗೆ ಅಪಾರ ಶಕ್ತಿ ಬೇಕು ಮತ್ತು ಬಹುಪಾಲು ಆ ಶಕ್ತಿಯು, ಪಳೆಯುಳಿಕೆ ಇಂಧನಗಳಿಂದ ಬರುತ್ತದೆ. ವಿಶ್ವದಲ್ಲಿ ಪ್ರತಿವರ್ಷ ಶಕ್ತಿಯ ಅವಶ್ಯಕತೆ ಶೇಕಡಾ ೨ ರ ದರದಲ್ಲಿ ಏರುತ್ತಿದೆ. ಲಕ್ಷಾಂತರ ಟನ್ನುಗಳಷ್ಟು ಇಂಗಾಲದ ಡೈ ಆಕ್ಸೈಡ್ ವಾತಾವರಣಕ್ಕೆ ಬಿಡುಗಡೆಯಾಗುತ್ತಿದ್ದು ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಗೆ ಕಾರಣವಾಗುತ್ತಿದೆ. ವಾತಾವರಣದಲ್ಲಿ ಸರಾಸರಿ ತಾಪಮಾನವು ಕೇವಲ ೨ ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾದರೂ ಭೂಮಿಯ ಮೇಲೆ ವಿನಾಶಕಾರಿಯಾದ ಮಹಾದುರಂತ ಸಂಭವಿಸುತ್ತದೆ. ಮನುಷ್ಯರು ತಮ್ಮ ಜೀವನಶೈಲಿಯಲ್ಲಿ ತೀವ್ರವಾದ ಬದಲಾವಣೆಗಳನ್ನು ಮಾಡಿಕೊಳ್ಳದೇ ಹೋದರೆ, ೨೧ನೇ ಶತಮಾನದ ಕೊನೆಯ ಹೊತ್ತಿಗೆ ಸರಾಸರಿ ತಾಪಮಾನವು ಶೇಕಡಾ ೬ ರಷ್ಟು ಹೆಚ್ಚಾಗುವ ಸಂಭವವಿದೆ ಎಂದು ವಿಜ್ಞಾನಿಗಳು ಅಂದಾಜಿಸುತ್ತಾರೆ. ಸ್ಟಾನ್‌ಫೋರ್ಡ್, ಪ್ರಿನ್ಸ್‌ಟನ್ ಮತ್ತು ಬರ್ಕ್‌ಲಿ ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳು ಇತ್ತೀಚೆಗೆ, "ಆರನೆಯ ಸಾಮೂಹಿಕ ಮಹಾವಿನಾಶ ಹತ್ತಿರ ಬರುತ್ತಿದೆ; ಅದು



ರವೀಂದ್ರನಾಥ ಟ್ಯಾಗೋರರು ೧೯೪೧ರಲ್ಲಿ ಕಾಲವಶರಾಗುವ ಸ್ವಲ್ಪ ಮೊದಲು ಬರೆದ ತಮ್ಮ 'Crisis in civilization' ಎನ್ನುವ ಪ್ರಸಿದ್ಧ ಪ್ರಬಂಧದಲ್ಲಿ: "ಎಳೆ ವಯಸ್ಸಿನಲ್ಲಿ ಯೂರೊಪಿನ ನಾಗರಿಕತೆಯನ್ನು ಒಂದು ವರವೆಂದೇ ನಾನು ನಂಬಿದ್ದೆ. ಆದರೆ ಈಗ ಈ ಭೂಮಿಯಿಂದ ನಿರ್ಗಮಿಸುವ ಕಾಲಕ್ಕೆ ಆ ನಂಬಿಕೆಯು ಸಂಪೂರ್ಣ ನಶಿಸಿಹೋಗಿದೆ" ಎಂದು ಬರೆದಿದ್ದಾರೆ.

ಸಂಭವಿಸಿದಾಗ ಮೊಟ್ಟಮೊದಲು ಈ ಭೂಮಿಯಿಂದ ನಿರ್ಗಮಿಸುವುದು ಮನುಷ್ಯಕುಲವೇ" ಎಂದು ತಿಳಿಸಿದ್ದಾರೆ. ೬೫ ಮಿಲಿಯನ್ ವರ್ಷಗಳ ಹಿಂದೆ ಐದನೇ ಮಹಾವಿನಾಶ ಸಂಭವಿಸಿದಾಗ ಇತರ ಜೀವಿಗಳೊಂದಿಗೆ ಡೈನೊಸಾರ್ ಸಂತತಿ ಅಳಿದುಹೋಯಿತು.

ಭೂಮಿಯ ಮೇಲೆ ತೀವ್ರತರವಾದ ಬದಲಾವಣೆಗಳಾಗುತ್ತಿರುವುದರಿಂದ ನಾವು ಹ್ಯಾಲೋಸೀನ್ ಯುಗವನ್ನು ದಾಟಿ ಕೊನೆಯ ಮಾನವಕೇಂದ್ರಿತ ಯುಗಕ್ಕೆ(Anthropocene) ಈಗಾಗಲೇ ಕಾಲಿಟ್ಟಿದ್ದೇವೆ ಎಂದು ಕೆಲವು ವಿಜ್ಞಾನಿಗಳು ಪ್ರತಿಪಾದಿಸುತ್ತಿದ್ದಾರೆ. 'ಆಂಥ್ರೊಪೋಸೀನ್' ಎನ್ನುವ ಪದವಿನ್ನೂ ನಿಘಂಟುಗಳಲ್ಲಿ ಸೇರಿಲ್ಲ. ೨೦೧೯ರಲ್ಲಿ, ಲೈಸೆಸ್ಟರ್ ವಿಶ್ವವಿದ್ಯಾನಿಲಯದಲ್ಲಿ ಭೂವಿಜ್ಞಾನಶಾಸ್ತ್ರದ ಪ್ರಾಧ್ಯಾಪಕರಾದ ಯಾನ್ ಝಲಾಸಿವಿಝ್ ಅವರ ನೇತೃತ್ವದಲ್ಲಿ 'Anthropocene project' ಎಂದು ಕರೆಯಲಾಗುವ ಯೋಜನೆಗಾಗಿ ಕಾರ್ಯಕಾರೀ ಸಮಿತಿಯೊಂದನ್ನು ರಚಿಸಲಾಯಿತು. ಅವರು ಹೇಳಿದ್ದು; "'ಆಂಥ್ರೊಪೋಸೀನ್'ನ ಮಹತ್ವವೇನೆಂದರೆ, ಭೂವೈಜ್ಞಾನಿಕ ವ್ಯವಸ್ಥೆಯಲ್ಲಿ ಒಂದು ವಿಭಿನ್ನ ಪಥವನ್ನು ರಚಿಸಿರುವುದೇ ಆಗಿದೆ. ನಾವು ಆ ಪಥದ ಭಾಗವೇ ಆಗಿದ್ದೇವೆ. ನಾವು ನಮ್ಮ ಬದುಕಿನ ಬಹುಭಾಗವನ್ನು ಆಂಥ್ರೊಪೋಸೀನ್ ಎಂದು ಕರೆಯಲಾಗುವ ಯುಗದಲ್ಲೇ ಕಳೆದುಬಿಟ್ಟಿದ್ದೇವೆ. ಆಗುತ್ತಿರುವ ಬದಲಾವಣೆಯ ಪ್ರಮಾಣ ಮತ್ತು ಶಾಶ್ವತತೆಯನ್ನು ಇನ್ನೂ ಅರಿಯಲೆತ್ನಿಸುತ್ತಿದ್ದೇವೆ."

ರಾಸಾಯನಿಕ ಕೃಷಿಯೊಂದಿಗೆ ಹೆಚ್ಚೆಚ್ಚು ಸಾರಜನಕ ಮತ್ತು ರಂಜಕವನ್ನು ಬಳಸಲಾರಂಭಿಸಿದಾಗಲೇ 'ಆಂಥ್ರೊಪೋಸೀನ್' ಯುಗವು ಕಾಲಿಟ್ಟಿತೆಂದು ಹೇಳಬೇಕು. ಲಂಡನ್ ಸೈನ್ಸ್ ಮ್ಯೂಸಿಯಂನ ನಿರ್ದೇಶಕರೂ ಆಗಿದ್ದ, ಲಂಡನ್ ವಿಶ್ವವಿದ್ಯಾನಿಲಯದ ಹವಾಮಾನ ವಿಜ್ಞಾನಿ ಪ್ರೊ. ಕ್ರಿಸ್ ರಿಪ್ಲೆ ಅವರು ಹೇಳುತ್ತಾರೆ: "ಆಂಥ್ರೊಪೋಸೀನ್ ಎಂಬುದು, ಇಡೀ ಭೂ ವ್ಯವಸ್ಥೆಯ ಮೇಲೆ ನಮ್ಮ ಸಾಮೂಹಿಕ ಚಟುವಟಿಕೆಗಳು ಪ್ರಾಬಲ್ಯವನ್ನು ಹೊಂದಿರುವ ಭೂಚರಿತ್ರೆಯ ಒಂದು ಹೊಸ ಅವಧಿ. ಪರಿಸ್ಥಿತಿಯ ಮೇಲೆ ಹಿಡಿತವನ್ನು ಸಾಧಿಸದೇ ಹೋದರೆ, ಬೆಂಕಿಯೊಂದಿಗೆ ಆಟವಾಡುವ ನಮ್ಮ ಅತ್ಯಂತ ಅಜಾಗರೂಕ ನಡವಳಿಕೆಗೆ ವಿಷಾದ ಪಡಬೇಕಾಗುತ್ತದೆ."

೧೯೭೦ರಲ್ಲಿ ಅಮೆರಿಕಾ 'ಭೂದಿನ'ವನ್ನು ಆಚರಿಸಲು ಆರಂಭಿಸಿತು. ಆ ನಂತರದಲ್ಲಿ ಅದನ್ನು ಪ್ರತಿವರ್ಷ ಆಚರಿಸಲಾಗುತ್ತಿದೆ. ೧೯೬೨ರಲ್ಲಿ ರಾಚೆಲ್ ಕಾರ್ಸನ್ ಅವರು 'ಮೌನ ವಸಂತ(Silent Spring)' ಎಂಬ ಪುಸ್ತಕವನ್ನು ಬರೆದರು. ಬಹುದೊಡ್ಡ ಪರಿಸರದ ಬಿಕ್ಕಟ್ಟನ್ನು ಕುರಿತು ಅದು ಜಗತ್ತಿನ ಕಣ್ತೆರೆಸಿತು. ೧೯೭೨ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಸಭೆಯಲ್ಲಿ "ಬಡತನವೇ ಮಹಾನ್ ಪ್ರದೂಶಕ" ಎಂದು ದಿ.ಇಂದಿರಾಗಾಂಧಿ ಹೇಳಿದ್ದರು. ೧೯೯೨ರಲ್ಲಿ ಭೂ ಶೃಂಗ ಸಭೆ, ಬ್ರೆಜಿಲ್‌ನ ರಿಯೋ ಡಿ ಜನೈರೋದಲ್ಲಿ ನಡೆಯಿತು. ಆ ಸಭೆಗೆ ಅಮೆರಿಕಾದ ಅಧ್ಯಕ್ಷ ಸೀನಿಯರ್ ಜಾರ್ಜ್ ಬುಷ್ ಅವರು ಬರುವುದಿಲ್ಲವೆಂದು ಹೇಳಿದ್ದರು. ಯಾವಾಗ, ಅಮೆರಿಕನ್ ನಿಯೋಗದ ಅಧ್ಯಕ್ಷರಾಗಿದ್ದ ರೀಲಿ ಅವರು 'ನೀವು ಬರುವುದಿಲ್ಲವೆಂದರೆ, ಅಮೆರಿಕಾವು ಏಕಾಂಗಿಯಾಗುತ್ತದೆ' ಎಂದು ಹೇಳಿದರೋ, ಆಗ ಬುಷ್ ಸಭೆಗೆ ಬಂದರು. ಆದರೆ ಬರುವ ಮುನ್ನವೇ 'ನಾನು ಅಮೆರಿಕನ್ನರ ಜೀವನಶೈಲಿಯನ್ನು ಬದಲಿಸುವುದಿಲ್ಲ' ಎಂಬ ಹೇಳಿಕೆಯನ್ನು ಕೊಟ್ಟೇ ಬಂದರು. ಇಷ್ಟಕ್ಕೂ ಜೀವನಶೈಲಿ ಎಂದರೇನು? ಅಮೆರಿಕಾದ ಜನಸಂಖ್ಯೆ ವಿಶ್ವಜನಸಂಖ್ಯೆಯ ಕೇವಲ ಶೇಕಡಾ ೫.೬ ರಷ್ಟು ಮಾತ್ರ ಆದರೆ ಅದು ಶೇಕಡಾ ೪೦ ರಷ್ಟು ವಿಶ್ವ ನೈಸರ್ಗಿಕ ಸಂಪನ್ಮೂಲವನ್ನು ಕಬಳಿಸುತ್ತದೆ. ಕೊಳ್ಳುಬಾಕತನದ ಬಗ್ಗೆ ಈಗಾಗಲೇ ಹೇಳಿದೆ. ೨೦೦೨ರಲ್ಲಿ ಜೋಹಾನ್ಸ್‌ಬರ್ಗ್‌ನಲ್ಲಿ ಸುಸ್ಥಿರ ಅಭಿವೃದ್ಧಿ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ರಿಯೋ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ೨೦೧೫ರ ನವೆಂಬರ್ ೩೦ರಿಂದ ಡಿಸೆಂಬರ್ ೧೨ರವರೆಗೆ ಪ್ಯಾರಿಸ್‌ನಲ್ಲಿ ೨೧ನೇ ಒಕ್ಕೂಟ ರಾಷ್ಟ್ರಗಳ (COP21-Conference of Parties) ವಾರ್ಷಿಕ ಸಮ್ಮೇಳನವು ನಡೆಯಿತು. ಆದರೆ ಈ ಸಮ್ಮೇಳನಗಳು, ಕೂಟಗಳ ನಂತರವೂ ಶಕ್ತಿಯ ಬೇಡಿಕೆಯು ಪ್ರತಿವರ್ಷ ಶೇಕಡಾ ೨ ರ ದರದಲ್ಲಿ ಏರುತ್ತಲೇ ಇದೆ. ಬಹುಪಾಲು ಶಕ್ತಿಯು ಪಳೆಯುಳಿಕೆ ಇಂಧನಗಳಿಂದ ಬರುತ್ತದೆ. ಆದ್ದರಿಂದ ಗಾಳಿಯಲ್ಲಿ ಇಂಗಾಲದ ಡೈ ಆಕ್ಸೈಡ್ ಅಂಶವು ಪ್ರತಿವರ್ಷ ಲಕ್ಷಾಂತರ ಟನ್ನುಗಳಷ್ಟು ಹೆಚ್ಚಾಗುತ್ತಲೇ ಇದೆ. ಪ್ರಕೃತಿಯ ನಾಶ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಇನ್ನು ಕೆಲವೇ ದಶಕಗಳಲ್ಲಿ ಆರ್ಕ್ಟಿಕ್‌ನ ಮಂಜುಗಡ್ಡೆ ಸಂಪೂರ್ಣವಾಗಿ ಕರಗಿಬಿಡುವ ಅಂದಾಜಿದೆ. ಹಾಗೆ ಎಲ್ಲ ಮಂಜೂ ಕರಗಿದ್ದೇ ಆದರೆ, ಲಕ್ಷಾಂತರ ವರ್ಷಗಳಿಂದ ಭೂಮಿಯಡಿಯಲ್ಲಿ ಹುದುಗಿದ್ದ ಮೀಥೇನ್ ಅನಿಲವು ಬಿಡುಗಡೆಯಾಗುತ್ತದೆ. ಅದು ಇಂಗಾಲದ ಡೈ ಆಕ್ಸೈಡ್‌ಗಿಂತ ಅನೇಕ ಪಟ್ಟು ಹೆಚ್ಚು ಹಸಿರುಮನೆ ಅನಿಲ(Green House Gas-GHG) ಆಗಿರುವುದರಿಂದ ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಗಳು ಇನ್ನಷ್ಟು ವೇಗವನ್ನು ಪಡೆದುಕೊಳ್ಳುತ್ತವೆ.

ಜೀವಸಂಕುಲಗಳಲ್ಲೇ ಮನುಷ್ಯರದು ಅತಿ ಬುದ್ಧಿವಂತ ಕುಲ. ಆದರೆ ಅದು ತನ್ನ ಗೋರಿಯನ್ನು ತಾನೇ ತೋಡುತ್ತಿದೆ. ಕವಿಗಳೂ, ತತ್ವಶಾಸ್ತ್ರಜ್ಞರೂ ಬಹಳ ಹಿಂದೆಯೇ ಎಚ್ಚರಿಕೆಗಳನ್ನು ಕೊಟ್ಟಿದ್ದಾರೆ. ೧೭ನೇ ಶತಮಾನದ, ಪ್ರತಿಯೊಬ್ಬ ವಿದ್ಯಾರ್ಥಿಯೂ ಅಭ್ಯಸಿಸಲೇಬೇಕಾದ ದ್ರವಸ್ಥಿತಿಶಾಸ್ತ್ರ(ಹೈಡ್ರೋಸ್ಟಾಟಿಕ್ಸ್)ದ ನಿಯಮಗಳನ್ನು ಕಂಡುಹಿಡಿದ ಗಣಿತಶಾಸ್ತ್ರಜ್ಞ, ತತ್ವಜ್ಞಾನಿ ಬ್ಲೈಸ್ ಪ್ಯಾಸ್ಕಲ್ ಬರೆಯುತ್ತಾನೆ: "ಪ್ರಕೃತಿಯ ಸಂಕೀರ್ಣ ಜಾಲದಲ್ಲಿ ಮಾನವಕುಲ ಒಂದು ಸಣ್ಣ ಕೊಂಡಿ ಅಷ್ಟೇ. ಆದರೆ ತನ್ನ ಚಿಂತನೆಯ ಮೂಲಕ ಪ್ರಕೃತಿಯನ್ನು ಅರ್ಥೈಸಿಕೊಳ್ಳಬಲ್ಲ ಶಕ್ತಿ ಇರುವುದು ಮನುಷ್ಯನಿಗೆ ಮಾತ್ರ. ಮನುಷ್ಯಜಾತಿಗೆ ಮಾತ್ರ ಭೂಮಿಯ ಮೇಲೆ ಜವಾಬ್ದಾರಿ ಇರುವುದು ಮತ್ತು ಒಳ್ಳೆಯದಕ್ಕಾದರೂ ಅಥವಾ ಕೆಟ್ಟದ್ದಕ್ಕಾದರೂ ಅದನ್ನು ಪರಿವರ್ತಿಸಬಲ್ಲ ಶಕ್ತಿಯಿರುವುದು". ಮನುಷ್ಯರು ಭೂಮಿಯನ್ನು ಉತ್ತಮ ಭವಿಷ್ಯದತ್ತ ಕೊಂಡೊಯ್ಯುತ್ತಿದ್ದಾರೆಯೇ? ಅಥವಾ ಭವಿಷ್ಯದ ಪೀಳಿಗೆಯ ಬದುಕುವ ಹಕ್ಕನ್ನು ಕಿತ್ತುಕೊಳ್ಳುವ ಕತ್ತಲೆಯ ಕೂಪಕ್ಕೆ ತಳ್ಳುತ್ತಿದ್ದಾರೆಯೇ?

ರವೀಂದ್ರನಾಥ ಟ್ಯಾಗೋರರು ೧೯೪೧ರಲ್ಲಿ ಕಾಲವಶರಾಗುವ ಸ್ವಲ್ಪ ಮೊದಲು ಬರೆದ ತಮ್ಮ 'Crisis in civilization' ಎನ್ನುವ ಪ್ರಸಿದ್ಧ ಪ್ರಬಂಧದಲ್ಲಿ: "ಎಳೆ ವಯಸ್ಸಿನಲ್ಲಿ ಯೂರೊಪಿನ ನಾಗರಿಕತೆಯನ್ನು ಒಂದು ವರವೆಂದೇ ನಾನು ನಂಬಿದ್ದೆ. ಆದರೆ ಈಗ ಈ ಭೂಮಿಯಿಂದ ನಿರ್ಗಮಿಸುವ ಕಾಲಕ್ಕೆ ಆ ನಂಬಿಕೆಯು ಸಂಪೂರ್ಣ ನಶಿಸಿಹೋಗಿದೆ" ಎಂದು ಬರೆದಿದ್ದಾರೆ. ೧೯೪೦ರಲ್ಲಿ ಅಮೆರಿಕಾದಲ್ಲಿ ಉಪಾಧ್ಯಾಯರಾಗಿದ್ದ ಕವಿ ಅಮಿಯಾ ಚಕ್ರಬರ್ತಿ ಅವರಿಗೆ ಬರೆದ ಪತ್ರದಲ್ಲಿ: "ಬ್ರಾಹ್ಮಣರ ಮಿದುಳನ್ನು, ಕ್ಷತ್ರಿಯರ ಮತ್ತು ಶೂದ್ರರ ಸೇವೆಯನ್ನು ಬಳಸಿಕೊಳ್ಳುವ ವ್ಯಾಪಾರಿ ಮನೋಭಾವದ ಯೂರೋಪ್ ಇಂದು ಸಂಮೋಹಕವಾಗಿ ಕಾಣುತ್ತಿದೆ. ಆದರೆ ಅದರ ಕಾಲುಗಳು ಅಳಿವಿನ ಕಡೆಗಿರುವ ಇಳಿಜಾರಿನ ಮೇಲಿರುವುದನ್ನು ನಾನು ಕಾಣಬಲ್ಲೆ." ಎಂದಿದ್ದಾರೆ. ಇಂಗ್ಲಿಷ್ ಕವಿ ಡಬ್ಲ್ಯೂ.ಬಿ.ಯೇಟ್ಸ್(೧೮೬೫–೧೯೧೯) ತನ್ನ ಪ್ರಸಿದ್ಧ ಕವನವೊಂದರಲ್ಲಿ ಹೀಗೆ ಹೇಳಿದ್ದಾನೆ: "ಎಲ್ಲ ಕಳಚಿ ಬೀಳುತ್ತಿದೆ; ಹಿಡಿಯಲಾರದು ಕೇಂದ್ರ ಇಡಿಯಾಗಿ/ ಅಂಕೆಯಿಲ್ಲದ ಅರಾಜಕತೆ ಧರೆಗೆಲ್ಲ ವ್ಯಾಪಿಸಿದೆ/ ಉಕ್ಕಿಹರಿದಿದೆ ಮಂದ ನೆತ್ತರಿನ ಪ್ರವಾಹ/ ಕೊಚ್ಚಿಹೋಗಿವೆ ಮುಗ್ಧತೆಯ ಹಬ್ಬ ಉತ್ಸವಗಳೆಲ್ಲ ಎಲ್ಲ ಕಡೆ/ ಯೋಗ್ಯರಿಗೆ ದೃಢನಂಬುಗೆಯ ಕೊರತೆ/ ಪೂರ್ತಿ ಅತಿರೇಕದುದ್ರೇಕ ನೀಚರಿಗೆ".(ಅನು: ವಿ.ಕೃಷ್ಣಮೂರ್ತಿರಾವ್, 'ಹೆಜ್ಜೆ ಹಿಡಿದ ಹಾದಿ' ಸಂಕಲನದಿಂದ). ಮಾಧ್ಯಮಗಳತ್ತ ಕಣ್ಣಾಡಿಸಿದರೆ ಗೊತ್ತಾಗುತ್ತದೆ, ಕವಿಗಳ ಮಾತು ಎಷ್ಟು ನಿಜ ಎಂಬುದು. ಪ್ರಕೃತಿ ಮತ್ತು ಸಮಾಜದ ಮೇಲೆ ಎಂಥ ಹಿಂಸೆಯ ಕರಿನೆರಳಿದೆ!?

ನಗರಕೇಂದ್ರಿತ ಔದ್ಯಮಿಕ ನಾಗರಿಕತೆಯು ಕುಸಿದುಬಿದ್ದೇ ಬೀಳುತ್ತದೆಂಬುದನ್ನು ಟ್ಯಾಗೋರ್ ಮತ್ತು ಗಾಂಧೀಜಿ ಅರಿತಿದ್ದರು. ಹೊಸ ರೀತಿಯ ಶಿಕ್ಷಣಕ್ಕಾಗಿ ಶಾಂತಿನಿಕೇತನವನ್ನೂ, ಹಳ್ಳಿಗಳ ಪುನಶ್ಚೇತನಕ್ಕಾಗಿ ಶ್ರೀನಿಕೇತನವನ್ನೂ ಸ್ಥಾಪಿಸಿದರು ರವೀಂದ್ರನಾಥರು. ಶ್ರೀನಿಕೇತನವು ಸುಮಾರು ೫೦ ಹಳ್ಳಿಗಳಲ್ಲಿ ಮತ್ತು ಸುಮಾರು ೧೦ ಬುಡಕಟ್ಟು ಹಾಡಿಗಳಲ್ಲಿ ಕೆಲಸ ಮಾಡುತ್ತಿತ್ತು. ೧೯೦೪ ರಲ್ಲಿ ಟ್ಯಾಗೋರರು 'ಸ್ವದೇಶೀ ಸಮಾಜ್' ಮತ್ತು 'ಬಿಲಾಶೇರ್ ಫಾನ್ಸ್(ವಿಲಾಸದ ಉರುಳು)' ಎಂಬ ಲೇಖನಗಳನ್ನು ಬರೆದರು. ಹರಿಯುವ ನದಿಗೆ ಕಟ್ಟಿದ ಅಣೆಕಟ್ಟನ್ನು ಒಡೆಯುವ ಪ್ರಸಂಗ ಇರುವ 'ಮುಕ್ತಧಾರಾ' ಎಂಬ ನಾಟಕವನ್ನು ೧೯೨೨ ರಲ್ಲಿ ಬರೆದರು. ಆ ನಾಟಕದಲ್ಲಿ ಬರುವ ಧಾರೆಯ ಕೆಳಭಾಗದ ಶಿವ್‌ತೆರೈ ಹಳ್ಳಿಯ ರೈತರು ಮಾತನಾಡುವುದನ್ನು ನೋಡಿದರೆ, ನರ್ಮದಾ ಬಚಾವ್ ಆಂದೋಲನದ ಮೇಧಾ



ಗಾಂಧೀಜಿ ಬರೆಯುತ್ತಾರೆ, "ಭಾರತವೇನಾದರೂ ಪಶ್ಚಿಮದ ರೀತಿಯಲ್ಲಿ ಕೈಗಾರಿಕೀಕರಣವನ್ನು ಅಪ್ಪಿಕೊಂಡರೆ, ದೇವರೇ ಕಾಪಾಡಬೇಕು. ಒಂದು ಸಣ್ಣ ದ್ವೀಪವು ಇಂದು ಇಡೀ ವಿಶ್ವವನ್ನು ಸರಪಳಿಯಲ್ಲಿ ಕಟ್ಟಿಹಾಕಿದೆ. ೩೦೦ ಮಿಲಿಯನ್ ಜನಸಂಖ್ಯೆಯ ಒಂದಿಡೀ ರಾಷ್ಟ್ರವೇನಾದರೂ ಇದೇ ರೀತಿಯ ಆರ್ಥಿಕ ಶೋಷಣೆಗೆ ಮುಂದಾದರೆ, ಮಿಡತೆಯ ದಾಳಿಗೆ ಸಿಕ್ಕ ಪೈರಿನಂತೆ ಇಡೀ ವಿಶ್ವವೇ ಬೋಳಾಗಿಬಿಡುತ್ತದೆ". ಈಗ ನಾವು ಗಾಂಧೀಜಿಯ ಮಾತುಗಳನ್ನು ಮತ್ತು 'ಹಳ್ಳಿಗಳ' ಬಗ್ಗೆ ಆಡಿರುವ ಟ್ಯಾಗೋರರ ವಿಚಾರಗಳನ್ನು ಪರಿಸರ ವಿಜ್ಞಾನದ ಮೂಲಕ ಅರ್ಥಮಾಡಿಕೊಳ್ಳಬಹುದೆನಿಸುತ್ತದೆ

ಪಾಟ್ಕರ್ ಮಾತನಾಡಿದಂತೆನಿಸುತ್ತದೆ. ೧೯೨೪ ರಲ್ಲಿ, ಆಧುನಿಕ ನಾಗರೀಕತೆಯು ಅಮಾನವೀಕರಣಗೊಂಡಿರುವುದನ್ನು ತೀವ್ರವಾಗಿ ಟೀಕಿಸುವ 'ರಕ್ತಕರಬಿ(ಕೆಂಪು ಕಣಿಗಲ)' ಎಂಬ ನಾಟಕವನ್ನು ರಚಿಸುತ್ತಾರೆ. ಅದೇ ವರ್ಷ ಚೈನಾದಲ್ಲಿ ಮಾಡಿದ ಭಾಷಣವೊಂದರಲ್ಲಿ ಟ್ಯಾಗೋರರು ಹೇಳುತ್ತಾರೆ: "ಒಂದು ಶತಮಾನಕ್ಕೂ ಹೆಚ್ಚಿನ ಕಾಲ, ಪಶ್ಚಿಮದ ಯಶಸ್ಸೆಂಬ ಸಾರೋಟಿನ ಹಿಂದೆ ನಮ್ಮನ್ನು ಹಗ್ಗದಲ್ಲಿ ಕಟ್ಟಿ ಎಳೆದು ತರಲಾಗಿದೆ. ಧೂಳಿನಿಂದ ಉಸಿರುಕಟ್ಟಿಸುತ್ತಾ, ಗದ್ದಲದಿಂದ ಕಿವುಡಾಗಿಸುತ್ತಾ, ನಮ್ಮ ಅಸಹಾಯಕತೆಯಿಂದಲೇ ನಮ್ಮನ್ನು ಕುಗ್ಗಿಸುತ್ತಾ, ಅದರ ವೇಗದಿಂದ ಕಂಗಾಲಾಗಿಸುತ್ತಾ ಸಾಗಿದೆ. ನಾವು ಈ ಸಾರೋಟಿನ ಓಟವನ್ನು ಪ್ರಗತಿ ಎಂದೂ ಮತ್ತು ಪ್ರಗತಿಯೇ ನಾಗರೀಕತೆ ಎಂದೂ ಅಂಗೀಕರಿಸಲೊಪ್ಪಿದೆವು. ನಾವು 'ಯಾವುದರ ಕಡೆಗೆ ಪ್ರಗತಿ, ಯಾರಿಗಾಗಿ ಪ್ರಗತಿ' ಎಂದೇನಾದರೂ ಪ್ರಶ್ನಿಸುವ ಸಾಹಸ ಮಾಡಿದ್ದರೆ, ಅದನ್ನು ವಿಚಿತ್ರವೆಂದೂ ಮತ್ತು ಪ್ರಗತಿಯ ನಿರಂಕುಶತೆಯನ್ನು ಅನುಮಾನಿಸುವುದು ಪೂರ್ವದ ಅವಿವೇಕದ ನಡವಳಿಕೆ ಎಂದೂ ತಿಳಿಯಲಾಗುತ್ತಿತ್ತು. ಆದರೆ ಇತ್ತೀಚೆಗೆ, ಕೇವಲ ಸಾರೋಟಿನ ವೈಜ್ಞಾನಿಕ ಪರಿಪೂರ್ಣತೆಯನ್ನು ಮಾತ್ರ ಕಂಡು ಮಾರುಹೋಗದೇ, ಅದರ ಹಾದಿಯಲ್ಲಿನ ಹಳ್ಳ-ಗುಂಡಿಗಳ ಆಳವನ್ನೂ ಗಮನಿಸುವಂತೆ ಒಂದು ದನಿ ಎಚ್ಚರಿಸುತ್ತಿದೆ ನಮ್ಮನ್ನು.

ಟ್ಯಾಗೋರೋರರರು ನಾಗರಿಕತೆ ಮತ್ತು ಪ್ರಗತಿಯ ಬಗ್ಗೆ ಪ್ರಶ್ನೆಗಳನ್ನೆತ್ತುತ್ತಿದ್ದಾರೆ. ಯಾವುದನ್ನು ನಾವು ನಾಗರಿಕತೆ, ಪ್ರಗತಿ ಮತ್ತು ಅಭಿವೃದ್ಧಿ ಎಂದು ಕರೆಯಬೇಕು? ಹಳೆಯ ನಾಗರಿಕತೆಗಳತ್ತ ಒಮ್ಮೆ ನೋಟ ಹರಿಸಿದರೆ, ಮೆಡಿಟರೇನಿಯನ್ ನಾಗರಿಕತೆ ಎಂದು ಕರೆಯಲಾಗುವ ಗ್ರೀಕ್ ನಾಗರಿಕತೆಯನ್ನು ಗೌರವಿಸುತ್ತೇವೆ; ಕಲೆ ಮತ್ತು ವಿಜ್ಞಾನಗಳ ಅಭ್ಯುದಯವನ್ನು ಕಂಡ ಭಾರತದ ಗುಪ್ತರ ಆಳ್ವಿಕೆಯ ಕಾಲವನ್ನು ಗೌರವಿಸುತ್ತೇವೆ. ಹಾಗೆಯೇ ವಿಜ್ಞಾನ, ಗಣಿತಶಾಸ್ತ್ರ, ಖಗೋಳಶಾಸ್ತ್ರ, ವೈದ್ಯಕೀಯ ಇತ್ಯಾದಿಗಳ ಮಹಾಪೂರವೇ ಹರಿದ, ಖಲೀಫರ ಆಳ್ವಿಕೆಯ ಬಾಗ್ದಾದಿನ ಇಸ್ಲಾಮಿಕ್ ನವೋದಯ ಕಾಲವನ್ನು ಗೌರವಿಸುತ್ತೇವೆ. ೧೫ ರಿಂದ ೧೭ನೇ ಶತಮಾನದವರೆಗೆ ಆದ ಯೂರೋಪಿಯನ್ ನವೋದಯವನ್ನೂ, ೧೯ ಮತ್ತು ೨೦ ನೇ ಶತಮಾನದ ಆದಿಯಲ್ಲಿ ಆದ ಬಂಗಾಳ ನವೋದಯವನ್ನೂ ಗೌರವಿಸುತ್ತೇವೆ. ಆಗ ಅಂತರ್ಜಾಲವಾಗಲೀ, ಕಂಪ್ಯೂಟರ್ ಆಗಲೀ, ಮೊಬೈಲ್ ಆಗಲೀ ಯಾವುವೂ ಇರಲಿಲ್ಲ. ಅದರಿಂದೇನಾದರೂ ಮನುಷ್ಯನ ಸೃಜನಶೀಲತೆಗೆ ಅಡ್ಡಿಯಾಗಿತ್ತೇ? ಮನುಷ್ಯನ ಅನನ್ಯತೆ ಇರುವುದು ಅವನೊಳಗಿರುವ ಸಾಹಿತ್ಯ, ಕಲೆ, ವಿಜ್ಞಾನ, ವಿನ್ಯಾಸಗಳನ್ನು ಸೃಷ್ಟಿಸಬಲ್ಲ ಅಪಾರ ಸೃಜನಶೀಲತೆಯಲ್ಲಿಯೇ. ತಮ್ಮ ಸಂತತಿಯನ್ನು ಬೆಳೆಸುವ, ಬದುಕುಳಿಯಲು ಬೇಕಾದ ಆಹಾರ ಮತ್ತು ಸೂರಿನ ಅವಶ್ಯಕತೆಗಳು ಇದ್ದರೂ ಬೇರೆ ಯಾವ ಜೀವಿಗೂ ಇದು ಸಾಧ್ಯವಿಲ್ಲ. ಯಾವ ಸಮಾಜವು ಮನುಷ್ಯನ ಸೃಜನಶೀಲತೆಯನ್ನು ಸಲಹುತ್ತದೆಯೋ ಅದುವೇ ಹೆಚ್ಚು ನಾಗರಿಕ ಮತ್ತು ಹೆಚ್ಚು ಅಭಿವೃದ್ಧಿ ಹೊಂದಿದ ಸಮಾಜ.

ಗಾಂಧೀಜಿ ಬರೆಯುತ್ತಾರೆ: "ಭಾರತವೇನಾದರೂ ಪಶ್ಚಿಮದ ರೀತಿಯಲ್ಲಿ ಕೈಗಾರಿಕೀಕರಣವನ್ನು ಅಪ್ಪಿಕೊಂಡರೆ, ದೇವರೇ ಕಾಪಾಡಬೇಕು. ಒಂದು ಸಣ್ಣ ದ್ವೀಪವು ಇಂದು ಇಡೀ ವಿಶ್ವವನ್ನು ಸರಪಳಿಯಲ್ಲಿ ಕಟ್ಟಿಹಾಕಿದೆ. ೩೦೦ ಮಿಲಿಯನ್ ಜನಸಂಖ್ಯೆಯ ಒಂದಿಡೀ ರಾಷ್ಟ್ರವೇನಾದರೂ ಇದೇ ರೀತಿಯ ಆರ್ಥಿಕ ಶೋಷಣೆಗೆ ಮುಂದಾದರೆ, ಮಿಡತೆಯ ದಾಳಿಗೆ ಸಿಕ್ಕ ಪೈರಿನಂತೆ ಇಡೀ ವಿಶ್ವವೇ ಬೋಳಾಗಿಬಿಡುತ್ತದೆ". ಈಗ ನಾವು ಗಾಂಧೀಜಿಯ ಮಾತುಗಳನ್ನು ಮತ್ತು 'ಹಳ್ಳಗಳ' ಬಗ್ಗೆ ಆಡಿರುವ ಟ್ಯಾಗೋರರ ವಿಚಾರಗಳನ್ನು ಪರಿಸರ ವಿಜ್ಞಾನದ ಮೂಲಕ ಅರ್ಥಮಾಡಿಕೊಳ್ಳಬಹುದೆನಿಸುತ್ತದೆ. EFP (Ecological Foot prints) ಎನ್ನುವುದು ಪರಿಸರ ವಿಜ್ಞಾನದ ಇತ್ತೀಚಿನ ಹೊಸ ಕಲ್ಪನೆ. ನಾವು ಮನೆಯಲ್ಲಿ ಕುಳಿತು ತರಕಾರಿ, ಮೀನು, ಮಾಂಸಗಳನ್ನು ತಿನ್ನಬೇಕೆಂದರೆ ನಮಗೆ ಸ್ವಲ್ಪವಾದರೂ ಭೂಮಿ ಅಥವಾ ನೀರಿರುವ ಜಾಗದ ಅವಶ್ಯಕತೆ ಇರುತ್ತದೆ. ನಾವು ಉಸಿರಾಡಬೇಕೆಂದರೆ, ನಾವು ಹೊರಬಿಡುವ ಇಂಗಾಲದ ಡೈ ಆಕ್ಸೈಡನ್ನು ಹೀರಿಕೊಳ್ಳಲು ಮರಗಿಡಗಳಿಗೆ ಜಾಗ ಬೇಕು. ಹೀಗೆ ಲೆಕ್ಕಹಾಕಿದರೆ, ಭೂಮಿಗೆ ಇರುವ ಧಾರಣಶಕ್ತಿ ಪ್ರತಿ ವ್ಯಕ್ತಿಗೆ ೧.೯ ಹೆಕ್ಟೇರ್. ಆದರೆ ೧೯೮೦ರಲ್ಲೇ ಪ್ರತಿ ವ್ಯಕ್ತಿಯ ಸರಾಸರಿ EFP ೨.೩ ಹೆಕ್ಟೇರ್ಸ್ ಆಗಿತ್ತು! ಅಂದರೆ ಭೂಮಿಯ ಧಾರಣಶಕ್ತಿಗಿಂತ ಶೇಕಡಾ ೨೦ ರಷ್ಟು ಹೆಚ್ಚು! ಕಳೆದ ಮೂರು ದಶಕಗಳಲ್ಲಿ ಭಾರತದ ಪ್ರಮುಖ ನಗರಗಳಲ್ಲಿ ಹೆಚ್ಚುತ್ತಿರುವ ಝುಗಮಗಿಸುವ ಶಾಪಿಂಗ್ ಮಾಲುಗಳ ಬೆಳವಣಿಗೆಯನ್ನು ನೋಡಿದರೆ, ಖಂಡಿತವಾಗಿಯೂ ಈಗ EFP ಯು ಬಹಳ ಹೆಚ್ಚಾಗಿರುತ್ತದೆ. ಆದರೆ ೧೯೮೦ರಲ್ಲೇ, ಪ್ರತಿ ವ್ಯಕ್ತಿಯ EFP ಯು ಅಮೆರಿಕಾದಲ್ಲಿ ೧೦ ಹೆಕ್ಟೇರ್ಸ್ ಇದ್ದರೆ, ಆಸ್ಟ್ರೇಲಿಯಾದಲ್ಲಿ ೮ ಹೆಕ್ಟೇರ್ಸ್, ಯೂರೋಪ್‌ನಲ್ಲಿ ೫ ಹೆಕ್ಟೇರ್ಸ್ ಇತ್ತು. ಇತ್ತ ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಕ್ರಮವಾಗಿ ೧.೪ ಮತ್ತು ೧.೫ ಹೆಕ್ಟೇರ್ಸ್ ಇತ್ತು. ಹಾಗಾಗಿ ಭೂಮಿಯು ಎದುರಿಸಬೇಕಾಗಿರುವ ದುರಂತಕ್ಕೆ ಮೂರನೆಯ ಜಗತ್ತಿನ ಜನರು ಕಾರಣರಲ್ಲ. ಬದಲಾಗಿ ಭಾರತವನ್ನೂ ಒಳಗೊಂಡಂತೆ ವಿಶ್ವದ ಕೆಲವೇ ಶ್ರೀಮಂತರು ಈ ಪಾರಿಸರಿಕ ಅವನತಿಗೆ ಕಾರಣರು.

ಟ್ಯಾಗೋರ್ ಮತ್ತು ಗಾಂಧೀಜಿ ನಗರೀಕರಣವನ್ನು ಬಯಸಿರಲಿಲ್ಲ. ೧೯೨೮ ರಲ್ಲಿ ಟ್ಯಾಗೋರರು ತಮ್ಮ 'ಸಮಭಯ್ ನೀತಿ'(ಸಹಕಾರೀ ತತ್ವ) ಎಂಬ ಲೇಖನದಲ್ಲಿ ಬರೆಯುತ್ತಾರೆ: "ಸಾಮಾಜೀಕರಣವೇ ಹಳ್ಳಿಗಳ ಜೀವಾಳ. ಇದು ಪಟ್ಟಣಗಳಲ್ಲಿ ಸಾಧ್ಯವಿಲ್ಲ. ಒಂದು ಕಾರಣವೆಂದರೆ, ಪಟ್ಟಣಗಳು ದೊಡ್ಡವಿರುವುದರಿಂದ ಸಾಮಾಜಿಕ ಸಂಬಂಧಗಳು ಜಾಳಾಗಿರುತ್ತವೆ. ಮತ್ತೊಂದು ಕಾರಣವೆಂದರೆ, ವ್ಯಾಪಾರ, ವಿಶೇಷ ಸವಲತ್ತುಗಳು ಮತ್ತು ಅವಶ್ಯಕತೆಗಳಿಂದಾಗಿ ಹೆಚ್ಚಿರುವ ಜನಸಂಖ್ಯೆ. ಅಲ್ಲಿ ಮನುಷ್ಯರು ತಮ್ಮ ಸ್ವಂತದ ಅಗತ್ಯಗಳನ್ನು ತೃಪ್ತಿಪಡಿಸಿಕೊಳ್ಳುವುದಕ್ಕೆ ಮೊದಲ ಆದ್ಯತೆ ಕೊಡುತ್ತಾರೆ, ಪರಸ್ಪರರ ಅಗತ್ಯಗಳಿಗಲ್ಲ. ಇದರಿಂದಾಗಿ ಒಂದೇ ಪ್ರದೇಶದಲ್ಲಿ ವಾಸಿಸುವ ನೆರೆಹೊರೆಯವರು ಪರಸ್ಪರ ಪರಿಚಯವಿಲ್ಲದಿದ್ದರೆ ಅವಮಾನವೆಂದೇನೂ ಅನಿಸುವುದಿಲ್ಲ ಅವರಿಗೆ. ನಮ್ಮ ಬದುಕಿನ ಸಂಕೀರ್ಣತೆಯೊಂದಿಗೆ ಈ ಅಪರಿಚಿತತೆಯು ಕ್ರಮೇಣ ಹೆಚ್ಚುತ್ತಿದೆ". ೧೯೩೦ ರಲ್ಲಿ ಒಂದು ಹಳ್ಳಿಯ ವಾರ್ಷಿಕ ಹಬ್ಬವೊಂದರಲ್ಲಿ, ಟ್ಯಾಗೋರರು, ಹಳ್ಳಿಗರನ್ನುದ್ದೇಶಿಸಿ ಹೆಚ್ಚು ನಿರ್ದಿಷ್ಟವಾಗಿ ಅಪರಿಚಿತತೆಯ ಬಗ್ಗೆ ಮಾತನಾಡುತ್ತಾರೆ: "ನೀವು ಬಹಳ ದೂರ ಹೋಗಬೇಕಿಲ್ಲ. ನಾವು ವಾಸಿಸುವ ಕೋಲ್ಕತ್ತಾವನ್ನೇ ತಗೆದುಕೊಳ್ಳಿ. ನೆರೆಹೊರೆಯವರೊಂದಿಗೆ ಯಾವ ಸಂಬಂಧವೂ ಇಲ್ಲದೇ ಇರುವುದರಿಂದ ಅವರ ಸುಖ-ದುಃಖಗಳಲ್ಲಿ, ಸಂಕಷ್ಟಗಳಲ್ಲಿ ಅಕ್ಕಪಕ್ಕದವರು ಯಾರೂ ಭಾಗಿಯಾಗುವುದಿಲ್ಲ". ಪಶ್ಚಿಮದ ಸಮಾಜದಲ್ಲಿರುವ ಈ ಅಪರಿಚಿತತೆಯ ಬಗ್ಗೆ ಇಂಗ್ಲಿಷ್ ಕವಿ ಟಿ.ಎಸ್.ಎಲಿಯೆಟ್ ತನ್ನ ಒಂದು ಕವನದಲ್ಲಿ ಹೀಗೆ ಹೇಳಿದ್ದಾನೆ: "ದಕ್ಷಿಣದ ಉಷ್ಣವಲಯಗಳಲ್ಲಿ ಮಾತ್ರವಿಲ್ಲ ಮರುಭೂಮಿ/ ಇದೆ ಇಲ್ಲೇ ನಿನ್ನ ಸಮೀಪದಲ್ಲಿ / ನುಸುಳಿಕೊಂಡಿದೆ ಸುರಂಗ ರೈಲಿನಲ್ಲಿ ಮರುಭೂಮಿ / ಇದೆ ಇಲ್ಲೇ ನಿನ್ನ ನೆರೆಹೊರೆಯ ಹೃದಯಗಳಲ್ಲಿ".

ಈ ಮಾನವ ಕೇಂದ್ರಿತ ಆಂಥ್ರೊಪೋಸೀನ್ ಯುಗದಲ್ಲಿ ಪ್ರಕೃತಿ ಮತ್ತು ಸಮಾಜಗಳೆರಡೂ ನುಚ್ಚುನೂರಾಗುತ್ತಿವೆ. ಹಿಂಸೆ, ಅಸತ್ಯ ಮತ್ತು ಶ್ರೀಮಂತ-ಬಡವರ ನಡುವಿನ ಕಂದಕ ತೀವ್ರವಾಗಿ ಹೆಚ್ಚುತ್ತಿವೆ. ಎಂಥ ಭಾರತದ ಕನಸನ್ನು ಕಂಡಿದ್ದರು ಗಾಂಧೀಜಿ? ಅಕ್ಟೋಬರ್ ೫ರಂದು ಪಂಡಿತ್ ನೆಹರೂ ಅವರಿಗೆ ಬರೆದ ಒಂದು ಪತ್ರದಲ್ಲಿ ಗಾಂಧೀಜಿ ಹೇಳುತ್ತಾರೆ: "ನಾನು ಮೊದಲು ಹೇಳಲಿಚ್ಛಿಸುವುದು, ನಮ್ಮಿಬ್ಬರ ದೃಷ್ಟಿಕೋನದಲ್ಲಿರುವ ವ್ಯತ್ಯಾಸದ ಬಗ್ಗೆ. ಅವು ಮೂಲಭೂತ ವ್ಯತ್ಯಾಸಗಳೇ ಆಗಿದ್ದಲ್ಲಿ, ಜನತೆಗೂ ಅದು ತಿಳಿಯಬೇಕು ಎಂಬುದು ನನ್ನ ಅನಿಸಿಕೆ". ನಂತರ ಆ ಪತ್ರದಲ್ಲಿ ಭವಿಷ್ಯದ ಭಾರತ ಮತ್ತು ವಿಶ್ವದ ಬಗೆಗಿನ ತಮ್ಮ ಕನಸನ್ನು ಹೀಗೆ ವ್ಯಕ್ತಪಡಿಸುತ್ತಾರೆ: "ಭಾರತಕ್ಕೆ, ಆ ಮೂಲಕ ವಿಶ್ವಕ್ಕೂ, ನಿಜವಾದ ಸ್ವಾತಂತ್ರ್ಯವು ದೊರಕಬೇಕೆಂದರೆ, ತಕ್ಷಣವೇ ಆಗಲೀ ಅಥವಾ ನಂತರವೇ ಆಗಲೀ, ಜನರು ಪಟ್ಟಣಗಳಲ್ಲಲ್ಲ, ಹಳ್ಳಿಗಳಲ್ಲಿ ವಾಸಿಸಬೇಕೆನ್ನುವ, ಹಾಗೆಯೇ ಅರಮನೆಗಳಲ್ಲಲ್ಲ, ಗುಡಿಸಲುಗಳಲ್ಲಿ ವಾಸಿಸಬೇಕೆನ್ನುವ ವಾಸ್ತವಾಂಶವನ್ನು ಅರಿತುಕೊಳ್ಳುವುದರ ಮೂಲಕ ಮಾತ್ರ ಎಂಬುದು ನನಗೆ ಮನವರಿಕೆಯಾಗಿದೆ. ಕೋಟ್ಯಂತರ ಜನರು ಪಟ್ಟಣಗಳಲ್ಲಿ, ಅರಮನೆಗಳಲ್ಲಿ ಪರಸ್ಪರ ಶಾಂತಿ ನೆಮ್ಮದಿಯಿಂದಿರಲು ಎಂದಿಗೂ ಸಾಧ್ಯವಿಲ್ಲ. ಆಗ ಬೇರೆ ದಾರಿ ಕಾಣದೆ ಅವರು ಹಿಂಸೆ ಮತ್ತು ಸುಳ್ಳಿನ ಮೊರೆಹೋಗಬೇಕಾಗುತ್ತದೆ...... ಆಧುನಿಕ ವಿಜ್ಞಾನಕ್ಕೆ

ಸರಿಯಾದ ಹೊಸ ಬಟ್ಟೆ ತೊಡಿಸಿ, ಹೊಸ ಶೈಲಿಯಲ್ಲಿ ಅದನ್ನು ಕಾಣಿಸಬೇಕಾಗಿರುವ ಅಗತ್ಯವಿದೆ. ಆ ಆಧುನಿಕ ವಿಜ್ಞಾನವನ್ನು ನಾನು ಮೆಚ್ಚಿಕೊಳ್ಳುತ್ತೇನಾದರೂ(ಇದನ್ನವರು ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಹೇಳಿಲ್ಲ)........ನನ್ನ ಕನಸಿನ ಹಳ್ಳಿ ನನ್ನ ಮನಸ್ಸಿನಲ್ಲಿ ಇನ್ನೂ ಇದ್ದೇ ಇದೆ.... ನನ್ನ ಮನಸ್ಸಿನಲ್ಲಿರುವ ಆದರ್ಶ ಹಳ್ಳಿಯಲ್ಲಿ ಬುದ್ಧಿವಂತ ಜನರಿರುತ್ತಾರೆ. ಅವರು ಪ್ರಾಣಿಗಳಂತೆ ಕೊಳಚೆ ಮತ್ತು ಕತ್ತಲಲ್ಲಿ ಬದುಕುವುದಿಲ್ಲ. ಗಂಡು ಹೆಣ್ಣುಗಳು ಮುಕ್ತವಾಗಿರುತ್ತಾರೆ. ಜಗತ್ತಿನ ಯಾರ ಎದುರೇ ಆದರೂ ಅವರು ತಮ್ಮತನವನ್ನು ಕಾಪಾಡಿಕೊಳ್ಳಲು ಶಕ್ತರಾಗಿರುತ್ತಾರೆ".

ಇದಕ್ಕುತ್ತರವಾಗಿ ಅಕ್ಟೋಬರ್ ೯ ರಂದು ಪಂಡಿತ್ ನೆಹರೂ ಅವರು ಗಾಂಧೀಜಿಗೆ ಬರೆದ ಪತ್ರದಲ್ಲಿ ಹೀಗೆ ಹೇಳುತ್ತಾರೆ: "ನೀವು 'ಹಿಂದ್ ಸ್ವರಾಜ್' ಬರೆದು ೩೮ ವರ್ಷಗಳಾದವು. ಈ ನಡುವೆ ಜಗತ್ತು ಸಂಪೂರ್ಣವಾಗಿ ಬದಲಾಗಿಹೋಗಿದೆ, ಬಹುಶಃ ತಪ್ಪುದಾರಿಯಲ್ಲಿ.... ಇಡೀ ಜಗತ್ತು ಅಥವಾ ಅದರ ಬಹುದೊಡ್ಡ ಭಾಗ ಆತ್ಮಹತ್ಯೆ ಮಾಡಿಕೊಳ್ಳಲು ಸಜ್ಜಾಗಿರುವಂತೆ ಕಾಣುತ್ತಿದೆ ಎಂದು ನೀವು ಹೇಳುತ್ತಿರುವುದು ಸರಿಯಾಗಿಯೇ ಇದೆ. ನಾಗರಿಕತೆಯಲ್ಲಿ ಬಿತ್ತಿದ್ದ ಕೇಡಿನ ಬೀಜವೊಂದು ಬೆಳೆದು ನಿಂತಿರುವುದು ಅನಿವಾರ್ಯ ವಿದ್ಯಮಾನವಾಗಿರಬಹುದು". ಪಶ್ಚಿಮದ ಅಭಿವೃದ್ಧಿ ಮಾದರಿಯು ತಪ್ಪುದಾರಿಯಲ್ಲಿ ನಡೆಯುತ್ತಿದೆ, ಆತ್ಮಹತ್ಯೆಯ ಸನ್ನಾಹದಲ್ಲಿದೆ, ಅದೊಂದು ಕೇಡಿನ ಬೀಜ ಎಂಬುದು ಗೊತ್ತಿದ್ದರೂ ನಾವು ಅದರ ವಿಷವನ್ನು ಕುಡಿದಿದ್ದೇವೆ. ಈಗ ನಾವಿರುವ ಭಾರತವೆಂದರೆ, ತೀವ್ರ ಹಸಿವಿನಲ್ಲಿ ಬದುಕುವ ಜನರಿರುವ, ಪ್ರತಿ ೩ ಸೆಕೆಂಡಿಗೊಂದು ಮಗು ಅಪೌಷ್ಟಿಕತೆಯಿಂದ ಸಾಯುವ, ಈ ಹತ್ತು ವರ್ಷಗಳಲ್ಲಿ ಸುಮಾರು ೧ ಮಿಲಿಯನ್ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ದೇಶ. ೧೮-೧೯ನೇ ಶತಮಾನಗಳಲ್ಲಿನ ವಸಾಹತೀಕರಣದ ನಂತರ, ಇಡೀ ವಿಶ್ವವು 'ಕೇಂದ್ರ' ಮತ್ತು 'ಅಂಚು'ಗಳೆಂದು ಇಬ್ಭಾಗವಾಗಿದ್ದರಿಂದ ಪಶ್ಚಿಮವು ಈಗ ಕಾಣುತ್ತಿರುವಂತೆ ಅಭಿವೃದ್ಧಿ ಹೊಂದಲು ಸಾಧ್ಯವಾಗಿರುವುದು. ಅಂಚಿನಲ್ಲಿರುವವರ ಹುಟ್ಟಡಗಿಸುವುದು, ಸುಲಿಗೆ ಮಾಡುವುದು, ಅವರನ್ನು ಶಿಕ್ಷಣವಂಚಿತರನ್ನಾಗಿ ಮಾಡುವುದು, ಅವರ ಕಸುಬುಗಳನ್ನು ನಾಶಮಾಡುವುದು ಇತ್ಯಾದಿಗಳಿಂದ ಪಶ್ಚಿಮವು ಈ ಮಟ್ಟಕ್ಕೆ ಬಂದಿದೆ. ದಾದಾಭಾಯಿ ನವರೋಜಿ, ರಮೇಶ್‌ಚಂದ್ರದತ್ತ, ಗಣೇಶ್ ದೇವಸ್ಕರ್ ಅವರುಗಳು ತಮ್ಮ ಪುಸ್ತಕಗಳಲ್ಲಿ ಇದನ್ನು ವಿವರಿಸಿದ್ದಾರೆ. ಚಾರ್ಲ್ಸ್ ಡಾರ್ವಿನ್ ಒಂದು ಕಡೆ ಬರೆಯುತ್ತಾನೆ: "ಯೂರೋಪಿಯನ್ನರು ನಡೆದಲ್ಲೆಲ್ಲ ಸಾವು ಹಿಂಬಾಲಿಸಿದಂತೆ ತೋರುತ್ತದೆ". ರಾಬಿನ್ಸನ್ ಕ್ರೂಸೋದ ಡೇನಿಯಲ್ ಡೆಫೋ ಸ್ಪೇನೀಯರನ್ನು ಅಮೆರಿಕದಲ್ಲಿನ ಅವರ ಬರ್ಬರಕೃತ್ಯಗಳಿಗಾಗಿ ಖಂಡಿಸುತ್ತಾನೆ: "ಲಕ್ಷಾಂತರ ಜನರನ್ನು ಅವರು ನಾಶಮಾಡಿದ್ದಾರೆ....ಅದೊಂದು ಕೊಲೆಗಡುಕತನ, ರಕ್ತಸಿಕ್ತ ಮತ್ತು ಅಸಹಜ ಕ್ರೌರ್ಯ, ದೇವರಿಗಾಗಲೀ ಮನುಷ್ಯರಿಗಾಗಲೀ ಅಸಮರ್ಥನೀಯವಾದದ್ದು; ಆದ್ದರಿಂದಲೇ 'ಸ್ಪೇನಿಯರ್ಡ್' ಎಂಬ ಹೆಸರನ್ನು ನೆನೆದರೇ ಜನ ಹೆದರುತ್ತಾರೆ; ಅದು ಮನುಷ್ಯಕುಲಕ್ಕೇ ಕಂಟಕಪ್ರಾಯ ಎಂದು ಬಗೆಯುತ್ತಾರೆ".


ನಮ್ಮ 'ಅಂಚು' ಎಲ್ಲಿದೆ? ನಾವು ಸಿಂಗೂರ್, ನಂದಿಗ್ರಾಮ, ನಿಯಾಮ್‌ಗಿರಿ, ಜಗತ್‌ಸಿಂಗ್‌ಪುರಗಳ ಮೇಲೆ ಆಕ್ರಮಣ ಮಾಡುತ್ತಿದ್ದೇವೆ. ಲಕ್ಷಾಂತರ ಆದಿವಾಸಿಗಳು, ದಲಿತರು, ರೈತರನ್ನು ಅವರ ನೆಲೆಯಿಂದ ಒಕ್ಕಲೆಬ್ಬಿಸುತ್ತಿದ್ದೇವೆ, ಅವರ ಕಸುಬುಗಳಿಂದ ವಿಮುಖರನ್ನಾಗಿಸುತ್ತಿದ್ದೇವೆ, ನಮ್ಮ ದೇಶದ ಸುಂದರ ಮತ್ತು ಸಂಪದ್ಭರಿತ ಪರಿಸರವನ್ನು ನಾಶಮಾಡುತ್ತಿದ್ದೇವೆ. ಜಾಗತೀಕರಣದ ಕಾರಣದಿಂದ ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆಹೊಡೆಯುವುದು ಮತ್ತು ಶೋಷಿಸುವುದು ನಡೆಯುತ್ತಲೇ ಇದೆ.

ರವೀಂದ್ರನಾಥರು ಮತ್ತು ಗಾಂಧೀಜಿ, ಸಮತೆ ಮತ್ತು ನಗರೀಕರಣದಿಂದ ವಿಮುಖವಾದ ಗ್ರಾಮಕೇಂದ್ರಿತ ಅಭಿವೃದ್ಧಿಯನ್ನು ಹೊಂದುವ ಹೊಸ ನೋಟವನ್ನು ಭಾರತಕ್ಕೆ ನೀಡಿದ್ದರು. ೧೯೨೨ ರಲ್ಲಿ 'cooperative' ಎನ್ನುವ ತಮ್ಮ ಲೇಖನದಲ್ಲಿ ಟ್ಯಾಗೋರರು, ಹಳ್ಳಿಗಳ ಅಭಿವೃದ್ಧಿ ಯೋಜನೆಯನ್ನು ವಿವರಿಸಿದ್ದಾರೆ: "ನಾವು ನಮ್ಮ ಎಲ್ಲ ಅವಶ್ಯಕತೆಗಳನ್ನು ಪೂರೈಸುವಂತೆ ನಮ್ಮ ಹಳ್ಳಿಗಳನ್ನು ಪುನರ್ರೂಪಿಸಬೇಕು. ಒಂದು ವಲಯವನ್ನು ರೂಪಿಸುವುದು ಅಗತ್ಯ. ವಲಯಗಳ ಮುಖ್ಯಸ್ಥರು ಸಂಘಟಿತರಾಗಿದ್ದು ಸ್ವತಃ ತಂತಮ್ಮ ಕೊರತೆಗಳನ್ನು ನಿವಾರಿಸಿಕೊಳ್ಳುವ ಕ್ರಮಗಳನ್ನು ಕೈಗೊಂಡಾಗ ಮಾತ್ರ ಸ್ವಾವಲಂಬನೆಯ ತತ್ವ ಇಡೀ ದೇಶದಲ್ಲಿ ನಿಜವಾಗುತ್ತದೆ. ತಮ್ಮದೇ ಆದ ಶಾಲೆಗಳನ್ನು, ಸಹಕಾರೀ ಸಂಘಗಳನ್ನು, ಬ್ಯಾಂಕುಗಳನ್ನು ಆರಂಭಿಸಲು ಹಳ್ಳಿಗರನ್ನು ಪ್ರೋತ್ಸಾಹಿಸುವುದೂ, ಸಹಾಯ ಮಾಡುವುದೂ ಅಗತ್ಯ. ಈ ರೀತಿ ಹಳ್ಳಿಗಳು ಸ್ವಾವಲಂಬಿಯಾಗಿದ್ದು ಒಗ್ಗಟ್ಟಾಗಿದ್ದರೆ ಮಾತ್ರ ನಾವು ಬದುಕುಳಿಯುತ್ತೇವೆ. ನಮ್ಮ ಅತಿ ದೊಡ್ಡ ಸಮಸ್ಯೆಯೆಂದರೆ, ಹಳ್ಳಿಗಳನ್ನು ಪುನರ್ರೂಪಿಸುವುದು ಹೇಗೆ ಎಂಬುದು".

ಸಮಾಜವಾದವು ಒಂದು ಹೊಸ ದಾರಿಯನ್ನು ತೋರಿಸುತ್ತದೆ ಎಂಬ ಭರವಸೆ ನಮಗೆಲ್ಲ ಇತ್ತು. ಆದರೆ, ಸೋವಿಯತ್ ಯೂನಿಯನ್‌ನಲ್ಲಿ ೭೦ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಅದು ಕುಸಿದುಬಿತ್ತು. ಚೈನಾವು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಸ್ವಾತಂತ್ರ್ಯವುಳ್ಳ ಕೈಗಾರಿಕೀಕರಣವನ್ನು ಅಳವಡಿಸಿಕೊಂಡಿದೆ. ಕಮ್ಯುನಿಸಂ ಸ್ಥಾಪನೆಯಾದರೆ ಉತ್ಪಾದನಾ ಶಕ್ತಿಯು ಅಪಾರ ಪ್ರಮಾಣದಲ್ಲಿ ಹೆಚ್ಚಲಿದೆ ಎಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ನುಡಿದಿದ್ದರು. ತಮ್ಮ 'Communist manifesto' ದಲ್ಲಿ ಮಾರ್ಕ್ಸ್-ಎಂಗೆಲ್ಸ್, ಕಮ್ಯುನಿಸ್ಟ್ ಸಮಾಜವು ಒಟ್ಟಾರೆ ಉತ್ಪಾದನಾ ಶಕ್ತಿಯನ್ನು 'ಎಷ್ಟು ಸಾಧ್ಯವೋ ಅಷ್ಟು ವೇಗವಾಗಿ ಹೆಚ್ಚಿಸಲಿದೆ' ಎಂದು ಹೇಳಿದ್ದಾರೆ. ಇನ್ನೂ ಹೆಚ್ಚು ಸ್ಪಷ್ಟವಾಗಿ, ಎಂಗೆಲ್ಸ್ ತನ್ನ 'Principles of communism' ನಲ್ಲಿ ಬರೆಯುತ್ತಾನೆ: "ಇಲ್ಲಿಯವರೆಗೂ ಉತ್ಪಾದನಾ ಶಕ್ತಿಯು ಕುಂಠಿತವಾಗಿದ್ದು, ಎಲ್ಲರಿಗೂ ಆಗುವಷ್ಟು ಉತ್ಪಾದನೆಯನ್ನು ಮಾಡಲಾಗದಿದ್ದದ್ದು ಸಹಜವೇ.... ಈಗ, ಹೇಗಾದರೂ, ದೊಡ್ಡ ಪ್ರಮಾಣದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ವಾತಾವರಣ ನಿರ್ಮಾಣವಾಗಿರುವಾಗ, ಅಲ್ಪಾವಧಿಯಲ್ಲೇ ಉತ್ಪಾದಕ ಶಕ್ತಿಯನ್ನು ಮಿತಿಯಿಲ್ಲದಷ್ಟು ಹೆಚ್ಚಿಸುವ ಸಾಧನಗಳು ಲಭ್ಯವಿರುವುದರಿಂದ, ಬಂಡವಾಳ ಮತ್ತು ಉತ್ಪಾದಕ ಶಕ್ತಿಯನ್ನು ಹಿಂದೆಂದೂ ಕಂಡಿರದಷ್ಟು ಪ್ರಮಾಣದಲ್ಲಿ ಹೆಚ್ಚಿಸಬಹುದು". ತಲಾ ಉತ್ಪಾದನೆಯಲ್ಲಿ ಅಮೆರಿಕಾವನ್ನು ಮೀರಿಸಲು USSR ಪ್ರಯತ್ನಿಸಿ ಸೋತಿತು. ೨೦೦೫ ರಲ್ಲಿ ಅಮೆರಿಕಾದ ಪ್ರಸಿದ್ಧ ಮಾರ್ಕ್ಸ್‌ವಾದಿ ನಿಯತಕಾಲಿಕೆ 'Monthly Review' ದ ಸಂಪಾದಕರಾಗಿದ್ದ ದಿವಂಗತ ಹ್ಯಾರಿ ಮ್ಯಾಗ್‌ಡಾಫ್, ತಮ್ಮ ಒಂದು ಪತ್ರದಲ್ಲಿ ಬರೆಯುತ್ತಾರೆ: "ನಾನು ಯುದ್ಧೋತ್ಪಾದಕ ಮಂಡಳಿಯಲ್ಲಿ ಕೆಲಸ ಮಾಡುತ್ತಿದ್ದಾಗ, ರಷ್ಯಾದ ಖರೀದಿ ಯೋಜನೆಯ ಸದಸ್ಯರನ್ನು ಭೇಟಿಯಾಗಿದ್ದೆ. ಬೇರೆಲ್ಲ ವಿಷಯಗಳಿಗಿಂತ ನನ್ನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿದ್ದೆಂದರೆ, ಮಹಾನ್ ಆಗಿರುವುದರ ಮೇಲಿನ ಅವರ ಆರಾಧನೆ, ಅಮೆರಿಕಾದ ಮಟ್ಟಕ್ಕೆ ತಲುಪುವುದರತ್ತ ಕೇಂದ್ರೀಕರಿಸಿದ ಅವರ ಗಮನ, ಅದನ್ನು ಮೀರಿಸುವ ಅವರ ಗುರಿ".

ಮಾರ್ಕ್ಸ್‌ವಾದಿ ವಿದ್ವಾಂಸರುಗಳು ಇಂದು, ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ಮಾರ್ಕ್ಸ್‌ನ ನೋಟಗಳ ಬಗ್ಗೆ ಸಾಕಷ್ಟು ಸಂಶೋಧನೆ ನಡೆಸುತ್ತಿದ್ದಾರೆ. ಮಾರ್ಕ್ಸ್ ಕನಸು ಕಂಡಿದ್ದು: "ಕಮ್ಯುನಿಸ್ಟ್ ಸಮಾಜವು, ನಾನು ಇಂದೊಂದು ಕೆಲಸ ಮಾಡಲು, ನಾಳೆ ಮತ್ತೊಂದು ಕೆಲಸ ಮಾಡಲು, ಮಧ್ಯಾಹ್ನ ಮೀನು ಹಿಡಿದು, ಸಂಜೆ ಪ್ರಾಣಿಗಳನ್ನು ಸಾಕಿ, ರಾತ್ರಿ ಊಟದ ನಂತರ ಟೀಕಿಸುತ್ತಾ ಕೂರುವುದನ್ನು(ಜರ್ಮನ್ ತಾತ್ವಿಕತೆ) ಸಾಧ್ಯವಾಗಿಸುತ್ತದೆ". ಗಾಂಧೀಜಿ ಮತ್ತು ರವೀಂದ್ರನಾಥರು ಕನಸು ಕಂಡಿದ್ದು ಮತ್ತು ಕೆಲಸ ಮಾಡಿದ್ದು, ಸಮತೆಯುಳ್ಳ, ಹಿಂಸೆಯಿಲ್ಲದ, ಸರಳ ಜೀವನದ ಆದರೆ ಸಮೃದ್ಧ ಸಂಸ್ಕೃತಿಯ ಸಮಾಜಕ್ಕಾಗಿ. ಗಾಂಧೀಜಿ ಹೇಳುತ್ತಾರೆ: "ಶೋಷಣೆಯೇ ಎಲ್ಲಕ್ಕಿಂತ ದೊಡ್ಡ ಹಿಂಸೆ". ಟ್ಯಾಗೋರ್ ಹೇಳುತ್ತಾರೆ: "ಇಲ್ಲ, ನಿಮಗೆ ಸ್ವರ್ಗ ಸಿಗುವುದಿಲ್ಲ, ಎಷ್ಟರ ಮಟ್ಟಿಗೆ ಸುಖದ ಹಿಂದೆ ಬೀಳುವಿರೋ ಅಷ್ಟರ ಮಟ್ಟಿಗೆ ನಿಮಗೆ ಸ್ವರ್ಗ ಸಿಗುವುದಿಲ್ಲ". ಮನುಷ್ಯರು ಎಲ್ಲಿಯವರೆಗೆ 'ಭೋಗದ ಉರುಳಿ'ನಿಂದ ಹೊರಬರುವುದಿಲ್ಲವೋ ಅಲ್ಲಿಯವರೆಗೆ ಈ ಜಗತ್ತು ಎದುರಿಸುತ್ತಿರುವ ವಿಪತ್ತನ್ನು ತಡೆಗಟ್ಟಲು ಸಾಧ್ಯವಿಲ್ಲ.

'ನೀರು, ಕಾಡು ಮತ್ತು ಭೂಮಿಯ ಹಕ್ಕುಗಳನ್ನು ನಮಗೆ ಕೊಡಿ', 'ವಾಲ್‌ಸ್ಟ್ರೀಟ್‌ಗೆ ಮುತ್ತಿಗೆ ಹಾಕಿ', 'ಬೇರೊಂದು ಜಗತ್ತು ಸಾಧ್ಯವಿದೆ', 'ಅರಬ್ ವಸಂತ' ಗಳಂತಹ ಘೋಷಣೆಗಳನ್ನು ಕೇಳಿದಾಗ, ಬದಲಾವಣೆಯ ಗಾಳಿ ಬೀಸುತ್ತಿರುವುದು ಅರಿವಿಗೆ ಬರುತ್ತದೆ. ಕೊಳೆಯುತ್ತಿರುವ ಗ್ರಾಹಕ ಕೇಂದ್ರಿತ ಔದ್ಯಮಿಕ ಸಮಾಜವನ್ನು ಬದಲಾಯಿಸಿ ಗಾಂಧೀಜಿ ಮತ್ತು ರವೀಂದ್ರನಾಥರು ಕಂಡ ಹೊಸ ಸಮಾಜವನ್ನು ಕಟ್ಟಲು ನಾವು, ಶಂಕರ್ ಗುಹಾ ನಿಯೋಗಿ ಅವರು ಚಲಾವಣೆಗೆ ತಂದಿರುವ 'ಹೋರಾಡು ಮತ್ತು ಕಟ್ಟು' ಎಂಬ ಘೋಷವಾಕ್ಯದೊಂದಿಗೆ ಕೈಜೋಡಿಸಬೇಕಿದೆ. ಟ್ಯಾಗೋರರು ಹೇಳಿದ್ದರು: "ಮನುಷ್ಯನಲ್ಲಿ ನಂಬಿಕೆ ಕಳೆದುಕೊಳ್ಳುವುದು ಮಹಾಪಾಪ" ಎಂದು.



(ಕೊಲ್ಕತ್ತಾದಲ್ಲಿನ ವಿಜ್ಞಾನ ಮತ್ತು ತಂತ್ರಜ್ಞಾನಗಳ ವಸ್ತು ಸಂಗ್ರಹಾಲಯದ ನಿರ್ದೇಶಕರಾಗಿದ್ದ ಸಮರ್ ಬಾಗ್ಚಿ, ವಿಜ್ಞಾನ, ತಂತ್ರಜ್ಞಾನ,ಪರಿಸರ ಮತ್ತು ಜನಸಮುದಾಯಗಳ ನಡುವಣ ಸಂಬಂಧಗಳ ಬಗ್ಗೆ ವಿಫುಲವಾಗಿ ಬರೆದವರು ಮತ್ತು ರಾಷ್ಟ್ರೀಯ ಜನಾಂದೋಲನಗಳ ಮಹಾಮೈತ್ರಿಯ ಜೊತೆಗೂ ಕೆಲಸ ಮಾಡಿದವರು)

(ಕೃಪೆ: *ಜನತಾ*, ೨, ಅಕ್ಟೋಬರ್, ೨೦೧೬)

ವಿಶೇಷ ಲೇಖನ-೨

೨೧ನೇ ಶತಮಾನದ ಭಾರತದಲ್ಲಿ ಸಮಾಜವಾದ ಮತ್ತು ಸಮಾಜವಾದಿಗಳು ಎದುರಿಸಬೇಕಾದ ಸವಾಲುಗಳು:

ನವ ಸಮಾಜವಾದಕ್ಕೊಂದು ಪ್ರಣಾಳಿಕೆ


ಮೂಲ ಇಂಗ್ಲಿಷ್: ಪ್ರೊ. ಆನಂದ ಕುಮಾರ್
ಕನ್ನಡಕ್ಕೆ: ಎಂ. ರಾಜು

ಸಮಾಜವಾದದ ಕಾಲ ಮುಗಿಯಿತು ಎನ್ನುವ ಮಾತು ಚಲಾವಣೆಗೆ ಬಂದ ಹೊತ್ತಿನಲ್ಲೇ ಈ ಮಾತಿಗೆ ಕಾರಣವಾದ ಜಾಗತೀಕರಣದ ದುಷ್ಪರಿಣಾಮಗಳ ವಿರುದ್ಧ ಜಗತ್ತಿನಾದ್ಯಂತ ಹೋರಾಟ ಆರಂಭಿಸಿದವರು ಸಮಾಜವಾದಿಗಳೇ. ಆದರೆ ಭಾರತದಲ್ಲಿ ಲೋಹಿಯಾ-ಜೆಪಿ ನಂತರದಲ್ಲಿ ದಾರಿ ತಪ್ಪಿ, 'ಸಂಕುಚಿತ ಸಾಮಾಜಿಕ ನ್ಯಾಯ'ದ ರಾಜಕಾರಣದಲ್ಲೇ ಮುಳುಗಿದ ಸಮಾಜವಾದಿಗಳು ಈ ಹೋರಾಟಗಳಲ್ಲಿ ಭಾಗವಹಿಸಿದ್ದು ಅಧಿಕಾರ ರಾಜಕಾರಣದ ಭಾಗವಾಗಿ ಮಾತ್ರವಾದ್ದರಿಂದ ಅವರ ತಾತ್ವಿಕ ಬದ್ಧತೆ ಮಸುಕಾಗುತ್ತಾ ಹೋಯಿತು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯ ಸ್ಫೂರ್ತಿಯಲ್ಲಿ ಅದಕ್ಕೊಂದು ಪ್ರಗತಿಪರತೆಯನ್ನು ಕ್ರಾಂತಿಕಾರಕತೆಯನ್ನು ಪ್ರದಾನ ಮಾಡಿದ ಪರಂಪರೆಗೆ ಸೇರಿದ ಭಾರತದ ಸಮಾಜವಾದಿಗಳಿಗೆ ಇನ್ನೂ ಕಾಲ ಮಿಂಚಿಲ್ಲ. ಆತ್ಮಾವಲೋಕನದ ಮೂಲಕ ಮತ್ತೆ ಜನಪರ ಹೋರಾಟಗಳಿಗೆ ಸಿದ್ಧವಾಗುವ ಶಕ್ತಿ ಅವರಲ್ಲಿದೆ ಎನ್ನುವ ಲೇಖಕರು, ಅದಕ್ಕೆ ಅಗತ್ಯವಾದ ಪ್ರಣಾಳಿಕೆಯೊಂದನ್ನು ಇಲ್ಲಿ ಪ್ರಸ್ತುತಪಡಿಸಿದ್ದಾರೆ.-ಸಂ.

ದಮನಿತರಿಗೆ, ವಂಚಿತರಿಗೆ ಮತ್ತು ಮಾನವ ಕೋಟಿಯ ನಡುವೆ ಅಪಮಾನಗೊಳಿಸಲ್ಪಟ್ಟ ವರ್ಗಗಳಿಗೆ ಸಮಾಜವಾದದ ದರ್ಶನವು ಒಂದು ಆಕರ್ಷಕ ವಿದ್ಯಮಾನ. ಏಕೆ? ಏಕೆಂದರೆ ಸ್ವಾತಂತ್ರ್ಯ, ನ್ಯಾಯ, ಘನತೆ, ಸಮಾನತೆ, ಏಳಿಗೆ, ಶಾಂತಿ ಮತ್ತು ಸೌಹಾರ್ದಗಳ ಒಗ್ಗೂಡುವಿಕೆಯಿಂದ ಮೂಡಿದ ಸುಂದರವಾದ ಕಾಮನಬಿಲ್ಲನ್ನು ಸಮಾಜವಾದವು ಪ್ರಸ್ತುತಪಡಿಸುತ್ತದೆ. ಹತ್ತೊಂಭತ್ತನೆಯ ಶತಮಾನದಿಂದಲೂ ಅದು ಬಂಡವಾಳಶಾಹಿಗೆ ಒಂದು ಪರ್ಯಾಯವಾಗಿ ಮೂಡಿಬಂದಿದೆ. ರಾಜಕೀಯ ವ್ಯವಸ್ಥೆಯ ವಿಚಾರದಲ್ಲಿ ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದಲೂ ಸಮಾಜವಾದವು ರಾಜಪ್ರಭುತ್ವಕ್ಕೆ, ಉಳಿಗಮಾನ್ಯತೆಗೆ, ನಿರಂಕುಶಪ್ರಭುತ್ವಕ್ಕೆ, ವಸಾಹತೀಕರಣಕ್ಕೆ, ಸಾಮ್ರಾಜ್ಯಶಾಹಿಗೆ, ಕಮ್ಯುನಿಸ್ಟ್ ನಿರಂಕುಶಾಧಿಕಾರಕ್ಕೆ ಮತ್ತು ಫ್ಯಾಸಿಸಂಗೆ ಒಂದು ಸವಾಲನ್ನು ಒಡ್ಡುತ್ತಲೇ ಬಂದಿದೆ. ಸಾಮಾಜಿಕ-ಸಾಂಸ್ಕೃತಿಕ ವಿಚಾರದಲ್ಲಿ, ಲಿಂಗವಾದ, ಜನಾಂಗೀಯವಾದ, ಜಾತಿವಾದ, ಮತೀಯವಾದ ಮತ್ತು ಅನ್ಯದ್ವೇಷವಾದಿ ರಾಷ್ಟ್ರೀಯತೆಗಳನ್ನು ಮೀರುವ ದಾರಿಗಳನ್ನು ಸಮಾಜವಾದವು ಒದಗಿಸುತ್ತದೆ. ಅ-ಸಮಾಜವಾದಿ ವ್ಯವಸ್ಥೆಯಿಂದ ಸಮಾಜವಾದಿ ಸಮಾಜದ ಕಡೆಗಿನ ತನ್ನ ಪಯಣದಲ್ಲಿ ಅದು ವ್ಯಕ್ತಿಗಳನ್ನು, ಸಮುದಾಯಗಳನ್ನು, ಸಂಸ್ಕೃತಿಗಳನ್ನು, ಜನಾಂಗಗಳನ್ನು ರಾಷ್ಟ್ರತ್ವ, ಧರ್ಮ, ಪಕ್ಷ, ಮಾರುಕಟ್ಟೆ, ರಾಜ್ಯ, ಪ್ರಜಾಪ್ರಭುತ್ವ, ಸ್ವಾತಂತ್ರ್ಯಗಳು ಮತ್ತು ಮಾನವ ಹಕ್ಕುಗಳು ಮುಂತಾದವುಗಳೆಲ್ಲವನ್ನು ತನ್ನೊಳಕ್ಕೆ ಆವೃತಗೊಳಿಸಿಕೊಳ್ಳುತ್ತದೆ. ಆದ್ದರಿಂದ ಕಳೆದ ನಾಲ್ಕು ಶತಮಾನಗಳಲ್ಲಿ ಫ್ರೆಂಚ್ ಕ್ರಾಂತಿ (೧೭೮೯-೧೭೯೯), ಕೈಗಾರಿಕಾ ಕ್ರಾಂತಿ (೧೭೬೦-೧೮೨೦), ಅಮೆರಿಕಾದ ಕ್ರಾಂತಿ (೧೭೭೫-೧೭೮೩), ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಗಳ ಕಾಲದಿಂದ ಪ್ರತಿಯೊಂದು ಸಮಾಜ ಮತ್ತು ನಾಗರೀಕತೆಯೂ ತನ್ನದೇ ಆದ ಸಮಾಜವಾದಿ ಮಾರ್ಗಗಳನ್ನು ನಿರ್ಮಿಸಿಕೊಂಡಿವೆ. ಈವರೆಗೆ ಅಧಿಕಾರಸ್ಥ ಸಮಾಜವಾದಿಗಳು ದಾರಿತಪ್ಪಿದ ಎಷ್ಟೋ ಪ್ರಸಂಗಗಳು, ಅವರ ಸೋಲಿನ ಸರಮಾಲೆಗಳು ನಮ್ಮ ಕಣ್ಣೆದುರಿಗೆ ಇರುವುದರಿಂದ ಸಮಾಜವಾದವು ಯಶಸ್ಸಿನ ಖಚಿತ ವಿಧಾನವಲ್ಲ ಎಂಬುದು ಸ್ಪಷ್ಟವಾಗಿದೆ. ಅದೇ ಕಾಲಕ್ಕೆ ವ್ಯಕ್ತಿಗಿಂತ ಸಮುದಾಯಕ್ಕೆ, ಶೋಷಣೆಗಿಂತ ನ್ಯಾಯಕ್ಕೆ, ಯುದ್ಧಕ್ಕಿಂತ ಶಾಂತಿಗೆ, ಪಂಥಾಭಿಮಾನಕ್ಕಿಂತ ಸಾರ್ವತ್ರಿಕತೆಗೆ ಪ್ರಾಮುಖ್ಯತೆ ನೀಡಿದ್ದರಿಂದ 'ಸಮಾಜವಾದಿ ನಾಳೆಗಳ' ಹುಡುಕಾಟದ ಹಾದಿಯಲ್ಲಿ ಎದುರಾದ ಪ್ರತಿಯೊಂದು ಸೋಲೂ ಉತ್ತಮವಾದ ಪರ್ಯಾಯ ವಿಚಾರಗಳನ್ನು ನೀಡಿದೆ. ಉತ್ತಮವಾದ ಕಾರ್ಯಕ್ರಮಗಳನ್ನು ಮತ್ತು ಚಳುವಳಿಗಳನ್ನು ನೀಡಿದೆ.

೨೧ ನೆಯ ಶತಮಾನದ ಎರಡು ಮುಖ್ಯ ಲಕ್ಷಣಗಳು:

೧೯ನೆಯ ಶತಮಾನವು ಸಮಾಜವಾದವನ್ನು ಸ್ವಾಗತಿಸಿದಂತೆ ಕಂಡುಬಂದರೆ, ಈವರೆಗೆ ೨೧ನೆ ಶತಮಾನವು ಸಮಾನತೆ ಮತ್ತು ಸಮೂಹಗಳ ಪರಿಕಲ್ಪನೆಗಳ ಬಗೆಗಿನ ಮೋಹದಿಂದ ದೂರವಾದಂತೆ ಕಂಡುಬರುತ್ತಿದೆ. ವ್ಯಕ್ತಿವಾದ, ಅಸಮಾನತೆ



ನರೇಂದ್ರದೇವ ಜಯಪ್ರಕಾಶ್ ನಾರಾಯಣ ಡಾ. ಲೋಹಿಯಾ

ಮತ್ತು ಜನಾಂಗವಾದಗಳು ಏರುಮುಖವಾಗುತ್ತಿದೆ. ಸೋವಿಯತ್ ಯೂನಿಯನೋತ್ತರ ಪ್ರಪಂಚದ ನೀತಿಯು ಜಾಗತೀಕರಣದ ಅಧಿನಾಯಕತ್ವವನ್ನು ಪ್ರತಿನಿಧಿಸುತ್ತದೆ. ಕಾರ್ಪೊರೇಟ್ ಬಂಡವಾಳದ ಹೆಚ್ಚಳ, ಬಳಕೆದಾರಿಕೆಯ ಹೆಚ್ಚಳ, ಜೀವಪರಿಸರದ ನಾಶ, ರಾಷ್ಟ್ರೀಯತೆಯ ಹೆಸರಿನಲ್ಲಿ ಸಮಾಜಗಳ ಜನಾಂಗೀಕರಣ, ಅಸಮಾನತೆ ಮತ್ತು ಬಡತನದ ತೀವ್ರ ಹೆಚ್ಚಳ. ಸ್ವಾತಂತ್ರ್ಯವೂ ಸಹ ಕಡಿಮೆಯಾಗುತ್ತಿದ್ದು ವೈವಿಧ್ಯತೆಯಲ್ಲಿನ ಏಕತೆಯ ಪರಿಕಲ್ಪನೆಗೆ ಹೊಸ ಸವಾಲುಗಳು ಎದುರಾಗುತ್ತಿವೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದ ಅಧಿಕಾರ ವ್ಯವಸ್ಥೆಯಲ್ಲಿ ಸಾಂಸ್ಥಿಕ ಸಂಕಷ್ಟಗಳು, ಬಲ ಪಂಥೀಯತೆಯ ಕಡೆಗಿನ ತುಯ್ತ, ಪರಜನಾಂಗೀಯ ದ್ವೇಷ ಇತ್ಯಾದಿಗಳು ಅಸ್ಮಿತೆಯ ರಾಜಕಾರಣ ಮತ್ತು ಸಾಮಾಜಿಕ ಹಿಂಸೆಗಳಲ್ಲಿ ಪ್ರತಿಫಲನಗೊಳ್ಳುತ್ತಿದೆ. ಕೈಗಾರಿಕೀಕೃತ ಸಮಾಜಗಳಲ್ಲಿ, ಸಮಾಜವಾದಿಗಳು, ಚುನಾವಣೆಗಳಲ್ಲಿ ಪ್ರಸ್ತುತರಾಗಿ ಉಳಿಯುವುದಕ್ಕಾಗಿ ಬಂಡವಾಳಶಾಹಿ ಪರವಾದ ಪಕ್ಷಗಳ ಜೊತೆ ಸಹಕರಿಸುತ್ತಿರುವುದು ಕಂಡುಬರುತ್ತಿದೆ. ಹಾಗಾಗಿ ಏರುತ್ತಿರುವ ಅಸಹಿಷ್ಣುತೆ ಮತ್ತು ಭಯೋತ್ಪಾದನೆಯ ಅಲೆಗಳ ಎದುರು ಇವರು ಅಂಚಿಗೆ ತಳ್ಳಲ್ಪಡುತ್ತಿದ್ದಾರೆ.

ಉದ್ಯೋಗ ನಷ್ಟದಿಂದ, ಅಸ್ಮಿತೆಯ ಇಕ್ಕಟ್ಟುಗಳಿಂದ ಮತ್ತು ಇತರರ ಬಗ್ಗೆ ಭಯದಿಂದ ಜಗತ್ತಿನಾದ್ಯಂತ ಜನರು ಅಶಾಂತರಾಗಿದ್ದಾರೆ. ಅವರು ಪರ್ಯಾಯಗಳಿಗಾಗಿ ಬೇಡಿಕೆಗಳನ್ನು ಇಡುತ್ತಿರುವುದರಿಂದ ಪ್ರತಿಭಟನೆಗಳು ಉಲ್ಬಣಗೊಳ್ಳುತ್ತಿವೆ. ಆದರೆ ಇಂದು ಲಭ್ಯವಿರುವ 'ಸಮಾಜವಾದಿ ಪರ್ಯಾಯ'ಗಳಲ್ಲಿ ಅವರಿಗೆ ಆಸಕ್ತಿಯಿಲ್ಲ. ಸಮಾಜವಾದಿ ಕಾರ್ಯಕ್ರಮಗಳನ್ನು ಮತ್ತು ರಾಜಕಾರಣವನ್ನು ಇಂದು ಸಮಸ್ಯೆಯ ಭಾಗವೆಂಬಂತೆ ಕಾಣಲಾಗುತ್ತಿದೆಯೇ ಹೊರತು ಅದನ್ನು ಪರಿಹಾರವೆಂಬತೆ ಕಾಣುತ್ತಿಲ್ಲ.

ಸೋವಿಯತ್ ಕಮ್ಯುನಿಸ್ಟ್ ಮಾದರಿಯ ವಿಚಾರದಲ್ಲಿ ಜನರ ಭ್ರಮನಿರಸನ ಸಂಪೂರ್ಣವಾದದ್ದು. ಯೂರೋಪಿಯನ್ ಸಮುದಾಯ, ಬ್ರಿಟನ್ ಮತ್ತು ಅಮೆರಿಕಾಗಳ ಸಮಾಜವಾದಿಯೇತರ ಮತ್ತು ತುಸು ಮಟ್ಟಿಗೆ ಪ್ರಜಾಪ್ರಭುತ್ವೇತರರ

ಒಂದಾಗುವಿಕೆಗೆ ಬೇಕಾದ ನೆಲೆಯನ್ನು ಇದು ಸೃಷ್ಟಿಸುತ್ತಿದೆ. ಆದರೂ ನಾರ್ವೆ, ಸ್ವೀಡನ್, ಡೆನ್ಮಾರ್ಕ ಮತ್ತು ಫಿನ್ಲೆಂಡ್‌ಗಳಂತಹ ಧೃವ ಸಮೀಪದ ಪ್ರದೇಶಗಳಲ್ಲಿ ಯಶಸ್ವೀ ಸಮಾಜವಾದಿ ಪ್ರಜಾಪ್ರಭುತ್ವದ ದೇಶಗಳು, ಹಲವಾರು ದಶಕಗಳಿಂದ ಒಮ್ಮೆ ಉದಾರ ಬಂಡವಾಳಶಾಹಿಯ ಕಡೆ ಮತ್ತೊಮ್ಮೆ ಸಮಾಜವಾದಿ ಪ್ರಜಾತಂತ್ರದ ಕಡೆಗೆ ತುಯ್ದಾಡುತ್ತಲೇ ಇವೆ. ಈ ದೇಶಗಳು ಈವರೆಗೆ ಸ್ವಸ್ಥ ಸಮಾಜದ ಪ್ರಖರ ಉದಾಹರಣೆಗಳಾಗಿದ್ದವು. ಆದರೆ ಆರ್ಥಿಕ ಸಂಕಷ್ಟಗಳಿಂದ ಪ್ರೇರಿತವಾದ ಜನಾಂಗೀಕರಣ ಮತ್ತು ಅನ್ಯಮತಭಯಗಳು ಈ ದೇಶಗಳಲ್ಲೂ ಸಹ ಬಿರುಕುಗಳನ್ನು ಮೂಡಿಸುತ್ತಿದೆ.

ಭಾರತದ ಸನ್ನಿವೇಶ:

೧೯೯೦ರಲ್ಲಿ ಭಾರತವು ಮಾರುಕಟ್ಟೆ ಆಧಾರಿತ ಜಾಗತೀಕರಣದ ಪರವಾದ ಮಾದರಿಯ ಕಡೆ ಹೊರಳಿದ್ದರಿಂದ ಇಲ್ಲೂ ಸಹ ಪರಿಸ್ಥಿತಿ ಭಿನ್ನವಾಗಿಲ್ಲ. ಕಳೆದ ಮೂರು ದಶಕಗಳಲ್ಲಿ ತ್ರಿವಳಿ 'ಎಂ' ಗಳ ಅಂದರೆ ಮಾರುಕಟ್ಟೆಯ ಆರ್ಥಿಕತೆ, ಮಂಡಲವಾದ, ಮಂದಿರವಾದಗಳ ಕಾರ್ಯಚರಣೆಗಳ ಪರಿಣಾಮಗಳಿಗೆ ತುತ್ತಾಗಿವೆ. ಅವು ಆರ್ಥಿಕತೆಯಲ್ಲಿನ (ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರ) ಸಮಾಜ ಮತ್ತು ಸಾಂಸ್ಕೃತಿಕ (ಹಿಂದೂಗಳು ಮತ್ತು ಹಿಂದೂಗಳಲ್ಲದವರು) ದೋಷಗಳನ್ನು ರಾಜಕೀಯಗೊಳಿಸಿವೆ. ಪ್ರಾತಿನಿಧಿಕ ಪ್ರಜಾಪ್ರಭುತ್ವದ ಹೆಸರಿನಲ್ಲಿ ಅಸ್ಮಿತೆಯ ರಾಜಕಾರಣದ ದಬ್ಬಾಳಿಕೆಯೂ ಇದೆ. ಚುನಾವಣಾ ರಾಜಕಾರಣದ ಸುಲಭ ಪ್ರಚೋದನೆಗಳ ಬಗೆಗಿನ ಮೃದು ಧೋರಣೆಯ ಕಾರಣದಿಂದ ಸಮಾಜವಾದಿಗಳು ಅಸ್ಮಿತೆಯ ರಾಜಕಾರಣದ ಸಂಕಷ್ಟದಿಂದ ಬಳಲುತ್ತಿದ್ದಾರೆ. ಜಾತಿ ವ್ಯವಸ್ಥೆಯಿಂದ ತೊಂದರೆಗೊಳಗಾದ ಲಕ್ಷಾಂತರ ಜನರನ್ನು, ವಿಶೇಷವಾಗಿ ಹಿಂದುಳಿದ ಮಹಾದಲಿತರನ್ನು, ಪಾಸ್ಮಂಡಾ ಮುಸ್ಲಿಂರನ್ನು, ಹಿಂದೂಗಳಲ್ಲದ ದಲಿತರನ್ನು ಮತ್ತು ಡಿನೋಟಿಫೈ ಆದ ಬುಡಕಟ್ಟು ಜನರ ಬದುಕನ್ನು ಬದಲಾಯಿಸುವ ಮೂಲಕ ನಿಜವಾದ ಅರ್ಥದಲ್ಲಿ ಅವರು ಸಾಮಾಜಿಕ ನ್ಯಾಯವನ್ನು ಉತ್ತೇಜಿಸಿದರೆ? ಎಂಬುದು ಚರ್ಚಾಸ್ಪದ ವಿಚಾರ. ಏಕೆಂದರೆ ಅಸ್ಮಿತೆಯ ರಾಜಕಾರಣದ ಅನುಕೂಲಗಳನ್ನು ನವಶ್ರೀಮಂತ ಮತ್ತು ಹಿಂದುಳಿದ ಸಮುದಾಯಗಳಲ್ಲೇ ಮುಂದಿರುವ ವರ್ಗಗಳು ವಶಪಡಿಸಿಕೊಂಡುಬಿಟ್ಟಿವೆ.

ಇಂದಿನ ಸಮಾಜವಾದಿಗಳಿಗೆ ಜಾಗತಿಕ ಆರ್ಥಿಕತೆ ಬಗ್ಗೆಯಾಗಲೀ, ಜಾಗತೀಕರಣ ಮೂಲವಾದ ಬಳಕೆದಾರಿಕೆಯ ಆರ್ಥಿಕ ರಾಜಕೀಯ ಸಾಂಸ್ಕೃತಿಕ ಪರಿಣಾಮಗಳ ಬಗ್ಗೆಯಾಗಲೀ ಅರಿವಿಲ್ಲ. ಅದನ್ನು ಅರಿಯುವ ಆಸಕ್ತಿಯೂ ಅವರಿಗಿಲ್ಲ. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಎಂಬ ತ್ರಿವಿಧ ನ್ಯಾಯವನ್ನು ಉತ್ತೇಜಿಸುವುದಕ್ಕೆ ಖಾಸಗಿ ವಲಯದಲ್ಲೂ ಸಹ ಮೀಸಲಾತಿ ಬೇಕು ಮತ್ತು ಸಾರ್ವಜನಿಕ ವಲಯದಲ್ಲಿ ಮಿಸಲಾತಿಯು ೫೦% ಮಿತಿಯನ್ನು ದಾಟಬೇಕು ಎಂಬ ಬೇಡಿಕೆಗಳ ಆಚೆಗೆ ಯಾವುದೇ ಪರ್ಯಾಯ ಕಾರ್ಯಸೂಚಿ ಅವರ ಬಳಿ ಇಲ್ಲ ಪ್ರಜಾಪ್ರಭುತ್ವವನ್ನು ಬಲಪಡಿಸುವ ಬಗ್ಗೆ ರಾಜ್ಯ ಮತ್ತು ಸಮಾಜದ ವ್ಯವಹಾರಗಳಲ್ಲಿ ಪ್ರಜೆಗಳು ಮಹತ್ವದ ಪಾತ್ರ ವಹಿಸುವಂತೆ ಮಾಡುವ ವಿಚಾರದಲ್ಲಿ ಯಾವುದೇ ಆಸಕ್ತಿ ಕಂಡುಬರುತ್ತಿಲ್ಲ ಚುನಾವಣಾ ರಾಜಕೀಯದ ಆಚೆಗೆ ಯಾರಿಗೂ ಆಸಕ್ತಿ ಇದ್ದಂತೆ ಕಾಣುತ್ತಿಲ್ಲ.

ಸಂಸದೀಯ ರಾಜಕಾರಣದ ಸಾಂಕೇತಿಕ ಪರಮೋಚ್ಚತೆ ಮತ್ತು ಚುನಾವಣಾ ಪ್ರಚೋದನೆಗಳಿಗೆ ಅಪ್ರಜ್ಞಾಪೂರ್ವಕವಾಗಿ ಶರಣಾಗಿದ್ದರಿಂದ ಕನಿಷ್ಠ ಎರಡು ತಲೆಮಾರುಗಳು ವ್ಯರ್ಥವಾಗಿ ಹೋಗಿವೆ. ಸಮಾಜವಾದಿಗಳು ಅಥವಾ ಗಾಂಧಿ– ಲೋಹಿಯಾ –ಜಯಪ್ರಕಾಶರ ಪೀಳಿಗೆಯವರು ಎಂದು ಹೇಳಿಕೊಳ್ಳುವ ಅನುಯಾಯಿಗಳಲ್ಲಿ ಅದು ಎರಡು ವರ್ಗಗಳನ್ನು ಸೃಷ್ಟಿ ಮಾಡಿತು. ಚುನಾವಣಾ ದೃಷ್ಟಿಯಿಂದ ಯಶಸ್ವೀ ಸಮಾಜವಾದಿಗಳು ಇದ್ದಾರೆ. ಯಶಸ್ವೀ ಸಮಾಜವಾದಿಗಳು ಸಮಾಜವಾದಕ್ಕಿಂತ ಹೆಚ್ಚಾಗಿ ಸ್ವಜನ ಪಕ್ಷಪಾತವನ್ನು ಮುಂದುವರಿಸುವ ವಿಚಾರದಲ್ಲಿ ಮಗ್ನರಾಗಿದ್ದಾರೆ. ಆಡಳಿತವನ್ನು ಅವರು ಹಣಕಾಸಿನ ವ್ಯವಹಾರ ನಡೆಸುವ ಬಂಡವಾಳಶಾಹಿ ಮತ್ತು ಆಡಳಿತಶಾಹಿಯ ಒಂದು ಜಾಲಕ್ಕೆ ಬಿಟ್ಟುಕೊಟ್ಟಿದ್ದಾರೆ. ಯಶಸ್ಸು ಕಾಣದ ಸಮಾಜವಾದಿಗಳಂತೂ ತಮ್ಮ ಸಂಕಲ್ಪ ಶಕ್ತಿಯನ್ನೇ ಕಳೆದು ಕೊಂಡುಬಿಟ್ಟಿದ್ದಾರೆ. ಇವರು ರಾಜಕೀಯ ಅವಕಾಶವಾದದಲ್ಲಿ ಅಥವಾ ಪಕ್ಷರಹಿತ ನಾಗರೀಕ ಸಮಾಜದ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವುದು ಕಂಡುಬರುತ್ತದೆ. ಎರಡೂ ರೀತಿಗಳಲ್ಲೂ ಸಮಾಜವಾದಿ ಗುಂಪುಗಳು ಮತ್ತು ರಾಜಕೀಯ ಅವಕಾಶವಾದಿಗಳು ಸಮಾಜವಾದಿ ಭವಿಷ್ಯದ ಕಡೆಗೆ ಮುನ್ನಡೆಯಲು ಅಗತ್ಯವಾದ ಯಾವುದೂ ಸಾಧ್ಯವಾಗದ ಬಂಜರು ಪ್ರದೇಶಗಳನ್ನು ನಿರ್ಮಿಸಿಬಿಟ್ಟಿರುವುದು ವಿಪರ್ಯಾಸ. ಆದರೆ ಯಶಸ್ಸು ಕಾಣದ ಸಮಾಜವಾದಿಗಳು ದೇಶಾದ್ಯಂತ ಪ್ರತಿಭಟನೆ ರಾಜಕಾರಣಕ್ಕೆ ಕೇವಲ ಗೊಬ್ಬರವಾಗಿರುವುದಂತೂ ಖಚಿತವಾಗಿದೆ.

ನೆಹರೂ ಮತ್ತು ಗಾಂಧೀಜಿಯವರ ಕಾಲದಿಂದಲೂ ಸಮಾಜವಾದಿಗಳು ಬಹಳ ಸಮರ್ಥರಾದ ಸಿದ್ಧಾಂತಿಗಳಾಗಿದ್ದರು. ಆದರೆ ಇಂದು ಭಾರತದ ದೊಡ್ಡ ರಾಜ್ಯಗಳಲ್ಲಿ 'ವೋಟ್‌ಬ್ಯಾಂಕ್'ಗಳನ್ನು ಸೃಷ್ಟಿಸಿ ಅವನ್ನು ಕಾಪಾಡಿಕೊಳ್ಳುವ ಕಲೆಯನ್ನು ಕರಗತ ಮಾಡಿಕೊಂಡ ನಂತರವೂ ಸಮಾಜವಾದಿಗಳಲ್ಲಿ ವಿಚಾರಗಳ, ಮಾಹಿತಿಯ ಮತ್ತು ಗ್ರಹಿಕೆಯ ಬಡತನ ಎದ್ದು ಕಾಣುತ್ತಿದೆ. ಯಾವುದೇ ರಾಷ್ಟ್ರೀಯ ಅಥವಾ ಜಾಗತಿಕ ವಿಚಾರಗಳ ಬಗ್ಗೆ ತಮ್ಮ ದೃಷ್ಟಿಕೋನವನ್ನು ಅಥವಾ ಪಕ್ಷದ ಧೋರಣೆಗಳನ್ನು ಪ್ರತಿಪಾದಿಸಲು ಅಗತ್ಯವಾದ ಪದಗಳಿಗಾಗಿ, ವಾಕ್ಯಗಳಿಗಾಗಿ ಎಡಪಕ್ಷಗಳನ್ನು ಆಶ್ರಯಿಸುವ ರಾಜಕೀಯ ಅನಕ್ಷರಸ್ಥರ ಹಾಗೆ ಅವರು ಕಾಣುತ್ತಾರೆ. ಕೋಮುವಾದಿ ರಾಜಕಾರಣವನ್ನು ವಿರೋಧಿಸುವ ರಾಜಕಾರಣದಲ್ಲಿ ಅವರು ಭಾಗವಹಿಸುವುದು ಅಲ್ಲಿ ತಮಗೊಂದು ಅವಕಾಶ ದೊರೆಯುವುದೆಂಬ ನಿರ್ಲಜ್ಜ ನಿರೀಕ್ಷೆಯೊಂದಿಗೆ ಮಾತ್ರ. ಹಾಗೆಯೇ 'ಕಾಂಗ್ರೆಸ್ ವಿರೋಧ'ದ ಹೆಸರಲ್ಲಿ ಅವರು ಭಾರತೀಯ ಜನತಾಪಕ್ಷದ ಜೊತೆ ಗುಪ್ತವಾಗಿಯೇ ಅಥವಾ ಮುಕ್ತವಾಗಿಯೇ ಓಡಾಡುವುದೂ ಸಹ ಕಂಡುಬರುತ್ತದೆ.

ಭಾರತೀಯ ಸಮಾಜವಾದಿಗಳ ದ್ವಿತೀಯ ಪತನ :

ನಿಜವಾದ ಅರ್ಥದಲ್ಲಿ ಅದು ಸ್ವಾತಂತ್ರ್ಯದ ನಂತರದ ದ್ವಿತೀಯ ಪತನ. ಉತ್ತರ ಭಾರತದ ರಾಷ್ಟ್ರೀಯ ರಾಜಕಾರಣದ ರಂಗಸ್ಥಳದಲ್ಲಿ ತಕ್ಕಮಟ್ಟಿಗಿನ ಗಾತ್ರದ ವೋಟ್‌ಬ್ಯಾಂಕ್‌ನೊಂದಿಗೆ ಸಾಕಷ್ಟು ಪ್ರಮಾಣದ ಯಶಸ್ಸೇನೋ ಬಂದಿದೆ. ಆದರೆ ಒಂದುಮಟ್ಟಕ್ಕೆ ಅದು ನೀತಿಯಿಲ್ಲದ ಅಧಿಕಾರ. ಸಂಸದೀಯ ಅಧಿಕಾರದ ಪ್ರಾಮುಖ್ಯತೆಯು ನಿರೀಕ್ಷಿಸಲಾಗದ ಮಟ್ಟಕ್ಕೆ ಅವರನ್ನು ವ್ಯವಹಾರಿಕತೆಯ ಸೆರೆಯಾಳುಗಳನ್ನಾಗಿಸಿಬಿಟ್ಟಿದೆ. ಸಮಾಜವಾದಿಗಳು ನಡೆಸಿದ ಈ ಆಳ್ವಿಕೆಗಳು ಬಂಡವಾಳಶಾಹಿಗಳ ಗುಲಾಮಗಿರಿ ಎಂಬಂತೆ ಕಾಣತೊಡಗಿವೆ. ಕೃಷಿ, ಕೈಗಾರಿಕೆ ಮತ್ತು ಸೇವಾಕ್ಷೇತ್ರಗಳಲ್ಲಿ ಉದಾರ ಬಂಡಾವಳಶಾಹಿಯನ್ನು ಪ್ರೋತ್ಸಾಹಿಸುವ ಕಾರ್ಯದಲ್ಲಿ ಅವರು ತೊಡಗಿದ್ದಾರೆ. ೧೯೮೦ರಲ್ಲಿ ಕಾಂಗ್ರೆಸ್ ಪ್ರಧಾನಿ ರಾಜೀವ್ ಗಾಂಧಿಯವರು ತಂದ ಸಂವಿಧಾನದ ೭೩ ಮತ್ತು ೭೪ನೇಯ ತಿದ್ದುಪಡಿ, ೨೦೦೦ರ ಇಸವಿಯಲ್ಲಿ ಪ್ರಧಾನಿ ವಾಜಪೇಯಿಯವರ ನೇತೃತ್ವದ ಎನ್.ಡಿ.ಎ ಸರ್ಕಾರ ರಾಜ್ಯಗಳ ಮರುವಿಂಗಡಣೆ ಮಾಡಿ ಮೂರು ಹೊಸ ರಾಜ್ಯಗಳನ್ನು ಸೃಷ್ಟಿಸಿದ್ದರ ಆಚೆಗೆ ವಿಕೇಂದ್ರೀಕರಣದ ದಿಕ್ಕಿನಲ್ಲಿ ಯಾವ ಮುನ್ನಡೆಯೂ ಆಗಿಲ್ಲ. ರಾಜ್ಯಗಳ ಮತ್ತು ಕೇಂದ್ರದ ಮಟ್ಟದಲ್ಲಿ ಸಮಾಜವಾದಿಗಳು ಕೆಲವೊಮ್ಮೆ ಅಧಿಕಾರದಲ್ಲಿದ್ದು ಕೆಲವೊಮ್ಮೆ ಅಧಿಕಾರವಿಲ್ಲದ ರಾಜಕೀಯ ಶಕ್ತಿಯಾಗಿ ಕಾಲು ಶತಮಾನ ಕಳೆದಂತೆ ಸಮಾಜದಲ್ಲಿ, ಸಂಸ್ಕೃತಿಯಲ್ಲಿ ಪ್ರತ್ಯೇಕತೆಯ ಬಲಿಪಶುಗಳಾದ ಮಹಿಳೆಯರ ದಲಿತರು ಮತ್ತು ಮಹಾದಲಿತರೂ ಸೇರಿದಂತೆ ಬಹುತೇಕ ಹಿಂದುಳಿದ ವರ್ಗಗಳಲ್ಲಿ ಒಂದು ಸಂಚಲನವುಂಟಾಯಿತು.

ಪ್ರಬಲ ಜಾತಿಗಳ ನಡುವೆ ಅಧಿಕಾರಕ್ಕಾಗಿ ಆಂತರಿಕ ಸಂಘರ್ಷ ಮತ್ತು ಪ್ರಬಲ ಜಾತಿಗಳ ಬಲದ ರಾಜಕಾರಣವು ಪ್ರಾಂತೀಯ ಪಕ್ಷಗಳನ್ನು ಉತ್ತೇಜಿಸಿತು. ಏಕೆಂದರೆ ಈ ಪ್ರಾಂತೀಯ ಪಕ್ಷಗಳು ಸಮಾಜವಾದಿಗಳ ಪ್ರಭಾವದ ನೆಲೆಗಳಾಗಿದ್ದವು. ಆದರೆ ಇವು ಸಮಾಜವಾದಿ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಮುಂದಕ್ಕೆ ಹೊತ್ತೊಯ್ಯಬಲ್ಲ ಅಖಿಲ ಭಾರತ ಮಟ್ಟದ ರಾಜಕೀಯ ಸಾಧನ ಅಥವಾ ವಾಹಕಗಳನ್ನು ಸ್ಥಾಪಿಸುವ ಸಾಮರ್ಥ್ಯವನ್ನು ನಿರ್ಮಾಣ ಮಾಡುವ ನೆಲೆಯನ್ನೇ ಉಳಿಯಗೊಡಲಿಲ್ಲ.

೨೧ನೇ ಶತಮಾನದ ಸಮಾಜವಾದಿಗಳ ಎದುರು ಇತ್ತೀಚಿನ ದಶಕಗಳಲ್ಲಿ ಮತ್ತೊಂದು ಗಂಭೀರ ಸಮಸ್ಯೆಯಿದೆ. ಅಸ್ಮಿತೆಯ ರಾಜಕಾರಣದ ಸುತ್ತಲಿನ ಚುನಾವಣೆ ವ್ಯಾವಹಾರಿಕತೆಯು ಭಾರತದ ರಾಜಕಾರಣದಲ್ಲಿ ಸಮಾಜವಾದಿ ವಿಚಾರಕ್ಕೆ ಮತ್ತು ಸಮಾಜವಾದಿಗಳ ವ್ಯಕ್ತಿತ್ವಕ್ಕೆ ಬಹಳ ಆಳವಾದ ಘಾಸಿಯನ್ನುಂಟು ಮಾಡಿದೆ. ಹಿಂದಿನ ದಿನಗಳಲ್ಲಿ ಭಾರತದ ಸಮಾಜವಾದಿಗಳನ್ನು ನೈತಿಕ ರಾಜಕಾರಣದ ಜೊತೆ ಗುರುತಿಸಲಾಗುತ್ತಿತ್ತು. ಅಲ್ಲಿ ಸಮಾಜವಾದಿಗಳ ಬದುಕು ಅಪಾರ ಜನಸ್ತೋಮದ ಸೇವೆಗೆ ಅರ್ಪಣೆಗೊಂಡ ಜೀವನ ಎಂಬಂತೆ ಕಾಣಲಾಗುತ್ತಿತ್ತು. ೧೯೬೦ರವರೆಗೆ ಅವರಿಗೆ ಯಾವುದೇ ರೀತಿಯ ಅಧಿಕಾರವೂ ದೊರೆತಿರಲಿಲ್ಲ. ಕಾಂಗ್ರೆಸ್‌ನ ಮೆಚ್ಚಿನ ಸ್ಪರ್ಧಿಗಳ ಎದುರು ಸೋಲುವುದಕ್ಕೆ ಅವರು ಪ್ರಸಿದ್ಧರಾಗಿದ್ದರು. ಆದರೂ ಸಾರ್ವಜನಿಕ ಜೀವನದಲ್ಲಿ ಅವರು ಸದ್ಗುಣ ಮತ್ತು ನೈತಿಕಶಕ್ತಿಯ ಪ್ರತೀಕಗಳಾಗಿದ್ದರು. ನರೇಂದ್ರದೇವ, ಲೋಹಿಯಾ ಮತ್ತು ಜೆಪಿಯವರಿಂದ ಪ್ರಾರಂಭಗೊಂಡು ಗೋಲಪ್ ಬಾರ್ಬೊರಾ, ಗೋಪಾಲಗೌಡ

ಮತ್ತು ಕಿಶನ್ ಪಟ್ನಾಯಕ್‌ವರೆಗೆ ರಾಜಿಯಿಲ್ಲದ ಸಮಾಜವಾದಿ ವಿಗ್ರಹಮೂರ್ತಿಗಳ ಹೊಳೆಯುವ ಒಂದು ನಕ್ಷತ್ರ ಪುಂಜವೇ ಇತ್ತು. ಆದರೆ ೧೯೮೦ರ ನಂತರ ಇದರ ಮುಂದುವರಿಕೆ ಇಲ್ಲವಾಯಿತು.

ವ್ಯಾವಹಾರಿಕ ಸಂಸದೀಯ ಸಮಾಜವಾದಿಗಳ ಒಂದು ಹೊಸ ಪೀಳಿಗೆ ಈ ಸಮಾಜವಾದಿ ಪರಂಪರೆಯ ವಾರಸುದಾರನಾಯಿತು. ರಾಷ್ಟ್ರೀಯ ದೃಷ್ಟಿಯ ನಷ್ಟವೂ ಒಳಗೊಂಡಂತೆ ಅನೈತಿಕ ರಾಜಿಗಳಿಗೆ, ಪಕ್ಷದ ಸಂಘಟನೆಯಲ್ಲಿ 'ನೇತಾಜಿ'ಗಳೆಂಬ ಅಗ್ರನಾಯಕ ಪಿಡುಗಿನ ಉತ್ತೇಜನಕ್ಕೆ, ಬಲ್ಲ ಮೂಲಗಳನ್ನು ಮೀರಿದ ಸಂಪತ್ತಿನ ಸಂಚಯಕ್ಕೆ, ಅಪರಾಧಿ-ರಾಜಕಾರಣಿಗಳ ಜಾಲವನ್ನು ಪೋಷಿಸುವುದಕ್ಕೆ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆಯ ಬಗೆಗಿನ ನಿರ್ಲಕ್ಷ್ಯಕ್ಕೆ ಮತ್ತು ಸ್ವಜನ ಪಕ್ಷಪಾತಕ್ಕೆ ಈ ಪೀಳಿಗೆ ಕಾರಣವಾಯಿತು. ಸಮಾಜವಾದಿಗಳ ಮೊದಲನೆಯ ಪತನವು ಕಾಂಗ್ರೆಸ್‌ನೊಡನೆ ಸಹಕಾರ ತತ್ವವನ್ನು ಪ್ರತಿಪಾದಿಸಿದ ೧೯೬೦ರ ದಶಕದ (ಅಶೋಕ ಮೆಹ್ತಾರ)ಕುಖ್ಯಾತ 'ಹಿಂದುಳಿದ ಆರ್ಥಿಕತೆಯ ಒತ್ತಾಯಗಳು' ಹೆಸರಿನ ಸಿದ್ಧಾಂತದ ಪ್ರಭಾವದಿಂದ ಉಂಟಾಯಿತು. ಈ ಬಗೆಯ ಪ್ರೇರಣೆಯ ಪ್ರಮೇಯದ ಪ್ರತಿಪಾದಕರು ೧೯೬೭-೭೭ರ ನಡುವೆ ಕಾಂಗ್ರೆಸ್ ಪಕ್ಷವನ್ನು ಹೋಳುಮಾಡುವುದರಲ್ಲಿ ತೊಡಗಿ, ರಾಜಿಯಾಗದ ಸಮಾಜವಾದಿಗಳ ಜೊತೆ ೧೯೭೫-೭೭ರ ತುರ್ತು ಪರಿಸ್ಥಿತಿಯ ವೇಳೆ ಜೈಲು ಸೇರಿದ್ದು ಬೇರೆಯದೇ ವಿಚಾರ. ಏನೇ ಆದರೂ ಮೊದಲ ಬಾರಿಗೆ ಇದು ಲೋಹಿಯಾ ಮತ್ತು ಅವರ ಅನುಯಾಯಿಗಳಿಂದ ವಿರೋಧಿಸಲ್ಪಟ್ಟಿದ್ದು, ಕಾಂಗ್ರೆಸ್‌ನ ಸಾರ್ವಭೌಮ ವ್ಯವಸ್ಥೆಗೆ ಸಮಾಜವಾದಿ ಪರಂಪರೆಯ ರಾಜಕೀಯ ಪರ್ಯಾಯವು ಮುಂದುವರಿಯುವುದನ್ನು ಖಚಿತಗೊಳಿಸಿತು. ಆದರೆ ಈ ಬಾರಿ ದ್ವಿತೀಯ ಪತನವನ್ನು ಹಿಂದುಳಿದವರಿಗೆ ಆದ್ಯತೆಯ ಅವಕಾಶದ ಲೋಹಿಯಾ ಅವರ ಪ್ರಮೇಯದ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲಾಯಿತು. ಇದು ಸಮಾಜದ ಐದು ವರ್ಗಗಳನ್ನು ಅಂದರೆ ಮಹಿಳೆಯರು, ದಲಿತರು, ಆದಿವಾಸಿಗಳು, ಹಿಂದುಳಿದ ಜಾತಿಗಳು ಮತ್ತು ಪಾಸ್ಮಂಡಾ ಮುಸ್ಲಿಮರನ್ನು ಒಳಗೊಂಡಿತ್ತು. ಆದರೆ ಗಾಂಧಿ-ಲೋಹಿಯಾ ಜೆಪಿಯವರ ರಾಜಕೀಯ ಪರಂಪರೆಗೆ ಸೇರಿದವರು ತಾವು ಎಂದು ಹೇಳಿಕೊಳ್ಳುವವರ ಚುನಾವಣಾ ರಾಜಕಾರಣದ ಸೂತ್ರೀಕರಣದಲ್ಲಿ ಈ ವರ್ಗಗಳಿಗೆ ಪ್ರಾತಿನಿಧ್ಯದ ಕೊರತೆಯಿರುವುದು ಲೋಹಿಯಾ ನಂತರದ ಸಾಮಾಜಿಕ ನ್ಯಾಯದ ಮಾದರಿಯ ಪ್ರತಿಪಾದಕರಿಗೆ ಯಾವ ವ್ಯತ್ಯಾಸವನ್ನಾಗಲೀ, ಮುಜುಗರವನ್ನಾಗಲೀ ಉಂಟುಮಾಡುತ್ತಿಲ್ಲ.

ಸಮಾಜವಾದಿಗಳ ಸಂಸದೀಯ ವ್ಯಾವಹಾರಿಕತೆಯ ಪರಿಣಾಮಗಳು:

ಸಮಾಜವಾದಿ ರಾಜಕಾರಣವು ವೈಯಕ್ತಿಕ ರಾಜಕಾರಣದ ಮಟ್ಟಕ್ಕೇ ಅವಸಾನ ಹೊಂದಿದೆ. ತರಬೇತಿ ಶಿಬಿರ, ಸಂಶೋಧನಾ ಸೆಲ್, ಪಕ್ಷದ ಸಾಹಿತ್ಯ, ಪಕ್ಷದ ನೀತಿಯ ಕಾರ್ಯಾಗಾರ ಮುಂತಾಗಿ ಯಾವುದೇ ತಾತ್ವಿಕ ಸಾಧನಗಳು ಇಂದು ಉಳಿದಿಲ್ಲ. ಪಕ್ಷದ ಕಲ್ಪನೆಯು ಚುನಾವಣಾ ಯಂತ್ರಕ್ಕೆ ಸಮಾನಾರ್ಥಕವಾಗಿ ಹೋಗಿದೆ. ಕಾರ್ಯಕರ್ತರ ಜಾಲಗಳ ಜೊತೆ, ಸಾಮೂಹಿಕ ಸಂಘಟನೆಗಳ ಜೊತೆ, ಸೋದರ ಗುಂಪುಗಳ ಜೊತೆ, ಸೋದರ ಘಟಕಗಳ ಜೊತೆ, ಚಳುವಳಿಗಳ ಜೊತೆ ಸಂಪರ್ಕ ಇಲ್ಲವಾಗಿದೆ. ಚುನಾವಣಾ 'ಟಿಕೆಟ್' ಹಂಚಿಕೆಯ ಆಚೆಗೆ ನಾಯಕತ್ವವನ್ನು ಕಟ್ಟುವ ವಿಚಾರದಲ್ಲಿ ಗಮನವೇ ಇಲ್ಲವಾಗಿದೆ. ಇದು ಪಕ್ಷ ವ್ಯವಸ್ಥೆಯಿಂದ ಕೇವಲ ವ್ಯಕ್ತಿ ಆಧಾರಿತ ವ್ಯವಸ್ಥೆಯ ಮಟ್ಟಕ್ಕೆ ಆಗಿರುವ ಪತನ.

೧೯೮೦ ರಿಂದ ಈಚೆಗೆ ಸಂಸದೀಯ ಯಶಸ್ಸು ಮತ್ತು ಹೊಂದಾಣಿಕೆಯ ಮೂಲಕ ಆಡಳಿತ ವ್ಯವಸ್ಥೆಯೊಳಗೆ ಸೇರಿಕೊಳ್ಳುವ ಕಾರಣದಿಂದ ಭಾರತದಾದ್ಯಂತ ಎಲ್ಲವೂ ನಾಶವಾಗಿ ಹೋಗಿದೆ ಎಂದರ್ಥವಲ್ಲ. ಆದರೆ ಸಮಾಜವಾದಿ ಉಪಕ್ರಮಗಳಲ್ಲಿ ಸತತವಾದ ಇಳಿಮುಖ ಪ್ರತಿಫಲ ಕಂಡುಬರುತ್ತಿದೆ. ಜನತಾ ಚಳುವಳಿಯ ರಾಷ್ಟ್ರೀಯ ಮೈತ್ರಿ, ರಾಷ್ಟ್ರಸೇವಾ ದಳ, ಸಮಾಜವಾದಿ ಜನಪರಿಷತ್, ಹಿಂದ್ ಮಜ್ದೂರ್ ಸಭಾ, ಕಿಸಾನ್ ಪಂಚಾಯಿತ್, ಮಹಿಳಾ ದಕ್ಷತಾ ಸಮಿತಿ, ಯೂಸುಫ್ ಮೆಹರಲಿ ಕೇಂದ್ರ, ಆಚಾರ್ಯ ನರೇಂದ್ರದೇವ ಸಮಾಜವಾದಿ ಕೇಂದ್ರ, ಲೋಹಿಯಾ ಸಮತಾ ವಿದ್ಯಾಲಯ ನ್ಯಾಸ್, ಲೋಹಿಯಾ ಅಧ್ಯಯನ ಕೇಂದ್ರ, ವನವಾಸಿ ಪಂಚಾಯತ್, ಜನತಾ ವಾರಪತ್ರಿಕೆ, ಸಾಮಯಿಕ್ ವಾರ್ತಾ, ಭಾರತೀಯ ಸಮಾಜವಾದಿ ಪಕ್ಷ ಮುಂತಾದುವುಗಳ ಜೊತೆಗೆ ಸತತವಾಗಿ ತಕ್ಕಮಟ್ಟಿಗಿನ ಕೊಡುಗೆ ನೀಡಿರುವ ಸ್ಫೂರ್ತಿದಾಯಕ ಸಾಮಾಜಿಕ ಕಾರ್ಯಕರ್ತರ, ಬರಹಗಾರರ, ಸುಧಾರಕರ, ಒಂದು ನಕ್ಷತ್ರ ಪುಂಜ ಈಗಲೂ ಕ್ರಿಯಾಶೀಲವಾಗಿದ್ದು ಪಕ್ಷ ರಾಜಕಾರಣ ಮತ್ತು ಸಂಸದೀಯ ಸಂಸ್ಥೆಗಳನ್ನು ಮೀರಿದ ಸಮಾಜವಾದದ ಬಗೆಗಿನ ಹಂಬಲದ ಮುಂದುವರಿಕೆ ಸಾಧ್ಯವಾಗುವಂತೆ ಮಾಡಿದೆ.. ಆದಾಗ್ಯೂ ಹೆಚ್ಚುತ್ತಿರುವ ಅಸಮಾನತೆ, ಜನಾಂಗೀಕರಣ, ತೀವ್ರ ಬಡತನ ಮುಂತಾದ ಸಂಕಷ್ಟಗಳಿಗೆ ಕಾರಣವಾಗಿರುವ ಜಾಗತೀಕರಣದ ಕತ್ತಲೆಯನ್ನು ದೂರ ಮಾಡಲು ಈ ದೀಪಗಳಿಗಿಂತ ಹೆಚ್ಚಿನದರ ಅಗತ್ಯವಿದೆ.

ಇಂದಿನ ಪೋಷಕ-ಆಶ್ರಿತ ಮಾದರಿ ವ್ಯವಸ್ಥೆಯಲ್ಲಿ ರಾಜಕೀಯ ಕಾರ್ಯಕರ್ತನನ್ನು ಕೇವಲ 'ಟಿಕೆಟ್ ಆಕಾಂಕ್ಷಿ'ಯ ಮಟ್ಟಕ್ಕೆ ಇಳಿಸಿರುವುದರಿಂದ ನಮ್ಮಲ್ಲಿ ಪಕ್ಷವಿಲ್ಲದ ಸಮಾಜವಾದಿಗಳಿದ್ದಾರೆ. ಆದರೆ ಇದು ಜೆಪಿಯವರ ಪಕ್ಷರಹಿತ ಪ್ರಜಾಪ್ರಭುತ್ವದ ಕಾಣ್ಕೆಯ ವಿಡಂಬನೆ. ಹಾಗೆಯೇ ಒಬ್ಬ ಸಮಾಜವಾದಿ ಮಾರ್ಕ್ಸ್‌ವಾದಿಯೋ, ಗಾಂಧಿವಾದಿಯೋ ಆಗಿರದೆ ವ್ಯಕ್ತಿತ್ವಗಳಿಗೆ ಜೋತುಬೀಳದಂತಿರಬೇಕೆಂದು ಲೋಹಿಯಾ ಬಯಸುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯು ಒಂದು ದರ್ಶನ, ಒಂದು ಕಾರ್ಯಕ್ರಮ ಅಥವಾ ಸಂಸ್ಥೆಗೆ ವೈಯಕ್ತಿಕವಾಗಿ ನಿಷ್ಠೆಯಿಂದಿರುವುದಕ್ಕಿಂತ ವ್ಯಕ್ತಿಯೊಬ್ಬ ಒಬ್ಬ ಪ್ರಬಲ ವ್ಯಕ್ತಿಗೆ ನಿಷ್ಠೆ ಹೊಂದಿರುವುದನ್ನು ಬಯಸುತ್ತದೆ. ಇದು ಇತರೆ ಎರಡು ಭಾರೀ ಘಟನೆಗಳ ಸಂಯೋಗದ ಕಾರಣದಿಂದ ಉಂಟಾಗಿದೆ. ಒಂದು: ೧೯೨೦ರಿಂದ ಭಾರತದ ಜನತೆಯ ಪ್ರಜಾತಾಂತ್ರಿಕ ಸಾಧನಗಳಲ್ಲಿ ಒಂದಾಗಿರುವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಬಗೆಗಿನ ನಂಬಿಕೆಯ ನಷ್ಟ. ವಂಶಪಾರಂಪರ್ಯ ರಾಜಕಾರಣ, ಚೇಲಾ ಬಂಡವಾಳಶಾಹಿಯ ಓಲೈಕೆ ಮತ್ತು ಉನ್ನತ ವಲಯದಲ್ಲಿ ಭ್ರಷ್ಟಾಚಾರ ಇದಕ್ಕೆ ಕಾರಣ. ಎರಡು: ಪರ್ಯಾಯ ಆರ್ಥಿಕ ನೀತಿಗಳ ಮತ್ತು ಕಾರ್ಯಕ್ರಮಗಳ ಮಾರ್ಗದಿಂದ ವಿಮುಖವಾಗಿದ್ದರಿಂದ ಬಂಗಾಳ ಮತ್ತು ತ್ರಿಪುರಾಗಳಲ್ಲಿ ನಿರಂತರವಾಗಿ ೩೫ ವರ್ಷ ಆಡಳಿತ ನಡೆಸಿದ ಎಡಪಂಥೀಯ ಮಾರ್ಕ್ಸಿಸ್ಟರ ಅವನತಿ. ಕೇರಳದ ರಾಜಕಾರಣದಲ್ಲಿ ಅದರ ಪಾತ್ರವೀಗ ಡೋಲಾಯಮಾನವಾಗಿರುವುದು.

೧೯೯೦ರಿಂದಲೂ ಕಾಂಗ್ರೆಸ್ ಜೊತೆ ಸೇರಿ ಅವರು ಎಲ್.ಪಿ.ಜಿ (ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ) ಮಾದರಿಗೆ ಉತ್ತೇಜನ ನೀಡುತ್ತಿರುವುದು ಬಹಳ ನಿರಾಶಾದಾಯಕವಾದದ್ದು. ಈ ಎಲ್ಲ ಬೆಳವಣಿಗೆಗಳು ಒಟ್ಟಾಗಿ ದೇಶವ್ಯಾಪಿಯಾದ ಒಂದು ಶೂನ್ಯ ಆವರಿಸಿಕೊಂಡಿದೆ, ಇದರಿಂದಾಗಿ ಬಂಡವಾಳಶಾಹಿಗೆ ಬಹಿರಂಗವಾಗಿಯೇ ಆಶ್ರಯ ನೀಡುವ ಹಿಂದುತ್ವದ ವೋಟ್‌ಬ್ಯಾಂಕ್ ಕ್ರೋಢೀಕರಣಕ್ಕೆ ಉತ್ತೇಜನ ದೊರೆತಿದೆ. ಅವರು ಕೇವಲ ಹಿಂದೂ ಧರ್ಮವನ್ನು ಮಾತ್ರ ಆಕ್ರಮಿಸಿಕೊಂಡಿಲ್ಲ. ಇಡೀ ದೇಶದ ಮೇಲೆ ಏಕಸ್ವಾಮ್ಯವನ್ನು ಸಾರಿ ಭಾರತದ ಕಲ್ಪನೆಯನ್ನೇ ಅತಿಕ್ರಮಿಸಿಕೊಂಡಿದ್ದಾರೆ. ದೇಶ ಪ್ರೇಮದ ಚಳುವಳಿ ಮತ್ತು ಭಾರತದ ಸಂಸ್ಕೃತಿಯ ರಕ್ಷಣೆಯ ಜವಾಬ್ದಾರಿಯನ್ನು ಕೈವಶ ಮಾಡಿಕೊಂಡುಬಿಟ್ಟಿದ್ದಾರೆ.

ಇದರ ತಕ್ಷಣದ ಪರಿಣಾಮಗಳೇನು? ಸಾಮಾಜಿಕವಾಗಿ ನಾವು ಜಾತಿವಾದಿ, ಕೋಮುವಾದಿ ಮತ್ತು ಜನಾಂಗೀಯ ಪ್ರತ್ಯೇಕತೆಯನ್ನು ಕಾಣುತ್ತಿದ್ದೇವೆ. ಈ ಮೂಲಕ ಇಡೀ ಸಾರ್ವಜನಿಕ ಸಮುದಾಯವನ್ನೇ ಮೂರ್ಖ ಮಂದೆಯನ್ನಾಗಿಸಲಾಗಿದೆ. ನಾಗರೀಕ ಸಮಾಜದ ಕಾರ್ಯಕರ್ತರಿಗೆ ಕಳಂಕ ಹಚ್ಚಲಾಗುತ್ತಿದೆ. ಜಾತ್ಯಾತೀತತೆ, ಎಡಪಂಥೀಯ ಮತ್ತು ಪ್ರಗತಿಪರ ಎಂಬ ಕಲ್ಪನೆಗಳಲ್ಲೆವೂ ಪ್ರಶ್ನಾರ್ಹವಾಗಿಬಿಟ್ಟಿವೆ. ಆರ್ಥಿಕವಾಗಿ ಉದ್ಯೋಗ ನಷ್ಟ ಮುಂದುವರಿಯುತ್ತಿದೆ. 'ಅಚ್ಛೇ ದಿನ'ಗಳು ಬರುವ ಬಗ್ಗೆ ಯಾರಿಗೂ ನಂಬಿಕೆ ಉಳಿದಿಲ್ಲ. ನಮ್ಮ ರಾಜಕಾರಣ ಮತ್ತು ಆರ್ಥಿಕತೆಯಲ್ಲಿ ಕಪ್ಪುಹಣದ ಪ್ರಾಬಲ್ಯ ಮುಂದುವರಿಯುತ್ತಲೇ ಇದೆ. ದೈನಂದಿನ ಜೀವನದಲ್ಲಿ ರಾಜಕಾರಣ ಅಪರಾಧದ ಜಾಲಕ್ಕೆ ಯಾವ ತಡೆಯೂ ಇಲ್ಲದಾಗಿದೆ. ಪ್ರಶ್ನಾರ್ಹವಾದ ಸಾಕ್ಷ್ಯಗಳು ಇದ್ದಾಗಲೂ ಸಹ ಬಂಡವಾಳಶಾಹಿಗೆ ಮತ್ತು ವಿದೇಶೀ ಹೂಡಿಕೆದಾರರಿಗೆ ಬಾಗಿಲು ತೆರೆಯುವ ನೀತಿ ಮುಂದುವರಿಯುತ್ತಲೇ ಇದೆ. ರಾಜಕೀಯ ಅಧಿಕಾರದ ಕೇಂದ್ರೀಕರಣದ ಕಡೆಗಿನ ಚಲನೆ ಮುಂದುವರಿದಿದೆ. ನ್ಯಾಯಾಂಗ, ಬ್ಯಾಂಕ್, ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಸಂಸ್ಥೆಗಳು ಒಳಗೊಂಡಂತೆ ಎಲ್ಲಾ ಪ್ರಮುಖ ಸಂಸ್ಥೆಗಳ ಸ್ವಾಯತ್ತತೆಯನ್ನು ಕಿತ್ತುಕೊಳ್ಳಲಾಗುತ್ತಿದೆ. ಈಗಾಗಲೇ ಇರುವ ಅಭಿವೃದ್ಧಿಯ ಕೊರತೆ, ನ್ಯಾಯಪರತೆಯ ಕೊರತೆ, ಆಡಳಿತದ ಕೊರತೆ, ಪ್ರಜಾತಂತ್ರದ ಕೊರತೆ ರಾಷ್ಟ್ರನಿರ್ಮಾಣದ ಕೊರತೆ ಮತ್ತು ಪೌರತ್ವದ ಕೊರತೆಗಳು ಮತ್ತಷ್ಟು ಹೆಚ್ಚಿವೆ.

ಇಂದು ಸಮಾಜವಾದದ ಅಗತ್ಯವಿರುವುದು ಯಾರಿಗೆ?

ಇಂತಹ ಪರಿಸ್ಥಿತಿಯಲ್ಲಿ ಭಾರತದ ಜನತೆಯ ದೃಷ್ಟಿಕೋನದಲ್ಲಿ ಪರಸ್ಪರ ಸಂಬಂಧವುಳ್ಳ ಎರಡು ಬದಲಾವಣೆಗಳು ಬಂದಿವೆ. ಮೊದಲನೆಯದಾಗಿ ದೇಶದ ಆರ್ಥಿಕತೆ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ಹಾಗೂ ಸರ್ಕಾರಿ ವ್ಯವಹಾರಗಳಲ್ಲಿ ಮತ್ತು ಆರ್ಥಿಕತೆಯಲ್ಲಿ ಜನರ ಸಕ್ರಿಯಪಾತ್ರವನ್ನು ಹೆಚ್ಚಿಸುವ ಸಾಧ್ಯತೆಯ ಬಗ್ಗೆ ಜನರು ಹೆಚ್ಚು ಹೆಚ್ಚು ಹತಾಶರಾಗುತ್ತಿದ್ದಾರೆ. ಜಾಗತೀಕರಣವನ್ನು ಉತ್ತೇಜಿಸುವ ಉದಾರ ಬಂಡವಾಳಶಾಹಿ ವ್ಯವಸ್ಥೆಯನ್ನು ಹತ್ತು ವರ್ಷಗಳಷ್ಟು ದೀರ್ಘಕಾಲ ನಡೆಸಿದ ಮನಮೋಹನಸಿಂಗ್, ಸೋನಿಯಾ ಗಾಂಧಿ, ನಾವು ಉತ್ತಮವಾದ ಪರ್ಯಾಯಗಳ ಕಡೆಗೆ ನೋಡುವಂತೆ ಮಾಡಿದ್ದಾರೆ. ಆದರೆ ಹೊಸ ಆಳ್ವಿಕೆಯು ನಮ್ಮ ಸಮಾಜವನ್ನು ಒಂದು ನಿಶ್ಯಬ್ದ ವಲಯದೆಡೆಗೆ, ಆರ್ಥಿಕತೆಯನ್ನು ಚೇಲಾ ಬಂಡವಾಳಶಾಹಿಗಳ ಬಿಗಿಮುಷ್ಟಿಗೆ ನೂಕುವ ಒಂದು ಕೆಟ್ಟ ಪರಿಸ್ಥಿತಿ ನಮಗೆ ಎದುರಾಗಿದೆ. ಪ್ರತಿಯೊಬ್ಬರಲ್ಲೂ ಬೆಲೆ ಏರಿಕೆಯಿಂದ ಹಿಡಿದು ನಿರುದ್ಯೋಗದವರೆಗೆ ಹೆಚ್ಚುತ್ತಿರುವ ನಿರಾಶೆಗಳ ಒಂದು ಪಟ್ಟಿಯೇ ಇದೆ. ದುರ್ಬಲ ವರ್ಗಗಳಿಗೆ ಹೆಚ್ಚಿನ ಪ್ರಮಾಣದ ದುರವಸ್ಥೆಯು ಅನುಭವವಾಗುತ್ತಿದೆ. ದೇಶದಾದ್ಯಂತ ರೈತರ ಕೂಗಿಗೆ, ಹೆಚ್ಚಿನ ಕನಿಷ್ಠ ಕೂಲಿಗಾಗಿ ಅಸಂಘಟಿತವಲಯದ ಜನರು ರಾಷ್ಟ್ರದಾದ್ಯಂತ ನಡೆಸುತ್ತಿರುವ ಮುಷ್ಕರಗಳಿಗೆ, ಗುಜರಾತಿನ ದಲಿತರಿಗೆ, ಕಾಶ್ಮೀರ, ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ಹರಿಯಾಣ ರಾಜ್ಯಗಳ ಮುಸ್ಲಿಮರಿಗೆ, ಛತ್ತೀಸ್‌ಘಡದ ಆದಿವಾಸಿಗಳಿಗೆ ಪ್ರಬಲ ಗುಂಪುಗಳಿಂದ ಆಗುತ್ತಿರುವ ಅನ್ಯಾಯ ಮತ್ತು ಸರ್ಕಾರಿ ಸಾಧನಗಳಿಂದ ಆಗುತ್ತಿರುವ ಅಪಮಾನಗಳ ವಿರುದ್ಧದ ಕೂಗಿಗೆ, ಈಶಾನ್ಯ ರಾಜ್ಯಗಳ ಅಲ್ಪಸಂಖ್ಯಾತರ ಮೊರೆಗಳಿಗೆ ಪ್ರತಿಯೊಬ್ಬರೂ ಗಮನ ಹರಿಸಬೇಕು. ಪ್ರತಿಕ್ರಿಯೆ ನೀಡಬೇಕು.

ಸ್ವಯಂಘೋಷಿತ ಸಂಸ್ಕೃತಿ ರಕ್ಷಕರು ಯಾವ ಭಯವೂ ಇಲ್ಲದೆ ಕಾನೂನನ್ನು ಕೈಗೆತ್ತಿಕೊಂಡು ಪ್ರಧಾನಿ ನರೇಂದ್ರ ಮೋದಿಯವರ ಮನವಿಯನ್ನೂ ಕೂಡ ನಿರ್ಲಕ್ಷಿಸುತ್ತಿರುವುದು ಕಾನೂನಿನ ಆಳ್ವಿಕೆ ಮತ್ತು ಸಾಮಾನ್ಯ ಜನರ ಮರ್ಯಾದೆಯ ಬಗ್ಗೆ ಗೌರವವಿರುವ ಎಲ್ಲರಲ್ಲೂ ಆತಂಕವನ್ನು ಮೂಡಿಸುತ್ತಿವೆ. ಮುಂದಿನ ಇಷ್ಟಾನಿಷ್ಟಗಳ ಸುಳಿವುಗಳನ್ನು ಒಟ್ಟುಮಾಡಿ ಅದನ್ನು ನಮ್ಮ ಗಮನ ಮತ್ತು ಪರಿಶೀಲನೆಗಾಗಿ ಒಂದು ವಾಕ್ಯದಲ್ಲಿ ಹೀಗೆ ಕ್ರೋಢೀಕರಿಸಬಹುದು: ಇದನ್ನು ಈಗಲೂ ಸಹ ಸ್ವರಾಜ್ಯ ಎಂದು ಕರೆಯಬಹುದೇ? ಅಥವಾ ಸಂವಿಧಾನವನ್ನು ಕಡೆಗಣಿಸಿ ಪೋಷಕ–ಆಶ್ರಿತ ಸಂಬಂಧದ ಮೇಲೆ ಅವಲಂಬಿಸಿರುವ ಬಂಡವಾಳಶಾಹಿಯ ಜೊತೆ ಬದುಕುವುದನ್ನು ಕಲಿಯಬೇಕೆ? ಅಥವಾ ಕಾನೂನಿನ ಆಡಳಿತ ಮತ್ತು ಸಂವಿಧಾನದ ಪಾವಿತ್ರ್ಯತೆಗೆ ಬೆಲೆಕೊಡದೆ ಸಂಸ್ಕೃತಿ ಮತ್ತು ರಾಷ್ಟ್ರೀಯತೆಗಳ ಹೆಸರಿನಲ್ಲಿ ಸ್ವಯಂಘೋಷಿತ 'ರಕ್ಷಕರು' ನಡೆಸುವ ದಬ್ಬಾಳಿಕೆಯನ್ನು ಮೌನವಾಗಿ ಅನುಭವಿಸುವ ಸ್ಥಿತಿಗೆ ನಾವು ತಳ್ಳಲ್ಪಟ್ಟಿದ್ದೇವೆಯೆ? ವಿಚಾರಗಳ, ಕಾರ್ಯಕ್ರಮಗಳ, ಸಂಘಟನೆಗಳ ಮತ್ತು ಚಟುವಟಿಕೆಗಳ ರೂಪದಲ್ಲಿ ನಮ್ಮನ್ನು ಮತ್ತೆ ಹುಡುಕಿಕೊಳ್ಳುವ ಮೂಲಕ ಆರ್ಥಿಕತೆಯಲ್ಲಿ ಮತ್ತು ಸಮಾಜದಲ್ಲಿ ಹೊಸದೊಂದು ಕಿಟಕಿಯನ್ನು ಈ ಆಲೋಚನೆಗಳು ಸೃಷ್ಟಿಸಬೇಕು.

ಎರಡನೆಯದಾಗಿ ಎಲ್.ಪಿ.ಜಿ ಮಾದರಿಯ ರೋಗದ ವಿರುದ್ಧ ನ್ಯಾಯಕ್ಕಾಗಿ ನೇರ್ಮೆಗಾಗಿ ನಿಲ್ಲಬಲ್ಲ ವ್ಯಕ್ತಿಗಳ, ಗುಂಪುಗಳ ಸಂಸ್ಥೆಗಳ ಬಗೆಗೆ ಮಧ್ಯಮವರ್ಗದಿಂದ ಹಿಡಿದು ಸಾಮಾನ್ಯ ಜನರವರೆಗೆ ಪ್ರತಿಯೊಬ್ಬರಲ್ಲೂ ಗೌರವ ಮತ್ತು ಬೆಂಬಲ ಹೆಚ್ಚುತ್ತಿದೆ. ಏನೇ ಆದರೂ ಎಲ್.ಪಿ.ಜಿ. ದೃಷ್ಟಿಯು ಈವರೆಗೆ ಅಪೂರ್ಣವಾಗಿಯೇ ಇದ್ದ 'ಸ್ವರಾಜ್'ನ ಸುತ್ತ ಹೊಸ ಬಿಕ್ಕಟನ್ನು ಸೃಷ್ಟಿಸುತ್ತಿದೆ ಎಂಬುದನ್ನು ಜನ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ರೈತರ ಆತ್ಮಹತ್ಯೆಗಳು ಕೃಷಿಯಲ್ಲಿ ಸಮೃದ್ಧಿ ಬರಲಿದೆ ಎಂಬ ಆಶಯದೊಂದಿಗೆ ೧೯೯೧ರಲ್ಲಿ ಪ್ರಾರಂಭವಾದ ಎಲ್.ಪಿ.ಜಿ ಸಂಬಂಧಿತ ನೀತಿಗಳ ಪ್ರಹಸನವನ್ನು ಕಾಣುವುದಕ್ಕೆ ಅವಕಾಶವನ್ನು ಒದಗಿಸುತ್ತಿದೆ ಎಂಬುದು ಅರ್ಥವಾಗುತ್ತಿದೆ. ಭಾರತದ ಮಾರುಕಟ್ಟೆಗೆ ವಿದೇಶೀ ಕಂಪನಿಗಳು ದಾಳಿ ಮಾಡಿದ್ದರಿಂದ ಸ್ಥಳೀಯ ಉದ್ಯಮಗಳಿಗೆ ಮತ್ತು ವ್ಯಾಪಾರಿಗಳಿಗೆ ಆರ್ಥಿಕ ಅವಕಾಶಗಳ ನಷ್ಟವುಂಟಾಗಿದೆ. ತಮ್ಮ ಬದುಕಿನ ಅವಕಾಶಗಳಲ್ಲಿ ಯಾವುದೇ ವ್ಯತ್ಯಾಸವುಂಟುಮಾಡದೆ, ಶಿಕ್ಷಣ ಮತ್ತು ಆರೋಗ್ಯದ ಕ್ಷೇತ್ರಗಳನ್ನು ವ್ಯಾಪಾರೀಕರಣಗೊಳಿಸಿರುವುದರ ಪರಿಣಾಮವಾಗಿ ಹಳ್ಳಿಗರು ಮತ್ತು ಮಧ್ಯಮ ವರ್ಗದವರು ದಿವಾಳಿಯಾಗುತ್ತಿದ್ದಾರೆ.

ಹೈದರಾಬಾದ್‌ನ ಕೇಂದ್ರೀಯ ವಿಶ್ವವಿದ್ಯಾಲಯದಿಂದ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಹೊರಹೊಮ್ಮಿದ ವರದಿಗಳಿಂದ ಪ್ರಾರಂಭಿಸಿ, ನಾಚಿಕೆಗೇಡಿನ ಉನಾ ಪ್ರಸಂಗದ ನಂತರದ ಗುಜರಾತ್ ದಲಿತ ದಂಗೆಯವರೆಗಿನ ಬೆಳವಣಿಗೆಗಳು, ತುರ್ತು ಪರಿಸ್ಥಿತಿಯನ್ನು ಮರೆತಿರದ ಜನರಿಗೆ ಮೌನವಾಗಿ ನೋವನ್ನು ಅನುಭವಿಸುವುದು ಸ್ವೀಕಾರಾರ್ಹ ಆಯ್ಕೆಯಲ್ಲ ಎನ್ನುವುದನ್ನು ಸ್ಪಷ್ಟಪಡಿಸಿದೆ. ಪರೀಕ್ಷೆಗೊಳಪಡದ ಭ್ರಷ್ಟಾಚಾರ ವಿರೋಧಿ ಕಾರ್ಯಕರ್ತರಿಗೆ ದೆಹಲಿಯ ವಿಧಾನಸಭೆಯನ್ನು ಪ್ರವೇಶಿಸಲು ಸಮ್ಮತಿ ನೀಡುವ ಮೂಲಕ, ದೀರ್ಘಕಾಲದ ವಿರೋಧಿಗಳಾದ ಜೆಡಿ(ಯು), ಆರ್‌ಜೆಡಿ ಮತ್ತು ಕಾಂಗ್ರೆಸ್ ಒಕ್ಕೂಟಕ್ಕೆ ಬಿಹಾರದಲ್ಲಿ NDA ಗಿಂತ ಹೆಚ್ಚು ಸ್ವೀಕಾರಾರ್ಹ ಸ್ಥಾನವನ್ನು ನೀಡುವ ಮೂಲಕ ಜನರು ಪರಿಮಿತಿಯ ಅಗತ್ಯವನ್ನು ತೋರಿಸಿಕೊಟ್ಟಿದ್ದಾರೆ. ಇದು ಸದ್ಯದ NDA ಮಿತ್ರರಿಗಿಂತ, ಕಾರ್ಯಕರ್ತರಿಗಿಂತ ಭಾರತೀಯ ಸಮಾಜವಾದಿಗಳನ್ನು ಹೆಚ್ಚು ಪ್ರಸ್ತುತಗೊಳಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ಜನರಲ್ಲಿ, ವಿಶೇಷವಾಗಿ ಯುವಕರಲ್ಲಿ ಜಾಗತೀಕರಣ ಮತ್ತು ಬಡವಾಳಶಾಹಿಯ ಬಗ್ಗೆ ಭ್ರಮನಿರಸನ ಹೆಚ್ಚುತ್ತಿದ್ದು ಸಮಾಜವಾದಿ ಪರ್ಯಾಯಗಳನ್ನು ಮರುಭೇಟಿಮಾಡಲು ಅವಕಾಶಗಳಿವೆ. ಒಂದು ಉತ್ತಮ ಆರ್ಥಿಕ ಮಾದರಿಗಾಗಿ ಅವರು ಉದಾರ ಬಂಡವಾಳಶಾಹಿಯ ಆಚೆಗೆ ದೃಷ್ಟಿಹರಿಸಿದ್ದಾರೆ. ಸಾಮ್ರಾಜ್ಯಶಾಹಿಯೋತ್ತರ ಭಾರತದ ಪ್ರಾತಿನಿಧಿಕ ಪ್ರಜಾಪ್ರಭುತ್ವದಲ್ಲಿ ಪಂಚಾಯ್ತಿಯಿಂದ ಮೊದಲ್ಗೊಂಡು ಪಾರ್ಲಿಮೆಂಟಿನ ತನಕ ಹೆಚ್ಚುತ್ತಿರುವ ಭ್ರಷ್ಟಾಚಾರವು ಹೆಚ್ಚು ಭಾಗವಹಿಸುವಿಕೆ ಮತ್ತು ಕಡಿಮೆ ಪ್ರಾತಿನಿಧ್ಯದ ಮೂಲಕ ಪ್ರಜಾತಂತ್ರವನ್ನು ಆಳಗೊಳಿಸುವ ಬಗ್ಗೆ ಯೋಚಿಸುವಂತೆ ಮಾಡಿದೆ. ಧರ್ಮಗಳು ಮತ್ತು ಪ್ರಾಂತ್ಯಗಳ ಉದ್ದಗಲಕ್ಕೂ ಪಿತೃಪ್ರಧಾನ ವ್ಯವಸ್ಥೆಗೆ, ಜಾತೀಯತೆಗೆ ಮತ್ತು ಇತರ ರೀತಿಯ ದಬ್ಬಾಳಿಕೆಗಳಿಗೆ ಹಾಕಲಾಗುವ ಸವಾಲುಗಳೇ ಸಾಮಾಜಿಕ ಬದಲಾವಣೆಯ ಅತ್ಯುತ್ತಮ ಮೂಲಗಳು. ಮಹಿಳೆಯರಿಗೆ, ಪರಿಶಿಷ್ಟ ಜಾತಿ ಪಂಗಡ ಮತ್ತು ಅಲ್ಪಸಂಖ್ಯಾತರಿಗೆ ಇವು ಪರಿಣಾಮದಲ್ಲಿ ಮೀಸಲಾತಿ ಮತ್ತು ಶಾಸನ ಸಮ್ಮತ ಆಯೋಗಗಳಿಗಿಂತಲೂ ಮಿಗಿಲಾದಂತಹವು.

ಕೈಗಾರಿಕೀಕರಣ ಮತ್ತು ನಗರೀಕರಣದ ಕಡೆಗಿನ ಬುದ್ಧಿಹೀನ ಒಲವುಗಳು ನಮ್ಮ ದೇಶದ ಬಹುತೇಕ ಮುಂದುವರಿದ ನಗರಗಳು ಮತ್ತು ಪ್ರಗತಿಪರ ರಾಜ್ಯಗಳಲ್ಲಿ ಜಲ, ವಾಯು ಮತ್ತು ಮಣ್ಣು ಕಲುಷಿತಗೊಳ್ಳುವಂತಹ ಅಪಾಯಕಾರಿ ಸಮಸ್ಯೆಗಳನ್ನು ಸೃಷ್ಟಿಸಿದೆ. ನಮ್ಮ ಸಮಾಜದ ನವಶ್ರೀಮಂತ ಮತ್ತು ಅತಿ ಶ್ರೀಮಂತ ವರ್ಗಗಳು ಅನುಸರಿಸುತ್ತಿರುವ, ಸಾಮಾಜಿಕವಾಗಿ ಅಪಾಯಕಾರಿಯಾದ ಕೊಳ್ಳುಬಾಕತನಕ್ಕೆ ಪ್ರತಿಯಾಗಿ ಎಲ್ಲಾ ಜನರ ಮೂಲಭೂತ ಅಗತ್ಯಗಳಿಗೆ ಆದ್ಯತೆ ನೀಡಬೇಕಾದದ್ದು ಮುಖ್ಯವಾಗಿದೆ. ೧೯೩೦ ಮತ್ತು ೧೯೬೦ರ ನಡುವೆ ನಮ್ಮ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಜೀವಪರಿಸರ ಸಮಸ್ಯೆಗಳಿಗೆ ನಾವು ನೀಡಿದ ಸಮಾಜವಾದಿ ಪರಿಹಾರಗಳನ್ನು ಗಮನಿಸಿದರೆ ಅವು ಈಗ ಮೂಡಿಬರುತ್ತಿರುವ ಹೆಚ್ಚು ಸುಸ್ಥಿರವಾದ ಮಾನವೀಯ ಮಾದರಿಯ ರಾಷ್ಟ್ರ ನಿರ್ಮಾಣದ ಬಗ್ಗೆ ಮೂಡುತ್ತಿರುವ ಒಮ್ಮತಗಳ ಭಾಗವಾಗಿರುವುದು ಆಶ್ಚರ್ಯದ ವಿಷಯವೇನೂ ಅನಿಸುವುದಿಲ್ಲ. ಸಕಲರಿಗೂ ಕುಡಿಯುವ ನೀರು ಮತ್ತು ಆರೋಗ್ಯವಂತ ವಸತಿ, ಹಸಿವಿನಿಂದ ಮುಕ್ತಿ, ಜಲ್–ಜಂಗಲ್ ಜಮೀನ್ ಸಮುದಾಯದ ನಿಯಂತ್ರಣದಲ್ಲಿರಬೇಕು, ಮಹಿಳೆಯರ ವಿರುದ್ಧ ಎಸ್.ಸಿ., ಎಸ್.ಟಿ, ಓಬಿಸಿ, ಅಲ್ಪಸಂಖ್ಯಾತರು ಮತ್ತು ಇತರ ನಿರ್ಲಕ್ಷಿತ ಗುಂಪುಗಳ ವಿರುದ್ಧದ ತಾರತಮ್ಯದ ನಿವಾರಣೆ, ಶಿಕ್ಷಣದ ಹಕ್ಕು, ಆರೋಗ್ಯದ ಹಕ್ಕು, ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳು, ಕೃಷಿ ಮತ್ತು ಕೈಗಾರಿಕೆಗಳಲ್ಲಿ 'ಸೂಕ್ತ' ತಂತ್ರಜ್ಞಾನದ ಬಳಕೆ, ಹೀಗೆ ಮೂಲದಲ್ಲಿ ಭಾರತಿಯ ಸಮಾಜವಾದಿಗಳ ಕಾರ್ಯಸೂಚಿಯಾಗಿದ್ದ ಸಂಗತಿಗಳ ಒಂದು ಹೊಸ ಅಲೆಯೇ ಇದೆ. ಆದರೆ ನಾವು ದಾರಿತಪ್ಪಿರುವುದರಿಂದ ಬಹಳಷ್ಟು ಸಮಾಜವಾದಿಗಳಿಗೆ ಇದು ತಿಳಿದೇ ಇಲ್ಲ.

ವೈಯಕ್ತಿಕ ಮಟ್ಟದಲ್ಲಿ ನಮ್ಮಲ್ಲಿ ಎಷ್ಟು ಜನ ಒಬ್ಬ ಸಮಾಜವಾದಿಯ ಬದುಕನ್ನು ಬದುಕುತ್ತಿದ್ದೇವೆ? ಸಲಿಕೆ, ಸೆರೆಮನೆ ಮತ್ತು ವೋಟ್ ಎಂಬ ಮೂರು ಆಯಾಮಗಳ ಕ್ರಿಯಾಶೀಲ ಆವರಣದಲ್ಲಿ ರೂಪುಗೊಂಡ ಸಮಾಜವಾದಿಗಳ ಜೀವಂತ ಉದಾಹರಣೆ ಇಂದು ಎಲ್ಲಿದೆ? ೧೯೬೭ ಮತ್ತು ೧೯೭೭ ರ ನಡುವಿನ ಕಾಲದಲ್ಲಿ ನಮ್ಮ ಸಮುದಾಯದ ಕಲ್ಪನೆಯನ್ನು ನಿಯಂತ್ರಣಕ್ಕೆ ತೆಗೆದುಕೊಂಡ ಸಂಸದೀಯ ಅಧಿಕಾರದ ಬಗೆಗಿನ ಅನಗತ್ಯ ಮೋಹದಿಂದ ಉಂಟಾದ ಸಂಕಷ್ಟವಿದು. ೧೯೮೦ರ ನಂತರದಲ್ಲಿ ಬಹುತೇಕ ಚುನಾವಣಾ ಕೇಂದ್ರಿತವಾದ ಪ್ರಯತ್ನಗಳಲ್ಲೇ ಸಮಸ್ಯೆಯಿದೆ.

ಮುಂದೇನು?

ಸಮಾಜವಾದಿಗಳು ಈಗಿನ ಸಂಕಷ್ಟದ ಪರಿಸ್ಥಿತಿಯನ್ನು ನಿಭಾಯಿಸಬಲ್ಲರು ಎಂಬುದಕ್ಕೆ ಯಾವ ಖಾತ್ರಿಯಿದೆ? ವೈಯಕ್ತಿಕ ಮಟ್ಟದಲ್ಲಿ ಸ್ವಯಂ ಪ್ರಜ್ಞೆಯ ವಿಕಾಸದ ಜೊತೆಗೆ ಸಮಾಜವಾದಿ ವಿಚಾರ ಮತ್ತು ಆಧುನಿಕ ಜಗತ್ತಿನ ಸಂದರ್ಭದಲ್ಲಿ ಕೇವಲ ಆರ್ಥಿಕತೆಯ ರಾಜಕಾರಣದ ಬಗ್ಗೆ ಮಾತ್ರವಲ್ಲದೆ, ಜೀವ ಪರಿಸರ ಹಾಗೂ ಸಂಸ್ಕೃತಿಗಳ ನಡುವೆ -ಭಾರತೀಯ ಸಾಮಾಜಿಕ ರಚನೆಯ ಚಲನಶೀಲತೆಯನ್ನು ಅರಿತು-ಪುನರ್‌ಸಂಪರ್ಕವನ್ನು ಏರ್ಪಡಿಸಬೇಕಾದ ಅಗತ್ಯವಿದೆ. ವೈಯಕ್ತಿಕ ಮಟ್ಟದಿಂದ ಆಧ್ಯಾತ್ಮಿಕ, ಆರ್ಥಿಕ, ಸಾಮಾಜಿಕ ಹಾಗು ರಾಜಕೀಯದವರೆಗೆ 'ಆಜಾದೀ ಬಚಾವೋ' ಎಂಬ ಕೂಗು-ಅದರ ಸಂಪೂರ್ಣ ಅರ್ಥದಲ್ಲಿ-ಹೆಚ್ಚುತ್ತಿರುವ ಒಂದು ಕಾಲಘಟ್ಟದಲ್ಲಿ ನಾವು ಬದುಕುತ್ತಿದ್ದೇವೆ.

ಸಮಾಜವಾದಿ ಪ್ರಯಾಣವು ವೈಯಕ್ತಿಕ ಬದಲಾವಣೆ ಸಾಮಾಜಿಕ ಸುಧಾರಣೆ, ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದ – ರಾಷ್ಟ್ರೀಯತಾ ಔರ್ ಸಮಾಜವಾದ್ -ದ ಕನಸುಗಳೊಂದಿಗೆ ಆಚಾರ್ಯ ನರೇಂದ್ರದೇವ್ (೧೮೮೯ – ೧೯೫೬) ಅವರ ಸ್ಫೂರ್ತಿದಾಯಕ ಮಾರ್ಗದರ್ಶನದೊಂದಿಗೆ ಪ್ರಾರಂಭವಾಯಿತು ಎಂಬುದನ್ನು ನಾವಿಂದು ನೆನಪಿಸಿಕೊಳ್ಳಬೇಕು. ಹಾಗೇ, ಸಮಾಜವಾದವೆಂದರೆ ಅದು ಸಪ್ತ ಕ್ರಾಂತಿಗಳ – ಲೋಹಿಯಾ ಯುಗದ (೧೯೧೦–೧೯೬೭) ಸಪ್ತಕ್ರಾಂತಿ – ಸಂಯೋಗ ಎಂಬ ರೀತಿಯಲ್ಲಿ ಪುನರ್ರೂಪಿಕಲ್ಪಿಸುವ ಮೂಲಕ ಸಮಾಜವಾದಿಗಳು ಸ್ಫೂರ್ತಿಯನ್ನು ಪಡೆದರು. ೧೯೭೦ರ ದಶಕದ ಸಂಪೂರ್ಣ ಕ್ರಾಂತಿಯ ಸಂದೇಶದೊಂದಿಗೆ ನಾವು ನವಚೈತನ್ಯ ಪಡೆದು ವಿಸ್ತರಣೆ ಹೊಂದಿದೆವು. ಇದನ್ನು ಸಂಪೂರ್ಣ ಕ್ರಾಂತಿಯೆಂದು ಪ್ರತಿಪಾದನೆ ಮಾಡಿದವರು ಜಯಪ್ರಕಾಶ್ ನಾರಾಯಣ್ (೧೯೦೨–೧೯೭೯).

ಈ ಹಿನ್ನೆಲೆಯಲ್ಲಿ ಪ್ರಬಲ ಜಾತಿಗಳು ಒಂದಾಗಿರುವ ಪ್ರಜಾಪ್ರಭುತ್ವ ಮತ್ತು ಎಲ್.ಪಿ.ಜಿ ಮಾದರಿಯು ಹೇರಿರುವ ಮಿತಿಗಳ ಆಚೆಗೆ ದೇಶವನ್ನು ಕೊಂಡೊಯ್ಯಲು ನಮ್ಮನ್ನು ಸಮರ್ಥರನ್ನಾಗಿಸಬಲ್ಲ ಉಪಕ್ರಮವೊಂದರ ಅಗತ್ಯ ಈಗ ಬಹಳವೇ ಇದೆ. ಒಂದು ಮಾನವೀಯ ಸಾಮಾಜಿಕ ವ್ಯವಸ್ಥೆಗಾಗಿ, ವ್ಯಕ್ತಿಯ ಕ್ರಿಯಾಶೀಲತೆಯ ಮೂಲಕ ಹಾಗೂ ಸಮೂಹ ಸಂಘಟನೆ ಮತ್ತು ಶಾಸನಾತ್ಮಕ ವಿಧಾನಗಳ ಮೂಲಕವೂ ಪ್ರಯತ್ನ ನಡೆಯಬೇಕು, ಸ್ವರಾಜ್ಯದ ಬಗೆಗಿನ ಹಸಿವಿನಲ್ಲಿ ಈ ಪ್ರಯತ್ನದ ಮೂಲನೆಲೆ ಇರಬೇಕು. ಇದರ ಅರ್ಥ ಲಿಂಗ ಸಮಾನತೆಗಾಗಿ, ದಲಿತರ ಸ್ವಾಭಿಮಾನಕ್ಕಾಗಿ, ಜೀವಪರಿಸರದ ಸಾಮರಸ್ಯವನ್ನು ಪುನರ್‌ಸ್ಥಾಪಿಸುವುದಕ್ಕಾಗಿ, ಪ್ರಾಂತೀಯ ಅಸಮಾನತೆ ಮತ್ತು ತೀವ್ರ ಬಡತನಗಳ ನಿವಾರಣೆಯ ನಿರ್ಧಾರಕ ಕ್ರಿಯೆಗಾಗಿ ನಡೆಯುತ್ತಿರುವ ಚಳುವಳಿಗಳ ಜೊತೆ ಬೆರೆಯುವುದು ಎಂದು. 'ಸ್ವರಾಜ್ಯಕ್ಕಾಗಿ ಸಮಾಜವಾದಿಗಳು' ಎಂಬ ಬ್ಯಾನರ್ ಇದಕ್ಕೆ ಅರ್ಥಪೂರ್ಣವಾಗಬಹುದು.

ಇಂದಿನ ಪ್ರಬಲ ಜಾತಿಗಳ ಪ್ರಜಾಪ್ರಭುತ್ವದ ತರ್ಕ ಮತ್ತು ಬಂಡವಾಳಶಾಹಿಗಳ ಹಿಡಿತದಿಂದ ಮುಂದುವರಿಯುತ್ತಿರುವ ತೋರಿಕೆಯ ಚುನಾವಣಾ ಆಟಗಳ ಯಶಸ್ಸಿನ ಎದುರು ಇದು ಕಷ್ಟಕರವೆಂಬಂತೆ ತೋರಬಹುದು. ವ್ಯಾವಹಾರಿಕ ಅಧಿಕಾರದ ಹಂಚಿಕೆಯ ನೆಲೆಯಲ್ಲಿ ಪರಸ್ಪರ ವಿರುದ್ಧವಾದ ಸಾಮಾಜಿಕ ಶಕ್ತಿಗಳ ವ್ಯಾಪಕವಾದ ಹೊಂದಾಣಿಕೆಯಿಂದಾಗಿ ಬಿ.ಜೆ.ಪಿ ಇಂದು ಅಧಿಕಾರದಲ್ಲಿದೆ. ಅದು ಕಾಳಧನದ ಬಗ್ಗೆ ನಿರ್ಲಕ್ಷ್ಯವನ್ನು ಹೊಂದಿದ್ದು ಬಂಡವಾಳಶಾಹಿಯ ಜೊತೆ ಇನ್ನಷ್ಟು ಸ್ನೇಹದಿಂದಿರುವುದರಿಂದ ಭಾರತದ ಆರ್ಥಿಕತೆಯ ಸಮಸ್ಯೆಗಳಿಗೆ ಅಲ್ಲಿ ಪರಿಹಾರವಿಲ್ಲ. ಅದೂ ಅಲ್ಲದೆ ಬಹುಮತವಾದ ಮತ್ತು ಧಾರ್ಮಿಕ ಅಧಿನಾಯಕತ್ವಕ್ಕೆ ಇನ್ನೊಂದು ಹೆಸರಾಗಿರುವ ಹಿಂದುತ್ವದ ಸ್ವವಿನಾಶಕ ವಿಚಾರ ಮತ್ತು ಕಾರ್ಯಕ್ರಮಗಳಲ್ಲಿ ಇದರ ನೆಲೆಯಿದೆ. ವೈವಿಧ್ಯತೆಯಲ್ಲಿ ಏಕತೆ ಮತ್ತು 'ವಸುಧೈವ ಕುಟುಂಬಕಂ' ಎಂಬ ಭಾರತದ ಗುಣವಿಶೇಷಕ್ಕೆ ಅದು ವಿರುದ್ಧವಾಗಿದೆ. ಅದು ಭೇದ ನೀತಿಯ ಸುಳಿಗೆ ಸಿಕ್ಕು, ಪುಡಿಗುಂಪುಗಳ ಮತ್ತು ಅವುಗಳ ಹಾದಿತಪ್ಪಿದ ಕಾರ್ಯಾಚರಣೆಗಳ ಸಮರ್ಥನೆಗೆ ಇಳಿದಿವೆ. ಅದು ಎಲ್ಲರನ್ನೂ ಒಳಗೊಳ್ಳುವ ಮತ್ತು ಸಹಕಾರೀ ಒಕ್ಕೂಟದ, 'ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್' ಎಂಬ ಘೋಷಣೆಗಳನ್ನು ಹೊಂದಿದ್ದರೂ NDA ಯ ಧೋರಣೆಯಲ್ಲಿ ಯಾವುದೇ ಬದಲಾವಣೆ ಕಂಡುಬಂದಿಲ್ಲ.

ತಾನು ಕಳೆದುಕೊಂಡ ಅವಕಾಶಗಳಿಂದ ಇತ್ತೀಚಿನ ದಿನಗಳಲ್ಲಿ ತಾನು ಮಾಡಿದ ತಪ್ಪುಗಳ ಹೊರೆಯಿಂದ ಮತ್ತು ವಂಶಪಾರಂಪರ್ಯದ ಮಿತಿಗಳಿಂದ ಕಾಂಗ್ರೆಸ್ ಕಳೆಗುಂದಿದೆ. ತಾನು ಉತ್ತಮ ರೀತಿಯಲ್ಲಿ ಸಜ್ಜುಗೊಂಡಿದ್ದರೂ ಕಾರ್ಮಿಕ ಸಂಘಗಳ ಜೊತೆ ಮತ್ತು ಆಫ್ರಿಕಾ, ಏಷ್ಯ, ಯೂರೋಪ್, ಲ್ಯಾಟಿನ್ ಅಮೇರಿಕಾ ಮತ್ತು ಉತ್ತರ ಅಮೇರಿಕಗಳಂತಹ ದೇಶಗಳ ಜನರ ರಾಜಕಾರಣದ ಜೊತೆಗಿನ ಸಂಪರ್ಕದಿಂದ ಬಂಡವಾಳಶಾಹಿಯ ಅವತಾರಗಳ ಬಗ್ಗೆ ಅರಿವಿರುವ ಎಡ ಮಾರ್ಕ್ಸ್‌ವಾದಿಗಳೂ ಸಹ ಇದನ್ನು ಸಾಧಿಸುವಲ್ಲಿ ಸೋತಿದ್ದಾರೆ. ಬಹಳಷ್ಟು ಪ್ರಾಂತೀಯ ಪಕ್ಷಗಳು ದೇಶಕ್ಕಿಂತಲೂ ಹೆಚ್ಚಾಗಿ ಪ್ರದೇಶಗಳ ಬಗೆಗಿನ ತಮ್ಮ ಆದ್ಯತೆಯನ್ನು ಘೋಷಿಸಿವೆ. ಬಹಳಷ್ಟು ಸಲ ಪ್ರಜಾತಾಂತ್ರಿಕ ರಾಷ್ಟ್ರನಿರ್ಮಾಣದ ಬಗ್ಗೆ ಯಾವ ಬದ್ಧತೆಯನ್ನು ತೋರದೆ ಪಕ್ಷಗಳನ್ನು ಕೌಟುಂಬಿಕ ಉದ್ದಿಮೆಗಳ ರೀತಿಯಲ್ಲಿ ನಡೆಸಲಾಗುತ್ತಿದೆ. ಪ್ರಾಂತೀಯ ಪ್ರಬಲ ಜಾತಿಗಳ ಗಣ್ಯರಿಗೆ ಅವು ಕೇವಲ ಸಾಧನಗಳಂತೆ ಕೆಲಸಮಾಡುತ್ತಿವೆ. ಆದರೆ ತಮ್ಮ ಚುನಾವಣಾ ನೆಲೆಗಳ ಆಚೆಗೆ ದೇಶ ಮತ್ತು ಮಾನವಕುಲದ ಬಗ್ಗೆ ಇವರಿಗೆ ಯಾವ ದರ್ಶನವೂ ಇಲ್ಲ.

ಭಾರತದ ಹೊಸ ರಾಜಕೀಯ ಸಮಾಜಶಾಸ್ತ್ರದ ನಿರ್ಮಾತೃಗಳು:

ಒಂದು ಕಡೆ ಆರ್ಥಿಕತೆ ಮತ್ತು ಜೀವಪರಿಸರ; ಮತ್ತೊಂದು ಕಡೆ ರಾಜಕಾರಣ ಮತ್ತು ಸಂಸ್ಕೃತಿ ಇವುಗಳ ಅಂತರ್‌ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕಾದ ಕಾಲ ಈಗ ಬಂದಿದೆ. ಕಾರ್ಪೊರೇಟ್ ಬಿಗಿಮುಷ್ಠಿ, ಕಪ್ಪುಹಣವನ್ನು ಆಧರಿಸಿದ ಮಾರುಕಟ್ಟೆ ಮತ್ತು ಭ್ರಷ್ಟ ಗಣ್ಯಜನರ ನಿಯಂತ್ರಣದಲ್ಲಿರುವ ಪ್ರಭುತ್ವಗಳ ನಿಯಂತ್ರಣದಿಂದ ಕೃಷಿ, ಕೈಗಾರಿಕೆ ಮತ್ತು ಸೇವೆಗಳನ್ನು ಮುಕ್ತಗೊಳಿಸುವುದಕ್ಕಾಗಿ ಈ ಹೊಸ ಅರಿವನ್ನು ಕಾರ್ಯಕ್ರಮಗಳನ್ನಾಗಿ ಪರಿವರ್ತಿಸಬೇಕು. ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಪ್ರಜಾತಾಂತ್ರಿಕ ಆಳ್ವಿಕೆಯ ನಿಯಂತ್ರಣವನ್ನು ಕೈಗೆ ತೆಗೆದುಕೊಳ್ಳುವುದಕ್ಕಾಗಿ ಜನರನ್ನು ಸಂಘಟಾನಾತ್ಮಕವಾಗಿ ಮರು-ಕೇಂದ್ರೀಕರಿಸಬೇಕೆಂದು ಕೆಳಮಟ್ಟದಿಂದ ಒತ್ತಡ ಮೂಡಿಬರುತ್ತಿದೆ. ಕಡಿಮೆ ಶಕ್ತಿ, ಹೆಚ್ಚು ಸಾಮರ್ಥ್ಯ, ಪರಿಣಾಮಕಾರಿ ಬೆಲೆಯ, ಪರಿಸರಸ್ನೇಹಿಯಾದ ಮತ್ತು ಮನುಷ್ಯಕೇಂದ್ರಿತ ಉತ್ಪಾದನಾ ವಿಧಾನ, ವಿನಿಮಯ, ವಿತರಣೆ ಮತ್ತು ಸಾರ್ವತ್ರಿಕ ಅನುಕೂಲದ ಬಳಕೆ ಮುಂತಾದವು ಇಂದಿನ ಅಗತ್ಯ ಈ ದಿಸೆಯಲ್ಲಿ ಪ್ರಪಂಚದಾದ್ಯಂತ ಸೂಕ್ತವಾದ ಮತ್ತು ಸ್ಥಿರವಾದ ಪ್ರತಿಸ್ಪಂದನಗಳನ್ನು ನೀಡುವಲ್ಲಿ ರಾಷ್ಟ್ರೀಯ ಮತ್ತು ಜಾಗತಿಕ ಬಂಡವಾಳಶಾಹಿಗರು ಸೋತಿದ್ದಾರೆ. ಈ ಸೋಲಿನ ಕಾರಣದಿಂದ ವಿಶ್ವಸಂಸ್ಥೆಯು ಸುಸ್ಥಿರ ಅಭಿವೃದ್ಧಿಗಾಗಿ ಹೊಸ ೧೯ ಅಂಶಗಳ ಜಂಟಿಘೋಷಣೆಯನ್ನು ಮಾಡಿದೆ. ಭಾರತೀಯ ಸಮಾಜವಾದಿಗಳು ತಮ್ಮ ಸಾಮಾಜಿಕ- ಆರ್ಥಿಕ ತಿಳುವಳಿಕೆಯನ್ನು ಉನ್ನತೀಕರಿಸಿಕೊಂಡು ಕಡೇಪಕ್ಷ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಮಟ್ಟಕ್ಕಾದರೂ ಹೊಸ ಅಗತ್ಯಗಳ ಜೊತೆ ರಾಜಿಯಾಗಬೇಕು.

ಯೂರೋ ಕೇಂದ್ರಿತ ಮಾರ್ಕ್ಸ್‌ವಾದದ ತಾತ್ವಿಕ ಮಿತಿಗಳನ್ನು ಮೀರಿ ಅಸಮಾನತೆ, ಲಿಂಗ ಶೋಷಣೆ, ಜಾತಿ, ಧರ್ಮ, ಭಾಷೆ ಮತ್ತು ರಾಷ್ಟ್ರೀಯತೆಗಳಂತಹ ಪ್ರಾಯೋಗಿಕ ಅಂಶಗಳ ಜೊತೆ ವ್ಯವಹರಿಸಬೇಕೆಂದು ಭಾರತೀಯ ಸಮಾಜವಾದಿಗಳು ಬಯಸಿದರು. ಅವರು ಜಾತಿ, ಲಿಂಗ, ಧರ್ಮ, ಭಾಷೆ ಪ್ರಜಾತಂತ್ರ, ರಾಷ್ಟ್ರಪ್ರಭುತ್ವ ಮತ್ತು ಜಾಗತಿಕ ವ್ಯವಸ್ಥೆ ಇವುಗಳ ಬಗ್ಗೆ ಮಾರ್ಕ್ಸ್, ಗಾಂಧಿ, ನರೇಂದ್ರ ದೇವ್, ಜಯಪ್ರಕಾಶ್, ಅಂಬೇಡ್ಕರ್ ಮತ್ತು ಲೋಹಿಯಾ ಅವರುಗಳನ್ನು ಒಳಗೊಂಡಂತೆ ಮಹಾನ್ ಶ್ರೇಷ್ಠರ ಬರಹಗಳ ಮೂಲಕ ಸಿದ್ಧಾಂತಗಳನ್ನು ಅಭಿವೃದ್ಧಿಪಡಿಸಿದರು. ಲೋಹಿಯಾ ಮಾದರಿಯ 'ಆದ್ಯತೆಯ ಅವಕಾಶ'ಗಳನ್ನು ಬಳಸಿಕೊಂಡು ಇವರೆಲ್ಲ ಸಿದ್ಧಗೊಂಡರು. ಆದರೆ ೧೯೬೭ರಲ್ಲಿ ಲೋಹಿಯಾ ಅವರು ಮರಣ ಹೊಂದಿದ ನಂತರ ಪ್ರಬಲ ಜಾತಿಗಳ ಕ್ರಿಯಾಶಕ್ತಿಗಳ ಬಗ್ಗೆ ವಿಪರೀತ ಗಮನ ಕೇಂದ್ರೀಕರಿಸಿದ್ದರಿಂದ ಈ ಶಕ್ತಿಗಳ ತಂತ್ರಕ್ಕೆ ಅವರು ಬಲಿಯಾಗಬೇಕಾಯಿತು. ಅವರ ವೋಟ್‌ಗಳ ಆಮಿಷಕ್ಕೆ ಒಳಗಾಗಿ ನಮ್ಮ ಸಮಾಜವನ್ನು ವರ್ಗರಹಿತ, ಜಾತಿರಹಿತ ಸಮಾಜವನ್ನಾಗಿ ಮಾಡುವ ಪರಿವರ್ತನೆಯ ಅಧ್ವರ್ಯುಗಳಾಗುವ ಶಕ್ತಿಯನ್ನು ಕಳೆದುಕೊಂಡರು. ಸಮಾಜವಾದಿ ಮತ್ತು ಜಾತಿರಹಿತ ಸಮಾಜಕ್ಕೆ ಮೀಸಲಾತಿಯೇ ದಾರಿ ಎಂಬ ರೀತಿಯಲ್ಲಿ ಅವರು ದೃಷ್ಟಿಮಾಂದ್ಯರಾಗಿ ಹೋದರು.

ಗಾಂಧಿ, ಲೋಹಿಯಾ, ಜೆಪಿ ಮತ್ತು ಅವರ ಆಪ್ತ ಹಿಂಬಾಲಕರು ಹೊರಟು ಹೋದ ನಂತರ ೨೧ನೇ ಯ ಶತಮಾನದ ಭಾರತದ ಅಧಿಕಾರಮಾತೃಕೆ ಈ ಕೆಳಗಿನ ಕನಿಷ್ಠ ಹನ್ನೆರಡು ಅಂಶಗಳಿಂದ ಪ್ರಭಾವಿಸಲ್ಪಟ್ಟಿದೆ.

೧. ರಾಷ್ಟ್ರ ಬಲದ ಮಹತ್ವ ಕಡಿಮೆಯಾಗಿ ಮಾರುಕಟ್ಟೆಶಕ್ತಿಗಳ ಪಾತ್ರ ಹೆಚ್ಚಿದ್ದು.
೨. ಜಾತಿ ಜನಾಂಗೀಯತೆ ಮತ್ತು ಧಾರ್ಮಿಕ ಹಾಗೂ ಸಮುದಾಯಗಳ

ಅಸ್ಮಿತೆಯನ್ನು ರಾಜಕೀಯಗೊಳಿಸುವುದಕ್ಕೆ ಹೆಚ್ಚಿದ ಮಹತ್ವ

೩. ಲಿಂಗ ನ್ಯಾಯಕ್ಕಾಗಿ ಮಹಿಳಾ ಚಳುವಳಿಗಳ ವಿಸ್ತರಣೆ.

೪. ಎಸ್.ಸಿ ಮತ್ತು ಎಸ್.ಟಿಗಳ ನಡುವೆ ಘನತೆಗಾಗಿ ಆತ್ಮಾಭಿಮಾನದ ರಾಜಕಾರಣ.

೫. ಎಲ್ಲಾ ಜಾತಿ ಸಮುದಾಯ ಮತ್ತು ಧರ್ಮಗಳಲ್ಲಿ ಮಧ್ಯಮ ವರ್ಗದ ಪ್ರಮಾಣ ೧೯೫೦ರಲ್ಲಿ ಇದ್ದ ೫% ನಿಂದ ೨೫%ಗೆ ಏರಿಕೆಯಾದದ್ದು.

೬. ಸಾಂಸ್ಕೃತಿಕ ಅವಕಾಶಗಳ ಅಸ್ಮಿತೆಗಳನ್ನು ದೇಶದಾದ್ಯಂತ ನಿರ್ವಸಾಹತೀಕರಣಗೊಳಿಸಿದ್ದು.

೭. ಭೂನೀತಿ ಮತ್ತು ಜಲನೀತಿಗಳ ಮಹತ್ವ

೮. ಗ್ರಾಮ ಭಾರತದಲ್ಲಿ ಎಲ್.ಪಿ.ಜಿ ಸಂಬಂಧಿತ ಹೊಸ ಅಧಿಕಾರ ಸಂಬಂಧಗಳು

೯. ಮೀಸಲಾತಿ ಮೂಲಕ ಮತ್ತು ಶಿಕ್ಷಣದ ಪ್ರಸರಣದ ಮೂಲಕ ಶಿಕ್ಷಣದ ಅವಕಾಶಗಳ ಹೆಚ್ಚಳ.

೧೦. ಕೃಷಿ ಬಿಕ್ಕಟ್ಟು ಮತ್ತು ಆಧುನಿಕ ಕಸುಬುಗಳ ಹೆಚ್ಚಳದಿಂದ ಹೆಚ್ಚಿದ ವಲಸೆ.

೧೧. ನಗರಗಳ ಸ್ಫೋಟ ಮತ್ತು ಅವನತಿ.

೧೧. ಎಲ್.ಪಿ.ಜಿ ಪ್ರೇರಿತ ಆರ್ಥಿಕತೆಯ ಜಾಗತೀಕರಣ ಮತ್ತು ಅದರ ಪರಿಣಾಮದಿಂದ ಉಂಟಾದ ಜನತಾ ಚಳುವಳಿಗಳು.

ಇವೆಲ್ಲಕ್ಕೂ ಒಂದು ಹೊಸಕೇಂದ್ರದ ಅವಶ್ಯಕತೆಯಿದೆ. ಆದರೆ ಬಹುತೇಕ ಸಮಾಜವಾದಿಮುಖಿ ರಾಜಕಾರಣಿಗಳು ಮತ್ತು ರಾಜಕೀಯ ರಚನೆಗಳು ಬಹುಮಟ್ಟಿಗೆ ಎಸ್.ಸಿ., ಎಸ್.ಟಿ ಓ.ಬಿ.ಸಿಗಳ ಮೀಸಲಾತಿಯನ್ನು ತಮಗೆ ಬೇಕಾದಂತೆ ಬಳಕೆ ಮಾಡಿಕೊಳ್ಳುವ ಮೂಲಕ ಪ್ರಭುತ್ವಕೇಂದ್ರಿತ ಜಾತಿ ಸಂಘರ್ಷಗಳಲ್ಲಿ ತೊಡಗಿದ್ದಾರೆ. ಅಲ್ಲಿಯೂ ಕೂಡ ಜಾತಿಯ ಜೊತೆ ವರ್ಗ, ಶಿಕ್ಷಣ ಮತ್ತು ಲಿಂಗ ಇವುಗಳ ಸಂಗಮ ಬಿಂದುಗಳಲ್ಲಿ ಹುಟ್ಟುವ ಸಮಸ್ಯೆಗಳನ್ನು ನಿರ್ವಹಿಸಲು ವ್ಯಾಪಕವಾದ ಕಾರ್ಯಕ್ರಮ ಬೇಕು. ಇದು ಬಹುತೇಕ 'ಹಿಂದುಳಿದ ವರ್ಗಗಳ ಮುಂದುವರಿದವರಿಗೆ' ಅನುಕೂಲ ಒದಗಿಸುವ ಚಪ್ಪಟೆಯಾದ 'ಮಂಡಲವಾದ'ದಿಂದ ಅವರನ್ನಿಂದು ಮುಂದಕ್ಕೆ ಕೊಂಡೊಯ್ಯಬಲ್ಲುದು. ಸಮಾಜವಾದಿಗಳು ಇಂದು ಅ) ಓ.ಬಿ.ಸಿಗಳು, ಎಸ್.ಸಿಗಳು, ಎಸ್.ಟಿಗಳು ಮತ್ತು ಮುಸ್ಲಿಮರನ್ನೊಳಗೊಂಡ ಮಹಿಳೆಯರು ಮತ್ತು ಅವರ ಆಂದೋಲನಗಳು ಆ) ಎಲ್ಲ ಮತಗಳಿಗೆ ಸೇರಿದ ಎಂ.ಬಿ.ಸಿ.(ಅತ್ಯಂತ ಹಿಂದುಳಿದ ಜಾತಿ ಮತ್ತು ವರ್ಗಗಳು) ಮತ್ತು ಅವರ ಅಗತ್ಯಗಳು ಇ) ಮಹಾದಲಿತ ಜಾತಿಗಳು, ಕಸುಬದಾರ ಸಮುದಾಯಗಳು ಮತ್ತು ಅವರ ಕುಂದು ಕೊರತೆಗಳು ಮತ್ತು ಈ) ಡಿನೋಟಿಫೈ ಆದ ಬುಡಕಟ್ಟು ಜನ ಮತ್ತು ಸಮುದಾಯಗಳ ಕಾರ್ಯಸೂಚಿಗಳೊಂದಿಗೆ ಒಡನಾಡುತ್ತಾ, ಅದರಿಂದ ಉಂಟಾಗುವ ಅವಕಾಶಗಳನ್ನು ವಿಸ್ತೃತ ಸಾಮಾಜಿಕ ಆಧಾರದ ಆವೃತ ಸಮಾಜವಾದಿ ಪುನಾರಚನೆಗೆ ಬಳಸಿಕೊಳ್ಳಬೇಕು.

ವಸಾಹತೋತ್ತರ ಭಾರತದಲ್ಲಿ ಸಾಮಾಜಿಕ ಒಳಿತಿಗಾಗಿ ಅಸಹಕಾರದ ಪರಂಪರೆಯನ್ನು ಮುಂದುವರಿಸಿದ್ದರಿಂದ ಸಮಾಜವಾದಿಗಳು ಸ್ಥೈರ್ಯ ಮತ್ತು ಕಷ್ಟಸಹಿಷ್ಣುತೆಗಳ ಪ್ರತೀಕಗಳಾಗಿದ್ದರು. ಅದು ಆರ್ಥಿಕ ರಾಜಕೀಯ ಮತ್ತು ಸಾಮಾಜಿಕ ನ್ಯಾಯಗಳ ಹೋರಾಟಗಳಲ್ಲಿ ಅವರನ್ನು ಅಸಾಧಾರಣ ಯೋಧರನ್ನಾಗಿಸಿತು. ಆದರೆ ಇಂದು ನಮ್ಮೆದುರು ಒಂದು ಹೊಸ ಪೀಳಿಗೆ, ಹೊಸ ಶತಮಾನವಿದೆ. ಈ ಪೀಳಿಗೆಗೆ ಹೊಸ ಧ್ವನಿ, ಹೊಸ ತಯಾರಿ ಹೊಸ ಹೋರಾಟ ಮತ್ತು ಸುಧಾರಣೆಗಳ ಅವಶ್ಯಕತೆಯಿದೆ.

ಸರಳವಾದ ಘೋಷಣೆಯ ದಿನಗಳು ಮುಗಿದುಹೋಗಿವೆ. ಇಂದು ರಾಜಕಾರಣಕ್ಕೆ ಒಂದು ಹೊಸ ಭಾಷೆಯಿದೆ, ಅಧಿಕಾರಕ್ಕೆ ಒಂದು ಹೊಸ ವ್ಯಾಕರಣವಿದೆ. ಇಲ್ಲಿ ರಾಜಕೀಯ ಪಕ್ಷಗಳ ಸುಧಾರಣೆಗಳೂ ಒಳಗೊಂಡಂತೆ ರಾಜಕೀಯ ಸುಧಾರಣೆಗಳಿಗಾಗಿ ಜನ ಬೇಡಿಕೆಗಳನ್ನಿರಿಸುತ್ತಿದ್ದಾರೆ. ಶಕ್ತಿ ಮತ್ತು ಅಧಿಕಾರಗಳ ಎಲ್ಲಾ ವ್ಯವಸ್ಥೆಗಳ ಕೇಂದ್ರಕ್ಕೆ ಪ್ರಜೆ–ಸಮಾಜದ ಬಂಧವನ್ನು ತರುವ ಮೂಲಕ ಆರ್ಥಿಕತೆ ರಾಜಕಾರಣ ಮತ್ತು ಸಮಾಜಗಳ ನಡುವಿನ ಸಂಬಂಧದಲ್ಲಿ ಒಂದು ಮೂಲಭೂತ ಬದಲಾವಣೆ ತರುವುದೇ ಸಮಾಜವಾದ. ಆದ್ದರಿಂದ ಸಮಾಜವಾದಿಗಳು ಜನಸಾಮಾನ್ಯರ ಸಮಸ್ಯೆಗಳ ವಿಚಾರದಲ್ಲಿ ಜನರ ಜೊತೆ ಒಂದಾಗುವುದು ಮತ್ತು ಚುನಾವಣಾ ರಾಜಕೀಯಕ್ಕೆ ಅತಿಹೆಚ್ಚು ಪ್ರಾಮುಖ್ಯತೆ ನೀಡುವ ಪರಿಕಲ್ಪನೆಗೆ ಬೆಲೆಕೊಡದೆ ಇರುವುದರ ಮೂಲಕ ಸಮಾಜವಾದದಲ್ಲಿ ನಂಬಿಕೆಯನ್ನು ಮತ್ತೆ ಬೆಳೆಸಬಹುದು ಎಂಬುದನ್ನು ಗುರುತಿಸುವ ಕೆಲಸ ತುರ್ತಾಗಿ ಆಗಬೇಕಿದೆ. ರಾಜಕೀಯ ಪಕ್ಷಗಳು ಮತ್ತು ಚುನಾವಣೆಗಳ ಮೂಲಕ ನಡೆಯುವ ಸ್ಪರ್ಧಾತ್ಮಕ ರಾಜಕಾರಣದ ಅಗತ್ಯ ಭಾರತದಲ್ಲಿ ಮುಂದುವರಿಯಲಿದೆ. ಇಂದು–ಮನಿ, ಮೀಡಿಯಾ, ಮಾಫಿಯಾಗಳೆಂಬ ಮೂರು 'M' ಗಳ ಪಾತ್ರ ಮಹತ್ವ ಪಡೆಯುತ್ತಿದ್ದು ಚುನಾವಣೆಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿವೆ. ಜಾತಿ ಗುಂಪುಗಳೂ, ಮತೀಯ ಬಿರುಕುಗಳು, ಹಿಂದಿನ ರಾಜರ ಆಳ್ವಿಕೆಯ ಪ್ರದೇಶಗಳಲ್ಲಿನ ಪಾರಂಪರಿಕ ಅಧಿಕಾರ ಮತ್ತು ಪ್ರಭಾವೀ ಬಲಾಢ್ಯ ಕುಟುಂಬಗಳೆಂಬ ಈಗಾಗಲೇ ಇರುವ ದೋಷಗಳ ಜೊತೆ ಒಂದಾಗಿವೆ. ಈ ಆರು ಅಂಶಗಳು ನಮ್ಮ ಪಕ್ಷಗಳನ್ನು ಮತ್ತು ಪಕ್ಷ ವ್ಯವಸ್ಥೆಯನ್ನು ವಿಪರೀತ ವಿಕೃತಗೊಳಿಸಿವೆ. ಅವು ಭಾರತದ ಪ್ರಜಾಪ್ರಭುತ್ವದಲ್ಲಿ ಸಾಂಸ್ಥಿಕ ಸಂಕಷ್ಟಗಳನ್ನು ಸಹ ಉಂಟುಮಾಡಿವೆ.

ಇವುಗಳ ಮುಂದುವರಿಕೆಗಾಗಿ ಸಮಾಜವಾದಿಗಳು ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಮುಂದುವರಿಯುವುದು ಸಾಧ್ಯವಿಲ್ಲ. ಈಗಿರುವಂತಹ ಚುನಾವಣಾ ವ್ಯವಸ್ಥೆ ಮತ್ತು ನಮ್ಮ ಪಿತೃಪ್ರಧಾನ ಪಕ್ಷಗಳ ಚಾಲ್ತಿಯಲ್ಲಿರುವ ಪರಿಸ್ಥಿತಿ ಹತ್ತಿರದ ಭವಿಷ್ಯದಲ್ಲಿ ಬದಲಾಗದು ಎಂಬುದು ನಿಜ. ಪಕ್ಷಗಳು ಪೌರತ್ವ, ರಾಷ್ಟ್ರನಿರ್ಮಾಣ ಮತ್ತು ಸ್ವರಾಜ್ಯಗಳನ್ನು ಬಲಿಗೊಟ್ಟು ಪೈಸಾವಾದ, ಜಾತಿವಾದ, ನೇತಾವಾದಗಳನ್ನು ಉತ್ತೇಜಿಸುತ್ತಿರುವುದರಿಂದ ಅವುಗಳಲ್ಲಿ ಸುಧಾರಣೆಗಳನ್ನು ತರದ ಹೊರತು ಚುನಾವಣಾ ಮತ್ತು ಪಾರ್ಲಿಮೆಂಟರಿ ರಾಜಕಾರಣದಲ್ಲಿ ನ್ಯಾಯಪರತೆಯು ಇಳಿಮುಖವಾಗುವುದಂತೂ ನಿಜ.

ಸದ್ಯದ ಸ್ಥಿತಿಯಲ್ಲಿ ಸಮಾಜವಾದಕ್ಕೆ ಅಂದರೆ ಸಮಾಜವಾದಿ ಪುನರ್‌ನಿರ್ಮಾಣಕ್ಕೆ ಅವಕಾಶ ದೊರೆಯುವ ಸಾಧ್ಯತೆ ಇಲ್ಲ. ಅದಕ್ಕೆ ಮೂಲಭೂತ ಸುಧಾರಣೆಗಳು ಬೇಕು. ಆಂತರಿಕ ಪ್ರಜಾಪ್ರಭುತ್ವ, ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಪ್ರಾಮಾಣಿಕತೆಗಳ ಪಾಲನೆಯಿಂದ ಉತ್ತಮವಾದ ಪಕ್ಷಗಳು ರೂಪುಗೊಳ್ಳಬಹುದು. ಹೆಚ್ಚಿನ ಮಟ್ಟದ ಪೌರಭಾಗವಹಿಸುವಿಕೆ ಮತ್ತು ಮೇಲ್ವಿಚಾರಕ ವ್ಯವಸ್ಥೆಗಳ ಮೂಲಕ ಉತ್ತಮ ರೀತಿಯ ಜನಪರ ಚುನಾವಣಾ ವ್ಯವಸ್ಥೆ ಬರಬೇಕು. ರಾಜಕೀಯ ಪಕ್ಷಗಳನ್ನು ಮಾಹಿತಿ ಹಕ್ಕಿನ ವ್ಯಾಪ್ತಿಗೆ ತರುವುದರಿಂದ ಹಿಡಿದು ಒಬ್ಬ ಚುನಾಯಿತ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವವರೆಗಿನ ಬದಲಾವಣೆಗಳು ಹೊಸ ಸಮಾಜವಾದಿ ಕಾರ್ಯಸೂಚಿಯಲ್ಲಿ ಇರಬೇಕು. ಚುನಾವಣೆ ನ್ಯಾಯಪರತೆಯ ಮೂಲಕ ಶ್ರೀಮಂತರ ಪ್ರಭುತ್ವವನ್ನು ಕೊನೆಗಾಣಿಸುವುದಕ್ಕಾಗಿ ಚುನಾಯಿತ ಪ್ರತಿನಿಧಿಗಳನ್ನು ಸತತವಾಗಿ ಪರಿಶೋಧನೆ ಮಾಡುವಂತಾಗಲು ಅವಕಾಶಗಳನ್ನು ಮತ್ತು ಸಾಧನಗಳನ್ನು ನಿರ್ಮಿಸುವ ದಿಕ್ಕಿನಲ್ಲಿ ಸಮಾಜವಾದಿಗಳು ಸಮಾಜವಾದವನ್ನು ಕೊಂಡೊಯ್ಯಬೇಕು. ಏಕೆಂದರೆ ಮುಂದಿನ ದಿನಗಳಲ್ಲಿ ಸಮಾಜವಾದಿ ರಾಜಕಾರಣವು ಚುನಾವಣಾ ಅವಕಾಶಕ್ಕಿಂತಲೂ ಮುಂದಕ್ಕೆ ಹೋಗಬೇಕಾಗಿದೆ. ಇದು ಭಾರತದ ಸ್ವಾತಂತ್ರ್ಯ ಚಳುವಳಿಯ ಮೂಲ ಉದ್ದೇಶವಾಗಿದ್ದ ವೈಯಕ್ತಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಆಯಾಮಗಳ ಸ್ವರಾಜ್‌ನ ನಿರ್ಮಾಣಕ್ಕಾಗಿ ಬೇಕಾದ ಸಾಮಾಜಿಕ ಪರಿವರ್ತನೆಗಾಗಿ ಜನರ ಅಭಿಪ್ರಾಯ ಮತ್ತು ಜನರ ರಾಜಕಾರಣಕ್ಕೆ ಹಿಂದಿರುಗುವ ನಿಜವಾದ ವಿಧಾನ.



(ಅಲಹಾಬಾದ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾಗಲೇ ಲೋಹಿಯಾ ವಿಚಾರಗಳಿಂದ ಪ್ರಭಾವಿತರಾಗಿ ಸಮಾಜವಾದಿ ಯುವಜನ ಸಭಾದ ನಾಯಕರಾಗಿದ್ದ ಆನಂದಕುಮಾರ್, ಎಪ್ಪತ್ತರ ದಶಕದಲ್ಲಿ ದೆಹಲಿಯ ಜವಾಹರಲಾಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ 'ಮುಕ್ತ ಚಿಂತಕರು' ಎಂಬ ವೇದಿಕೆಯಡಿ ಮಾರ್ಕ್ಸ್‌ವಾದಿ ವಿದ್ಯಾರ್ಥಿ ಸಂಘಟನೆಯನ್ನು ಮಣಿಸಿದವರು. ನಂತರ ಅದೇ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ನಿವೃತ್ತಿಯ ನಂತರ ಆಂ ಆದ್ಮಿ ಪಕ್ಷದ ಸ್ಥಾಪಕ ಸದಸ್ಯರಾಗಿದ್ದವರು. ಈಗ ಯೋಗೇಂದ್ರ ಯಾದವ್ ಅವರ ಜೊತೆಯಲ್ಲಿ ಆ ಪಕ್ಷದಿಂದ ಹೊರಬಂದು 'ಸ್ವರಾಜ್ ಇಂಡಿಯಾ' ಪಕ್ಷದ ಜೊತೆ ಗುರುತಿಸಿಕೊಂಡಿದ್ದಾರೆ.)

(ಕೃಪೆ: *ಜನತಾ*, ಸಮಾಜವಾದಿ ಏಕತಾ ಸಮಾವೇಶ, ಮುಂಬೈ ಅಕ್ಟೋ. ೨೧–೨೨ರ ಸಂದರ್ಭದ ಸ್ಮರಣ ಸಂಚಿಕೆ)

ಯುವ ಸಮಾಜವಾದಿ ಚಿಂತನ ವೇದಿಕೆ

ನಮ್ಮ ಸರ್ಕಾರಿ ಶಾಲೆಗಳು: ಕೆಲವು ಪ್ರಶ್ನೆಗಳು

–ಕೆ. ಅರವಿಂದ ಮಿತ್ರ



ನನ್ನ ಹಿರಿಯ ಸ್ನೇಹಿತರೊಬ್ಬರು ಒಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು. ಸಮಾಜ, ವಿಜ್ಞಾನ, ಆಂಗ್ಲ ಭಾಷೆ, ಗಣಿತ ಹಾಗು ದೈಹಿಕ ಶಿಕ್ಷಣ ಕಲಿಸುವ ಶಿಕ್ಷಕರು, ಆಗಾಗ ಮಕ್ಕಳ ಶುಚಿತ್ವವನ್ನು ಕಾಪಾಡುವವರೂ, ಮಧ್ಯಾಹ್ನದ ಬಿಸಿಯೂಟದ ನಿರ್ವಾಹಕರೂ ಆಗಿದ್ದಾರೆ. ತಮ್ಮ ೨೮ನೇ ವಯಸ್ಸಿಗೆ ಸರ್ಕಾರಿ ಕೆಲಸ ಸಿಕ್ಕಾಗ ಇದ್ದ ಕಳೆ, ಐದಾರು ವರ್ಷಗಳ ಅನುಭವದ ನಂತರ ಮಾಸಿದೆ. ಯಾವುದೇ ವಿಷಯ ಕೇಳಿದರೂ ಕೂಡ, "ಸಾರ್ ಈ ಮಕ್ಕಳು ಇದ್ದಾರಲ್ಲಾ, ಬಾರಿ ಡೇಂಜರ್," ಎಂದು ಆರಂಭಿಸಿ ತಮ್ಮ ಕೆಲಸದ ಜೊತೆಗೆ ಹುಟ್ಟಿಕೊಂಡ ಕಷ್ಟಗಳ ಸರಮಾಲೆಯನ್ನೇ ಬಿಚ್ಚಿಡುತ್ತಾರೆ. ಅವರ ಶಾಲೆಯಲ್ಲಿ ಇರುವುದು ಒಂಬತ್ತೇ ಮಕ್ಕಳಾದರೂ, ಯಾವ ಮಗು ಯಾವ ಇಯತ್ತೆಯಲ್ಲಿದೆ ಎಂಬುದು ಸುಂದರ್ ಮೇಷ್ಟರಿಗೆ ನೆನಪಿಲ್ಲ. ಕೇವಲ ಒಂದೇ ಒಂದು ದಿನದ ಸಾಂದರ್ಭಿಕ ರಜೆಯನ್ನು ಪಡೆಯಬೇಕಾದರೆ ಇವರು, ಜಿಲ್ಲೆಯ ಎಲ್ಲಾ ಶಾಲೆಗಳನ್ನು ಸುತ್ತಿ ಅಲ್ಲಿನ ಶಿಕ್ಷಕರೊಬ್ಬರಿಗೆ ತಮ್ಮ ದಿನದ ಎಲ್ಲಾ ಕೆಲಸಗಳನ್ನು ವಹಿಸಿಬೇಕಾದ ಅನಿವಾರ್ಯತೆ ಇದೆ! ಇವೆಲ್ಲದರ ನಡುವೆ ಸುಂದರ್ ಅವರಿಗೆ ಸಂಸಾರವಿದ್ದು, ಸದ್ಯಕ್ಕೆ ಕಾಡುತ್ತಿರುವ ಚಿಂತೆಯಂದರೆ, ತಮ್ಮ ಮುದ್ದಿನ ಮಗಳನ್ನು ಯಾವ ಖಾಸಗಿ ಶಾಲೆಗೆ ಸೇರಿಸುವುದು ಎಂಬುದು!

ಸರ್ಕಾರಿ ಶಾಲೆಗಳ ಅನೇಕ ಶಿಕ್ಷಕರ ಕಥೆ ಇದಕ್ಕಿಂತ ಭಿನ್ನವಿರಲಾರದು. ಇವುಗಳೆಲ್ಲವೂ ಕನ್ನಡ ಶಾಲೆಗಳು, ಈಗಿನ ಪರಿಸ್ಥಿತಿಯಲ್ಲಿ ಇಂಗ್ಲೀಷ್ ಅನಿವಾರ್ಯ ಎಂಬ ಭ್ರಮೆಯಿಂದ ಪೋಷಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುತ್ತಿಲ್ಲ ಎಂಬುದು ಹಲವಾರು ಸಮಸ್ಯೆಗಳಲ್ಲಿ ಒಂದಾಗಿದೆ ಅಷ್ಟೇ. ಸುಂದರ್ ಅವರು ಹೇಳುವ ಹಾಗೆ ಅವರ ಶಾಲೆಯಂದರೆ ಒಂದು ಕೋಣೆಯಷ್ಟೇ. ಮಕ್ಕಳು ಆಡಲು ರಸ್ತೆಗೆ ಇಳಿಯಬೇಕು (ಪತ್ರಿಕೆಯೊಂದರಲ್ಲಿ, ಸರ್ಕಾರಿ ಶಾಲೆಯೊಂದರ ಮಕ್ಕಳು ರೈಲ್ವೇ ಹಳಿಗಳ ಮೇಲೆ ಆಟವಾಡುವುದರ ಭಯಾನಕ ಚಿತ್ರವೊಂದನ್ನು ಪ್ರಕಟಿಸಲಾಗಿತ್ತು). ವರ್ಷಕ್ಕೆ ಸರಾಸರಿಯಂತೆ ಲೆಕ್ಕವಿಟ್ಟರೆ, ಸರ್ಕಾರಿ ಶಿಕ್ಷಕರು ಪಠ್ಯಕ್ಕೆ ಹೊರತಾದ ಜನ/ಜಾತಿ ಗಣತಿಯಿಂದ ಶುರುವಾಗಿ ಚುನಾವಣೆಯವರೆಗೂ ಸಂಬಂಧಪಟ್ಟ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕಾದ ಅಗತ್ಯವಿದೆ. ಬರುವ ಸಂಬಳವೂ ಇಪ್ಪತ್ತು ಸಾವಿರ ದಾಟುವುದಿಲ್ಲವಾದುದರಿಂದ ಅನೇಕ ಶಿಕ್ಷಕರು ಗೂಡಂಗಡಿಗಳ ಮಾಲೀಕರು, ಮನೆ ಪಾಠದ ಮೇಷ್ಟ್ರುಗಳು, ಬಡ್ಡಿ ವ್ಯವಹಾರಸ್ಥರಾಗಿರುವುದು ನಿಜ!

ಇನ್ನು ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಎಲ್ಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟವು ಸರ್ಕಾರದ ಮಹತ್ವದ ಯೋಜನೆಯಾದರೂ ಕೂಡ, ಅಡುಗೆಗೆ ಬಳಸುವ ಪದಾರ್ಥಗಳಿಂದ ಆರಂಭವಾಗಿ ಅಡುಗೆ ಮಾಡುವವರ ಜಾತಿಯವರೆಗೂ ಭಾರತದಂತಹ ದೇಶದಲ್ಲಿ ಸಮಸ್ಯೆಯಾಗಿ ಪರಿಣಮಿಸಿದೆ. ಕುಗ್ರಾಮಗಳಲ್ಲೂ, ಅಕ್ಷರ ಬಾರದ ಪೋಷಕರು ಕೂಡ, ಶಿಕ್ಷಕರ ಹಾಗು ಬಿಸಿಯೂಟ ಬಡಿಸುವವರ ಜಾತಿ ಕೇಳಿಯೇ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಪರಿಪಾಠವಿದೆ. ಅಷ್ಟೇ ಅಲ್ಲದೆ, ಅಡುಗೆ ಪದಾರ್ಥಗಳ ಖರೀದಿ, ಸಲಕರಣೆ, ಗ್ಯಾಸ್ ಹಾಗು ದಿನಸಿ ಹೀಗೆ ಎಲ್ಲಾ ಹಂತಗಳಲ್ಲಿಯೂ ಕಳಪೆ ಸಾಮಾಗ್ರಿಗಳನ್ನು ಬಳಸುವ ಇಲ್ಲವೇ ಭ್ರಷ್ಟಾಚಾರ ನಡೆಸುವ ಘಟನೆಗಳು ದಿನ ಪತ್ರಿಕೆಗಳ ಸುದ್ದಿಗಳೇ ಆಗಿವೆ.

ತಾಲ್ಲೂಕು, ಹೋಬಳಿಯಿಂದ ಹಿಡಿದು ಜಿಲ್ಲಾ ಮಟ್ಟದಲ್ಲೂ ಸರ್ಕಾರಿ ಶಾಲೆಗಳಿದ್ದರೂ ಕೂಡ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರಿಲ್ಲ. ಇರುವ ಉಪಾಧ್ಯಾಯರಲ್ಲಿ ಕಾಲು ಭಾಗದಷ್ಟು ತಿಂಗಳಿಗೆ ಐದು ಸಾವಿರ ಸಂಬಳ ಪಡೆಯುವ ಅರೆಕಾಲಿಕದವರು. ೨೦೧೬ರಲ್ಲಿ ಪ್ರಾಥಮಿಕ ಶಾಲೆಗಳಿಗೆ ಉಪಾಧ್ಯಾಯರ ನೇಮಕಾತಿ ನಡೆದರೂ ಕೂಡ, ಕಿರಿಯ ಹಾಗು ಹಿರಿಯ ಪ್ರಾಥಮಿಕ ಶಾಲೆಗಳ ನೇಮಕಾತಿ ನೆನೆಗುದಿಗೆ ಬಿದ್ದಿವೆ. ಶಿಕ್ಷಕರ ವಿಷಯದಲ್ಲಿ ಮುಖ್ಯವಾದ ಸಮಸ್ಯೆ ಅಂದರೆ, ಒಬ್ಬನೇ(ಳೇ) ಶಿಕ್ಷಕ(ಕಿ) ಗಣಿತದಿಂದಿಡಿದು ಚಿತ್ರಕಲೆಯವರೆಗೂ ಕಲಿಸುವುದು! ತಮಗೆ ಅನೇಕ ವಿಷಯಗಳು ಗೊತ್ತಿಲ್ಲವೆಂದು ಒಪ್ಪಿಕೊಳ್ಳಲು ಮೇಲರಿಮೆ ಅಡ್ಡವಾಗಿ ತಮಗೆ ಬರುವುದಷ್ಟನ್ನೇ ಕಲಿಸಬೇಕಾಗುತ್ತದೆ.

ಇವೆಲ್ಲಾ ಸಮಸ್ಯೆಗಳಿಗೆ ಸರ್ಕಾರವು ಪರಿಹಾರ ಕಂಡುಕೊಳ್ಳಬಹುದಾದರೂ ಪ್ರಸ್ತುತ ವಾತಾವರಣದಲ್ಲಿ ವಿದ್ಯಾರ್ಥಿ–ಶಿಕ್ಷಕರ ಸಂಬಂಧವು ಹೇಗಿರಬೇಕೆಂಬುದು ಯಕ್ಷ ಪ್ರಶ್ನೆಯಾಗಿದೆ. ಅನೇಕ ಶಿಕ್ಷಕರು ಶಿಕ್ಷಿಸುವುದು ಮತ್ತು ಅವಾಚ್ಯ ಶಬ್ದಗಳಲ್ಲಿ ನಿಂದಿಸುವುದು ವಿದ್ಯಾರ್ಥಿಗಳನ್ನು ಸರಿದಾರಿಗೆ ತರುವ ಮಾರ್ಗವೆಂದು ನಂಬಿದ್ದಾರೆ! ಅನೇಕ ಶಾಲೆಗಳಲ್ಲಿ, ಶಿಕ್ಷಕರೂ ಕೂಡ ಒತ್ತಡಗಳಿಗೆ ಮಣಿದು ಜಾತಿ ತಾರತಮ್ಯವನ್ನು ಒಪ್ಪಿಕೊಂಡಿರುವುದು ವರದಿಯಾಗಿವೆ. ಹಾಗೆಯೇ ಶಿಕ್ಷಕರ ತರಬೇತಿಯ ಪದವಿ ಎಂದೇ ಕರೆಯಲ್ಪಡುವ ಬಿ.ಎಡ್. ಈಗ ಮಾರಾಟದ ಸರಕಾಗಿರುವುದು, ಚಿಕ್ಕ ಮಕ್ಕಳೊಂದಿಗಿನ ಶಿಕ್ಷಕರ ಅಸಭ್ಯ ವರ್ತನೆ, ನಾಡಿನ ಮಕ್ಕಳನ್ನು ಕಾಡುವ ಸಮಸ್ಯೆಗಳಾಗೇ ಉಳಿದಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನೇಕ ನಿಯಮಗಳು ದೇಶದ ಸ್ಥಿತಿ ಗತಿಗಳನ್ನು ಬದಲಾಯಿಸಿರುವುದು ಸರಿಯಷ್ಟೇ. ಆದರೆ, ಈ ಬದಲಾವಣೆಯ ಮಾದರಿಗಳು ಹೇಗಿವೆಯಂದರೆ, ಸರ್ಕಾರದ ಶಾಲೆ–ಕಾಲೇಜುಗಳನ್ನು ಹಾಗು ಕಛೇರಿಗಳನ್ನು ಉದ್ಧಾರ ಮಾಡುವ ಬದಲು, ಬಡವರಿಗೆ ಸಾಲದ ರೂಪದಲ್ಲಿ ಹಣವನ್ನು ನೀಡಿ ಅವರ ಮಕ್ಕಳನ್ನು ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಸೇರಿಸುವಂತೆ ಮಾಡುವುದಷ್ಟೇ ಆಗಿದೆ. ಸರ್ಕಾರಕ್ಕೆ ಹೊಂದಿಕೊಂಡಂತೆ ನಾಗರೀಕರಾದ ನಾವು ಕೂಡ ನಮ್ಮ ಕರ್ತವ್ಯಗಳನ್ನು ಮರೆತಿರುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸರ್ಕಾರಿ ನೌಕರರಿಗೆ ಜನಸೇವೆಗಿಂತ ವೈಯಕ್ತಿಕ ಆಸಕ್ತಿ ಮುಖ್ಯವಾದರೆ, ಕಂಪನಿಯಲ್ಲಿ ದುಡಿಯುವವರಿಗೆ ಹೊರದೇಶಕ್ಕೆ ಹೋಗಿ ನೆಲೆಸುವುದೇ ಬದುಕಿನ ಪರಮೋಚ್ಚ ಧ್ಯೇಯವಾಗಿದೆ. ೨೧ನೇ ಶತಮಾನದಲ್ಲಿದ್ದರೂ, ಅಂಗೈಯಗಲ ಮೊಬೈಲ್ ವಾಣಿಯಲ್ಲೇ ಅಂತರ್ಜಾಲವು ಲಭ್ಯವಿರುವ ಸಮಯದಲ್ಲೂ, ದೇಶದ ನಾಗರಿಕರ ಸಮಸ್ಯೆಗಳಿಗೆ ಉತ್ತಮ ಶಿಕ್ಷಣಕ್ಕಿಂತ ತಮ್ಮ ಜಾತಿ ದೇವತೆಗಳೇ ಪರಿಹಾರಗಳಂತೆ ಕಾಣುತ್ತಿವೆ.

ಪ್ರಜಾಪ್ರಭುತ್ವವು ಉತ್ತಮ ಆಡಳಿತದ ಸೂತ್ರವೇ ಆಗಿದ್ದರೂ ಕೂಡ ಗ್ರೀಕ್ ಚಿಂತಕ ಸಾಕ್ರೆಟಿಸ್‌ನ ಮೆಜಾರಿಟಿಯ ಆಯ್ಕೆ ಆಯ್ಕೆಯಷ್ಟೇ ವಿನಾಃ ಸರಿಯಾದ ಆಯ್ಕೆಯಾಗಿರಬೇಕೆಂದಿಲ್ಲ ಎಂಬ ಮಾತು ಹಲವು ಬಾರಿ ನಿಜವಾಗಿದೆ. ಆದುದರಿಂದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಒಳಗೊಂಡಂತೆ ಜನರ ಜೀವನವನ್ನು ರೂಪಿಸುವ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾದ ಅನಿವಾರ್ಯತೆ ಇದೆ. ಸರ್ಕಾರಿ ನೌಕರರ ಮಕ್ಕಳು ಕಡ್ಡಾಯವಾಗಿ ಕೆಲವು ವರ್ಷವಾದರೂ ಸರ್ಕಾರಿ ಶಾಲೆಯಲ್ಲಿ ಓದುವಂತೆ ಕ್ರಮ ಜರುಗಿಸುವುದು, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಸರ್ಕಾರದ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವಂತೆ ಕಾನೂನು ರೂಪಿಸುವುದು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಶಿಕ್ಷಕರಿಗೆ ಬಿ.ಎಡ್. ಪದವಿಯಲ್ಲಿ ಮಕ್ಕಳೊಂದಿಗಿನ ಸಂಬಂಧದ ಬಗ್ಗೆ ಹಾಗು ಲೈಂಗಿಕತೆಯ ಬಗ್ಗೆ ಮುಕ್ತವಾಗಿ ಚರ್ಚಿಸುವ ಸಂದರ್ಭಗಳನ್ನು ರೂಪಿಸುವ ತುರ್ತಿದೆ. ಜೊತೆಗೆ ನೇಮಕಾತಿಗಳನ್ನು ಕಾಲಕಾಲಕ್ಕೆ ಮಾಡುತ್ತಾ, ಅರ್ಹತಾ ಪರೀಕ್ಷೆಯ ಮೂಲಕವೇ ಶಿಕ್ಷಕರನ್ನು ಆಯ್ಕೆ ಮಾಡುವ ಅಗತ್ಯವಿದೆ. ಇಲ್ಲದಿದ್ದರೆ, ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಕೆಲಸ ಮಾಡುವ, ಸಾಲ ಮಾಡಿ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸುವ ಕುಟುಂಬಗಳ ಸಂಖ್ಯೆಯೇ ಹೆಚ್ಚಾಗುತ್ತದೆ.



(ಸಾಹಿತ್ಯ–ಸಂಸ್ಕೃತಿ ವಿಮರ್ಶೆಗಳಲ್ಲಿ ಆಸಕ್ತಿ ಇರುವ ಕೆ. ಅರವಿಂದ ಮಿತ್ರ ಮೈಸೂರು ವಿಶ್ವ ವಿದ್ಯಾನಿಲಯದ ಮಂಡ್ಯ ಸ್ನಾತಕೋತ್ತರ ಕೇಂದ್ರದ ಇಂಗ್ಲೀಷ್ ವಿಭಾಗದಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ.

ಮಹಿಳಾ ಪುಟಗಳು

ಮಾರ್ಚ್ ೮, ಮಹಿಳಾ ದಿನ

ಹೆಣ್ಣೆಂಬ ಹೆಮ್ಮೆಯ ಕ್ಷಣಗಳು...

ಲಿಂಗಭೇದದ ದೀರ್ಘ ಚರಿತ್ರೆಯನ್ನೇ ಉಳ್ಳ ನಮ್ಮ ಪರಂಪರೆಯಲ್ಲಿ ಹೆಣ್ಣಿನ ಬದುಕು ಯಾವಾಗಲೂ ಸಂಕಷ್ಟಗಳಿಂದಲೇ ಕೂಡಿದ್ದು ಎಂದು ಸೂಚಿಸುವ ಹಲವಾರು ಕಥಾನಕಗಳೂ, ನಾಣ್ನುಡಿಗಳೂ, ಗಾದೆಗಳೂ ನಮ್ಮ ಸಾಹಿತ್ಯದಲ್ಲಿ ತುಂಬಿತುಳುಕುತ್ತವೆ. ಇತ್ತೀಚಿನ ಸ್ತ್ರೀವಾದಿ ಸಂಕಥನಗಳು ಇವನ್ನು ಬಿಡಿಸಿ, ವಿವರಿಸಿ, ವೈವಿಧ್ಯಮಯ ವ್ಯಾಖ್ಯಾನಗಳನ್ನೂ ಮಾಡಿವೆ. ಹೆಣ್ಣು ಎಂದರೆ ಏನು? ಜೀವ ಜಗತ್ತು ತನ್ನ ಸಮೃದ್ಧಿಗಾಗಿ ತಾನೇ ಎರಡಾಗಿ(ಆಕಸ್ಮಿಕವಾಗಿ ಕೆಲವೊಮ್ಮೆ ಮೂರಾಗಿಯೂ) ಒಡೆದುಕೊಂಡಿದ್ದರ ಒಂದು ಟಿಸಿಲಲ್ಲವೇ? ಅದಕ್ಕೇಕೆ ಬರೀ ಸಂಕಷ್ಟಗಳು? ಈ ಹಿನ್ನೆಲೆಯಲ್ಲಿ, ಪತ್ರಿಕೆ, ಹೆಣ್ಣಾಗಿ ಹುಟ್ಟಿದ ಮೇಲೆ ಅವಳಿಗೆ ತನ್ನದೇ ಸುಖದ ಕ್ಷಣಗಳೇ ಇಲ್ಲವೇ? ಅವಳ ಬದುಕಿಗೆ ತಾನು ಹೆಣ್ಣೆಂದು ಹೆಮ್ಮೆ ಪಡುವ ಆಯಾಮಗಳೇ ಇಲ್ಲವೆ? ಎಂಬ ಕುತೂಹಲದ ಪ್ರಶ್ನೆಗಳನ್ನು ನಮ್ಮ ಕೆಲವು ಮಹಿಳೆಯರನ್ನು ಪತ್ರಿಕೆ ಕೇಳಿತು. ಅವರ ನಿರೂಪಣೆಗಳು ಇಲ್ಲವೆ: ಸಂ.

ನನ್ನೊಳಗಿನ ಹೆಣ್ಣನ್ನು ಹುಡುಕುತ್ತಾ........

ಹೆಣ್ಣಾಗಿರುವುದರಿಂದಲೇ ಇರುವ ಖುಷಿ, ಸಂಭ್ರಮಗಳು ಇವೆಯಾ? ಎಂಬ ಪ್ರಶ್ನೆ ಎದುರಾದಾಗ ನಿಜಕ್ಕೂ ತಬ್ಬಿಬ್ಬಾದೆ. ಹೆಣ್ಣಿನ ಕುರಿತು ಎಷ್ಟೊಂದು ಮಾತುಗಳು, ವಾದಗಳು, ಸಿದ್ಧಾಂತಗಳು! ಅಂತರ್‌ಶಿಸ್ತೀಯ, ಬಹುಶಿಸ್ತೀಯ ಅಧ್ಯಯನಗಳು.... ಇವೆಲ್ಲದರ ಜೊತೆಗೆ ಜೈವಿಕ ಹೆಣ್ಣು, ಸಾಂಸ್ಕೃತಿಕ ರಚನೆಯಾದ 'ಹೆಣ್ತನ', ಸಾಮಾಜಿಕ ಅರಿವಿನಲ್ಲಿ ಮೂಡಿದ ಮಹಿಳೆ ಎಂಬ ಪರಿಕಲ್ಪನೆ.... ಅದರಲ್ಲೂ, ಮೇಲ್ವರ್ಗದ, ಮೇಲ್ಜಾತಿಯ ಮಹಿಳೆ, ದಲಿತ ಮಹಿಳೆ, ಮುಸ್ಲಿಂ ಮಹಿಳೆ, ಶೋಷಕ ಮಹಿಳೆ, ಶೋಷಿತ ಮಹಿಳೆ, ತೃತೀಯ ಜಗತ್ತಿನ ಮಹಿಳೆ, ಹುಸಿ ಬೌದ್ಧಿಕತೆಯ ಸುಶಿಕ್ಷಿತ ಮಧ್ಯಮ ವರ್ಗದ ಮಹಿಳೆ... ಒಂದೇ ಎರಡೇ?! ಈ ಎಲ್ಲ ರಚನೆಗಳಲ್ಲಿ ಹುದುಗಿಹೋದ ನನ್ನೊಳಗಿನ ನಿಜದ ಹೆಣ್ಣಿಗೆ ಏನನಿಸುತ್ತಿದೆಯೆಂದು ಕೇಳಿಕೊಂಡೇ ಇಲ್ಲವಲ್ಲಾ ಎಂದು ಕಳವಳವಾಯ್ತು.

ನಾನು ಹೆಣ್ಣೆಂಬ ಅರಿವು ಯಾವಾಗ ಉಂಟಾಯ್ತೆಂದು ಪ್ರಾಮಾಣಿಕವಾಗಿ ಯೋಚಿಸಲು ತೊಡಗುತ್ತೇನೆ. ಬಾಲ್ಯದಿಂದಲೂ ಇಂಥ ಅರಿವಾಗಲು ಅವಕಾಶವೇ ಆಗದಂತೆ 'ಹೆಣ್ಣಾಗಲು' ನಿರಂತರ ತರಬೇತಿ ನಡೆದಿತ್ತು. ಜಗುಲಿಯಲ್ಲಿ ಬಂದು ಕೂರಬಾರದು, ದೊಡ್ಡದಾಗಿ ನಗಬಾರದು, ಪ್ರಶ್ನೆ ಕೇಳಬಾರದು, ತಿರುಗುತ್ತರ ನೀಡಬಾರದು ಇಂಥ ನೂರಾರು 'ಬಾರದು', 'ಕೂಡದು' ಎಂಬ ನಿಷೇಧಗಳ ಚೌಕಟ್ಟು.

ಅವತ್ತು ದೇಹದಲ್ಲೇನೋ ಕಿರಿಕಿರಿ. ಕಿಬ್ಬೊಟ್ಟೆಯಲ್ಲಿ ಅಸಾಧ್ಯ ನೋವು. ಬೆನ್ನಹುರಿ ಹಿಂಡಿದಂತೆ ಸೊಂಟದ ಸುತ್ತಲೂ ಅಲೆಅಲೆಯಾಗಿ ಎದ್ದ ನೋವು. ಘಟಿಸದಿರಲೆಂದು ಅಂದುಕೊಂಡ ಘಳಿಗೆ ಘಟಿಸಿಯೇಬಿಟ್ಟಿತು ಕೊನೆಗೂ. ಆ ಘಳಿಗೆಯಿಂದಲೇ ಅಸ್ಪೃಶ್ಯಳಾಗಿಬಿಟ್ಟೆ! ಮನೆಯ ಭಾವ ವಲಯದಿಂದ 'ಹೊರಗಾದೆ'. ತಟ್ಟೆ, ಲೋಟ, ಚೊಂಬು ಹಿಡಿದು ಮನೆಯ ಹೊರಸುತ್ತಿನಲ್ಲೇ ನಾಯಿಯೊಂದಿಗೆ ಸುತ್ತಾಟ. ಹೆಣ್ಣಾಗುವ ಹಿಂಸೆಗೆ ಮನಸ್ಸು ವಿಲಿವಿಲಿ.

ಹಾಗಾದರೆ ಹೆಣ್ಣಾದ ಸಂಭ್ರಮ ಎಲ್ಲಿ ಹುಟ್ಟಿತು ಎಂಬುದು ಅಚ್ಚರಿ. ಗಂಡೆಂಬ ಭಿನ್ನ ಅನುಭವಕ್ಕೆ ಎದುರಾದಾಗಲೇ ಹೆಣ್ಣು ಎಂಬ ಅನುಭವ ಎಚ್ಚರವಾಯಿತಾ? ಹೌದು ಎನಿಸುತ್ತದೆ. ಇಲ್ಲವಾದರೆ ಅನುಭವದ ಅನನ್ಯತೆ ಎಲ್ಲಿರುತ್ತಿತ್ತು? ಈ ಭಿನ್ನ ದೇಹಗಳ, ಭಿನ್ನ ಭಾವವಲಯಗಳ ಮುಖಾಮುಖಿ ತನ್ನಷ್ಟಕ್ಕೇ ತಾನು ಉಂಟುಮಾಡುವ ಗಾಢ ಸೆಳೆತವಿದೆಯಲ್ಲ ಅದು ನಿಧಾನಕ್ಕೆ ಸಂಭ್ರಮದ ಅಲೆಗಳಂತೆ ಆವರಿಸಿಕೊಳ್ಳುತ್ತ ಹೋಯಿತು. ಅವನು ಗಮನಿಸುತ್ತಾನೆಂಬ ಕಾರಣಕ್ಕೇ ದೇಹದ ತಿರುವುಗಳಲ್ಲಿ ಅಕಾರಣ ನವಿರು. ಹೆಣ್ಣು ದೇಹದ ಕುರಿತು ಹೆಮ್ಮೆ. ಅವನ ಮೆಚ್ಚುಗೆಯ ಮಾತುಗಳು ಕಿವಿಯಲ್ಲಿ ಗುಂಯ್‌ಗುಡುತ್ತ ಅದೇ ನಾದವೇ ಎದೆಗಿಳಿದು ಎದೆಬಡಿತದಲ್ಲಿ ಸೇರಿಹೋದ ದಿವ್ಯಭಾವ. ಮೋಹಕ ಸುಳಿಗಳಲ್ಲಿ ಸುಳಿಯುವಾಗ ಗರತಿ, ಸೂಳೆ, ನೈತಿಕ, ಅನೈತಿಕ ಎಂಬ ಚೌಕಟ್ಟುಗಳೆಲ್ಲ ಛಿದ್ರಛಿದ್ರ.

ಶಾವಂತಿಗೆ ಗಿಡದಲ್ಲಿ ಮೊಗ್ಗೊಡೆದು ಹೂಬಿಟ್ಟಾಗ ಅಮ್ಮನ ಕಣ್ಣರಳುವುದು.... ಕೊಟ್ಟಿಗೆಯಲ್ಲಿ ದನ ಕರುಹಾಕಿದಾಗ ಅವಳಲ್ಲಿ ವಾತ್ಸಲ್ಯ ತುಳುಕುವುದು.... ಯಾರೋ ಉಂಡು ಸಂತೃಪ್ತಿಪಟ್ಟಾಗ ಅವಳ ಚಿತ್ತ ಪ್ರಸನ್ನಗೊಳ್ಳುವುದು.... ಇವೆಲ್ಲ ಏನು? ಎಂದು ಯೋಚಿಸುತ್ತೇನೆ. ಈ ಜೀವಪರತೆ, ಪೋಷಕ ಭಾವ, ಸೃಷ್ಟಿಸ್ಥಿತಿಯ ವಿಕಾಸ ಭಾವದಲ್ಲಿ ಅವಳ ಚಿತ್ತನೆಟ್ಟಿದೆಯಾ? ಅದಕ್ಕೆ ತಾಯಿಯಾಗಲೆಂದೇ ರೂಪುಗೊಂಡ ಅವಳ ಜೈವಿಕ ಸತ್ಯ ಕಾರಣವಾ? ಎಂದು ಕೇಳಿಕೊಳ್ಳುತ್ತೇನೆ.

ಮರದೊಳಗೆ ಮರಹುಟ್ಟಿ ಮರಚಕ್ರ ಕಾಯಾಗಿ..... ಅಜ್ಜಿ, ಅಮ್ಮ ಹೇಳುತ್ತಿದ್ದ ಒಗಟು ನೆನಪಾಗುತ್ತದೆ. ಒಡಲಲ್ಲೊಂದು ಜೀವ ಅರಳಿದಾಗ ವಿಚಿತ್ರ ಸಂಚಲನ. ದೇಹ, ಮನಸ್ಸು, ಪ್ರಜ್ಞೆ ಹೀಗೆ ಇಡಿಯಾಗಿ ಆವರಿಸಿಕೊಂಡ ಸೃಜನಭಾವ. 'ಕರುಳಬಳ್ಳಿಯ ಸೊಲ್ಲು' ಕೇಳತೊಡಗುತ್ತದೆ. ಮಗುವನ್ನು ರಕ್ತಲೋಳೆಗಳ ಮಡುವಿನಿಂದೆತ್ತಿ ಹಿಡಿವಾಗ ಉಂಟಾದ ಉನ್ಮಾದಕ್ಕೆ ಭಾಷೆಯೇ ಇಲ್ಲ! ಕೊಸರಿಕೊಳ್ಳುತ್ತಾ ಹಾಲು ಹೀರುವ ಮಗು ಅದರ ಬೆಚ್ಚನೆ ಸ್ಪರ್ಶ.... ಇವೆಲ್ಲ ಜೀವದ, ಭಾವದ ವಿಸ್ತರಣೆಯಾಗಿ ಬೆಳೆಯುತ್ತ ಹೋಗುವುದೇ ಒಂದು ಪರಮ ರಹಸ್ಯ. ಇದ್ಯಾವುದನ್ನೂ ಅರಿಯದ ಬೆತ್ತಲು ಸ್ಥಿತಿಯಲ್ಲಿ ಮುಗ್ಧವಾಗಿ ನಗುವ ಮಗು.... ನಿದ್ದೆಯಲ್ಲಿ ತುಟಿವಕ್ರಮಾಡಿ ಅಳುವಾಗ ಕರುಳು ಚುರಕ್ಕೆನ್ನುವುದೆಂದರೇನು ಎಂಬುದು ಅನುಭವದ ಭಾಗವಾಗುತ್ತದೆ. ಮೊಲೆಬಿಟ್ಟ ಮಗು ರಸ್ತೆಯಂಚಿನ ತಿರುವಿನಲ್ಲಿ ಕೈಬೀಸುತ್ತ ಬಯಲಿನೆಡೆ ನಡೆದಾಗ ಒಂದಳಿದು ಎರಡಾದ ಸಂಕಟ–ಸಂಭ್ರಮಗಳು ಒಟ್ಟೊಟ್ಟಿಗೆ ಹೊರಳುತ್ತವೆ. ಮಗುವನ್ನು ಅದರ ಪಾಡಿಗೆ ಅರಳಲು ಬಿಡುವ, ಮಹತ್ವಾಕಾಂಕ್ಷೆಯಿಲ್ಲದ ಮಮತೆಯ ತಾಯ್ತನ ಹಾಗೂ 'ವಂಶದ ಕುಡಿ' ಎಂಬ ಅಧಿಕಾರದ ತಂದೆತನಗಳಲ್ಲಿ ಸದಾ ತಾಯ್ತನ ಜೀವಪರ ಎಂಬುದು ಅರಿವಿನ ಹೆಮ್ಮೆ. ಜೀವವು ಕುಡಿಯೊಡೆವುದನ್ನು ಅನುಭವಿಸುವುದು ಅನುಭವದ ಆನಂದ. ಸಂತೈಸುವ, ಸಲಹುವ ಭಾವದ ಘನತೆಯನ್ನು ವ್ಯಕ್ತಿತ್ವದ ಭಾಗವಾಗಿಸಿಕೊಂಡು ಅರಳುತ್ತ, ಅರಳಿಸುತ್ತ ನಡೆವ ಚಲನೆಯೇ ಹೆಣ್ಣು. ಆ ಹೆಣ್ಣು ನನ್ನೊಳಗೂ ಇದ್ದಾಳೆ ಎಂಬುದೇ ತೃಪ್ತಿ.



ನನ್ನೊಳಗಿನ ಹೆಣ್ಣು ಅಧಿಕಾರ ಸಂಬಂಧಗಳಿಗೆ ಅತೀತಳು, ಜ್ಞಾನಮಾದರಿಗಳಿಗೆ ಅತೀತಳು, ಭಾಷೆಯ ರಚನೆಗೂ ಮಿಗಿಲಾದವಳೆಂಬ ಅರಿವೇ ಹೆಣ್ತನವನ್ನು ಹಿಂಸೆಯ ನೆಲೆಗಳಿಂದ ಥಕ್ಕನೆ ಬಿಡುಗಡೆಮಾಡಿ ಮುಕ್ತಗೊಳಿಸುತ್ತದೆ. ಎಲ್ಲ ಬೌದ್ಧಿಕ ರಚನೆಗಳಿಂದ ಮುಕ್ತಗೊಂಡಾಗಲೇ ಸಿಗಬಹುದಾದ ನನ್ನೊಳಗಿನ ನಿಜದ ಹೆಣ್ಣಲ್ಲಿ ಕರಗುವ ಉನ್ಮಾದಕ್ಕಾಗಿ ಕಾದಿದ್ದೇನೆ.

ಡಾ. ಗೀತಾ ವಸಂತ (ಕವಯತ್ರಿ ಮತ್ತು ವಿಮರ್ಶಕರು, ತುಮಕೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರು)

ಹೆಣ್ತನದ ಬಗ್ಗೆ ಸಾರ್ಥಕ ಭಾವ ಮೂಡುತ್ತದೆ

ತೊಂಭತ್ತರ ಅಜ್ಜಿಯನ್ನು ಹಳ್ಳಿಯಿಂದ ನಮ್ಮ ಮನೆಗೆ ಕರೆತಂದಿದ್ದೆ. ಅಜ್ಜಿಗೆ ಪ್ರಿಯವಾದ ಮೆತ್ತಗಿನ ಹಲಸಿನ ಹಣ್ಣಿನ ಕಡುಬು ಮಾಡಿದ್ದೆ. ಅಜ್ಜಿ ಅದನ್ನು ಮೆಲ್ಲನೆ ತಿನ್ನುತ್ತಾ ನುಡಿದಿದ್ದಳು. "ಮನುಷ್ಯನಿಗೆ ವಯಸ್ಸಾದ ಮೇಲೆ ಬೇರೆ ಎಲ್ಲಾ ಆಸೆಗಳು ಮಾಯವಾಗುತ್ತದೆ. ಹಸಿವು, ಜಿಹ್ವಾಚಾಪಲ್ಯ ಮಾತ್ರ ಉಳಿಯುತ್ತದೆ. ಹಸಿವಾದಾಗ ಪ್ರೀತಿಯಿಂದ ತುತ್ತು ಅನ್ನ ಬೇಯಿಸಿ, ಬಡಿಸುವವಳು ಮಗಳೋ, ಮೊಮ್ಮಗಳೋ ಆಗಿರಬೇಕು. ಇಲ್ಲದಿದ್ದರೆ ....." ಅಜ್ಜಿಯ ಅಭಿಪ್ರಾಯ ನನಗರ್ಥವಾಗಿತ್ತು. ಗಂಡಸು ಹೊರಗಡೆ ಎಷ್ಟೇ ದುಡಿಯಲಿ, ಸಮರ್ಥನಾಗಿರಲಿ, ಅಡಿಗೆಮನೆಯ ಅಧಿಕಾರ ಹೆಣ್ಣುಮಕ್ಕಳ ಕೈಯಲ್ಲಿ ಇರುತ್ತದೆ. ಅಡಿಗೆ ಮನೆಯ ಯಜಮಾನಿ ನಮ್ಮವಳಾಗಿದ್ದರೆ ಮಾತ್ರ ಹೊಟ್ಟೆ ತುಂಬ ಊಟ ವೃದ್ಧರಿಗೆ! ನನ್ನ ಹೆಣ್ಣು ಜನ್ಮ ಸಾರ್ಥಕ ಅನಿಸಿದ್ದು ಅಜ್ಜಿಯ ಈ ಮಾತು ಕೇಳಿ!

ನಿಜ! ನನ್ನ ರುಚಿಗೆ, ಅಭಿರುಚಿಗೆ ತಕ್ಕಂತೆ ಅಡಿಗೆ ಮಾಡಿಕೊಳ್ಳುವ ಸ್ವಾತಂತ್ರ್ಯವಿದೆಯಲ್ಲ, ಅದೆಷ್ಟು ಸುಖ ಎಂದು ಅರಿವಾದದ್ದು ಅಂದೇ! ನಮ್ಮ ಮಧ್ಯ ವಯಸ್ಸಿನಲ್ಲಿ ಸ್ವಂತ ಮನೆ ಕಟ್ಟಿಕೊಂಡೆವು. ಗೃಹಪ್ರವೇಶದ ಮನೆಯೊಳಗೆ ಗೋಪ್ರವೇಶವಾಗಬೇಕು. ಪುರೋಹಿತರ ಸಲಹೆಯಂತೆ ಆಕಳನ್ನೇನೋ ಹುಡುಕಿ ತಂದಾಯ್ತು. ಆದರೆ ಭಟ್ಟರು, ಯಜಮಾನರು, ಸ್ನೇಹಿತರು ಯಾರೆಷ್ಟು ಕರೆದರೂ, ಆಸೆ ತೋರಿದರೂ ಗೋಮಾತೆ ದಯೆ ತೋರಲಿಲ್ಲ. ಹಸಿರು ಸೀರೆ ಉಟ್ಟು, ಮಲ್ಲಿಗೆ ಮುಡಿದ ನಾನು ಒಳಗಿನಿಂದ ಬಂದು "ಬಾರಮ್ಮಾ" ಎಂದದ್ದೇ ಮುದ್ದು ಮಗುವಿನಂತೆ ನನ್ನ ಹಿಂಬಾಲಿಸಿ ಇಡೀ ಮನೆ ಸುತ್ತಿ ಅಕ್ಕಿ, ಬೆಲ್ಲ, ಬಾಳೆಹಣ್ಣು ತಿಂದು ಹೊರನಡೆದಿದ್ದಳು ಗೋಮಾತೆ! "ಸಭ್ಯ ಪ್ರಾಣಿಗಳಿಗೆ ಗಂಡಸರನ್ನ ಕಂಡರೆ ಭಯ, ಹೆಣ್ಣುಮಕ್ಕಳೆಂದರೆ ಸಲಿಗೆ – ಪ್ರೀತಿ" ಎಂದು ಪುರೋಹಿತರು ನುಡಿದಾಗ ನನ್ನ ಹೆಣ್ಣುತನದ ಬಗ್ಗೆ ನನಗೇ ಹೆಮ್ಮೆ. ಈಗಲೂ ನಾನು 'ಅಂಬಾ' ಎಂದು ಕರೆದಾಗ ಧಾವಿಸಿ ಬಂದು ನನ್ನ ಕೈಯ ಬಾಳೆಹಣ್ಣುಗಳನ್ನು ತಿನ್ನುವ ಬೀದಿ ಬದಿಯ ಆಕಳುಗಳನ್ನು ಕಂಡಾಗ ನನ್ನ ಬಗ್ಗೆ ನನಗೇ ಹೆಮ್ಮೆ. ಮನೆ ಬಾಗಿಲಲ್ಲಿ ಬಿಕ್ಷುಕರೂ 'ಅಮ್ಮ' ಅಂತ ಕರೆದಾಗಲೂ ಊಟ ನೀಡುವವಳು ತಾಯಿಯಲ್ಲವೇ? ಎಂಬ ಭಾವ ಮನಸ್ಸನ್ನು ಮುದಗೊಳಿಸುತ್ತದೆ.

ಬಣ್ಣ-ಬಣ್ಣದ ಸೀರೆಗಳನ್ನು ಉಡುವಾಗ ಅದನ್ನು ಬೇರೆಯವರು ಮೆಚ್ಚುವಾಗ ಗಂಡಸರಿಗಿಲ್ಲದ ಈ ವರ್ಣಮಯ ಜಗತ್ತು ನನ್ನದು ಎಂಬ ಸಂತಸ. ಹಾಗೆಯೇ ಮಂಗಳೂರು ಮಲ್ಲಿಗೆ ತಂದು, ನನ್ನ ಮೋಟು ಜಡೆಗೆ ಏರಿಸಿಕೊಂಡು ಅದರ ಪರಿಮಳ ಆಘ್ರಾಣಿಸುವಾಗ ಇದು ಹೆಣ್ಣಿನ ಭಾಗ್ಯ ಎಂಬ ಸಂತಸ.

ವಿದ್ಯಾರ್ಥಿನಿಯಾಗಿದ್ದಾಗ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದಾಗ, ನಮ್ಮ ಗುರುವೃಂದ ಗಲಾಟೆ ಮಾಡುವ ಗಂಡುಮಕ್ಕಳನ್ನು "ಈ ಹುಡುಗಿಯನ್ನು ನೋಡಿಯಾದ್ರೂ ಕಲಿಯಬಾರದೆ?" ಎಂದು ಗದರಿಸಿದಾಗ ನನ್ನ ಹೆಮ್ಮೆಗೆ ಕೋಡು ಮೂಡಿದ್ದಿದೆ. ಮುಂದೆ ಸಾರ್ವಜನಿಕ ಜೀವನದಲ್ಲಿ, ಹಲವಾರು ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ 'ಹೆಣ್ಣು' ಎಂಬ ಕಾರಣಕ್ಕೇ ಹೆಚ್ಚಿನ ಗಮನ-ಗೌರವ ದೊರೆತಾಗಲೂ ಸಂತಸಪಟ್ಟಿದ್ದೇನೆ.

ಎಂಭತ್ತೈ ವರ್ಷಗಳ ಇತಿಹಾಸವಿರುವ ಕರ್ನಾಟಕ ಸಂಘದ ಅಧ್ಯಕ್ಷಳಾದಾಗ ಭಾರತೀಯ ಕುಟುಂಬ ಯೋಜನಾ ಸಂಘದ ಅಧ್ಯಕ್ಷರಾಗಿ, ಎಂಭತ್ತಕ್ಕೂ ಹೆಚ್ಚು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಾಗ ದಕ್ಷತೆಯಿಂದ ಕಾರ್ಯನಿರ್ವಹಿಸಿ ಒಬ್ಬ ಮಹಿಳಾ ಅಧ್ಯಕ್ಷರು ಎಂದು ಹೆಚ್ಚಿನ ಗೌರವ, ಸಹಕಾರ, ಕೀರ್ತಿ ಸಿಕ್ಕಾಗಲೂ ಹೆಣ್ಣಾಗಿಯೂ ಬಾಳು ಸವಿಯಾಗಿದೆ ಎಂದು ಅನಿಸಿದೆ.



ನನ್ನ ಮೂರು ಹೆಣ್ಣು ಮಕ್ಕಳೂ ತಾವು ತಾಯಂದಿರಾಗುವಾಗ, ಸ್ವತಃ ವೈದ್ಯವೃತ್ತಿಯಲ್ಲಿದ್ದೂ, 'ಅಮ್ಮಾ' ಎಂದು ನನ್ನ ಕೈ ಹಿಡಿದೇ ಸಾಂತ್ವನ ಪಡೆದಾಗ, ತಮ್ಮ ತಂದೆಯನ್ನು ಮೆಚ್ಚುವಾಗ ಕೂಡ "ಅಮ್ಮನಂಥ ಅಂತಃಕರಣವಿರುವ ನಮ್ಮ ಅಪ್ಪ" ಎಂದಾಗಲೂ ಪರೋಕ್ಷವಾಗಿ ನನಗೇ ಗೌರವ ತೋರುತ್ತಿದ್ದಾರೆ ಎನಿಸಿ ಹೆಣ್ತನದ ಬಗ್ಗೆ ಸಾರ್ಥಕ ಭಾವ ಮೂಡುತ್ತದೆ.

–ವಿಜಯಾ ಶ್ರೀಧರ್, ಲೇಖಕಿ, ಗೃಹಿಣಿ, ಶಿವಮೊಗ್ಗ

ಬಿಂದುವೊಂದು ಜೀವವಾಗಿ ರೂಪುಗೊಳಿಸುವ ಬೆರಗು

ಮೂರು... ಮೂರು ತಲೆಮಾರು ಹೆಣ್ಣು ಮಕ್ಕಳಿರದ ಮನೆಯಲ್ಲಿ, ಹೆಣ್ಣು ಕೂಸಿಗಾಗಿ ಹಂಬಲಿಸಿ, ಕಂಡ ಕಂಡ ದೇವರಿಗೆ ಹರಕೆ ಕಟ್ಟಿ ಕೊನೆಗೆ ಮಧುಗಿರಿ ಮಾರಮ್ಮ ಕಣ್ಣು ಬಿಟ್ಟು ಜಯಪ್ಪನ ಹಿಂದೆ ೯ ವರ್ಷಕ್ಕೆ ನೀನು ಹುಟ್ಟಿದೆ ಎಂದು ಅಮ್ಮ ಈಗಲೂ, ಹೇಳ್ತಾ ... ಇರ್ತಾರೆ. ಹೆಣ್ಣು ಮಕ್ಕಳಿರದ ಮನೆಯಲ್ಲಿ ಹೆಣ್ಣು ಕೂಸಾಗಿ ಹುಟ್ಟಿದ ಕಾರಣಕ್ಕೆ, ಅಣ್ಣಂದಿರು, ತಮ್ಮನಿಗಿಂತ ಹೆಚ್ಚಿನ ಪ್ರೀತಿ, ಕಾಳಜಿ, ವಿಶೇಷ ಸವಲತ್ತು ನಾನು ಪಡೆದೆ. ಆಗೆಲ್ಲಾ ಹೆಣ್ಣು ಹುಡುಗಿಯಾಗಿ ಹುಟ್ಟಿದ್ದಕ್ಕೆ ಹೆಮ್ಮೆಯೆನಿಸಿತ್ತು.

ಬೆಳೆದಂತೆಲ್ಲಾ ... ದೈಹಿಕ ಬದಲಾವಣೆಗಳು ತಂದ ಮುಜುಗರ, ಮುಟ್ಟು, ಮೈಲಿಗೆ, ಕೆಲವು ನಿರ್ಬಂಧಗಳು ಕಿರಿಕಿರಿ ಎನಿಸಿದರೂ, ಮಲ್ಲಿಗೆ ಮಾಲೆ, ಜಾಲಾರ, ದವನ, ಜಾಜಿ, ಸಂಪಿಗೆಗಳ ಮುಡಿದು ಘಮಘುಟ್ಟುವಾಗ, ಓಡಾಡುವಾಗ ಖುಷಿಯಾಗಿದ್ದು ಸುಳ್ಳಲ್ಲ. ಹೊನ್ನಾರು ಹೂಡುವಾಗ, ಸಸಿಮಡಿಗೆ ಬೀಜ ಬಿತ್ತುವಾಗ ಅಪ್ಪ ನನ್ನ ಕೈಲೇ ಪೂಜೆ ಮಾಡುಸ್ತಿದ್ರು. ರಾಗಿ, ಭತ್ತ ಕೊಯ್ಲಿಗೆ ಬಂದಾಗ, ಅಮ್ಮ ನನ್ನ ಕೈಲೇ ತೆನೆಗೆ ಹಾಲು ತುಪ್ಪ ಎರೆಸಿ, ಮೊದಲು ಮಾಡುಸ್ತಿದ್ರು, ನನ್ನ ಸೋದರರಿಗಿಲ್ಲದ ಈ ಭಾಗ್ಯ ನನಗೆ ದಕ್ಕಿದ್ದು ನಾನು ಹೆಣ್ಣಾದ್ದರಿಂದಲೇ!.

ಇನ್ನು ಹೇಳಲೇ ಬೇಕಾದ ಸಂದರ್ಭವೆಂದರೆ, ಬಾಳೆ ಎಲೆಯಂತಹ ತೆಳ್ಳನೆ ಹೊಟ್ಟೆ ದಿನ ದಿನಕ್ಕೂ ಉಬ್ಬಿ ಅದರೊಳಗೊಂದು ಜೀವ ಮಿಡುಕಿದಾಗಿನ ಪುಳಕ, ಒಡಲ ಜೀವ ಮಡಿಲಿಗೆ ಬಂದು.. ಮಡಿಲೊಳಗಿನ ಆ ಬೊಮ್ಮಟೆ ಕಣ್ಣು ಪಿಳುಕಿಸಿ... ಆಕಳಿಸಿ, ಮೈಮುರಿದು, ಹಾಲು ಹೀರುತ್ತಲೇ ನಿದ್ರೆಗೆ ಜಾರಿ, ನಿದ್ರಿಸುತ್ತಲೇ ಅರಳಿಸಿದ ಹೂ ನಗು... ದೇವರೆ....., ದೇವರೆ....., ಆ ಖುಷಿ, ಆ ಸಂತಸ ನನಗೆ ದಕ್ಕಿದ್ದು, ಪುಟಾಣಿ ಗುಲಾಬಿ ಮೃದುಪಾದಗಳ ಒದೆತದಿಂದ ನನ್ನ ಸಿಟ್ಟು, ಸೆಡವುಗಳು ಕಳಚಿಬಿದ್ದು, ಸಹನೆಯನ್ನು ರೂಢಿಸಿಕೊಂಡಿದ್ದು ಹೆಣ್ಣಾದ ಕಾರಣಕ್ಕೆ. ಬಿಂದುವೊಂದನ್ನು ಜೀವವಾಗಿ ರೂಪಿಸಿ, ರೂಪುಗೊಳಿಸಿ, ರೂಪಾಂತರಿಸುವ ಹೆಣ್ತನದ ಪರಿಗೆ ನಾನು ಬೆರಗಾಗಿದ್ದೇನೆ.

ಅಜ್ಜಿ ಹಾಕುತ್ತಿದ್ದ ರಂಗೋಲಿ, ಹಾಡುತ್ತಿದ್ದ ಹಾಡು, ಭಜನೆಗಳು, ಹೇಳುತ್ತಿದ್ದ ಕಥೆಗಳು, ಮನೆ ಮದ್ದುಗಳು, ಅಮ್ಮನ ಅಡುಗೆ, ಕಸೂತಿ, ನನ್ನ ತುದಿ ಬೆರಳುಗಳಲ್ಲಿ ನರ್ತಿಸುತ್ತಲೇ ಬೇರೊಂದು ಹೆಣ್ಣು ಜೀವಕ್ಕೆ ದಾಟುತ್ತಿರುವುದು, ನಾನು ಹೆಣ್ಣಾದ್ದರಿಂದಲೇ! ಇನ್ನು ಬೀದಿ ನಾಯಿ ಸುಬ್ಬಿ, ಎಲ್ಲೋ ಮರಿ ಹಾಕಿ ಗೇಟಿನ ಬಳಿ ಬಂದಾಗ ಅವಳ ಹಸಿವು, ಗಬ್ಬದ ಹಸು, ಎಮ್ಮೆ ಕಣ್ಣಂಚಿನ ನೋವು, ಮನೆ ಬೆಕ್ಕು ಅಟ್ಟ, ಕಬೋರ್ಡ್, ಷೆಡ್ಡು, ಎಂದು ಪರದಾಡುವಾಗಿನ ಸಂಕಟ, ಮಾತಿಲ್ಲದೇ ಅರ್ಥವಾಗಿದ್ದು ನಾನು ಹೆಣ್ಣಾದ ಕಾರಣದಿಂದಲೇ.

ಕೊನೆಯದಾಗಿ ಹೇಳಲೇಬೇಕಾದ ಸಂದರ್ಭವೆಂದರೆ, ಮೂರ್ನಾಲ್ಕು ವರ್ಷದ ಹಿಂದಿನ ಮಾತು, ಟಿವಿಯಲ್ಲಿ ಕೊಳವೆ ಬಾವಿಗೆ ಬಿದ್ದ ಮಗುವನ್ನು ಹೊರತೆಗೆವ ಕಾರ್ಯಾಚರಣೆಯನ್ನು ತೋರಿಸ್ತಾ ಇದ್ರು. ಅದು ಹೆಣ್ಣು ಮಗು ಬದುಕಿ ಬರುತ್ತೆ ನೋಡ್ತಾ ಇರು ಎಂದರು ನನ್ನ ಪತಿ. ಅದು ಹ್ಯಾಗೆ ಅಷ್ಟು ಗ್ಯಾರಂಟಿಯಾಗಿ ಹೇಳ್ತೀರಿ ನೀವು ಅಂದೆ. 'ಅದು ಹೆಣ್ಣು ಮಗು ಕಣೆ, ಪ್ರತಿ ಹೆಣ್ಣಿನ ಜೀವಕೋಶದಲ್ಲೂ XX ಕ್ರೋಮೊಸೋಮ್ಸ್ ಇರುತ್ತೆ. X ಕ್ರೋಮೊಸೋಮ್ಸ್‌ಗೆ ಧಾರಣಾ ಶಕ್ತಿ ಜಾಸ್ತಿ. ಅದು Y ಗಿಂತಲೂ strong. ಹಾಗಾಗೆ, ಎಂಥ ಸಂದರ್ಭದಲ್ಲೂ ಹೆಣ್ಣು ಜೀವ ಬದುಕಲು ಹೋರಾಡುತ್ತೆ..ಹಾಗಾಗೆ ಸುನಾಮಿ ಅಪ್ಪಳಿಸಿದಾಗ, ಅಲೆಗಳ ಮೇಲೆ ತೇಲ್ತಾ ಒಂದೆರಡು ದಿನ ಕಳೆದ ಹೆಣ್ಣು ಮಗು ಬದುಕಿ ಬರಲಿಲ್ಲವಾ? ಕೊಳವೆ ಬಾವಿಗೆ ಬಿದ್ದು ಬದುಕಿ ಬಂದ ಮಕ್ಕಳಲ್ಲಿ ಹೆಣ್ಣು ಮಕ್ಕಳೇ ಜಾಸ್ತಿ. ನಾನು ಗಮನಿಸಿದಂತೆ ಹುಟ್ಟುವಾಗ ಉಸಿರಾಟದ ತೊಂದರೆ ಆದ ಮತ್ತು ನವಜಾತ ಶಿಶುಗಳಲ್ಲಿ ಜೀವಕ್ಕೆ ಅಪಾಯವಿರುವಂತಹ ಸಂದರ್ಭಗಳಲ್ಲಿ, ಹೆಣ್ಣು ಶಿಶುಗಳೇ ಹೆಚ್ಚು ಬದುಕಿ ಉಳಿಯುವುದು. ನೀವು ಗ್ರೇಟ್ ಎಂದರು ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರಾದ ನನ್ನವರು. ಆ ಕ್ಷಣ ನನಗೆ, ನಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ತುಂಬಾ... ತುಂಬಾ... ಹೆಮ್ಮೆ ಎನಿಸಿತು.



– ಮಲ್ಲಿಕಾ ಡಾ. ಬಸವರಾಜು, ಲೇಖಕಿ, ಗೃಹಿಣಿ, ತುಮಕೂರು

ಲಾಂಗ್ ಡ್ರೈವ್‌ನ ಆ ಸುಖ-ಸತ್ಯಗಳ ಕ್ಷಣಗಳು...

ನನ್ನಜ್ಜಿ ಮಂಜಮ್ಮ. ತಾತ ತೀರಿದ ಮೇಲೆ, ದಾದಿಯಾಗಿ ದುಡಿದು ನನ್ನಪ್ಪನನ್ನು ಒಂಟಿಯಾಗಿ ಬೆಳೆಸಿದಾಕೆ. ಗಟ್ಟಿ ಹೆಂಗಸು. ಅದಮ್ಯ ಜೀವನ ಪ್ರೀತಿಯ ಪರ್ವತ. ನನ್ನ ಬಾಲ್ಯದ ಬಹಳಷ್ಟು ಸುಂದರ ನೆನಪುಗಳಿಗೆ ಕಾರಣರಾದಾಕೆ. ಅಜ್ಜಿ -ಮೊಮ್ಮಗಳ ಜೋಡಿಯನ್ನು ನೆಂಟರಿಷ್ಟರು- ಸ್ನೇಹಿತರು ಇಂದಿಗೂ ನೆನೆಯುತ್ತಾರೆ. ಒಂದಷ್ಟು ವರ್ಷಗಳ ಹಿಂದೆ; ಈಗಿನಷ್ಟು ಸೌಲಭ್ಯಗಳಿಲ್ಲದ ಸಂದರ್ಭ. ಮಲೆನಾಡಿನ ಮೂಲೆಮೂಲೆಗಳನ್ನು ಸುತ್ತಾಡಿಸಲು ಅಜ್ಜಿ ನನ್ನನ್ನು ಬಸ್ಸಿನಲ್ಲಿ- ನಡಿಗೆಯಲ್ಲಿ, ಹೇಗೆಂದರೆ ಹಾಗೆ ಕರೆದೊಯ್ಯುತ್ತಿದ್ದರು. ಆ ಊರಿನ -ಜೀವನದ ಕತೆಗಳನ್ನೆಲ್ಲ ಹೇಳುತ್ತಾ, ಅದರೊಂದಿಗೆ ಬೆರೆತಿದ್ದ ಅವರ ಬದುಕಿನ ಕ್ಷಣಗಳನ್ನು ನೆನಪು ಮಾಡಿಕೊಳ್ಳುತ್ತಿದ್ದರು. ತನಗೆ ಖುಷಿ ನೀಡುತ್ತಿದ್ದ ಕಾಡು-ಗಿಡ-ಮರ-ಹೂ-ಬಳ್ಳಿ-ಜನ-ಊಟ- ಈ ಎಲ್ಲವನ್ನೂ ಹೇಳಿಕೊಂಡು ಸಂಭ್ರಮಿಸುತ್ತಿದ್ದರು. ಹೋದಲ್ಲಿ-ಇದ್ದಲ್ಲಿ ಸಂಚಲನವನ್ನೇ ಸೃಷ್ಟಿಸುತ್ತಿದ್ದ ಚೈತನ್ಯದಾಯಕ ಗುಣದ ಆಕೆ ತನಗೆ ಹಿತವೆನಿಸಿದಂತೆ ಹೆಮ್ಮೆಯಿಂದ ಬಾಳಿದ್ದರು.

ರಾಜಮ್ಮ ಅಮ್ಮನ ಅಮ್ಮ. ಈಗ ೮೩. ಮದುವೆಯಾದಂದಿನಂದೇ ನಾಲ್ಕು ಮಕ್ಕಳಿಗೆ ಮಲತಾಯಿಯಾಗಿ, ತನ್ನವೂ ಸೇರಿ ಹತ್ತು ಮಕ್ಕಳಿಗೆ ಉಣಿಸಿ, ಬೆಳೆಸಿ ಬದುಕು ಕಲಿಸಿದವರು. ದೊಡ್ಡ ಕುಟುಂಬದ ನಿರ್ವಹಣೆ, ಸಂಸಾರದ ಮತ್ತು ಸಂಬಂಧಗಳ ಏಳು-ಬೀಳುಗಳನ್ನು ತಾಳ್ಮೆಯಿಂದ ಸಂಭಾಳಿಸಿದವರು. ಉತ್ತಮ ಜೀವನ ರೂಪಿಸಿಕೊಂಡ ತನ್ನ ಮಕ್ಕಳನ್ನೇ ಆದರ್ಶ ಮಾಡಿಕೊಂಡು, ಒದು-ತಿಳುವಳಿಕೆಯನ್ನು ವಿಸ್ತರಿಸಿಕೊಂಡವರು. ಕಣ್ಣೆದುರೇ ಮಕ್ಕಳ ಸಾವು; ಪುನರಾವರ್ತಿತ ಸಂಕಟಗಳು. ಆದರೂ, ಎಂದೂ ಎದೆಗುಂದಿದವರಲ್ಲ.

ಪುರುಷ ಪ್ರಧಾನ ವ್ಯವಸ್ಥೆ, ಶೋಷಣೆ, ಹೆಣ್ಣು ಅಬಲೆ...ಇತ್ಯಾದಿ 'ದೃಷ್ಟಿ'ಕೋನದಲ್ಲಿ ನನ್ನಿಬ್ಬರು ಅಜ್ಜಿಯರ ಬದುಕನ್ನು ವಿಶ್ಲೇಷಣೆಗೆ ಒಡ್ಡಿದರೆ, ಖಂಡಿತಕ್ಕೂ ಅದು ಸೊಗಸಿನದೆಂದು ಹೇಳಲಾಗದು. ದೈನಂದಿನ ಜಂಜಡಗಳು ಅವರನ್ನು ಹಣ್ಣುಗಾಯಿ ನೀರುಗಾಯಿ ಮಾಡದೇ ಇರಲಿಲ್ಲ. ತಾವು ನೋವುಂಡು ಬಳಗಕ್ಕೆ ಸಿಹಿ ಹಂಚುವ ಗುಣದ ಕಾರಣಕ್ಕೋ ಏನೋ; ಬದುಕಿನ ಪಯಣದ ಕುರಿತು ಅವರಿಗೆ ಬಹಿರಂಗ ಹೇಳಿಕೊಳ್ಳುವಂತ ದೂರುಗಳು ಇದ್ದಂತಿರಲಿಲ್ಲ. ಶೈಕ್ಷಣಿಕವಾಗಿ ಹೆಚ್ಚು ಕಲಿಯದ, ಆದರೂ ತಮ್ಮ ಇರುವಿಕೆ ಮೂಲಕವೇ ಸುತ್ತಲನ್ನು ಪ್ರಭಾವಿಸಿ, ತಮ್ಮ ಬದುಕಿಗೆ ಅರ್ಥ ತುಂಬಿಕೊಳ್ಳುತ್ತಿದ್ದ ಅವರ ರೀತಿ ನನ್ನನ್ನು ಬೆರಗುಗೊಳಿಸುತ್ತದೆ. ನನ್ನಿಬ್ಬರು ಅಜ್ಜಿಯರಷ್ಟೆ ಏಕೆ, ಪ್ರತಿ ಊರು-ಕೇರಿ, ಮನೆಮನೆಗಳಲ್ಲೂ ಇಂಥ ಹತ್ತಾರು ಉದಾಹರಣೆಗಳು ಉಸಿರಾಡುತ್ತಿವೆ.

ಬದುಕಿನ ಭಿನ್ನದಾರಿಗಳನ್ನು ಸವೆಸುತ್ತಿರುವ ನಾನು ಮತ್ತು ನನ್ನ ಆತ್ಮೀಯ ಗೆಳತಿ ಆಗೀಗ ಲಾಂಗ್ ಡ್ರೈವ್ ಹೊಗುತ್ತೇವೆ; ಸವಾರಿ ಮಾರ್ಗದಲ್ಲಿ ಆಕಾಶದ ಕೆಳಗಿನ ಎಲ್ಲವನ್ನೂ ಲೋಕಾಭಿರಾಮವಾಗಿ ಚರ್ಚಿಸುತ್ತೇವೆ. ನಮ್ಮ ನಮ್ಮ ಬದುಕಿನ ಏರಿಳಿತಗಳನ್ನು ಮುಕ್ತವಾಗಿ ಹೇಳಿಕೊಂಡು ಹಗುರಾಗುತ್ತೇವೆ. ನಾವಿಬ್ಬರೂ ನಮ್ಮ ಹೆಣ್ತನದ ನವಿರು ಭಾವನೆಗಳಿಗೆ ಒಟ್ಟಿಗೇ ಸ್ಪಂದಿಸುವುದನ್ನು ಕಲಿಯುತ್ತಾ ಬೆಳೆದವರು. ಅದಕ್ಕಾಗಿಯೇ ಹೆಮ್ಮೆ ಪಟ್ಟವರು. ಜಾತಿ, ಧರ್ಮ ಇತ್ಯಾದಿಗಳ ಸೀಮಿತ ಹಂಗಿಗೆ ಬೀಳದೆ, ಗೆಳೆತನದಲ್ಲಿ ನಮ್ಮತನವನ್ನು ಉಸಿರಾಡಬಯಸಿದವರು. ಅವಳೀಗ ದೆಹಲಿ ವಾಸಿ. ನಾನೋ ವೃತ್ತಿ ಜೀವನದ ಭಾಗವಾಗಿ, ನಿತ್ಯ ಹಳ್ಳಿಯ ಪ್ರವಾಸಿ. ತದ್ವಿರುದ್ಧ ದಿಕ್ಕುಗಳಲ್ಲಿ ವೃತ್ತಿ ಸುಖವನ್ನು; ಬದುಕಿನ ಅರ್ಥವನ್ನು ಅರಸುತ್ತಿರುವ ನಮ್ಮಿಬ್ಬರಲ್ಲಿ ಒಂದಷ್ಟು ಭಿನ್ನತೆಗಳಿದ್ದರೂ ಸಾಮ್ಯತೆಗಳಿಗೇನೂ ಕೊರತೆ ಇಲ್ಲ. ದಿಲ್ಲಿಯಲ್ಲಿ ಆಕೆ ಕಾಣುವ; ಕೇಳುವ; ಅನುಭವಿಸುವ ಹೆಣ್ತನದ ಸುಖ; ದುಃಖಕ್ಕೂ, ಹಳ್ಳಿಯಲ್ಲಿ ನಾನು ಕಾಣುವ ಬದುಕಿನ ಸತ್ಯಗಳಿಗೂ ಫರಕಿದೆ. ನಮ್ಮಿಬ್ಬರ ಭೇಟಿಯಲ್ಲಿ ಅನುಭವಗಳೂ ಏಕತ್ರಗೊಳ್ಳುತ್ತವೆ. ಲಾಂಗ್ ಡ್ರೈವ್‌ನ ಕೊನೆಯಲ್ಲಿ, ನಾಳೆ ಬೆಳಗ್ಗೆಯ ಉಪಾಹಾರದ ಚರ್ಚೆ ನಡೆಸಿ, ಮಂದಹಾಸ ಬೀರಿ ಬೀಳ್ಕೊಳ್ಳುತ್ತೇವೆ. ಶೋಷಣೆ, ಸ್ತ್ರೀ ಸಮಾನತೆ ಇತ್ಯಾದಿ ವಾದಾಪವಾದಗಳೇನೇ ಇರಲಿ; ಅವೆಲ್ಲವನ್ನೂ ಮೀರಿದ ಬದುಕಿನ ಸತ್ಯಗಳಿಗೆ ಮಿಡಿಯುವುದನ್ನು ಆ ಸತ್ಯಗಳೇ ಕಲಿಸಿವೆ ನಮಗೆ.



-ಸ್ನೇಹ ಎನ್. ಆರ್. ಉಪನ್ಯಾಸಕಿ, ಗೃಹಿಣಿ, ಮೈಸೂರು

ಪುರುಷ ನಿರ್ಧರಿಸುವ ಹೆಣ್ಣಿನ ಸುಖದ ದಾರಿಗಳು...

ನನಗೆಂದಿಗೂ ಗಂಡಾಗಿ ಹುಟ್ಟಬೇಕಿತ್ತು ಎನಿಸಿಲ್ಲ, ಎಂಥಾ ಸಂಕಷ್ಟದಲ್ಲಿಯೂ ಹೆಣ್ಣಾಗಿ ಹುಟ್ಟಬಾರದಿತ್ತು ಎಂದೂ ಎನಿಸಲಿಲ್ಲ. ಬದಲಿಗೆ ಹೆಣ್ಣು ಜನ್ಮಕ್ಕೇ ಏಕಿಷ್ಟು ಕಷ್ಟ ಎನಿಸಿದ್ದಿದೆ. ಈ ಮಾತು ಹೇಳುವಾಗ ಹೆಣ್ಣಾಗಬೇಕೆಂದು ಹಪಹಪಿಸುವ ಮಂಗಳಮುಖಿಯರು ನೆನಪಾಗುತ್ತಿದ್ದಾರೆ. ಬಳೆ, ಹೂವು, ಕುಂಕುಮ, ಸೀರೆ, ಗೆಜ್ಜೆಗಳಿಗಾಗಿ ಅವರು ಹಾತೊರೆಯುವ ರೀತಿ... ಹೆಣ್ಣೆಂದರೆ ಎಷ್ಟೆಲ್ಲಾ ಸಂಭ್ರಮ, ಸಡಗರ!

ಹಾಗಾದರೆ ಹೆಣ್ಣೆಂದರೆ ಇಷ್ಟೇನಾ? ಅಲಂಕಾರ ಎನ್ನುವುದು ಸಂತೃಪ್ತಿಪಡಿಸುವುದಕ್ಕೆ/ಪಟ್ಟುಕೊಳ್ಳುವಷ್ಟಕ್ಕೆ ಸೀಮಿತಗೊಳಿಸುವ ಹುನ್ನಾರವೆಂದು ತಾನೇ ಇವುಗಳನ್ನೆಲ್ಲಾ ತಿರಸ್ಕರಿಸಬೇಕು/ತಿರಸ್ಕರಿಸುತ್ತಾರೆ ಎಂಬ ಅಭಿಪ್ರಾಯವಿರುವುದು? ಹಾಗಾದರೆ ಹೆಣ್ಣಿಗೆ ಖುಷಿ ಸಿಗುವುದು ಎಲ್ಲಿ? ಹಿಂದೆಲ್ಲಾ ಹಸೆ, ರಂಗೋಲಿ, ಕಸೂತಿ, ಹೆಣಿಗೆ, ಈಗ ಕವಿತೆ, ಕತೆ, ಗೀತೆ, ಮಹಿಳಾ ಸಂಘ, ವೇದಿಕೆಗಳು, ಎಷ್ಟೆಲ್ಲಾ ಅವಕಾಶಗಳು ಅಲ್ಲಾ ಅಡಗುತಾಣಗಳು, ಇವೇ ಏನು ನಾವು ಕಂಡುಕೊಂಡಿರುವುದು?

ಹೆಣ್ತನವೆಂದರೆ ಅಸೀಮ ಶಕ್ತಿ, ಜೀವದಾಯಿತ್ವ, ಸದಾ ಚಿಮ್ಮುವ ಚೈತನ್ಯ... ತಾಯ್ತನ ಇವೆಲ್ಲ ಹೆಣ್ಣಿಗೆ ನೀಡುವ ಸುಖ ಹಾಗೂ ಸಂತೃಪ್ತಿ ಎಣೆಯಿಲ್ಲದ್ದು ಎನ್ನುತ್ತಲೇ, ಸ್ತ್ರೀ ಎಂದರೆ ತಾಯ್ತನ ಎಂಬಷ್ಟರ ಮಟ್ಟಿಗೆ ವೈಭವೀಕರಿಸಲಾರೆ. ಹೆರುವುದೇ ಹೆಣ್ಣಿನ ಪರಮ ಗಂತವ್ಯವಲ್ಲ. ನಾವು ಸದಾ ಕಾಯ್ದುಕೊಳ್ಳಬೇಕಾದ ಮತ್ತೊಂದು ಎಚ್ಚರ, ನಾವು ಯಾವ ಕಾರಣಕ್ಕೆ ಸಂತಸ, ಸಂಭ್ರಮ ಪಡಬೇಕು ಎಂಬುದನ್ನೂ ಪುರುಷಲೋಕವೇ ನಿರ್ಧರಿಸಿ ಮಾನ್ಯ ಮಾಡುತ್ತಾ ಬಂದಿದ್ದು, ಈಗಾಗಲೇ ಸಿಲುಕಿಕೊಂಡಿರುವ ಅಂತಹ ಸುಳಿಗಳಿಂದ ಹೊರಬರುವುದಕ್ಕೆ ಸಂಬಂಧಿಸಿದ್ದು.

ಒಂದು ನಿರ್ದಿಷ್ಟ ಉದಾಹರಣೆ ನೀಡುವುದಾದರೆ, ನಮ್ಮ ಕಾಲೇಜಿನ ಅಟೆಂಡರ್ ಕೆಂಪಮ್ಮ ಅತ್ಯಂತ ಚುರುಕಾದ ಹೆಣ್ಣು ಮಗಳು. ಪುರುಷ ಸಹಾಯಕರಿದ್ದರೂ ಅವರೆಲ್ಲ ಆಫೀಸ್ ಕೆಲಸಗಳನ್ನು ಮಾತ್ರ ಕೆಂಪಮ್ಮನವರಿಗೇ ವಹಿಸುತ್ತಿರುವುದರ ವಿರುದ್ಧ ನಾವೊಂದಿಷ್ಟು ಮಹಿಳಾ ಉಪನ್ಯಾಸಕರು, ಕೆಂಪಮ್ಮನ ಪರವಾಗಿ ಮಾತನಾಡಿದ್ದೆವು. ಅಂದಿನಿಂದ ಆ ಪುರುಷ ಸಹಾಯಕರ ಗುಂಪಿಗೆ ಕೆಂಪಮ್ಮನ ಮೇಲೆ ಕಣ್ಣು. ಅವರ ಹಿಂದೆ ಮುಂದೆ ಆಡಿಕೊಳ್ಳುವುದು, ರೇಗಿಸುವುದು, ನಾವು ಕೆಂಪಮ್ಮನನ್ನು ಸಮಾಧಾನಪಡಿಸುವುದು ನಡೆದೇ ಇತ್ತು.

ಕಳೆದ ತಿಂಗಳು ಕ್ರೀಡಾ ದಿನಾಚರಣೆಯಂದು ವಿದ್ಯಾರ್ಥಿಗಳೊಂದಿಗೆ ಬೋಧಕ ಮತ್ತು ಬೋಧಕೇತರ ವರ್ಗಕ್ಕೂ ಕೆಲವು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅಂದಿನ ಓಟದ ಸ್ಪರ್ಧೆಯಲ್ಲಿ ಕೆಂಪಮ್ಮ ಮೊದಲ ಬಹುಮಾನ ಪಡೆದಿದ್ದರು. ಅದನ್ನು ಕಾಲೇಜಿನ ವಾರ್ಷಿಕೋತ್ಸವದಂದು ಪ್ರದಾನ ಮಾಡುವುದಿತ್ತು. ಆದರೆ ಅಂದು ಕೆಂಪಮ್ಮನ ಹೆಸರು ಕೂಗಿದಾಗ ಅವರು ಬರಲೇ ಇಲ್ಲ, ಅಲ್ಲೆಲ್ಲೂ ಆ ಕ್ಷಣಕ್ಕೆ ಕಾಣಿಸಲೂ ಇಲ್ಲ. ಸಮಾರಂಭವೆಲ್ಲ ಮುಗಿದ ನಂತರ ಕಂಡಾಗ ಕರೆದು ಕೇಳಿದೆ, ಕೆಂಪಮ್ಮ ವೇದಿಕೆ ಏರುವುದು, ಮುಖ್ಯ ಅತಿಥಿಗಳಿಂದ ಬಹುಮಾನ ಪಡೆಯುವುದು, ಸಂಸ್ಥೆಯ ಅಧ್ಯಕ್ಷರೊಂದಿಗೆ ಫೋಟೋ ತೆಗೆಸಿಕೊಳ್ಳುವುದು ಆಕೆಗೆ ಸಂಭ್ರಮ ಸಡಗರದ ವಿಚಾರವಾಗಿರಲಿಲ್ಲ, ಬದಲಿಗೆ ತನ್ನ ಪುರುಷ ಸಹೋದ್ಯೋಗಿಗಳ ಹೀಗಳಿಕೆಗೆ, ಕುಹಕಗಳಿಗೆ ಅವಕಾಶ ದೊರಕಿಸಿಕೊಡುವ ಮತ್ತೊಂದು ಕಾರಣವಾಗಿ ಕಂಡಿತಷ್ಟೇ!

ಇದು ಕೇವಲ ಒಂದು ಘಟನೆಯಲ್ಲ, ಪದೇ ಪದೇ ಎದುರಾಗಿರುವ ಸನ್ನಿವೇಶ. ಹೆಣ್ಣಾಗಿರುವ ಕಾರಣದಿಂದಲೇ ಖುಷಿ ಹೆಮ್ಮೆ ಪಡಬೇಕಾದ ಸಂದರ್ಭಗಳಲ್ಲೆಲ್ಲಾ ಹೀಗಳಿಕೆಯನ್ನು, ಅರಿವಿಲ್ಲದೇ ತಪ್ಪಿತಸ್ಥ ಭಾವನೆಯನ್ನೂ ನಾನೂ ಕೂಡ ಅನುಭವಿಸಿದ್ದೇನೆ. ಅದು "ಕಡುಪಾತಕಂಗೈದು ಪೆಣ್ಣಾಗಿ ಜನಿಸಿ ತನ್ನೊಡಲ ಪೊರೆವುದು ಎನ್ನೊಳು ಅಪರಾಧಮುಂಟು" ಎಂಬಂತಹುದೇ ಆಗಿದೆ.



ಮತ್ತೆ ಮತ್ತೆ ನನ್ನನ್ನೇ ಕೇಳಿಕೊಳ್ಳುತ್ತಿದ್ದೇನೆ! ಹೆಣ್ಣಾದ ಕಾರಣದಿಂದಲೇ ಸಿಗುವ ಅನನ್ಯ ಮತ್ತು ವಿಶಿಷ್ಟ ಖುಷಿ-ಸಂತೋಷ-ಸಮಾಧಾನಗಳು ಎಂದರೆ ಯಾವುದು?

-ಡಾ. ಕಾವ್ಯಶ್ರೀ ಎಚ್. ಕವಯತ್ರಿ, ಉಪನ್ಯಾಸಕರು, ಬೆಂಗಳೂರು

ವೇದವೆಂಬುದು ಓದಿನ ಮಾತು
ಪುರಾಣವೆಂಬುದು ಪುಂಡರ ಗೋಷ್ಠಿ
ಶಾಸ್ತ್ರವೆಂಬುದು ಸತೆಯ ಸುದ್ದಿ
ತರ್ಕವೆಂಬುದು ತಗರ ಹೋರಟೆ
ಗುಹೇಶ್ವರನೆಂಬುದು ಮೀರಿದ ಘನವು

–ಅಲ್ಲಮ ಪ್ರಭು



ನಿನಗೆ ಬೇರೆ ಹೆಸರು ಬೇಕೆ? ಸ್ತ್ರೀ ಅಂದರೆ ಅಷ್ಟೇ ಸಾಕೆ?

ಹೆಣ್ತನ ಎಂದರೆ ನಿಜವಾಗಿ ಏನು? ಗಂಡು ಅವಳನ್ನು ತಾಯಿಯಾಗಿ, ಅಜ್ಜಿಯಾಗಿ, ಸೋದರಿಯಾಗಿ, ಹೆಂಡತಿಯಾಗಿ, ಪ್ರೇಯಸಿಯಾಗಿ, ಕೊನೆಗೆ ತನ್ನ ಕನಸಿನ ರಾಣಿಯಾಗಿ ಕಂಡ ಸಂದರ್ಭಗಳಲ್ಲಿ ಅವನು ಅವಳಲ್ಲಿ ಕಂಡದ್ದನೆಲ್ಲ ಹೆಣ್ತನ ಅನ್ನಬಹುದೆ/ ಪ್ರೀತಿ, ಮಾರ್ದವತೆ, ಪೊರೆಯುವ ಗುಣ, ಬದುಕುವ ಮತ್ತು ಬದುಕಿಸುವ ಆಂತರಿಕ ಶಕ್ತಿ-ಛಲ, ಬಾಳ ಸಂಗಾತಿಯಾಗಿ ತನ್ನ ಶೃಂಗಾರ-ಪ್ರಣಯೋಲ್ಲಾಸಗಳ ಮೂಲಕ ಹೆಚ್ಚಿಸುವ ಬದುಕಿನ ಚೆಲುವು ಇವೆಲ್ಲ ಸೇರಿ ಹೆಣ್ತನವಾಗಿ ಅವನಿಗೆ ಕಾಣುವುದೆ? ಈ ಹಿನ್ನೆಲೆಯಲ್ಲಿ ಪತ್ರಿಕೆ ತಮ್ಮ ಬದುಕಿನಲ್ಲಿ ಹೆಣ್ತನದ ಅತ್ಯುನ್ನತ ಪ್ರತೀಕವೆಂದು ತಾವು ಗುರುತಿಸುವ ವ್ಯಕ್ತಿತ್ವವೊಂದರ ಬಗ್ಗೆ ಬರೆಯಲು ಕೆಲವರನ್ನು ಕೇಳಿಕೊಂಡಿತು. ಅವನ್ನು ಇಲ್ಲಿ ನೀಡುತ್ತಿದ್ದೇವೆ-ಸಂ.

ವೆಂಕಟೇಶರಿಗೆ ಸರಿ ಜೋಡಿಯಾದ ನನ್ನಮ್ಮ ಪದ್ಮಾವತಿ



ಹೆಣ್ತನದ ಪ್ರತೀಕವಾಗಿ ನನ್ನ ಬದುಕಿನಲ್ಲಿ ಮೊದಲು ನೆನಪಿಗೆ ಬರುವುದು ನನ್ನ ತಾಯಿ ಫಲ್ಗು. ತಂದೆಗೆ ಆರ್ಥಿಕ ಕಷ್ಟಗಳಿದ್ದರೂ ದೈನಂದಿನ ಗೃಹ ಜೀವನದಲ್ಲಿ ಯಾವುದೇ ಪ್ರಕಾರದ ಅಡ್ಡ ಪರಿಣಾಮಗಳು ಉಂಟಾಗದಂತೆ ಏಕರೂಪವಾಗಿ ನನ್ನನ್ನು ದೊಡ್ಡವನನ್ನಾಗಿ ಮಾಡಿದ್ದು ಈ ನನ್ನ ತಾಯಿ. ದೊಡ್ಡವನಾಗಿ ಬಿಹಾರ್ ರಾಜ್ಯಕ್ಕೆ ಹೋದಾಗ ಮೃತರಿಗೆ ತರ್ಪಣ ಬಿಡುವ ಸ್ಥಳ ಪವಿತ್ರ ನದಿಯೇ ಈ ಫಲ್ಗು ಎಂದು ಗೊತ್ತಾದಾಗ ನನಗೆ ಸಂತೋಷವಾಯಿತು. ಸೇತುವೆ ಮೇಲೆ ಹೋಗುವಾಗಲೆಲ್ಲಾ ಫಲ್ಗು ನದಿಗೆ ನಮಸ್ಕರಿಸುತ್ತಿದ್ದೆ. ಮದುವೆಯಾದ ಮೇಲೆ ಅತ್ತೆಯ ಮನೆಯವರು ತಾಯಿಯ ಹೆಸರನ್ನು ವೆಂಕಟೇಶ ಎಂಬ ನನ್ನ ತಂದೆಯ ಹೆಸರಿಗೆ ಸರಿ ಜೋಡಿಯಾಗಿ ಪದ್ಮಾವತಿ ಎಂದು ಬದಲಾಯಿಸಿದರು. ಹೀಗೆ ವೆಂಕಟೇಶ್‌ಗೆ ಸರಿ ಜೊತೆಯಾಗಿ ಗೃಹಜೀವನದ ಹೊಣೆಗಾರಿಕೆಯನ್ನು ಅವರು ನಿರ್ವಹಿಸಿದ್ದರಿಂದಲೇ ಇವತ್ತು ನಾನೊಬ್ಬ ವ್ಯಕ್ತಿಯಾಗಿರುವುದು.

ನನ್ನ ತಾಯಿ ಆದರ್ಶ ಹೆಣ್ಣೆಂದು ಭಾವಿಸುವುದಕ್ಕೆ ಮತ್ತೊಂದು ಕಾರಣ. ವರ್ತಮಾನದ ಜೊತೆಗೆ ಹೊಂದಿಕೊಳ್ಳುತ್ತಿದ್ದ ಅವರ ಸ್ವಭಾವ. ನಲವತ್ತರ ದಶಕಗಳಲ್ಲಿ ಆಧುನಿಕ ದ್ವಿಚಕ್ರಗಳು ಇಲ್ಲದೇ ಇದ್ದ ಕಾಲದಲ್ಲಿ ಸೈಕಲ್ಲೇ ಆಧುನಿಕ ವಾಹನವಾಗಿತ್ತು. ಅದನ್ನು ನನ್ನ ತಾಯಿ ನಡೆಸುವುದನ್ನು ಕಲಿತರು ಮತ್ತು ಅದನ್ನು ಸಂದರ್ಭಾನುಸಾರ ಉಪಯೋಗಿಸುತ್ತಿದ್ದರು. ಬ್ಯಾಡ್‌ಮಿನ್‌ಟನ್ ಆಡುವುದನ್ನು ಕಲಿತು ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ನನ್ನ ತಂದೆಯೊಡನೆ ಬೆಳಿಗ್ಗೆ ಮತ್ತು ಸಂಜೆ ವಾಯುವಿಹಾರಕ್ಕೂ ಹೋಗುತ್ತಿದ್ದರು.

ಅದು ಗಾಂಧೀಜಿಯವರ ಕಾಲವೂ ಆಗಿತ್ತು. ಹಾಗಾಗಿ ಅವರ ಪ್ರಭಾವಕ್ಕೆ ಒಳಗಾದ ನನ್ನ ತಾಯಿ ಚರಕದ ಮೇಲೆ ನೂಲು ತೆಗೆಯುವುದನ್ನು ಕಲಿತರು. ನೂಲು ತೆಗೆದಾದ ಮೇಲೆ ಅದನ್ನು ಲಡಿ ರೂಪದಲ್ಲಿ ಕಟ್ಟಿ ಸ್ಥಳೀಯ ಖಾದಿ ಭಂಡಾರದವರಿಗೆ ಮಾರಿ ಸ್ವಲ್ಪ ಕಾಸನ್ನು ಸಂಪಾದಿಸುತ್ತಿದ್ದರು. ಪೌರಾಣಿಕ ಸಾಹಿತ್ಯ ಓದುತ್ತಿದ್ದರು. ಎಲ್ಲ ಪ್ರಮುಖ ಹಬ್ಬಗಳನ್ನು ತಪ್ಪದೇ ಆಚರಿಸುತ್ತಿದ್ದರು. ಅದರಿಂದಾಗಿ ಮನೆಯಲ್ಲಿ ಒಳ್ಳೆಯ ವಾತಾವರಣ ಮೂಡುತ್ತಿತ್ತು. ಆದರೆ ನಾನು ಅಂತರ್-ಸಂಪ್ರದಾಯ ಹುಡುಗಿಯನ್ನು ಮದುವೆಯಾದಾಗ ಧರ್ಮ ನಿಷ್ಠಾವಂತ ತಾಯಿ ವಿರೋಧಿಸಲಿಲ್ಲವಾದರೂ ಸಹಬಾಳ್ವೆಯಿಂದ ದೂರ ಉಳಿದುದು ಮಾತ್ರ ನನಗೆ ತುಂಬ ನೋವಿನ ಸಂಗತಿಯಾಗಿತ್ತು. ತಂದೆ ಮೊದಲೆ ತೀರಿಕೊಂಡರು. ತಾಯಿಯನ್ನು ಹತ್ತಿರದಲ್ಲಿಟ್ಟುಕೊಂಡು ಅವರು ಸಮಾಧಾನವಾಗಿ ಜೀವನ ನಡೆಸುವಂತೆ ಆಗಲಿಲ್ಲವೆಂಬ ಕೊರಗಿದೆ. ಅವರು ನನಗೊಂದು ಪತ್ರ ಬರೆದಿದ್ದರು. ಅದನ್ನು ಜೋಪಾನವಾಗಿಟ್ಟುಕೊಳ್ಳಲಿಲ್ಲವಲ್ಲ ಎಂಬ ವ್ಯಥೆ ಇದೆ. ಸೊಟ್ಟ ಸೊಟ್ಟಾಗಿ ತಾಯಿ ಗೀಚಿದ್ದ ಸಾಲು ಭಾವನಾ ಭರಿತ, ಪವಿತ್ರ ಅಮೂಲ್ಯ. ಅದರ ಬೆಲೆ ಉಳಿದ ಕಾಗದಕ್ಕೆ ಬಂದೀತೆ?



-**ಸುರೇಂದ್ರ ಕೌಲಗಿ**, ಸರ್ವೋದಯ ಮುಖಂಡರು, ಮೇಲುಕೋಟೆ


ಮಂತ್ರ ಕಣಾ, ಶಕ್ತಿ ಕಣಾ, ದೇವಿ ಕಣಾ!



ನಾನು ಗಂಡು ಎಂಬ ಲಿಂಗಾಧಾರಿತ ಜೀವ ತಾಳಿದ್ದರೂ ಹೆಣ್ಣು ಧರಿಸಿದ್ದ ಗರ್ಭದಲ್ಲಿ ವಿಕಾಸ ಹೊಂದಿದವನೆಂಬ ಕೃತಜ್ಞತೆ ನನ್ನೊಳಗೆ ಮೂಡಿ ಗಂಡು ಹೆಣ್ಣಿನ ಸಂಯೋಗದ ಬೆರಗು ನನ್ನನ್ನು ವಿಸ್ಮಯಕ್ಕೀಡು ಮಾಡಿದೆ. ಬಾಲ್ಯದಲ್ಲಿ ತಾಯಿ, ಅಜ್ಜಿಯಂದಿರನ್ನು ಗೋಳು ಹೊಯ್ದುಕೊಂಡು ಬೆಳೆದು ಯೌವನದ ದಿನಗಳಲ್ಲಿ ಹೆಣ್ಣಿನ ಅನಂತ ಮುಖಗಳನ್ನು ಕುತೂಹಲದಿಂದ ಗಮನಿಸುತ್ತಾ ಬಂದ ನನಗೆ ವಿವಾಹ ಬಂಧನದೊಂದಿಗೆ ಹೆಣ್ಣಿನ ಕುರಿತ ನಿಲುವುಗಳು ಬದಲಾಗುತ್ತಾ ಹೋದದ್ದು ಅತ್ಯದ್ಭುತವಾಗಿ ನೆನಪಾಗುತ್ತಿದೆ.

ನನಗೆ ಹೆಣ್ಣು ಮಗಳಿಲ್ಲದ ಕಾರಣ ಮಗಳ ಪ್ರೀತಿಯ ಸ್ಪರ್ಶ ನನಗೆ ದಕ್ಕಿಲ್ಲ. ಆದರೆ ನನಗೆ ಹೆಂಡತಿ ರೇಣುಕ, ಪ್ರೀತಿಸಿ ಮದುವೆಯಾದ ಅವಳ ಮೂಲಕ, ನನ್ನ ಮಕ್ಕಳನ್ನು ಸಾಕಿದ ಪರಿ, ನನ್ನನ್ನು ತಿದ್ದಿ ತೀಡಿ, ಹೆಣ್ತನದ ನೈಜ ದರ್ಶನ ಮೂಡಿಸಿದೆ. ಬೇಕು ಬೇಡಗಳ ಆಯ್ಕೆಯಲ್ಲಿ ಭಿನ್ನ ನಿಲುವುಗಳಿದ್ದಾಗ್ಯೂ ನಾಲ್ಕು ದಶಕಗಳ ಕಾಲದ ಒಟ್ಟು ಬದುಕಿನ ಮೆಲುಕು ಆಪ್ತವಾದ ಸಹನೀಯ ಸ್ಮೃತಿಗಳಾಗಿವೆ. ನನ್ನ ಆದರ್ಶಗಳೊಂದಿಗೆ ಈಗಲೂ ಸಂಘರ್ಷವನ್ನು ಹೆಂಡತಿಯೊಂದಿಗೆ ಉಳಿಸಿಕೊಳ್ಳಬೇಕಾಗಿದೆ. ಕೆಲಬಾರಿ ಹತ್ತಿದ್ದು ಹರಿಯುವುದಿಲ್ಲ ಎನ್ನುವಷ್ಟರ ಮಟ್ಟಿಗೆ ವಾಗ್ಯುದ್ಧ ತಾರಕಕ್ಕೂ ಹೋಗುತ್ತದೆ. ಆದಾಗ್ಯೂ ನಾವು ಹರಿದ ಭಾಗಗಳಿಗೆ ರಾಜಿ ತೇಪೆಯೊಂದಿಗೆ ಬಾಳುತ್ತೇವೆ. ಆವಾಗಲೇ ಆಕೆಯಲ್ಲಿರುವ ಹೆಣ್ತನದ ದಟ್ಟ ಪರಿಮಳ ಅರಿವಾಗುತ್ತದೆ. ನನ್ನನ್ನು ಹದ್ದು ಬಸ್ತಿನಲ್ಲಿಡುತ್ತಿರುವಾಗ ಕಿರಿ ಕಿರಿ ಎನಿಸಿದರೂ ಅದಿಲ್ಲದಿದ್ದರೆ ನಾನು ಅಂಕುಶ ಮೀರಬಹುದಲ್ಲವೇ? ಎಂದೂ ನೆನಪಾಗುತ್ತದೆ. ಮಕ್ಕಳನ್ನು ಪೊರೆದು ಹಾಲು ನೀರು ಉಣಿಸಿ ಬೆಳೆಸಿ ಬಾಳೆ ಬೆಳೆಯಂತೆ ಮಕ್ಕಳು ಬೆಳೆದಾಗ ಅವರು 'ಅಮ್ಮಾ' ಎಂದಾಗ : ನನ್ನವ್ವ ನನಗೆ ಓಕುಳಿ, ನಿವಾಳಿ ದೃಷ್ಟಿ ತೆಗೆದದ್ದು, ಬಾಲ್ಯದಲ್ಲಿ ಟೈಫಾಯ್ಡ್ ಆಗಿ ಮಲಗಿದ್ದಾಗ ಆಕೆ ಕಣ್ಣು ಮುಚ್ಚದೆ ಮಗ್ಗುಲಲ್ಲಿ ರಾತ್ರಿಗಳನ್ನು ಎಚ್ಚರವಾಗಿ ಕಳೆದದ್ದು ನೆನಪಾಗಿ ಅವ್ವ-ಹೆಂಡತಿಯರಲ್ಲಿ ಯಾರೊಳಗೆ ಯಾರು ಹುದುಗಿ ಹೆಣ್ತನದ ಬೆಳಕಿನಂತೆ ಜ್ವಲಿಸುತ್ತಿದ್ದಾರೆಂದು ಈಗಲೂ ಆಶ್ಚರ್ಯವಾಗುತ್ತದೆ.

ನಮ್ಮಿಬ್ಬರ ನಡುವೆ ಹೆಣ್ತನ ಮತ್ತು ಪುರುಷ ಅಹಂಕಾರಗಳು ಪರಸ್ಪರ ಡಿಕ್ಕಿ ಹೊಡೆದ ಬಹಳಷ್ಟು ಸಂದರ್ಭಗಳಲ್ಲಿ ಒಮ್ಮೆ ಅದು ಮುಗ್ಗುದೊಮ್ಮೆ ಇದು ಒಂದು ಕ್ಷಣದಲ್ಲಿ ಗೆದ್ದಿರಬಹುದು. ಆದರೆ ಪೊರೆಯುವ ಮನ, ತೂಗುವ ಕೈ, ಮೋಹ ಉಕ್ಕಿಸುವ ಆ ರೂಪ ಅಚ್ಚರಿ ಮೂಡಿಸುತ್ತದೆ. ನಾನು ವೃತ್ತಿಯಿಂದ ಶಿಕ್ಷಕನಷ್ಟೆ. ಆದರೆ ನನ್ನ ರೇಣುಕ ನನಗೆ ಜೀವನದ ಶಿಕ್ಷಕಿ. ನನಗೆ ಹೆಣ್ಣು ಮಾಯೆಯಲ್ಲ- ಮಂತ್ರ ಕಣಾ, ಶಕ್ತಿ ಕಣಾ, ದೇವಿ ಕಣಾ ಎಂಬುದನ್ನು ಸಾಕ್ಷಾತ್ಕರಿಸಿದವಳು ಅವಳು.



-**ಪ್ರೊ. ಎಂ.ಚಂದ್ರಶೇಖರಯ್ಯ**, ನಿವೃತ್ತ ಕನ್ನಡ ಅಧ್ಯಾಪಕರು ಮತ್ತು ಲೇಖಕರು, ಭದ್ರಾವತಿ

ಬದುಕಿನ ಪಾಠಗಳನ್ನು ಕಲಿಸಿದ ನನ್ನಮ್ಮ



ಪ್ರತಿಯೊಬ್ಬ ಪುರುಷನ ಬದುಕಿನಲ್ಲಿಯೂ ಹಲವು ರೂಪದಲ್ಲಿ ಹೆಣ್ಣು ತನ್ನದೇ ಪ್ರಭಾವ ಬೀರಿರುತ್ತಾಳೆ. ಅವರಲ್ಲಿ ಯಾರು ಆದರ್ಶವೆಂದು ಹೇಳುವುದು ಕ್ಲಿಷ್ಟ ಮಾತ್ರವಲ್ಲ ಸಂದಿಗ್ಧ ಕೂಡ.

ವ್ಯಕ್ತಿಯೊಬ್ಬ ಅತಿ ದೀರ್ಘಕಾಲ ಒಡನಾಟದಲ್ಲಿ ಇರುವುದು ಹೆತ್ತವಳೊಂದಿಗೆ. ಆದ್ದರಿಂದ ಆದರ್ಶ ಹೆಣ್ಣಾಗಿ ತಾಯಿ ತೀರ ಸಹಜ ಆಯ್ಕೆ ಎನ್ನಿಸಬಹುದು.

ನನ್ನ ವ್ಯಕ್ತಿತ್ವದ ರೀತಿ ನೀತಿ, ಗ್ರಹಿಕೆ, ಗುಣ, ಹವ್ಯಾಸಗಳ ಮೇಲೆ ಅವ್ವನ ವ್ಯಕ್ತಿತ್ವದ ಢಾಳಾದ ಪ್ರಭಾವ ಇದೆ.


ನಾನು ಐದನೇ ತರಗತಿ ಓದುತ್ತಿದ್ದೆ. ಇಂಗ್ಲಿಷ್ ಕಲಿಕೆ ಆರಂಭವಾಗಿತ್ತು. ಅಪ್ಪ ಮೇಷ್ಟ್ರಾಗಿದ್ದರಿಂದ ಆ ಮೊದಲೇ ಇಂಗ್ಲಿಷ್ ಅಕ್ಷರ ಮತ್ತು ಕೆಲವು ಪದಗಳನ್ನೂ ಕಲಿಸಿದ್ದರು. ಪಕ್ಕದೂರಿನ ಸ್ಕೂಲಿಗೆ ಹೋಗಲಾರಂಭಿಸಿದ ನಾಲ್ಕಾರು ದಿನಗಳಲ್ಲಿಯೇ ಮೇಷ್ಟ್ರು ಎಷಕಂಠೇಗೌಡ್ರು ಸೀಮೆಸುಣ್ಣ ತೋರಿಸಿ ಇದಕ್ಕೆ ಇಂಗ್ಲೀಷಲ್ಲಿ ಏನಂತಾರೆ ಎಂದು ಕೇಳಿದರು. ನಾನು ಚಾಕ್ಪೀಸ್ ಎಂದೆ. ತಪ್ಪು ಎಂದು; ಅದೇ ಪ್ರಶ್ನೆಯನ್ನು ಇತರರಿಗೂ ಕೇಳಿ ಯಾರೂ ಉತ್ತರಿಸದಿದ್ದಾಗ ತಾವೇ ಅದಕ್ಕೆ ಉತ್ತರ ಪೀಸ್ ಆಫ್ ಚಾಕ್ ಎಂದು ಹೇಳಿ ಎಲ್ಲರಿಗೂ ಕೊಟ್ಟಂತೆ ನಂಗೂ ಒಂದು ಗೂಸಾ ಕೊಟ್ಟರು. ಮನೆಗೆ ಬಂದು ಅಪ್ಪನಿಗೆ ಹೇಳಿದೆ. ಅವರು ಎರಡೂ ಸರಿ ಎಂದರು. ನಾನೇನೂ ಮತ್ತೆ ಅದನ್ನು ಪ್ರಶ್ನಿಸಲು ಹೋಗಲಿಲ್ಲ; ಆದರೆ ನನಗಿಂತ ಎರಡು ವರ್ಷಕ್ಕೆ ಹಿರಿಯಳಾದ ನಮ್ಮಕ್ಕ ಹೋರಾಟ ಮುಂದುವರೆಸಿದಳು! ಮೃದು ಹೃದಯಿ ಹೆಡ್ ಮಾಸ್ಟರ್ ಬೋರೇಗೌಡ್ರಿಗೆ ಹಿಂಗಿಂಗೆ ಎಂದು ವಿಚಾರ ಮುಟ್ಟಿಸಿ ಮುಗ್ಧವಾಗಿ ಎಲ್ಲ ಮರೆತು ಆಟಾಡಿಕೊಂಡಿದ್ದ ನನ್ನನ್ನೂ ಅವರ ಮುಂದೆ ಪ್ರದರ್ಶಿಸಿ, ಅವರು 'ಅಯ್ಯೋ ಪಾಪ' ಎನ್ನುವಂತೆ ಮಾಡಿದಳು. ಇದರಿಂದ ಚಿಕ್ಕವರಾಗಿದ್ದ ನಮ್ಮ ಮನೋಲೋಕದಲ್ಲಿ ಆ ಮೇಷ್ಟ್ರ ಬಗ್ಗೆ ಒಂದು ಹಗುರ ಭಾವನೆ ಬೆಳೆಯುತ್ತಿತ್ತು. ಅದನ್ನು ಗಮನಿಸಿದ ಅವ್ವ ಒಂದು ಮಾತು ಹೇಳಿದಳು. "ಒಂದೇ ಅಕ್ಷರ ಕಲಿಸಿದರೂ ಅವನು ಗುರುವೆ. ಅವನಿಗೆ ಸಲ್ಲಬೇಕಾದ ಗೌರವ ಸಲ್ಲಲೇಬೇಕು".

ನನ್ನ ಬಾಲ್ಯದ ಹೊತ್ತಿಗೆ ಇನ್ನೂ ನಮ್ಮೂರಲ್ಲಿ ನಜೀರ್ ಸಾಬರ ಬೋರ್ವೆಲ್ ಬಾವಿಗಳು ಬಂದಿರಲಿಲ್ಲ. ಸೇದೋ ಬಾವೀಲಿ ನೀರು ತರೋರು. ಹೊಲೆಯರಿಗೆ ಬಾವಿ ಮುಟ್ಟೋಕೆ ಕೊಡುತ್ತಿರಲಿಲ್ಲ. ಗೌಡಗೋಳ ಮನೆಯವರ್ಯಾರಾದರೂ ನೀರು ಸೇದಿ ಕೊಟ್ಟರೆ ಬಾಳಾಟ. ನಮ್ಮ ಮನೆ ಜಮೀನು ಕೆಲಸಕ್ಕೆ ಯಾವಾಗಲೂ ಬರ್ತಿದ್ದು ಹೊಲೇರ ಸೂರಯ್ಯ, ಚೌಡಮ್ಮರ ಕುಟುಂಬ. ವಾರದಲ್ಲಿ ಮೂರು ದಿನಗಳಾದರೂ ರಾತ್ರಿ ನಾನು ಮತ್ತು ಅಕ್ಕ ಅವರ ಕೇರಿಗೆ ಆಳು ಕರಿಯಕ್ಕೆ ಹೋಗಬೇಕಿತ್ತು. ಚೌಡಮ್ಮ ಯಾರಾದರೂ ನೋಡಿಯಾರೆಂದು ನಮಗೆ ತಿನ್ನಲು ಏನೂ ಕೊಡುತ್ತಿರಲಿಲ್ಲ. ಒಮ್ಮೆ ಉಪಾಸದ ಹಬ್ಬವೆಂದು ಕಾಣ್ತದೆ. ಚಕ್ಕುಲಿ ಕೊಟ್ಟಳು. ನಮಗೆ ತಿನ್ನಬೇಕೊ ಬೇಡವೊ ಗೊಂದಲ. ಬೇಡವೆಂದು ನಿರಾಕರಿಸಿ ಬಂದು ಅವ್ವಂಗೆ ವರದಿ ಒಪ್ಪಿಸಿದೆವು. ಅಡ್ಡ ಮಾತು ಆಡದೆ ನಮ್ಮವ್ವ ತಿನ್ನಬೇಕಾಗಿತ್ತು, ಬ್ಯಾಡ ಅಂತ್ಯಾಕಂದ್ರಿ ಅಂತು. ಆವತ್ತಿನಿಂದ ಚೌಡಮ್ಮನ ಆಫರ್ ಮಿಸ್ ಮಾಡ್ಕೊಂಡವರೇ ಅಲ್ಲ ನಾವು! ಮುಂದೆ ಜಾತಿ ಪಾತಿ ಎಷ್ಟು ಪೊಳ್ಳು ಎನ್ನುವುದು ನನಗರ್ಥವಾಗಲು ಅವ್ವನ ಈ ಪ್ರಾಂಜಲ ಮನದ ಮಾತುಗಳು ಕಾರಣ ಎನಿಸುತ್ತದೆ.

ನನ್ನವ್ವನಿಗೆ ಅವರತ್ತೆ ಮತ್ತು ನಮ್ಮ ಸೋದರತ್ತೆಯ ಕಿರಿಕಿರಿ ಇದ್ದೇ ಇತ್ತು. ವರ್ಷಕ್ಕೊಂದು ಮಕ್ಕಳನ್ನು ಹೆತ್ತ ಅವ್ವನ ಬಗ್ಗೆ "ನಮ್ಮನೆ ನಾಯಿ ಮರಿ ಈದದೆ" ಅಂತ ಸಿಡಿಮಿಡಿ ಮಾಡಿಕೊಂಡು ಅವರಿವರ ಬಳಿ ಮಾತನಾಡಿದ್ದನ್ನು ಅವ್ವನೇ ಹೇಳಿ ನಮಗೆ ಗೊತ್ತು. ಇನ್ನು ಅಜ್ಜಿ ದೈಹಿಕ ಹಿಂಸೆ ಕೊಡದಿದ್ದರೂ; ಆಕೆಯನ್ನು ಜೋಪಾನ ಮಾಡುತ್ತಿದ್ದ ಅವ್ವನ ಮುಂದೆ ಅವಳ ಹಿರಿ ಸೊಸೆಯನ್ನು ಬಾಯ್ತುಂಬ ಹೊಗಳುತ್ತಿದ್ದಳು. ಇವೆಲ್ಲವುಗಳ ನಡುವೆ ನನ್ನವ್ವ ಎಂದೂ ನಮಗಾರಿಗೂ ಅವರಿಬ್ಬರ ಬಗ್ಗೆ ಕಹಿ ಭಾವನೆ ಬೆಳೆಯದಂತೆ ನೋಡಿಕೊಂಡಳು. ಅವರಿಬ್ಬರೂ ಈಗ ಬದುಕು ಮುಗಿಸಿ ಎರಡೆರಡು ದಶಕ ಸಂದಿವೆ. ಈಗಲೂ ಎಲ್ಲವನ್ನೂ ಹೇಳಿ ಕಡೆಗೊಂದು ಮಾತು ಸೇರಿಸುತ್ತಾಳೆ "ಅಮ್ಮ, ಲಕ್ಷ್ಮಕ್ಕರಿಲ್ದೇ ಇದ್ರೆ ನಾನೊಬ್ಬೇ ನಿಮ್ನೆಲ್ಲ ಸಾಕಕಾಯ್ತಿತ್ತ" ಅಂತ.

ನಮ್ಮ ಮನೇಲಿ ಮುರುಗನೆಂಬ ಹುಡುಗ ಕೆಲಸಕ್ಕಿದ್ದ. ಆ ಹೊತ್ತಿಗೆ ನಾನು, ನನ್ನ ಅಕ್ಕ, ತಮ್ಮ ಎಲ್ಲರೂ ಬೇರೆ ಬೇರೆ ನೆಂಟರ ಮನೇಲಿ ಓದುತ್ತಿದ್ದೆವು. ರಜೆಗೆ ಹೋದಾಗ ನಮಗೆ ರಾತ್ರಿ ಮಲಗುವ ಮುಂಚೆ ಒಂದು ಲೋಟ ಬಿಸಿ ಹಾಲು ಕೊಡುವಾಗ ಮುರುಗನಿಗೂ ಅಂಥದೇ ಲೋಟದಲ್ಲಿ ಹಾಲು ಕೊಟ್ಟಳು. ಆವತ್ತು ಏನೆನಿಸಿತ್ತೊ ಮರವೆಯಾಗಿದೆ. ಈಗನಿಸುತ್ತಿದೆ ನಮ್ಮಮ್ಮವ್ವನ ಅಂತರಂಗದಲೊಂದು ಸಮಾಜವಾದಿ ಮನಸಿತ್ತೆಂದು.

ಎಪ್ಪತ್ತರ ಇಳಿ ವಯಸ್ಸಲ್ಲೂ ಮಕ್ಕಳಿಗೇನಾದರೂ ಸಣ್ಣ ಸಮಸ್ಯೆ ಎಂದರೆ ಓಡಿಬರುವ, ಬದುಕಿನಲ್ಲಿ ದುಡ್ಡಿನ ಹಿಂದೆ ಓಡಬ್ಯಾಡಿ ಎಂದು ಎಚ್ಚರಿಸುವ, ಹಾಗೆ ಹೋಗದಂಥ ಬುದ್ಧಿಯನ್ನೇ ಕಲಿಸಿದ, ನಮಗೆ ಕೆಡುಕನ್ನೇ ಮಾಡಿದವರ ಕಿಂಚಿತ್ತು ಒಳ್ಳೆಯ ಗುಣವನ್ನು ಹಿಡಿದು ಅವರೆಷ್ಟು ಉದಾರಿಗಳೆಂದು ತಿಳಿಹೇಳಿ ಜಗದಲ್ಲಿಂದು ಅಲ್ಪ ಒಳಿತೂ ಎಷ್ಟು ಮಹತ್ವದ್ದೆಂದು ಕಲಿಸಿಕೊಟ್ಟ ನನ್ನವ್ವನಲ್ಲದೇ ಮತ್ತೊಂದು ಹೆಣ್ಣು ಆಕೆಗಿಂತ ದೊಡ್ಡ ಆದರ್ಶವಾಗಿ ನನಗೆ ಕಾಣುತ್ತಿಲ್ಲ.



–ರೋಹಿತ್ ಕೆ., ಕನ್ನಡ ಉಪನ್ಯಾಸಕರು, ಆಲೂರು (ಹಾಸನ)

ನನ್ನ ಮುನ್ನಡೆಯ ದಾರಿ ಬೆಳಕು ನನ್ನಮ್ಮ




ಹೆಣ್ಣು ಹೆಣ್ತನದ ವಿಸ್ತಾರಿತ ಸಾಮರ್ಥ್ಯ, ಸಹನಶೀಲತೆ ಹಾಗೂ ಜೈವಿಕ ಸಂಬಂಧಗಳ ಸಂಶಯಾತೀತ ಸ್ವರೂಪ–ತಾಯಿ. ಹೆಣ್ಣಿಗೆ, ಗಂಡುಬೀರಿ ಎಂದೆಲ್ಲ ವರ್ಣಿಸಲ್ಪಡುವ ಸ್ವಭಾವಗಳನ್ನು ಅವಹೇಳನಕಾರಿಯಾಗಿಯೇ ಬಳಸುತ್ತಿದ್ದೇವೆ. ಭಾವನಾತ್ಮಕ ನೆಲೆಗಳಲ್ಲಿ ಸಂಪೂರ್ಣ ಹೆಣ್ಣು, ಗಂಡು ಎಂಬುದಿಲ್ಲವೇನೋ.

ಎಲ್ಲ ತಾಯಂದಿರಂತೆ ನನ್ನಮ್ಮನೂ ಕೂಡ ಹೆತ್ತು ಹೊತ್ತು, ಪಾಲಿಸಿ, ಪೋಷಿಸಿದ್ದಾಕೆ. ಪರಿಪೂರ್ಣ ತಾಯಿ ಎಂಬುದನ್ನು ವಿವರಿಸಲು ಅಸಾಧ್ಯವಾದರೂ, ಉತ್ತಮ ತಾಯಿಯನ್ನು ಗುರುತಿಸುವ ಹಲವು ದಾರಿಗಳಿವೆ. ಅಮ್ಮನೊಳಗಿನ ಮಮತೆಯ ಮರ್ಮಗಳನ್ನು ಅರಿಯುವುದು ಮನಃಶಾಸ್ತ್ರದ ಒಗಟೆಂಬುದು ನಿಜ.

"ಏನೂ ಅಂತ ಹಡೆದೆನೋ ಇದನ್ನ..." ಎಂಬ ರಾಗಪೂರ್ಣ ಜಿಗುಪ್ಸೆಯ ಅವಹೇಳನಕ್ಕೆ ಆಗೊಮ್ಮೆ, ಈಗೊಮ್ಮೆ ಗುರಿಯಾದರೂ, ಜೀವನದ ಸವಾಲಿನ ಸಂದರ್ಭಗಳಲ್ಲಿ ಅವಳತ್ತ ತಿರುಗದೇ, ನನ್ನನ್ನು ನಾನೇ ಸಂತೈಸಿ, ನಿರ್ವಹಿಸುವ ಬಲ ನೀಡಿದಾಕೆ ನನ್ನಮ್ಮ. ಚಾಣಾಕ್ಷತೆ, ಓಲೈಸುವಿಕೆ, ಆಡಂಬರಗಳ ಭ್ರಮೆ ಕಳಚಿ, ಸರಳತೆ, ಧೈರ್ಯ, ನೈತಿಕಬದ್ಧತೆ, ಪರಿಶುದ್ಧತೆಯ ಬಗ್ಗೆ ತನ್ನ ದಿನನಿತ್ಯದ ನಡವಳಿಕೆಗಳಿಂದ ಬಾಳಿನುದ್ದಕ್ಕೂ ಪಾಠ ಕಲಿಸಿದಾಕೆ ಅವಳು.

"ಹೆಂಗಸು ತಿರುಗಿ ಕೆಟ್ಟಳು, ಗಂಡಸು ಕುಂತು ಕೆಟ್ಟ" ಎನ್ನುತ್ತಲೇ ನಮ್ಮನ್ನು ತಿವಿಯುತ್ತಿದ್ದಳು. ಇಂತಹ ಹಲವು ಬೈಯ್ಗುಳ ಆಕೆಯ ಕೊನೆಯ ಅಸ್ತ್ರವಾಗಿರುತ್ತಿತ್ತು.


ನಾನು ಮಹಿಳೆಯರಲ್ಲಿ ಕಾಣಬಯಸುವ ಆತ್ಮವಿಶ್ವಾಸ, ಎಲ್ಲರನ್ನೂ ಒಳಗೊಳ್ಳುವ ಮಾನವೀಯ ಗುಣ, ಕಷ್ಟಗಳನ್ನು ಎದುರಿಸುವ ಛಾತಿ ಇದೆಲ್ಲವನ್ನು ನನ್ನ ತಾಯಿಯಲ್ಲಿ ಕಂಡುಕೊಂಡಿದ್ದೇನೆ. ಆಗೊಮ್ಮೆ ಈಗೊಮ್ಮೆ ಇಣುಕುತ್ತಿದ್ದ ಮಾನವ ಸಹಜ ಸಣ್ಣತನಗಳಿಂದ ಅಮ್ಮ ಹೊರತಾಗಿರಲಿಲ್ಲವಾದರೂ ಅದೇನೋ ದಾರಿ ತಪ್ಪಿಸುವಂತಹುದಲ್ಲ.



ಅಸ್ಥಿರತೆ, ಕ್ಷಣಿಕತೆಗಳ ನಿರಂತರ ಜಾತ್ರೆ ಈ ಜೀವನ. ಬೀಸುವ ಗಾಳಿಗೆದುರಾದ ದೀಪದಂತೆ ಹೊಯ್ದಾಡಿದರೂ, ತಾಯ್ತನ ಬೆಳಗುವ ಬೆಳಕು ಸ್ತ್ರೀಲೋಕದ ಅನನ್ಯತೆ. ತಾಯಿಯ ಹಿತನುಡಿಗಳೇ ನನ್ನೆದೆಯಲ್ಲಿ ಮಾರ್ದನಿಸಿ ನನ್ನನ್ನು ಮುನ್ನಡೆಸಿದೆ.

–ದಿವಾಕರ್ ಬಿ.ಎಸ್., ಕೈಗಾರಿಕೋದ್ಯಮಿ, ಬೆಂಗಳೂರು


ಮೃದುತ್ವ, ಕೋಮಲತೆಯ ಸಾಕಾರಮೂರ್ತಿ



ಹೆಣ್ಣನ್ನು ಪ್ರತಿಯೊಬ್ಬ ಪುರುಷನು ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ತೆರನಾಗಿ ನೋಡುತ್ತಾನೆ. ತಾಯಿಯಾಗಿ, ಗೆಳತಿಯಾಗಿ, ಹೆಂಡತಿಯಾಗಿ, ಮಗಳಾಗಿ, ಸೊಸೆಯಾಗಿ ಹೀಗೆ ಹಲವಾರು ರೂಪದಲ್ಲಿ ಒದಗಿ ಬರುವ ಹೆಣ್ಣಿನ ಸಂಬಂಧಗಳನ್ನೆಲ್ಲಾ ಕ್ರೋಢೀಕರಿಸಿ, ನಾನು ಕಾಣಬಯಸುವ ಹೆಣ್ತನದ ಸ್ವರೂಪ ಹೀಗಿರಬೇಕು ಎಂದು ಹೇಳುವುದು ಕಷ್ಟ. ಆದರೂ ಒಬ್ಬಳೇ ಹೆಣ್ಣು ಈ ಎಲ್ಲಾ ಸಂದರ್ಭಗಳಲ್ಲಿ ಕಾಣಿಸಿಕೊಳ್ಳಬಲ್ಲವಳಾದ್ದರಿಂದ ಮತ್ತು ಕೆಲವು ಗುಣಗಳು ಎಲ್ಲಾ ಕಾಲಘಟ್ಟಗಳಿಗೂ ಸೈ ಎನಿಸಿಕೊಳ್ಳುವುದರಿಂದ ಅಂತಹ ಸಾರ್ವಕಾಲಿಕ, ಸರ್ವಮಾನ್ಯ ವ್ಯಕ್ತಿತ್ವವನ್ನೇ ನಾನು ಕೂಡಾ ಇಷ್ಟಪಡುವ ಹೆಣ್ತತನದ ಸ್ವರೂಪವೆಂದು ಹೇಳಬಯಸುತ್ತೇನೆ.

ನಾನು ಹುಟ್ಟಿ ಬೆಳೆದ ಹಳ್ಳಿಯಾದ ಆಲಗೂರಿನಲ್ಲಿ (ವಿಜಯಪುರ ಜಿಲ್ಲೆ) ಸುಂದರಬಾಯಿ ಎಂಬ ಮಹಿಳೆಯೊಬ್ಬರಿದ್ದರು. ಅವರ ಹೆಸರಿಗೆ ತಕ್ಕಂತೆ ಸುಂದರವಾಗಿದ್ದರು ಎಂಬುದನ್ನು ಅವರನ್ನು ಇಳಿವಯಸ್ಸಿನಲ್ಲಿ ಕಂಡ ನಾನು ಹೇಳಬಲ್ಲೆ. ಅವರ ಮನೆ ನಮ್ಮ ಮನೆಯ ಪಕ್ಕದಲ್ಲೇ ಇದ್ದುದರಿಂದ ಮತ್ತು ದೂರದಿಂದ ಸಂಬಂಧಿಕರೂ ಆಗಿದ್ದರಿಂದ ಅವರ ಮನೆಗೆ ಆಗಾಗ ಹೋಗುತ್ತಿದ್ದೆ. ಅವರಿಗೆ ಹದಿವಯಸ್ಸಿನಲ್ಲೇ ಗಂಡ ತೀರಿದ್ದರಿಂದ ವಿಧವೆಯಾಗಿದ್ದರು. ಗಂಡು ಮಕ್ಕಳಿಲ್ಲದ್ದರಿಂದ ಅಣ್ಣನ ಮಗನನ್ನು ದತ್ತು ತೆಗೆದುಕೊಂಡಿದ್ದರು. ಹೀಗಾಗಿ ಮನೆಯ ಯಜಮಾನಿಕೆ ಅಣ್ಣನೇ ನೋಡಿಕೊಳ್ಳುತ್ತಿದ್ದ. ಅಣ್ಣ ಕೂಡಾ ಪ್ರತಿಯೊಂದು ಕೆಲಸಕ್ಕೂ "ಏ ಸುಂದ್ರವ್ವ" ಎಂದು ಕರೆಯುತ್ತಾ ತಂಗಿಯ ಅಭಿಪ್ರಾಯವನ್ನು ಕೇಳಿಯೇ ಮುಂದುವರೆಯುತ್ತಿದ್ದ. ಹಾಗೆಂದು ಅಧಿಕಾರ ಚಲಾಯಿಸುವ ಧೋರಣೆಯಾಗಲೀ, ತನ್ನ ಮಾತೇ ಕೊನೆಯದೆಂಬ ಅಹಮ್ಮಿಕೆಯಾಗಲಿ (ನೂರಾರು ಎಕರೆ ಜಮೀನಿನ ಒಡತಿಯಾಗಿದ್ದರೂ) ಸುಂದರಬಾಯಿಗೆ ಎಳ್ಳಷ್ಟು ಇರಲಿಲ್ಲ. ತಮ್ಮ ಅಭಿಪ್ರಾಯವನ್ನು ಅವರು ತಪ್ಪದೇ ಹೇಳುತ್ತಿದ್ದರು. ಎಲ್ಲರೂ ಅವರ ಅಭಿಪ್ರಾಯಕ್ಕಾಗಿ ಕಾಯುತ್ತಿದ್ದರು. ಒಡತಿ ಎಂಬ ಭಯದಿಂದಲ್ಲ, ವ್ಯಕ್ತಿತ್ವಕ್ಕೆ ಸಲ್ಲುವ ಸಹಜ ಗೌರವದಿಂದ.


ಸುಂದರಬಾಯಿಯವರ ನಡೆ-ನುಡಿ ಅದೆಷ್ಟು ಮೃದು ಎಂದರೆ, ಅವರ ಸ್ವಭಾವ ಅದೆಷ್ಟು ಕೋಮಲವೆಂದರೆ ಆ ಗುಣಗಳಿಗೆ ಅವರೇ ರೂಪಕದಂತಿದ್ದರು. ಅವರೆಂದೂ ಯಾರೊಂದಿಗೂ ಜಗಳವಾಡುವುದಿರಲಿ, ಏರುಧ್ವನಿಯಲ್ಲಿ ಮಾತನಾಡಿದ್ದನ್ನೂ ಯಾರು ಕಂಡಿರಲಿಲ್ಲ. ಹಾಗೆಂದು ಅವರದು ಸಮಸ್ಯೆಗಳೇ ಇಲ್ಲದ ನಿರಮ್ಮಳ ಸಂಸಾರವೆಂದೇನೂ ಅಲ್ಲ. ಸುಂದರಬಾಯಿಗೆ ಮೂರು ಜನ ಹೆಣ್ಣುಮಕ್ಕಳು. ಅವರ ಅಣ್ಣನಿಗೆ ಒಟ್ಟು ಎಂಟು ಜನ ಮಕ್ಕಳು. ಹೀಗೆ ತುಂಬಿದ ಸಂಸಾರ ಅವರದು. ಅವರ ಮನೆಯಲ್ಲಿ ಒಬ್ಬರಲ್ಲ ಒಬ್ಬರು ಸಂಬಂಧಿಕರು ಸತತ ಇದ್ದೇ ಇರುತ್ತಿದ್ದರು. ಶತ್ರುಗಳೂ ಇದ್ದರೆನ್ನಿ. ಎಲ್ಲವನ್ನೂ ಅವರು ಸಾವಧಾನದಿಂದಲೇ ನಿಭಾಯಿಸುತ್ತಿದ್ದರು. ಅವರ ಹೊಲಗಳ ಕೆಲಸಕ್ಕೆ ಆಳುಗಳಿದ್ದರಾದರೂ ಮನೆಗೆಲಸಗಳನ್ನೆಲ್ಲಾ ಮನೆಯವರೇ ಮಾಡಿಕೊಳ್ಳುತ್ತಿದ್ದರು. ಅವರ ಮನೆಗೆ ನಾನು ಹೋದಾಗಲೊಮ್ಮೆ ಅವರು ಹಾಲು ಕರೆಯುತ್ತಲೋ, ಮಜ್ಜಿಗೆ ಕಡೆಯುತ್ತಲೋ ಅಥವಾ ಅಡುಗೆ ಮಾಡುತ್ತಲೋ ಹೀಗೆ ಯಾವುದಾದರೊಂದು ಕೆಲಸದಲ್ಲಿ ತೊಡಗಿಯೇ ಇರುತ್ತಿದ್ದರು. ಸಂಜೆಯ ವೇಳೆ ಮಾತ್ರ ಸ್ವಲ್ಪ ಹೊತ್ತು ಮನೆಯಂಗಳದ ಕಟ್ಟೆಯ ಹತ್ತಿರ ಕುಳಿತುಕೊಂಡು ದಾರಿಯಲ್ಲಿ ಹೋಗಿ ಬರುವವರನ್ನು ಮಾತನಾಡಿಸುತ್ತಿದ್ದರು. ಮಾತನಾಡಿದರೆ ವೀಣೆ ನುಡಿದಷ್ಟು ಮಧುರ ಅವರ ಧ್ವನಿ. ಅವರ ಮನೆಗೆ ಯಾರು ಯಾವ ಕೆಲಸಕ್ಕೆ ಹೋದರೂ ಅವರನ್ನು ಮಾತನಾಡಿಸದೇ ಬರುತ್ತಿರಲಿಲ್ಲ. ಅಂತಹ ಆಕರ್ಷಕ, ಪ್ರೀತಿ ತುಂಬಿದ ವ್ಯಕ್ತಿತ್ವ ಅವರದ್ದಾಗಿತ್ತು.



ಸುಂದರಬಾಯಿ (ನಮ್ಮದೇ ನುಡಿಗಟ್ಟಿನಲ್ಲಿ ಹೇಳುವುದಾದರೆ ಸುಂದ್ರವ್ವಾಯಿ) ನನ್ನ ಮಟ್ಟಿಗೆ ಹೆಣ್ತತನದ ಅತ್ಯುತ್ತಮ ಮಾದರಿ.

-ಎಸ್.ಎಂ. ಕುಲಕರ್ಣಿ, ವಸ್ತ್ರ ವಿನ್ಯಾಸಕರು, ಹಾಗೂ ಮಾರಾಟಗಾರರು, ಹೆಗ್ಗೋಡು

ಇಂಥ ಅಮ್ಮ, ಅವ್ವ ಎಲ್ಲ ಕೂಸುಗಳಿಗೂ ಸಿಗಲಿ!



ಹೆಣ್ಣು ಅಂದೊಡನೆ ನನ್ನ ನೆನಪಿಗೆ ನಿಲುಕುವ ಚಿತ್ರ ನನ್ನ ಅಮ್ಮ (ಅಜ್ಜಿ)ನದು. ಜೊತೆಗೇ ನನ್ನ ಅವ್ವನದು. ಇಬ್ಬರೂ ಬಲು ಬಾಯಿ ಜೋರಿನ ಘಾಟಿ ಹೆಂಗಸರೇ! ಹೆಣ್ಣು ಅಂದಾಗ ಯಾಕೆ ಈ ಇಬ್ಬರು 'ಗಯ್ಯಾಳಿ'ಗಳೇ ನನ್ನ ನೆನಪಿಗೆ ಬಂದರು? ನೆನಪಿನ ಬುತ್ತಿ ಬಿಚ್ಚಿದಾಗ ಈ ಇಬ್ಬರೂ ಪುಟ ತಿರುವಿದ ಹಾಳೆಗಳಂತೆ ತೆರೆಯುತ್ತಲೇ ಹೋದರು.


ಐದು ಮಕ್ಕಳ ತಂದೆಯಾಗಿದ್ದೂ ತನ್ನ ಎರಡು ಹೊಲಗಳನ್ನು ಮಾರಿ, ಬದುಕುಳಿದ ಮೂರು ಮಕ್ಕಳನ್ನು ಜೀತಕ್ಕೆ ಹಾಕಿ ಪರಲೋಕ ಸೇರಿದ ತನ್ನ ಗಂಡನಿಗೂ ತನಗೂ ಸಂಬಂಧವಿಲ್ಲೆಂದು ಹೇಳುತ್ತ ಅಮ್ಮ ದಿನ ತಪ್ಪಿದರೆ ದಿನ ಅಪ್ಪನೊಂದಿಗೊ, ಚಿಕ್ಕಪ್ಪನೊಂದಿಗೊ ಜಗಳವಾದಾಗಲೆಲ್ಲ ಊರೆ ಸೇರುವಂತೆ ಕೂಗಾಡುತ್ತಾ, ನ್ಯಾಯ ಮಾಡುತ್ತಾ ತನ್ನ ಬೇಗುದಿಗಳನ್ನೆಲ್ಲ ಹೇಳಿ ಸ್ವಾಭಿಮಾನದ ಬದುಕಿಗೆ ಹಪಹಪಿಸುತ್ತಿದ್ದ ಚಿತ್ರ ನನ್ನ ಕಣ್ಮುಂದೆ ಈಗ ಸುಳಿಯುತ್ತಿದೆ.

ನನಗಿನ್ನು ಚೆನ್ನಾಗಿ ನೆನಪಿದೆ. ನಾನಾಗ ಮೂರನೆ ಕ್ಲಾಸ್, ಅಕ್ಕ ನಾಲ್ಕು, ಅತ್ತೆಯ ಮಗ ಆರನೆ ಕ್ಲಾಸ್ (ಅಜ್ಜಿಯ ಮಗಳ ಮಗ). ಅಮ್ಮ ನಾವು ಓದುವಲ್ಲಿ ಬಂದು "ನಿಮ್ಮ ಅಪ್ಪಾರಂಗ ಮಂದಿ ಮನ್ಯಾಗ ಜೀತಕ್ಕಿರ್ತಿರೋ ಇಲ್ಲ ಚಂದಾಗಿ ಸಾಲಿ ಕಲತು ನೌಕ್ರಿ ಹತ್ತಿರೊ ನೋಡ್ರಿ" ಎನ್ನುತ್ತ ಸೊಂಟದ ಚೀಲವನ್ನೆಲ್ಲ ತಡಕಾಡಿ ಐವತ್ತು ಪೈಸೆಯ ಒಂದು ಬಿಲ್ಲೆಯನ್ನು ಮೂರು ಜನರ ನಡುವೆ ಕೊಡುತ್ತಿದ್ದಳು. ಇದು ತಿಂಗಳ ಒಪ್ಪತ್ತಿನಲ್ಲಿ ಎರಡು ಬಾರಿಯಾದರೂ ಹೀಗೆ ನಡೆಯುತ್ತಿತ್ತು. ನನಗೆ ಓದಿನಲ್ಲಿ ಅಷ್ಟೇನು ಆಸಕ್ತಿ ಇಲ್ಲದಿದ್ದರೂ ಅಮ್ಮ ಕೊಡುವ ಐವತ್ತು ಪೈಸೆಗಾಗಿ ಓದುವಂತೆ ನಟಿಸುತ್ತಿದ್ದೆ. ಓದಿದೆ ಕೂಡ.

ಇವಳ ಇನ್ನೊಂದು ನೆನಪು: ಸಣ್ಣಮ್ಮನ ಜೊತೆ ಬಾಯಿಗೆ ಬಂದದ್ದೆಲ್ಲ ಬೈದು ಜಗಳವಾಡಿದ ಎರಡೇ ದಿನಕ್ಕೆ ಸಣ್ಣಮ್ಮ ಹುಶಾರು ತಪ್ಪಿದ್ದಳು. ಮಕ್ಕಳೆನಿಸಿಕೊಂಡವರು ದೂರವೆ ಉಳಿದಾಗ ಅಮ್ಮ ತನ್ನೆಲ್ಲ ಬಿಗುಮಾನಗಳನ್ನು ಬಿಟ್ಟು ಎರಡು ದಿನ ಆಸ್ಪತ್ರೆಯಲ್ಲಿ ಒಂದು ವಾರ ಮನೆಯಲ್ಲಿ ಆರೈಕೆ ಮಾಡಿದ್ದಳು.

ಅಮ್ಮ ಮೊದಲ ಸಲ ಈ ಮನೆಗೆ ಕಾಲಿಟ್ಟಾಗ ಬಿಕೊ ಎನ್ನುತ್ತಿದ್ದ ಮನೆಗೆ ಎರಡು ಎಮ್ಮೆ ಒಂದು ಹಸುವನ್ನು ತನ್ನ ತವರುಮನೆಯ ಆಭರಣಗಳನ್ನು ಮಾರಿ ತಂದಿದ್ದಳಂತೆ. ಹಾಲು ಹೈನಗಳನ್ನು ಮೂರು ಮೈಲಿಗಳಷ್ಟು ನಡೆದು ಮಾರಿ ಬಂದ ಹಣದಲ್ಲಿ ಒಂದು ಜೊತೆ ಎತ್ತು ಮನೆಗೊಂದು ಸುಭದ್ರ ಬಾಗಿಲು ಮಾಡಿಸಿದ್ದನ್ನು ಅತ್ತೆ ಹೇಳುತ್ತಿದ್ದಳು. ಊರಿನಲ್ಲಿ ಯಾವುದೇ ಕಷ್ಟ ಸುಖಗಳಿರಲಿ ಅಲ್ಲಿ ಅಮ್ಮ ಹಾಜರಿರುತ್ತಿದ್ದಳು. ಅಜ್ಜ ಹೋದಂದಿನಿಂದ ಮನೆಯ ಎಲ್ಲ ಆಗು ಹೋಗುಗಳಿಗೆ ಹೆಗಲು ಕೊಟ್ಟು ನಿಂತು ಚಿಕ್ಕಪ್ಪ, ಅತ್ತೆ ಮತ್ತು ಅತ್ತೆಯ ಮಗನ ಮದುವೆಯನ್ನು ತನ್ನ ಶಕ್ತಿಮೀರಿ ಮಾಡಿದ್ದಳು.

ಜೊತೆಗೇ ನೆನಪಿಗೆ ಬರುತ್ತಿರುವ ಇನ್ನೊಂದು ಚಿತ್ರ : ಅಪ್ಪ ಅವ್ವನ ಸಂಶಯಿಸಿ ಮನಬಂದಂತೆ ಹೊಡೆದು ಮನೆಯ ನಗದನ್ನೆಲ್ಲ ಅಕ್ಷರಶಃ ದೋಚಿಕೊಂಡು ದೇಶಾಂತರ ಹೋಗಿದ್ದ. ಆ ವರುಷ ಎರಡು ಮೂರು ಮಳೆಯಾಗಿದ್ದು ಬಿಟ್ಟರೆ ಅದು ಬರಗಾಲವೆ ಸರಿ. ಹೊಲದಲ್ಲಿದ್ದ ಕೆರೆಯ ತುಸು ನೀರನ್ನೆ ಹಗಲು ರಾತ್ರಿಗಳೆನ್ನದೆ ಪ್ರತಿ ಹತ್ತಿಯ ಗಿಡಕ್ಕೂ ಹಾಕುವುದು ಸರಳವಾದುದ್ದಲ್ಲ. ಅವ್ವ ಅದನ್ನು ಆಗುಮಾಡಿದ್ದಳು. ಪ್ರೀತಿಯಿಂದ ಬಿದ್ದ ಪ್ರತಿ ಹನಿ ನೀರು ತನ್ನ ಋಣ ತೀರಿಸಿದಂತೆ ಆ ವರುಷ ಹೆಚ್ಚು ಹತ್ತಿ ನಮ್ಮ ಹೊಲದ್ದೆ ಆಗಿತ್ತು.. ಮತ್ತೆ ಜಡ್ಡು ಹತ್ತಿಸಿಕೊಂಡು ಬಂದ ಅಪ್ಪನನ್ನು ತುಟಿ ಎರಡು ಮಾಡದೆ ಹಡೆದ ಮಗನಂತೆ ಆರೈಕೆ ಮಾಡಿದಳು.



ಇವೆಲ್ಲ ನೆನೆದಾಗ ನಾನು ಇಂಥ ಜಿಗುಟು ಅಮ್ಮ, ಹಟಮಾರಿ ಅವ್ವ ಎಲ್ಲ ಕೂಸುಗಳಿಗೂ ಸಿಗಲಿ ಎನ್ನುತ್ತೇನೆ.

-ಎಚ್. ಎಸ್. ರಾಮನಗೌಡ, ರೈತ ಮತ್ತು ಲೇಖಕ, ಕೊಂಡಿಕೊಪ್ಪ (ನವಲಗುಂದ)

ಮಹಿಳಾ ಕಾವ್ಯ ಮಾಲೆ



ಕೋಳೀ ಕಥನ

ಕೋಳಿ ಕೂಗಿತೂ
ದುಗ್ಗಪ್ಪನ ಕಟ್ಟೆಮೇಲೆ ಕೋಳಿ ಕೂಗಿತೂ
ಬೆಳಗು ಆಯಿತೆಂದು
ಎಲ್ಲ ಏಳಿರೆಂದು
ಕಟ್ಟೆ ಮೇಲೆ ನಿಂತ ಕೋಳಿ
ಫರ್ರೆಂದು ಮಾಡನೇರಿ
ಕತ್ತು ಕೊಂಕಿ ಜುಟ್ಟನೆತ್ತಿ
ಕೊ ಕ್ಕೊ ಕ್ಕೋ ಕೂಗಿತೂ
'ಬೆಳಗಾಯಿತೊ' ಕೂಗಿತೂ
ಕೂಗುತಲೇ ಕುಕ್ಕುಟವು ಬೆಳಗು ಮಾಡಿತು

ದುಗ್ಗಪ್ಪನ ಕೋಳಿಯೇ
ಇಕ ಇಕ ಇಕ ಕೋ
ತೆಕ್ ತೆಕ್ ತೆಕ್ ತೆಕೋ
ಕೊ ಕ್ಕೊ ಕ್ಕೋ ಕೋಳಿಯೇ
ಖೋ ಖ್ಖೋ ಖ್ಖೋ ಖ್ಖೋ..

ಒಡೆಯನ ದನಿ ಕೇಳಿ ಕೋಳಿ
ದಿಕ್ಕಾಪಾಲು ಓಡಿತೂ
ಪರ ಪರ ಪರ್ರ್ ಹರಿಯುವಂತೆ
ರೆಕ್ಕೆ ಬಡಿದು ಹಲುಬಿತೂ
ದುದುದುದು ದುಗ್ಗಪ್ಪನಿಗೆ
ಏಕೆ ಬೆಳಗಾಯಿತೂ!

ಹಿಡಿ ಹಿಡಿ ಹಿಡಿ ಮುಷ್ಟಿಗೆ ಮ್ಯಾಳೆ ಸಿಕ್ಕಿತು
ರೆಕ್ಕೆ ಉರುಬಿ ಮೂಳೆ ತರುಬಿ
ಮಾಂಸ ಹುರಿದು ಪರಿಮಳ
ಬಾಣಲೆಯಲಿ ಕೋಳಿ ನರಳಿ
ಅತ್ತಿತೂ ಗಳಗಳ

ಕತ್ತು ಮುರಿಯಿತಿಕೋ, ಕತ್ತಲಾಯಿತಿಕೋ
ಸಿಕ್ಕಿ ಬಿದ್ದೆನಿಕೊ ನಾ
ಸತ್ತು ಹೋದೆನಿಕೋ
ಬೆಳಗಾದುದು ತಿಳಿಸಲಿನ್ನು
ಯಾರೂ ಇಲ್ಲ ಕೋ

ಕೊರಗುತ್ತಲೆ ಕೋಳಿಯ ಸ್ವರ ಬತ್ತಿ ಹೋಯಿತೂ
ಬೆಳಗಾಯಿತು ಎಂಬ ಕೋಳಿ
ಹೊಟ್ಟೆ ಸೇರಿತೂ

ದಿನವು ಕಳೆದು ದಿನವು ಮುಗಿದು
ಇರುಳ ಬಿಡಿಸಿ ನಿಶೆಯ ಮುಚ್ಚಿ
ಕುರುಡು ಇರುಳು ಮರುಳು ಹಗಲು
ನಿತ್ಯ ಉದಿತ ನಿತ್ಯ ಕುದಿತ

ಉರುಳಿತಿಕೋ ಮರಳಿತಿಕೋ
ಮರು ಮಾರನೆ ದಿನನಿತ್ಯವೂ
ಕವಿಯ ಕಿವಿಗೆ ಕೇಳಿತಿಕೋ
'ಬೆಳಗಾಯಿತೋ'.



ಅರರೇ ಇದು ಮುಂಗೋಳಿ ಕೂಗು!
ಎಲ್ಲಿ ಎಲ್ಲಿ! ಎಲ್ಲಿಂದಲೋ
ಮತ್ತೆ ಮತ್ತೊಂದೇ ಕೋಳಿ!
ಬೆಳಗು ಹಾಡಿತಿಕೋ
ಬೆಳಗು ಆಯಿತಿಕೋ



–ವೈದೇಹಿ

ಬಾಲೆ

ಬೆದರದಿರು ಬಾಲೆ
ಅಳಬೇಡಮ್ಮಾ ಅಳಬೇಡ
ನಿಜದ ನೆರಳಿನಂತಿರುವ ಕನಸಿಗೆ
ಹೆದರಿ ಗಾಬರಿ ಬೀಳದಿರಮ್ಮಾ

ಬಾಯಿ ತೆರೆದ ಬಾವಿ ಹೆದರಿಸುವುದು
ಕಲ್ಲಿನ ಹಲ್ಲುಗಳ ಕೋರೆದಾಡೆಗಳ ಕಿರಿದು
ಅಟ್ಟಿಸಿಕೊಂಡು ಬರುವ ನಾಯಿ
ಕಿರುಚುವ ಮಗುವಿನ ತಾಯಿ

ಸ್ವಪ್ನದಲಿ ಕೇಡು ಬಿರುಗಾಳಿ
ಅದಕೇಕೆ ಅಳುವೆಯಮ್ಮಾ
ಗಾಳಿಗೆ ತೊಡರೊಡ್ಡುವುದು
ಭೂಮಿತಾಯಿಯ ರಕ್ಷೆ
ಅಳದಿರು ಹಸುಮಗಳೆ
ಕಣ್ಣರೆಪ್ಪೆಗೆ ಜೇನು ಸವರುವೆ
ತಾಯ್ಗೊಡೆ ಸಿಗಲಿ ಕನಸಲ್ಲೂ
ಇಲ್ಲಿನ ಒಸಗೆ ಬೆಳೆಯಲಿ



ಮನ್ನಣೆ ದೊರೆಯಲಿ ನಿನಗೆ
ದೇವನ ಮುದ್ರೆ ಸಿಕ್ಕಲಿ
ದೊಡ್ಡ ನಕ್ಷತ್ರ ಹಾಸಿನಲಿ
ಮಲಗುವೆಯಂತೆ ಹೊದ್ದು, ಸುಮ್ಮನಿರು

ನೋಡುತ್ತಿರು ಕನಸನ್ನು
ಯುಗಯುಗವೇ ಕಳೆದು
ಇರುಳು ಬೆಳಕಾಗುವುದು

ಬೆದರದಿರು ಬಾಲೆ
ಅಳಬೇಡಮ್ಮಾ ಅಳಬೇಡ

ಚಿತ್ತಾಲರ ಟೆರೇಸು

ಟೆರೇಸು ಎಂದರೆ ಜೀವವಾಗಿದ್ದ ಚಿತ್ತಾಲರು
ಪ್ರತಿದಿನ ಅಲ್ಲಿ ಕುಳಿತು ಅರಬಿ ಎಂಬ ಕಡಲನ್ನು
ಕಾಣುವರು
ಅಭಾಂಡವಾಗಿ ಮೈತೆರೆದ ನೀರಿನ ಬೆತ್ತಲೆಗೆ
ತೆತ್ತುಕೊಳುವ ಕಲಾವಿದನ ವಿನಯದಲ್ಲಿ

ಜಾನಕಿಯರು ಅಲೆಯಾಗಿ ಮನದ ದಡಕ್ಕೆ
ಅಪ್ಪಳಿಸುವರು ಮೃದುವಾಗಿ
ಆಗಾಗ ಉಬ್ಬರದಂತೆ ಕಾಡುವುದು ಒಳಗಿನ ತಳಮಳ
'ಬಾ ಮಗಳೇ ಬಾ ಬಂದುಬಿಡು' ಎಂದು ಕೈಚಾಚಿ
ಕರೆದು ಎದೆಯೊಡ್ಡಿ ನಿಲ್ಲುವರು

ಪರದೇಶಿ ಅಲೆ ಮುಂದೆ ಮೆರೆಯುವ ಹುಟ್ಟೂರು
ಹನೇಹಳ್ಳಿಯಿಂದ ಮುಂಬೈವರೆಗೆ

ಏಕವಾಗಿ ಹರಡಿರುವ ನೀರು

ಮಾನವೀಯತೆ ಪೀಡಿತನಾದ ಕಲೆಗಾರನಿಗೆ
ಯಾರಾದರೂ ಅಂದಾರು, 'ಥೂ ನೀರಿಲ್ಲದವರು'
ಆರ್ದ್ರವಾಗುವುದು ಅಪರಾಧ
ಸೂತಕದ ಜಗತ್ತಿನಲ್ಲಿ




ನರಬೇಟೆಯ ಅಕ್ರಮ
ಸಾಕ್ಷಿಯಿಲ್ಲದ ಕೊಲೆ
ಆತ್ಮವಿಲ್ಲದ ದೇಹ!

ಚಿತ್ತಾಲರ ಟೆರೇಸಿನಲಿ ವಿಶಾಲ ಸಮುದ್ರ ತೆರೆದುಕೊಳ್ಳುವುದು
ಈಸಿ ಛೇರಿನಲಿ ಕೂತು ಬರಹಗಾರ ಧ್ಯಾನಿಸುವನು ಜಗದ ಮೊರೆತವನ್ನು.

-ಆರ್. ತಾರಿಣಿ ಶುಭದಾಯಿನಿ

ತೂಗಲ್ಪಡುತ್ತವಿಲ್ಲಿ.....

ಹುಷ್..... ಸದ್ದು..
ಬರಿದೆ ಅದೆಷ್ಟು ವಟಗುಟ್ಟುತ್ತೀಯೆ?
ಆಲಿಸು....ನಿಶ್ಯಬ್ದವಾಗಿ
ಅಳತೆಯ ಸದ್ದು.
ಬಣ್ಣ ವಾಸನೆ ಉಸಿರು
ಮಾತು ಮೌನ...ಎಲ್ಲಾ
ತಕ್ಕಡಿಯ ತಟ್ಟೆಯಲ್ಲಿಟ್ಟು ತೂಗುತ್ತಿವೆ
ಅದೃಶ್ಯ ಕೈಗಳು.



ಇನ್ನಾದರೂ ಬಾಯಿಮುಚ್ಚಿಕೋ
ಅರಚಾಟದಲ್ಲಿ ಕೇಳಲಾಗದು.
ಕಾಣಲಾಗದು ಬರಿಗಣ್ಣಿನಲಿ
ಕಣ್ಣೂ ಮುಚ್ಚಿಕೋ.
ಮೈಯೆಲ್ಲಾ ಕಿವಿಯಾಗಿ
ಆಲಿಸು.....ಆಲಿಸಿಕೋ.....
ಈಗ.... ಕೇಳುತ್ತಿದೆಯೇ
ಬಳಲಿ ಬಿದ್ದ ಬಣ್ಣದ ದನಿ
ಮುದುರಿ ಕುಳಿತ
ವಾಸನೆಯ ನಿಟ್ಟುಸಿರು
ಉಸಿರಿನ ತಳಮಳ
ಮಾತಿನ ಒದ್ದಾಟ
ಮೌನದ ವಿಲವಿಲ....


ಎಲ್ಲವೂ ತೂಗಲ್ಪಡುತ್ತವಿಲ್ಲಿ
ನಿಷ್ಕರುಣೆಯಲ್ಲಿ

ಹೊರ ದಬ್ಬಿದ್ದಕ್ಕೆ
ಕಾರಣ ಕೇಳಬೇಡ
ತಕ್ಕಡಿಯ ತಟ್ಟೆಯ
ಒಳಗುಳಿಯಬೇಕೆಂದರೆ
ಅಳತೆಗೆ
ಕತ್ತರಿಸಿಕೋ
ಅಳತೆಬೊಟ್ಟಿಗೆ ಸಮನಾಗಿ ತೂಗು



ಬಣ್ಣ ವಾಸನೆ ಉಸಿರು
ಮಾತು ಮೌನ...
ಎಲ್ಲಾ ತೂಗಿಸಿಕೊ.....

–ರೂಪ ಹಾಸನ



ಒಂಟಿದಾರಿ

ನಾನು ಆಕಾಶ ಮಲ್ಲಿಗೆಯ ಮರ
ಘಮದ ಪರಿಮಳಕೋ ನಭದ ಎಲ್ಲೆ
ಆದರೂ ನಾ ಯಾರೂ
ಮುಡಿಯ ಬಯಸದ ಹೂವು
ಹಕ್ಕಿಗಳ ಕಚಿಪಿಚಿ
ನನ್ನ ಗೆಲ್ಲುಗೆಲ್ಲುಗಳಲಿ
ಆದರೂ ಯಾಕೋ ಹೊಟ್ಟೆಯ
ಮಕ್ಕಳಂತೆ ಹೊಟ್ಟೆ ತುಂಬಿದ
ಮೇಲೆ ಹಾರಿಹೋಗುತ್ತವೆ ಪುರ್ರನೆ.

ನಾನು ನದಿಯಂತವಳು
ಪಯಣದುದ್ದಕೂ ಒಂಟಿ ಹರಿವು
ತಂಪು ಪಡೆದವರಿಗೆ ನದಿಯ
ನಂಟಿದೆ ನದಿಗೋ ಸಂಗ ಬಯಸಿದ
ಕಡಲು ನೀಡುವುದು ಉಪ್ಪುನೀರಿನ ಶಿಕ್ಷೆ
ಒಂಟಿತನದ ಹೆಪ್ಪುಗಟ್ಟಿದ ಶೀತ
ಕೊರೆಯುತಿದೆ ನನ್ನ

ನೇರ ಬಾಣದ ಮಾತಿನವಳು
ನಿಜದ ಮೊನೆಯ ತಿವಿತಕ್ಕೆ ಉರಿದೆದ್ದು
ನನ್ನ ಬೆನ್ನ ಹಿಂದೆ
ಸಂಚು ಹೂಡುತ್ತಾರೆ
ಅವರಿಗೆ ಅರಿವು ಮೂಡುವಷ್ಟರಲಿ
ನಾನು ನೇಣುಗಂಬದಲಿ ಹೆಣವಾಗಿರುತ್ತೇನೆ

ನಾನು ಮರ ನಾನು ಹೂವು ನಾನು ಮಾತು ನಾನು ನದಿ

ನಾನು ನೀನು

ಮರದ ದಿಮ್ಮಿ
ತೇಲಿ ಬಂದೆ

ನೀನು ನನ್ನ
ದೋಣಿಯೆಂದೆ

ದೋಣಿ ತುಂಬ
ಮೀನು ತುಂಬಿ

ಮನದ ತುಂಬ
ಸುಖದ ದುಂಬಿ

ಉಸುಕು ಮರಳು
ಬಿರುಕು ಬಾಳು



ಕೋಪ ತಾಪ
ವ್ಯರ್ಥಾಲಾಪ

ನಾನು ನೀನು
ಯಾರೋ ಏನೋ


-ಡಾ. ಸಬಿತಾ ಬನ್ನಾಡಿ

ಸಶಬ್ದ




ಒಂದು ನಸುಕು
ಇನ್ನೂ ಮಬ್ಬುಗತ್ತಲು
ಭಾರೀ ಸದ್ದು!
ಬೇಲಿ ದೂಡಿ ಕಲ್ಲು ಝಾಡಿಸಿ
ಇದ್ದಲ್ಲೆ ಅತ್ತಿತ್ತ ಸರಿದು ಧೂಳು ಹಾರಿಸಿ
ಬೃಹದಾಕಾರದ ಮಿಶಿನು
ಬಂದೆನೆಂದು ಸಾರಿತು

ಮೇಲೆ ಗೂಡಿನಲಿ ಮಲಗಿದ್ದ ಜೋತಮ್ಮ
ಭಯಾನಕ ಸದ್ದಿಗೆ ಎಚ್ಚೆತ್ತು ಕಣ್ಣುಜ್ಜುತ್ತ
'ಮಾಮ್, ವಾಟೀಸ್ ದಿಸ್' ಎಂದಳು.
ಸಂಪಿಗೆ ಮರದ ತುತ್ತತುದಿ ಮಹಲಿನ
ಮರಿಕಾಗೆ, ಕಾಗಮ್ಮ
ಏನೋ ಆಗಿಹೋಯಿತೆಂದು
ಹುಯ್ಯಲಿಟ್ಟರು.
ಪುಟ್ಟ ಬೆಕ್ಕುಮರಿ ಕಂಗಾಲು
ಹಿಂದೆಮುಂದೆ ಸುಳಿಯುತ್ತ
ನನ್ನ ಕಾಲುಗಳತ್ತಲೇ ನೆಟ್ಟಿದೆ ಕಣ್ಣು..



ಕೊರೆವ ಸದ್ದು ಕಿವಿ ತುಂಬುತಿರಲು
ಹೊರಹೋಗಿ ನೋಡುತ್ತೇನೆ
ಬೀದಿಯಲಿ ಹೆಜ್ಜೆಗೊಂದೊಂದು ಗುರುತು
ನೆಲ ಕೊರೆದು ಆಳಬಾವಿ ತೋಡಲು.
ಗುರುಗುಡುತ್ತ ಬೀಡುಬಿಟ್ಟಿದೆ ಭಾರೀ ಮಿಶಿನು!

ಒಂದಿಡೀ ದಿವಸ ಕೊರೆದದ್ದೇ ಕೊರೆದದ್ದು
ಈ ಬೋರು ಆ ಬೋರು ಮತ್ತೊಂದು ಬೋರು
ನೂರಿನ್ನೂರು ಮುನ್ನೂರು ನಾನೂರು
ಕೊರೆದ ಅಡಿ ಇಂಚಿಗು ಲೆಕ್ಕ ಉಂಟು.
ಆದರೇನು, ಎಲ್ಲು ಇಲ್ಲ ನೀರು
ಕಿಸೆ ಕಂಗಾಲು
ಜನ ಕಂಗಾಲು
ಮಿಶಿನು ಕಂಗಾಲು
ಅಲ್ಲಿ ನೀರಿಲ್ಲ ಇಲ್ಲಿಯೂ ಇಲ್ಲ
ಸದ್ದು ಮಾಡಿದ್ದೇ ಬಂತು ನೀರೇ ಇಲ್ಲ
ಭುಸ್ಸೆಂದು ನಿಟ್ಟುಸಿರ್ಗರೆದು
ವಾಪಸು ಹೊರಟಿತು ಮಿಶಿನು
ಅಬಬ, ಏನು ಗದ್ದಲ ಏನಬ್ಬರ!
ಬರುವಂತೆ ಹೋಗುವಾಗಲೂ?



'ಕೊರೆತವೇ ಹಾಗೆ,
ಸೋಲುಗೆಲುವು ಇರುವುದೇ
ಕೊರೆವ ಸದ್ದಿಗೆ ಬೆಚ್ಚದಿರಲು ಸಾಧ್ಯವೇ?'
ನನ್ನ ಅಚ್ಚರಿಗೆ
ಗೇರು ಮರದ ಕಾಂಡ ಕೊರೆವ ಹುಳು
ತೂತಿನಿಂದ ಹೊರಗಿಣುಕಿ ನಕ್ಕು
ಟ್ರೊಂಯ್ ಟ್ರೊಂಯ್ಯನೆ ಕೊರೆಯುತ್ತ
ಮತ್ತೆ ಒಳ ಸರಿಯಿತು.
ಹೌದಲ್ಲ ಹುಳವೇ,

ಕೊರೆವುದು ಎಂದಿಗು ಸಶಬ್ದ.
ಮೊಗೆವುದು, ನನದೆನುವುದು ಸಶಬ್ದ.
ಸಿಗಲಿಲ್ಲವೆನುವುದು ಸಶಬ್ದ.
ಕೊರಗುತ್ತ ಮರಳುವುದೂ ಸಶಬ್ದ..
ಯಂತ್ರವೆಂದಿಗು ಕರ್ಕಶ ಶಬ್ದ.

–ಡಾ. ಎಚ್.ಎಸ್. ಅನುಪಮಾ

(ಈ 'ಮಹಿಳಾ ಕಾವ್ಯಮಾಲೆ'ಯ ಮೂರೂ ಪುಟಗಳ ರೇಖಾ ಚಿತ್ರಗಳ ಕಲಾವಿದೆ: ರೂಪ ಹಾಸನ)

ಮೋಹಕತೆ

ಕೊಡುವಾಗ ಕೊಟ್ಟುಕೊಳುವಾಗ
ಅರಸುವಾಗ ಒಪ್ಪಿಸಿಕೊಳುವಾಗ
ನಿಶ್ಶಬ್ದವಾಗಿರಲು ಯಂತ್ರ ಹೆಣ್ಣಲ್ಲವಲ್ಲ?!

ನಿನ್ನೆಯ ಮೋಹಕ ಹುಡುಗಿ
ನಾಳೆಯ ಮೋಹಕ ಮುದುಕಿ

ಭೂ ಚಕ್ರ ತಿರುಗುವುದು ಬಲು ವೇಗದಿಂದ
ಕಳೆದು ಹೋಯಿತು ನಿನ್ನೆ
ಕೂಡಲ್ಹೋದಾಗ, ಕೂಡಲೇ
ಬಂದುಬಿಟ್ಟಿತೆ ನಾಳೆ...
ನಿನ್ನೆ ನಾಳೆಗಳ ನಡುವೆ ಸಿಲುಕಿಕೊಂಡು

ಅರಳುಗಣ್ಣಿನ ಹೆಣ್ಣ ಕೈ ತುಂಬಾ ಮದರಂಗಿ.
ಚಿತ್ತಾರವೇಕೋ ತುಸು ಭಾರ
ತೊಳೆದಂತೆಲ್ಲ ಕಳೆದು ಹೋಯಿತು ರಂಗು
ತೊಳೆದದ್ದು ಪಾತ್ರೆ ಪಡಗ ಬಟ್ಟೆ ಬಡಿವಾರ
ಜೊತೆಜತೆಗೆ ಮನಸು ಕನಸುಗಳ ಕವನ–ಚಿತ್ತಾರ

ಪಡೆದುದೇನು? ಕಳೆದದೇನು?
ಕೊಟ್ಟುದೇನು? ಬಿಟ್ಟುದೇನು?
ತನಗೋಸ್ಕರವೆ ಎಂದು ಮುಚ್ಚಿ ಇಟ್ಟುದೇನು?
ಕತ್ತಿನ ಮೇಲೆ ದೊಡ್ಡದೊಂದು ಕಂದು ಗುರುತು

ಪ್ರೇಮದ ನಿಶಾನಿಯೋ?
ಕ್ರೌರ್ಯದ ಪರಮಾವಧಿಯೋ?
ನಡುವಿನ ಗೆರೆಯನ್ನು ತೆಳುವಾಗಿಸಿಕೊಂಡು
ಬದುಕ ಪಳಗಿಸುವುದರಲ್ಲಿ ಹನಿ ಹನಿ ಸೋರಿ...

ನಡುವೆಲ್ಲೋ ಒಮ್ಮೆ
ಹಲ್ಲಲ್ಲೇ ಪಂಜರವ
ತುಸು ತುಸುವೇ ಕಡಿದುಗಿದು
ಹಾರುವ ಮಾತು ಉಸುರಿದ್ದೇ ಸರಿ
ಎದುರಿರುವವರು ಹೇಳಿದರು
'ಹೋಗುವುದು ಹೋಗುತ್ತಿ ಹಾಲಿಗೊಂದಿಷ್ಟು ಹೆಸ್ರು
ಕಾಣಿಸಿ ಹೋಗಿಬಿಡು'
ಎಷ್ಟು ಸ್ಥಿತಪ್ರಜ್ಞತೆಯಿತ್ತು
ಆ ದನಿಯಲೆಂದರೆ.....!!!
ರೆಕ್ಕೆಗಳು ತತಕ್ಷಣವೆ ಮುದುರಿ ಮುರಿದವು
ಸರಭರ ಸಡಗರ ಅರಳಗಣ್ಣಿನ ಕಾಂತಿ
ಕನ್ನಡಕದೊಳಗಿಂದ ಪಸರಿಸಿ ಹರಡುವ ಹೊತ್ತಲ್ಲಿ
ಷರಾವೊಂದನ್ನು ಬಿಡದೇ ಬರೆಯುತ್ತಾರೆ
'ಇಂದಿನ ಮೋಹಕ ಮುದುಕಿ
ನಿನ್ನೆಯ ಮೋಹಕ ಹುಡುಗಿ'



–ಅಕ್ಷತಾ ಹುಂಚದಕಟ್ಟೆ

ಕಥೆ

ಅಂಗಳದ ಆಕಾಶ

–ಸುನಂದಾ ಪ್ರಕಾಶ ಕಡಮೆ

'ಬರೇ ಇದ ಆತ್ ನಿಂದ, ಅಂಗಳ ಇಳಿದು ಆಕಾಶ ನೋಡಪಾ ಅಂದ್ರ, ನೀ ಏನ್ ಹಂಗ ಕಿಟಕ್ಯಾಗ್ ಕುಂತು ಆಕಾಶಕ ಹಣಕಾಂವ, ಏಟ್ ಆಕಾಶ ಕಂಡೀ ಹೇಳ?'



ಮಧ್ಯಾಹ್ನ ಮೂರು ಗಂಟೆಯಾಗುತ್ತಿದ್ದಂತೆಯೇ ಮೂವತ್ತೆಂಟು ನಲವತ್ತರ ವಯದ ಶ್ರೀಧರ ಸಿಂಧೆ ಎಂದಿನಂತೆ ಕೊಪ್ಪೀಕರ ರಸ್ತೆಯಲ್ಲಿರುವ ತಮ್ಮ 'ಸಿಂಧೆ ಕ್ಲಾಥ್ ಸೆಂಟರ್'ನ ಶೆಟರ್ಸ್ ಇಳಿಸುವಂತೆ ಅಂಗಡಿಯ ಸೇಲ್ಸ್‌ಮನ್ ರಾಜುವಿಗೆ ಹೇಳುತ್ತ, ಮಧ್ಯಾಹ್ನದ ಊಟಕ್ಕೆ ಮನೆಗೆ ಹೋಗುವ ಅವಸರಕ್ಕೆ ಬಿದ್ದ. ಪಾರ್ಕಿಂಗ್ ಜಾಗೆಯಲ್ಲಿ ಶ್ರೀಧರನ ಕಾರಿನ ಹಿಂದೆ ಒಂದು ಜೀಪು ನಿಂತಿದ್ದು, ರಿವರ್ಸ್ ತೊಗೊಂಡು ಮನೆಯ ದಾರಿಗೆ ತಿರುಗಿಸಲು ಹಿಡಿದ ಆ ಹತ್ತು ನಿಮಿಷದಲ್ಲೇ ಅವನ ಬೀಪಿ ಸ್ವಲ್ಪ ಏರುಪೇರಾಗಿತ್ತು, ಹೊಟ್ಟೆ ಬೇರೆ ಚುರುಗುಡುತ್ತಿತ್ತು. ಮನೆ ದಾರಿಯಲ್ಲಿ ಲೆಮಿಂಗ್ಟನ್ ಹೈಸ್ಕೂಲಿನ ತಿರುವಿನಲ್ಲಿ ಅವನ ಹೈಸ್ಕೂಲು ದಿನಗಳ ಸಹಪಾಠಿ ಅಶೋಕ ಸಿಕ್ಕು, ಇವನ ಕಾರಿಗೆ ಕೈ ಮಾಡಿ ನಿಲ್ಲಿಸಿ 'ಮನೀಗ ಹೊರಟೇನ್ಲೇ?' ಅಂತ ಕೇಳಿದ್ದ. ಹೀಗೆ ಖಾಸಾ ದೋಸ್ತನನ್ನು ಅನಾಮತ್ತು ರಸ್ತೆಯಲ್ಲಿ ಕಂಡದ್ದೇ ಶ್ರೀಧರನ ತಲೆ ಒಮ್ಮೆಲೇ ಪ್ರಶಾಂತ ಸ್ಥಿತಿಗೆ ಬಂತು. 'ಹ್ಞ ಬಾ ನೀನೂ, ಹತಗೊ' ಅಂದವನೇ ಶ್ರೀಧರ ತುಸು ಎಡಕ್ಕೆ ವಾಲಿಕೊಂಡು ಪಕ್ಕದ ಬಾಗಿಲು ಕೊಂಚವೇ ದೂಡಿ ತೆಗೆದ. ಅಶೋಕ ಹತ್ತಿ ಕೂತು ಬಾಗಿಲು ಹಾಕಿಕೊಂಡದ್ದೇ ಕಾರು ನಿಧಾನ ಹೊರಟಿತು. ಮಧ್ಯಾಹ್ನದ ಬಿಸಿಲ ಝಳ ಹೆಚ್ಚೇ ಇದ್ದುದರಿಂದ ರಸ್ತೆಯಲ್ಲಿ ಅಷ್ಟು ವಾಹನಗಳ ಸರಭರಾಟ ಇರಲಿಲ್ಲ.

'ಯಾಕಪಾ ಮನೀಗ ಹೋಗಾಕ ಇಷ್ಟ್ ತಡಾ ಮಾಡ್ದಿ? ಮನಿಯಾಗ ಊಟಕ್ ವೈನಿ ನಿನ್ನ ಕಾಯ್ಕೋತ ಕೂತಿರಬೇಕನ?' ಅಂತ ಕೇಳಿದ ಅಶೋಕನ ಪ್ರಶ್ನೆಗೆ ಶ್ರೀಧರ 'ಯಾಕ್ ಕಾಯ್ತಾರಪಾ, ಉಂಡ ತಿಂದ್ ಆರಾಂ ಮಕ್ಕೊಂಡಿರತಾರ ಅವ್ರು' ಅನ್ನುತ್ತ ಸಣ್ಣಗೆ ನಕ್ಕಿದ್ದ. 'ಮತ್ತ? ಉಣದ ಏನ್ ಮಾಡ್ತಾರ? ನೀ ಬರೀ ಬಿಜಿನೆಸ್ ಬಿಜಿನೆಸ್ ಅಂತ ಹೀಂಗ ನಾಕಕ್ಕ ಮನೀಗ ಹೋದ್ರ?' ಎನ್ನುತ್ತ ಕಿಟಕಿಯ ಗಾಜು ಇಳಿಸಲು ಹೇಳಿದ ಅಶೋಕ. 'ಒಂದ್ ಮದ್ವಿ ಗಿದ್ವಿ ಆಗಪಾ ಅಂದ್ರ ಬರೇ ಹೆಣಮಕ್ಕಳ ಪರಾ ಮಾತಾಡ್ಕೋತ್ ಅಡ್ಡಾಡ್ತೀಯಲ್ಲಲೇ' ಅಂತನ್ನುತ್ತ ಶ್ರೀಧರ ಗೇರ್ ಬದಲಿಸಿ ಕಾರಿನ ವೇಗ ಹೆಚ್ಚಿಸಿದ್ದ.

'ಏನ್ ಮದ್ವಿ ಮದ್ವಿ ಅಂತ ಗಂಟ್ ಬೀಳ್ತೀಲೇ, ಆರಾಂ ರಾಜನಂಗ ಅದೇನಿ' ತನ್ನ ಜೀನ್ಸ್ ಪ್ಯಾಂಟಿನ ತೊಡೆಯ ಭಾಗ ತುಸು ಏರಿಸಿ, ಎರಡೂ ಹಸ್ತ ಹೆಣೆದು ನೆತ್ತಿಯಲಿಟ್ಟುಕೊಂಡು ಇನ್ನಷ್ಟು ಆರಾಮಾಗಿ ಕೂತ ಅಶೋಕ. 'ಇಲ್ಲೇ ಸಾವಜಿಯೊಳಗ ಒಂದ್ ಪ್ಲೇಟ್ ಚಿಕನ್ ಬಿರಿಯಾನಿ ಕಟ್ಸ್ಕೊಂಡ್ ಹೋಗೂಣನ?' ಅನ್ನುತ್ತ ಶ್ರೀಧರ ಕಾರನ್ನು ನಿಧಾನ ಮಾಡಿದ್ದೇ ಅಶೋಕ 'ಏ ಹಂಗೇನರ ಮಾಡಗೀಡಿ, ನಂದ್ ಆಗೇತಪಾ ಊಟಾ, ನನ್ ಬೆಂಗ್ಳೂರಿನ ಗೆಳೆಯಾರ ಒಂದಿಬ್ರು ಬಂದಿದ್ರು, ಅವರ ಜೊತೀನ ಆತು' 'ಹ್ಞ ಹೌದ? ಮತ್ತೆದಕ ಬರಾಕ ಹತ್ತೀಲೇ ನಮ್ ಮನೀಗೆ?' 'ಅರೆ, ನೀ ಹತ್ಗೋ ಅಂದಿ ನಾ ಹತ್ತೀದ್ನೆಪಾ' ಇಬ್ಬರೂ ಹೋ ಎಂದು ನಕ್ಕರು.

'ನಿಮ್ ಅಂಗಡೀಗ ಹೊಂಟಿದ್ದೆ, ಸುಮಾರ್ ಅರವತ್ ಮಕ್ಕಳೀಗಾಗೋಷ್ಟು ಯೂನಿಫಾರ್ಮ ಬಟ್ಟೆ ಬೇಕಿತ್ತಪಾ, ಹಸರ ಬಣ್ಣದ್ದು' 'ಐತೆಲಾ ಕೊಡೂನು ಅದಕೇನ್' 'ದರಾ ನೋಡ್ ಹಾಕಲೇ ಮತ್ತ, ಸಮಾಜ ಸೇವಾ ರೂಪದಾಗ ಒಂದ್ ಬಾಲ ಮಂದಿರದ ಅನಾಥ ಮಕ್ಕಳೀಗ್ ಕೊಡೂದದು, ಓಲ್ಡ್ ಸ್ಟಾಕ್ ಅಲ್ಲಲಾ ಮತ್ತ?' 'ತಥ್ ನಿನ, ನಿನಗ ಓಲ್ಡ್ ಸ್ಟಾಕ್ ಕೊಡ್ತೇನೇನ್ಲೇ?' 'ಸಂಜೀ ಮುಂದ ಎಂಟಕ್ಕ ಬರಲೆನ ಅಂಗರ?' 'ಆಯ್ತ್ ಬಾ, ನೋಡ್ ಹಾಕ್ಕೊಡತೇನ್ ರೇಟು' 'ಆತಂಗರ ಇಲ್ಲೇ ನಿಂದರಸಬಿಡ, ನಾ ಇಳ್ಕೋತೇನಿ' 'ಯಾಕಲೇ ಒಂದ್ ಚಾನರ ಕುಡದ ಹೋಗೂವಂತಿ ಬಾ, ಇಲ್ಲೀತಂಕ ಬಂದೀ' ಎನ್ನುತ್ತ ಶ್ರೀಧರ ಮನೆಯ ತಿರುವಲ್ಲಿ ಕಾರನ್ನು ತಿರುಗಿಸಿದ.

'ಅದೇನ ಪುಸ್ತಕ ಬಂತ್ ಅಂತಲ್ಲಲೇ ನಿಂದ? ಒಂದ್ ತಿಂಗಳದ ಹಿಂದ್ ಯಾವ್ದೋ ಪೇಪರನಾಗ ನೋಡ್ದೆ, ಏನದರ ಹೆಸರ?' 'ನೀ ಅಂತೂ ಓದಾಂವಲ್ಲ ಬಿಡಾಂವಲ್ಲ, ಪುಸ್ತಕದ ಹೆಸರ ಕಟ್ಕೊಂಡ ಏನ್ ಮಾಡ್ತಿಲೇ?' 'ನಿನ ಕೆಲಸದ ವಿಷಯ ಈಗ ಹೆಂಗೈತಿ? ಒಂದ್ ಕಡೆ ಗಟ್ಟಿ ತಳಾ ಊರಿ ನಿಲ್ಲಂವನ ಅಲ್ಲ ನೋಡ್ ನೀ' 'ಬಾಲ ಮಕ್ಕಳ ವಿಕಾಸ ಕೇಂದ್ರಕ್ಕ ಸಂಬಂಧಪಟ್ಟ ಒಂದ್ ಎನ್‌ಜಿಓಕ್ಕ ಕೆಲ್ಸಾ ಮಾಡಕ ಹತ್ತೀನಲೇ ಈಗ' 'ಏಸ್ ಕೊಡ್ತಾರ್ಲೇ ಸಂಬಳಾ?' 'ಏ, ನನಗರ ಹೆಂತಿಲ್ಲ ಮಕ್ಕಳಿಲ್ಲ, ಇರೂದ ಒಬ್ಬಾಕಿ ಅವ್ವ, ಸಾಲತಾವ್ ಅಷ್ಟ ಎಂಟ್ ಸಾವರಾ ಕೊಡ್ತಾರ, ನಮ್ಮದೇನ್ ಸಿಂಪಲ್ ಜೀವ್ನಾ, ನಿಮ್ಮಂಗ ಮನೀಯೊಳಗ ಎರಡೆರಡ ಕಾರ್ ಇಲ್ಲ, ಅದ್ರ ಹೊಟ್ಟೀಗ್ ಪೆಟ್ರೋಲ್ ಚಿಂತಿಲ್ಲ, ಬರೇ ನಂದೂ ಅವ್ವಂದೂ ಹೊಟ್ಟೀ ಚಿಂತೀ ಅಷ್ಟ, ಓಡಾಡಾಕಂತೂ ಸೈಕಲ್ ಐತಿ. ಅದಕೇನ್ ಎಣ್ಣಿ ಪಣ್ಣಿ ಏನೂ ಬ್ಯಾಡಾ, ಹೊಡ್ಕೋತನ ಇರೂದು, ವ್ಯಾಯಾಮಾನೂ ಆಕ್ಕೇತಿ' 'ಯಾರ್‍ಯಾರೋ ಮಿನಿಸ್ಟರ್ ಗಿನಿಸ್ಟರ್ ಎಲ್ಲಾ ಪರಿಚಯ ಅದಾರ, ಇನ್ನೂ 'ಸೈಕಲ್ ಮ್ಯಾಗ ಅಡ್ಡಾಡ್ತೀಯಲ್ಲಲೇ' 'ಹಂಗ, ನಮ್ ಸಂಘಟನಾ ಕಾರ್ಯಕ್ರಮ ಅದೂ ಇದೂ ಆಗ್ತಿರತಾವಲ್ಲ, ಆವಾಗ ಕರಿಯಾಕ ಹೋಗೂದು ಮಾತಾಡೂದು ಮಾಡಿ ಪರಿಚಯ ಅಷ್ಟ, ಅವರ್ನ ತೊಗೊಂಡ ಏನ್ಮಾಡ್ತೀಲೇ, ಈಗ ಹ್ಯಾಂಗ ಪರಿಸ್ಥಿತಿ ಆಗೇತಿ ಅಂದ್ರ, ಇಂಥಾ ರಾಜಕಾರಣಿಯ ಪರಿಚಯ ಐತಿ ಅನ್ನಾಕನ ನಾಚ್ಕಿ ಬರ್ತೇತ್ ನೋಡ'

'ನಿಮ್ಮ ಸಂಘಟನಿದೇನೋ ಫಂಕ್ಷನ್ ಇತ್ತಿರಬೇಕಲಾ ನಿನ್ನೆ? ಪೇಪರನಾಗ ಹಂಗ ಮಿಂಚಾಕ ಹತ್ತಿದ್ದಿ' ಕೇಳುತ್ತ ಬ್ರೇಕ್ ಹಾಕಿ ತಮ್ಮ ಮನೆಯೆದಿರು ನಿಲ್ಲಿಸಿದ್ದ ಶ್ರೀಧರ. 'ಹ್ಞ, ಇಲ್ಲೇ ಅಣ್ಣೀಗೇರಿ ಬಡರೈತರ ಕೂಡ ಸಮಾಲೋಚನಿ ಇತ್ತು, ಅವರೀಗ ನೀರಾವರಿ ಬೆಳೀ ತೆಗೆಯೋ ಯೋಗ್ಯ ಪದ್ಧತಿ ಬಗ್ಗೆ ಮಾಹಿತಿ ಕೊಡೋ ಕಾರ್ಯಕ್ರಮ ಅದು'. ಕಾರು ನಿಲ್ಲಿಸುವ ಆಲೋಚನೆಯಲ್ಲಿ ಶ್ರೀಧರನಿಗೆ ಅಶೋಕ ಹೇಳಿಧ ರೈತರ ವಿಚಾರ ತಲೆಯೊಳಗೆ ಹೊಕ್ಕಲೇ ಇಲ್ಲ. ಇಬ್ಬರೂ ಇಳಿದು ಗೇಟು ತೆರೆದ ಸದ್ದಿಗೆ ಶ್ರೀಧರನ ಪತ್ನಿ ಬಂದು ಬಾಗಿಲು ತೆರೆದಳು. ಕಂಪೌಂಡಿನ ಲಾನ್ ಒಣಗಿದ ಪರಿ ಕಂಡು ಪಕ್ಕದಲ್ಲಿದ್ದ ಕಾರಂಜಿಯನ್ನು ವೀಕ್ಷಿಸುತ್ತ ಅಶೋಕ 'ಯಾಕಲೇ ಕಾರಂಜಿ ಬಂದ್ ಇಟ್ಟೀಯನ?' ಅಂತ ಕುತೂಹಲದಲ್ಲಿ ವಿಚಾರಿಸಿದ್ದ. 'ನಮ್ ಅಪ್ಪನ ಕಾಲಕ್ಕ ಎಲ್ಲಾ ಸರೀ ಇತ್ತಪಾ, ಅವರ ಹೋಗಿ ಆರ್ ವರ್ಷಾತು ನೋಡು, ಹುಲ್ಲೀಗ ನೀರ ಉಣಸವ್ರ ದಿಕ್ಕಿಲ್ಲ'. 'ಹಂಗವ್ರ ಹ್ಯಾಂಗಲೇ, ಯಾರ್ನರ ಹಚ್ಕೊಬೇಕೋ ಬ್ಯಾಡೊ?' 'ಕೆಲಸದವ್ರ? ತಿಂಗಳೀಗ ಆರ್ ಸಾವ್ರ ಕೇಳ್ತಾರಪಾ' ಅಂತೆಲ್ಲ ಮಾತಾಡುತ್ತಲೇ ಒಳಗೆ ಎಂಟ್ರನ್ಸಿನಲ್ಲಿ ಬಂದು ಕೂತಿದ್ದರು ಇಬ್ಬರೂ. ಶ್ರೀಧರ ತನ್ನ ಶೂ ಬಿಚ್ಚುತ್ತಿದ್ದಾಗ, ಅಶೋಕ ಅಲ್ಲೇ

ಹೊಟ್ಟೆಯಲ್ಲಿ ಏನೋ ತಳಮಳವಾದಂತೆ ಅನಿಸಿತು ತುಳಜಕ್ಕನಿಗೆ. ಮರುಕ್ಷಣವೇ 'ಅಯ್ಯೋ ನಂದಿನ್ನೂ ಊಟಾನ ಆಗಿಲ್ಲ' ಎಂಬ ಅರಿವು ಥಟ್ಟನೆ ಅವಳ ಮನಃಪಟಲದಲ್ಲಿ ಮೂಡಿತು. ಎದುರಿಗೇ ಶ್ರೀಧರ ಡೈನಿಂಗ್ ಟೇಬಲ್ಲಿನಲ್ಲಿ ಕೂತು ಉಣ್ಣುತ್ತಿದ್ದಾನೆ, ಎಂಥದೋ ಸಂಕಟ. ನನ್ನನ್ನು ಈಗ ಕರೆದಾರು, ಆಗ ಕರೆದಾರು, ಕಾದೇ ಕಾದಳು. ಉಹ್ಞು, ಕೊನೆಗೂ ಕರೆಯಲೇ ಇಲ್ಲ, ಹಸಿವೆಯಿಂದಲೋ ಅಥವಾ ಎರಗಿದ ಅವಮಾನದಿಂದಲೋ ತುಳಜಕ್ಕ ಹಲ್ಲುಮುಟ್ಟಿಗೆ ಕಟ್ಟಿ ಅಳು ನುಂಗಿಕೊಳ್ಳುತ್ತ ಸೋಫಾದಲ್ಲಿ ನಿಸ್ತೇಜಳಾಗಿ ಆಸೀನಳಾಗಿದ್ದಳು.

ಇರುವ ಪತ್ರಿಕೆಯೊಂದನ್ನು ಎತ್ತಿಕೊಂಡಿದ್ದ.

ಹಾಗೇ ಒಳನಡೆದ ಶ್ರೀಧರ ತನ್ನ ಪತ್ನಿಯ ಬಳಿ 'ನಮ್ ದೋಸ್ತ ಅಶೋಕ ಬಂದಾನ, ಊಟಾ ಆಗೇತಂತ ಅವಂದು, ನನಗ ನೀಡು, ಆಮ್ಯಾಗ ಇಬ್ರೀಗೂ ಚಾ ಮಾಡೂವಂತಿ' ಅಂದದ್ದು ಹೊರಗೆ ಅಶೋಕನಿಗೆ ಕೇಳಿತು. ತನ್ನ ಕೋಣೆಗೆ ನಡೆಯುತ್ತ ಶ್ರೀಧರ ಅಲ್ಲೇ ಕುಳಿತಿದ್ದ, ಚಿನ್ಮಯಿ ಶಾಲೆಯಲ್ಲಿ ಐದನೇ ಕ್ಲಾಸಿನಲ್ಲಿ ಓದುತ್ತಿರುವ ತನ್ನ ಒಬ್ಬನೇ ಮಗ ಯುವಿಯ ಬದಿಗೆ ತಿರುಗಿ 'ಏ ಬಹಾದ್ದೂರ್, ನಾಳಿ ಎಕ್ಸಾಮ?' ಅಂತ ಕೇಳಿದ್ದ. ಅವನು 'ಹ್ಞೂ ಪಪ್ಪಾ' ಅಂದಿದ್ದು ಹೊರಗೆ ಕೂತ ಅಶೋಕನವರೆಗೂ ಕೇಳಿತು. ಎಂಟ್ರನ್ಸಿಗೆ ಒಮ್ಮೆ ಹಣಕಿ ಹಾಕುತ್ತ ಮೀರಾ, 'ಕುಡಿಯಾಕ ನೀರರ ಕೊಡಲೆನ ನಿಮಗ?' ಅಂತ ವಿಚಾರಿಸಿದ್ದಳು. 'ಬ್ಯಾಡ ವೈನಿ, ಆಮ್ಯಾಗ ಚಾನ ಕೊಡೂವಂತ್ರಿ' ಎಂದು ನಿರಾಕರಿಸಿದ ಅಶೋಕ ಪತ್ರಿಕೆಯಲ್ಲಿ ಕಣ್ಣಾಡಿಸುತ್ತಲೇ.

ಮನೆ ಬಟ್ಟೆ ತೊಟ್ಟು ಹೊರಬಂದ ಶ್ರೀಧರ ಅಶೋಕನನ್ನು 'ಏ ಅಶೋಕ್ ಇಲ್ಲೇ ಬಾರಲೇ, ಟೀವಿ ನಿವ್ಸ್ ನೋಡ್ಕೋತ ಕೂಡೂವಂತಿ, ನಾ ಉಣ್ತೇನಿ' ಅಂತ ಒಳಗೇ ಆಹ್ವಾನಿಸಿದ್ದ.

ಅಶೋಕ ಒಳಗೆ ಬರುತ್ತಿದ್ದಂತೆಯೇ ಶ್ರೀಧರನ ತಾಯಿ ಅರವತ್ತೈದರ ತುಳಜಕ್ಕ ಅಲ್ಲೇ ವರಾಂಡಾದ ಸೋಫಾದಲ್ಲಿ ಮಲಗಿದ್ದವಳು ಯಾಕೋ ದಡಗ್ಗನೆ ಎದ್ದು ಕೂತಳು. ಶ್ರೀಧರ ದಿನದ ರೂಢಿಯಂತೆ 'ಅವ್ವ, ನಿನ್ನ ಊಟ?' ಅಂತ ಕೇಳಿದ್ದನಷ್ಟೇ, ಅವ್ವನಿಂದ ಏನು ಉತ್ತರ ಬಂತು ಎಂಬುದನ್ನು ಆಲಿಸುವ ಗೊಡವೆಗೂ ಹೋಗಿರಲಿಲ್ಲ. ಮಗ ಮನೀಗ ಬಂದ ಅಂದರ ಈಗ ಮೂರೂವರೀನೊ ನಾಕೋ. ಹೊಟ್ಟೆಯಲ್ಲಿ ಏನೋ ತಳಮಳವಾದಂತೆ ಅನಿಸಿತು ತುಳಜಕ್ಕನಿಗೆ. ಮರುಕ್ಷಣವೇ 'ಅಯ್ಯೋ ನಂದಿನ್ನೂ ಊಟಾನ ಆಗಿಲ್ಲ' ಎಂಬ ಅರಿವು ಥಟ್ಟನೆ ಅವಳ ಮನಃಪಟಲದಲ್ಲಿ ಮೂಡಿತು. ಎದುರಿಗೇ ಶ್ರೀಧರ ಡೈನಿಂಗ್ ಟೇಬಲ್ಲಿನಲ್ಲಿ ಕೂತು ಉಣ್ಣುತ್ತಿದ್ದಾನೆ, ಎಂಥದೋ ಸಂಕಟ. ನನ್ನನ್ನು ಈಗ ಕರೆದಾರು, ಆಗ ಕರೆದಾರು, ಕಾದೇ ಕಾದಳು. ಉಹ್ಞು, ಕೊನೆಗೂ ಕರೆಯಲೇ ಇಲ್ಲ, ಹಸಿವೆಯಿಂದಲೋ ಅಥವಾ ಎರಗಿದ ಅವಮಾನದಿಂದಲೋ ತುಳಜಕ್ಕ ಹಲ್ಲುಮುಟ್ಟಿಗೆ ಕಟ್ಟಿ ಅಳು ನುಂಗಿಕೊಳ್ಳುತ್ತ ಸೋಫಾದಲ್ಲಿ ನಿಸ್ತೇಜಳಾಗಿ ಆಸೀನಳಾಗಿದ್ದಳು.

ಸೊಸೆ ಆಗಲೇ ಊಟದ ಹೊತ್ತಿಗೆ ಎಬ್ಬಿಸಲೂ ಇಲ್ಲ, ಮತ್ತೀಗ ಕರೆಯುತ್ತಲೂ ಇಲ್ಲ, ಅಂದರೆ ಇವರು ನನ್ನನ್ನು ಮರೆತೇ ಬಿಟ್ಟಿರಬೇಕು. 'ನಾನರ ಸುಮ್ಮನಿದ್ದ್ ಏನ್ ಉಳಸೂದೈತಿ?' ಮೆಲ್ಲಗೆ ನರಳುತ್ತ 'ಸಿವ ಸಿವಾ' ಎನ್ನುತ್ತ ಎದ್ದವಳೇ ತುಳಜಕ್ಕ ಅಡುಗೆ ಮನೆಯಿಂದ ತನ್ನ ತಟ್ಟೆಯನ್ನು ತಂದು ಮಗನಿಗೆ ಎದುರಾಗಿ ಕೂಡುತ್ತ ಗಂಟಲು ಕಟ್ಟಿ ಬಂದು ದುಃಖ ಅಲ್ಲೇ ಒತ್ತರಿಸಿಕೊಳ್ಳುತ್ತ 'ಹಸಿವು ನಂಗೂ, ನಂಗೂ ರೊಟ್ಟೀ ನೀಡು' ಅಂದಿದ್ದಳು. 'ಏನ? ಅವ್ವ ಇನ್ನೂ ಉಂಡಿಲ್ಲ?' ಎಂಬ ದೊಡ್ಡ ದನಿ ತೆಗೆದ ಸದ್ದಿಗೆ ಶ್ರೀಧರನ ಹೆಂಡತಿ ಮೀರಾಗೂ ಒಮ್ಮೆಲೇ ಅಚ್ಚರಿ. ಅವಳು ತಡಬಡಾಯಿಸುತ್ತ ಬಂದು 'ಆವಾಗ ನೀಡ್ಕೋಂಡ್ ಉಂಡಿಲ್ಲೆನ ನೀವು?' ಎಂದು ಕೇಳಿದ್ದಕ್ಕೆ ತುಳಜಕ್ಕ 'ಎಲ್ ಉಂಡೇನಿ? ಹಸೀವಾಗಿ ತಲಿ ಚಕ್ರ್ ಬರಲಿಕತ್ತದ ನನಗ' ಎನ್ನುತ್ತ ದುಃಖ ಉಮ್ಮಳಿಸುತ್ತಲೇ ಹೇಳಿದ್ದಳು.

ಶ್ರೀಧರನ ಕೋಪ ಈಗ ಕ್ಷಣಕ್ಷಣಕ್ಕೂ ಏರುತ್ತಲೇ ಹೋಯಿತು. 'ಯಾಕ ನೀ ಉಣ್ಣೂ ಮುಂದ ಅವ್ವಗ ಕೇಳ್ದನ ಉಂಡೆನ?' ಕಣ್ಣು ಕೆಕ್ಕರಿಸಿಕೊಂಡು ಪತ್ನಿಯನ್ನು ತರಾಟೆಗೆ ತೆಗೆದುಕೊಂಡ. 'ಯುವೀ ಶಾಲೀಂದ ಟೀಚರ್ರು ಫೋನ್ ಬಂದಿತ್ರಿ, ಅವ್ನ ನೋಟ್ಸ ಎಲ್ಲಾ ಫೋಟೋ ಹೊಡ್ಕೊಂಡ್ ಹೋಗ್ರಿ ಅಂತ ಕರದಿದ್ರು, ಅಲ್ಲಿಂದ್ ಬರಾಕನ ಎರಡ ಹೋಡೀತು, ಹೋಗೂ ಮುಂದ ಹೇಳೇಹೋಗೇನಿ ಅವ್ರೀಗೆ, ಅಡ್ಗೀ ಎಲ್ಲಾ ಡೈನಿಂಗ್ ಟೇಬಲ್ ಮ್ಯಾಗ ಐತಿ, ನೀಡ್ಕೊಂಡು ಉಂಡ ಬಿಡ್ರೀ, ನನಗ ತಡಾ ಆಕ್ಕೇತಿ ಅಂತ' ಅಳುಮೋರೆಯಲ್ಲೇ ಹೇಳಿದ್ದಳು ಮೀರಾ. 'ಹೌದ? ಆಮ್ಯಾಗ್ ನೀ ಉಣ್ಣೂ ಮುಂದರ ಅತ್ತೀ ಉಂಡೀರನ? ಇಲ್ಲಿಕ್ರ್ ನೀಡ್ಲೆನ? ಅಂತ ಕೇಳೂ ಪದ್ಧತಿ ಐತೋ ಇಲ್ಲ?' ಊಟ ಮಾಡುವುದನ್ನು ನಿಲ್ಲಿಸಿಯೇ ಬಾಯಿ ಮಾಡತೊಡಗಿದ್ದ ಶ್ರೀಧರ. 'ಅತ್ತೀ ನಾ ಬಂದಾಗ ಮಕ್ಕೊಂಡಿದ್ರು, ಅದ್ಕ ಅವ್ರ್ ಉಂಡೇ ಮಲಗ್ಯಾರ ಅಂದ್ಕೊಂಡೆ' 'ರೊಟ್ಟೀ ಖಾಲೀ ಆಗ್ಯಾವೋ ಇಲ್ಲೋ ಅದನ್ನರ ನೋಡಿ ಗೊತ್ತಾಗಿಲ್ಲೆನ?' 'ನಾ ರೊಟ್ಟೀ ಎಣಸಾಕ ಹೋಗಿಲ್ಲ' 'ಮತ್ ಮಾತಾಡಾಕ ಹೋಗ್ಬಾಡ್ ನೀ, ನಿಮ್ ತವರಿನ್ಯಾಗ ನಿಮ್ ಅವ್ವಗ ಹೀಂಗ್ ಆದಾಗನ ನಿನಗ ಅರ್ಥಾ ಆಕ್ಕೇತಿ' ತುಳಜಕ್ಕ ಸುಮ್ಮನೇ ತಲೆ ಹಣಕಿ ರೊಟ್ಟಿ ಮೆಲ್ಲಗೆ ಅಗಿಯುತ್ತಿದ್ದರು.

'ಎಂಥಾ ಕಾರಣ ಕೊಡ್ತೀ ನೋಡ್ ನೀ, ಮನುಷ್ಯತ್ವ ಅನ್ನೂದು ಏನರ ಐತೆನ ನಿನಗ?' ಮೀರಾ ಅತ್ತಿಯ ಬದಿ ಒಮ್ಮೆ ನೋಡಿ 'ನೀಡ್ಕೊಂಡು ಉಣಬೇಕಿಲ್ರಿ? ಸುಮ್ನ ನನಗ ಬೈಸಾಕ ಹಚ್ತೀರಿ' 'ಅವ್ವಗ ಏನರ ಅಂದ್ರ ತಲೀನ ಒಡೀತೇನಿ, ತಪ್ಪಾಗೇತಿ ಅಷ್ಟ ಹೇಳ್ ನೀ ಬಾಯ್ಮುಚ್ಕೊಂಡು, ಇಲ್ಲದ ಕಾರ್ಣ ಕೊಡಾಕ ಹೋಗ್ಬ್ಯಾಡ , ನನ್ ಸಿಟ್ ನೆತ್ತೀಗೇರ್ತಂದ್ರ ನಾ ಮನಷ್ಯಾನ ಅಲ್ ನೋಡ್ ಮತ್ತ' 'ಈವತ್ ನನಗೂ ಯುವೀ ಟೆನ್ಶನ್ ಇತ್ತಲ್ರೀ' ಪಟ್ಟು ಬಿಡದೇ ಗೊಣಗಿದಳು ಮೀರಾ.

'ಗೆಳತ್ಯಾರ ಜೋಡಿ ಫೋನಾಗ ಮಾತೀಗೆ ಬೇಕಂದ್ರ್ ಸಾಕಷ್ಟ್ ಟೈಮ್ ಇರ್ತೇತಿ ನಿನಗ' ಎನ್ನುತ್ತ ಶ್ರೀಧರ ಊಟಬಿಟ್ಟೇ ಎದ್ದು ನಿಂತಿದ್ದ. 'ನೀವ್ ಉಣ್ರಿ, ತಪ್ಪಾತು, ಇನ್ ಮುಂದ ಹೀಂಗ್ ಮಾಡಾಂಗಿಲ್ಲ' 'ಹೀಂಗ್ ಮಾಡಂಗಿಲ್ಲ ಅಲ್ಲ, ಮಾಡಾಕ ಬಾರ್ದು, ಇಲ್ಲಿಕ್ರ ನನ್ ಅವ್ವನ್ನ ನಾ ನೋಡಕೋತೇನಿ, ನೀ ಎಲ್ಲೀಗ್ ಹೋಗ್ತೀಯೋ ಹೋಗ್ಬಿಡು' ಎಂಥದೋ ತಿಳಿವಳಿಕೆಗೇ ಹತ್ತದ ಪ್ರಶ್ನೋತ್ತರಗಳನ್ನು ಬಾಯಿಪಾಠ ಮಾಡುತ್ತಿದ್ದ ಯುವಿಗೆ ಅಕ್ಕ ಪಕ್ಕದ ಮನೆಮಕ್ಕಳ ಜೊತೆ ಆಟವಾಡಲು ಹೊರ ಹೋಗುವವನನ್ನು ನಾಳೆ ನಡೆವ ಎಕ್ಸಾಮಿನ ಸಲುವಾಗಿ ಮೀರಾ ಒಂದಿಷ್ಟು ಅಭ್ಯಾಸ ಕೊಟ್ಟು ಅವನನ್ನು ಮನೆಯಲ್ಲೇ ಹೀಗೆ ಕೂಡಿ ಹಾಕಿದ್ದಳು. ಮನೆಯ ಈ ರಂಪಾಟವನ್ನು ನೋಡುತ್ತ ಯುವಿ ಅಭ್ಯಾಸವನ್ನೂ ಮರೆತು ಆತಂಕಗೊಂಡು ಕೂತುಬಿಟ್ಟ.

ಒಂದು ಸಂಸಾರದ ಕಸಿವಿಸಿಗಳು ಖಾಸಗೀತನಗಳು ಒಬ್ಬ ಅಪರಿಚಿತನ ಎದಿರು ಸುರುಳಿ ಸುರುಳಿಯಾಗಿ ಆ ದೊಡ್ಡ ವಿಶಾಲ ವರಾಡದ ತುಂಬ ಪ್ರತಿಧ್ವನಿಸುತ್ತಿದ್ದವು.

ಅಶೋಕ ಸಣ್ಣಗೆ ಟೀವಿ ಹಚ್ಚಿಕೊಂಡು, ತುಳಜಕ್ಕ ಮಲಗಿ ಎದ್ದ ಸೋಫಾ ಪಕ್ಕದಲ್ಲಿದ್ದ ಕುರ್ಚಿಯಲ್ಲಿ ಕೂತು ಇವೆಲ್ಲವನ್ನೂ ಕಡೆಗಣ್ಣಲ್ಲೇ ಗಮನಿಸುತ್ತ, ಮೂಕ ಪ್ರೇಕ್ಷಕನಂತೆ ಕೇಳುತ್ತಿದ್ದರೂ, ನಾನೇಕೆ ಈವತ್ತು ಇಲ್ಲಿ ಬಂದು ಸಿಕ್ಕಿಹಾಕಿಕೊಂಡೆನೋ ಎಂಬ ವಿಷಾದದ ಭಾವ ಮನಸ್ಸನ್ನು ಆವರಿಸಿಕೊಂಡಿತ್ತು.

ಅಶೋಕನಿಗೂ ಬೇರೊಬ್ಬರ ಮನೆಯ ವಿಷಯದಲ್ಲಿ ತಾನು ತಲೆಹಾಕಬೇಕೋ ಬೇಡವೋ ತಿಳಿಯದೇ, ಅಲ್ಲಿಂದೆದ್ದು ಹೊರ ನಡೆಯಬೇಕೆಂದುಕೊಂಡವ, ಅವರೇನು ತಿಳಿದುಕೊಳ್ಳುತ್ತಾರೋ ಅನ್ನಿಸಿ ಪುನಃ ಅಲ್ಲೇ ಕುಳಿತ. ಅಂತೂ ಸಂದಿಗ್ಧತೆಯಲ್ಲೇ ಅವ್ವ ಮಗನ ಊಟ ಮುಗಿದಿತ್ತು. ಇತ್ತ ಶ್ರೀಧರನಿಗೂ ಈ ಪ್ರಕರಣದಿಂದ ಆಳದಲ್ಲೆಲ್ಲೋ ಭಾವನಾತ್ಮಕ ಹೊಡೆತ ಬಿದ್ದಂತೆ ಆಗಿತ್ತು. ಆಗಾಗ ಒಂದು ರೀತಿಯ ಅಖಂಡ ಮೌನವೇ ಆ ಎಲ್ಲ ಸಂದರ್ಭವನ್ನು ಆಳುತ್ತಿತ್ತು.

ಶ್ರೀಧರ ಮತ್ತು ಅಶೋಕ ಇಬ್ಬರೂ ಮುಖ ಮುಖ ನೋಡುತ್ತ ಸುಮ್ಮನೆ ಕೂತಿದ್ದಾಗಲೇ ಚಹ ಮಾಡಿ ಇಬ್ಬರಿಗೂ ತಂದು ಕೊಟ್ಟಳು ಮೀರಾ. ಸದ್ದಿಲ್ಲದೇ ಅತ್ತು ಅವಳ ಕಣ್ಣುಗಳು ಊದಿಕೊಂಡಿದ್ದನ್ನು ಅಶೋಕ ನೋಡಿದರೂ ನೋಡದವರ ಹಾಗೆ ನಟಿಸಿದ. ಎರಡು ಸಮಾಧಾನದ ಮಾತುಗಳಿಗೂ ಅವನ ಬಾಯಿ ಕಟ್ಟಿಹೋಗಿತ್ತು. ತುಳಜಕ್ಕ ಉಂಡೆದ್ದು ಆಗಲೇ ತಮ್ಮ ಕೋಣೆಗೆ ಹೋಗಿ ಮಲಗಿಬಿಟ್ಟಿದ್ದರು. ಅದೂ ಒಂದು ಹಿರಿಯ ಜೀವ, ಅಶೋಕನಿಗೂ ಒಳಗೆಲ್ಲೋ ಕರುಳು ಚುರ್ ಅಂತು.

ಕುಡಿದು ಮುಗಿದ ಚಹದ ಕಪ್ಪು ಕೆಳಗಿರಿಸುತ್ತ ಅಶೋಕ 'ರಾತ್ರಿ ಎಂಟಕ್ಕ ಅಂಗಡೀ ಕಡೆ ಬರತೇನಿ' ಅಷ್ಟೇ ಹೇಳಿ ಎದ್ದುನಿಂತು ಹೊರಡಲನುವಾದ.

'ಅದೆಲ್ಲಾ ಖರೆ, ಜೀವನಕ್ಕ ಈ ಎಲ್ಲಾ ಜಡ ವಸ್ತುಗಳು ದುಡ್ಡಿದ್ರ ಸುಲಭದಾಗ ಸಿಕ್ಕಬಿಡ್ತಾವು, ಆದ್ರ ಅವರೂ ನಮ್ಮಂಗ ಏನೇನೋ ಸಾಧನಿ ಮಾಡಬೇಕು, ಏನೇನೋ ಕೆಲ್ಸಾ ಮಾಡಬೇಕು, ಸ್ವತಂತ್ರವಾಗ್ ಬದ್ಕಬೇಕು ಅಂತ ಆಶಾ ಇಟೊಂಡಿರತಾರ, ಅವರ ತಂದಿತಾಯಿ ಇವರ್ನ ಮದ್ವಿ ಸಲ್ವಾಗೇ ಬೆಳಸಿದ ಹಂಗ ನಿನ್ನಂಥವರೀಗೆ ಜೋಡಿ ಮಾಡಿ ಕೈಬಿಟ್ ಬಿಡ್ತಾರ, ಆತಪಾ ಅಂದ್ರ ನೀವರ ಅವರ ಆಶೀ ಆಕಾಂಕ್ಷ ಕೇಳ್ತೀರಿ? ಅದೂ ಇಲ್ಲ, ಕಂಫರ್ಟೇಬಲ್ ಆಗಿ ಇರಾಕ ಬಿಡ್ತೀರನ ಅವರ್ನ?'

ಅವನನ್ನು ತಡೆಯುತ್ತ ಶ್ರೀಧರ 'ಹೋಗುವಂತಿ ತಡಿಯೋ, ನಾನೂ ಹೊರಟ ಬಿಡ್ತೇನಿ, ನಿನ್ ಎಲ್ ಬಿಡಬೇಕೋ ಬಿಡತೇನಿ ತೊಗೊ' ಅನ್ನುತ್ತ ಒಳಹೋಗಿ ಬಟ್ಟೆ ಬದಲಿಸಿ ಅತ್ತ ಹೆಂಡತಿ ಮಗನ ಬದಿ ತಿರುಗಿಯೂ ನೋಡದೇ ತಾನೇ ಬಾಗಿಲು ಎಳೆದುಕೊಂಡು ಅಶೋಕನೊಂದಿಗೆ ಹೊರಬಂದ. ಕಾರು ಮತ್ತೆ ಸ್ಟಾರ್ಟಾಯಿತು. ಇಬ್ಬರೂ ಸ್ವಲ್ಪ ಹೊತ್ತು ಸುಮ್ಮನೇ ಉಳಿದರು.

'ಏನ್ ಮಾಡೂದೋ ಅಶೋಕ, ಬ್ಯಾಸರಾಗ ಬಿಟ್ಟೇತಿ, ಹೆಂಡ್ತೀ ಮುಖಾ ನೋಡಾಕ ವಲ್ಯ ಅನಸಾಕ ಹತ್ತೇತ್ ನೋಡ' ಅಂತ ಮಾತು ತೆಗೆದ ಶ್ರೀಧರನಿಗೆ ಅಶೋಕ ಅಲ್ಲೇ ಸುಧಾರಿಸುತ್ತ 'ಒಂದೊಂದ ಸತಿ ಹಾಂಗಕ್ಕಾವು, ಮರಿಯೂದು ಮನಷ್ಯಾನ ಸಹಜ ಸ್ವಭಾವ ಅಲ್ಲೆನ? ಸುಮ್ ಸುಮ್ನ ಹೀಂಗ ಬೀಪಿ ಏರಿಸಿಕೊಂಡು ಕೂಗಾಡಿದರ ಏನರ ಪ್ರಯೋಜ್ನ ಐತೆನ?' 'ಯಾರದೂ ತಪ್ ಇರಾಂಗಿಲ್ಲ, ಸಂಸಾರ ಅಂದ ಮ್ಯಾಗ ಇಷ್ಟ್ ಇರೂವ'

'ಹೆಣಮಕ್ಕ ಕೆಲಸಾನ ಮನೀ ಹಿರಿಯರ್ನ ಸರೀ ನೋಡ್ಕೋಳೊದಲ್ಲನ? ಹೊರಗ ಕಳಸಿ ದುಡಿಯಾಕ ಹಚ್ತೇವ ನಾವ?' 'ಅದನ್ನ ಮಾಡಿದ್ದ ಮಾಡೂದು, ಅವರೀಗೂ ಬ್ಯಾಸರಕಿ ಅನ್ನೂದು ಇರಂಗಿಲ್ಲನ?' 'ಹಾಂಗದ್ರ? ಈಗ್ ನಮಗ ಅಂಗಡೀಯೊಳಗ ದುಡದ ಬ್ಯಾಸರಕಿ ಬಂದೇತಂದ್ರ? ಬಿಟ್ ಬಿಡಾಕ ಆಕೇತನ? ಅಡ್ಜಸ್ಟ್ ಮಾಡ್ಕೊಂಡ್ ದುಡಿಯ ಬೇಕಲ್ಲನ?' 'ಹಂಗಲ್ಲಪಾ ನೀವು ಹುಷಾರಿಲ್ಲಂದ್ರ ಅಂಗಡೀ ಬಾಗ್ಲ ಮುಚ್ಚಿ ಒಂದ್ ದಿನಾ ಇಡೀ ಮನಿಯೊಳಗ ಮಕ್ಕೋತೀರಿ, ಅವರು? ಮಕೊಂಡರ ಸುಮ್ಮನ ಬಿಡತೀರಿ ನೀವು?' ಶ್ರೀಧರ ಇದ್ದಲ್ಲೇ ಗಪ್ಪಾದ. 'ಒಂದಿನಾ ಮಲಗೀದ್ಲೋ ಇಲ್ಲೋ, ಮಾರನೇ ದಿನಾ ನೀವ ಸಾಕ ಏಳ ಸಾಕ ಏಳ ಅಂತ ಶುರೂ ಮಾಡ್ತೀರಿ, ಮನೀ ಅಸ್ತವ್ಯಸ್ತ ಆಕ್ಕೇತಿ ಅವರ ಒಂದ ದಿನಾ ಮನೀ ಕೆಲ್ಸಾ ನೀಗಸಲಿಕ್ರ' ಶ್ರೀಧರ ಸುಮ್ಮನೇ ಕಾರು ಓಡಿಸುತ್ತಿದ್ದ.

'ಪಾಪ ಅವರ್ನೂ ಒಂಚೂರು ಅರ್ಥಾ ಮಾಡ್ಕೋಬೇಕಾಕ್ಕೇತಿ ನಾವು, ಈ ಮದ್ವಿ ಮಕ್ಕಳು ಸಂಸಾರ ಇದರಿಂದ ಅವ್ರೀಗ ಭಾಳ ಸುಖಾ ಐತಂತ ಮಾಡೀಯನ? ಪಾಪ ಬೇಕಂತ ಮರತಾರನ ವೈನಿ? ಈವತ್ ಒಂದಿನ ಏನೋ ತಪ್ ಆಗೇತಿ' 'ಹ್ಯಾಂಗ್ ತಪ್ ಆಕ್ಕೇತಲೇ ಅದ, ನಾಯೇನ್ ಕಮ್ಮಿ ಮಾಡೇನಿ ಆಕೀಗ, ಇಂಥದ್ ಬೇಕಂತ ಬಾಯಾಗ್ ಬರೂದ ತಡ ಸ್ಯಾಂಕ್ಷನ್ ಮಾಡೇ ಬಿಟ್ಟರತೇನಿ' ಬೇಸರದಿಂದಲೇ ಅಂದಿದ್ದ.

'ಅದೆಲ್ಲಾ ಖರೆ, ಜೀವನಕ್ಕ ಈ ಎಲ್ಲಾ ಜಡ ವಸ್ತುಗಳು ದುಡ್ಡಿದ್ರ ಸುಲಭದಾಗ ಸಿಕ್ಕಬಿಡ್ತಾವು, ಆದ್ರ ಅವರೂ ನಮ್ಮಂಗ ಏನೇನೋ ಸಾಧನಿ ಮಾಡಬೇಕು, ಏನೇನೋ ಕೆಲ್ಸಾ ಮಾಡಬೇಕು, ಸ್ವತಂತ್ರವಾಗ್ ಬದ್ಕಬೇಕು ಅಂತ ಆಶಾ ಇಟೊಂಡಿರತಾರ, ಅವರ ತಂದಿತಾಯಿ ಇವರ್ನ ಮದ್ವಿ ಸಲ್ವಾಗೇ ಬೆಳಸಿದ ಹಂಗ ನಿನ್ನಂಥವರೀಗೆ ಜೋಡಿ ಮಾಡಿ ಕೈಬಿಟ್ ಬಿಡ್ತಾರ, ಆತಪಾ ಅಂದ್ರ ನೀವರ ಅವರ ಆಶೀ ಆಕಾಂಕ್ಷ ಕೇಳ್ತೀರಿ? ಅದೂ ಇಲ್ಲ, ಕಂಫರ್ಟೇಬಲ್ ಆಗಿ ಇರಾಕ ಬಿಡ್ತೀರನ ಅವರ್ನ?'

ಗೆಳೆಯನ ಮಾತು ಆಲಿಸುತ್ತಲೇ ಶ್ರೀಧರ ಈಗ ಮಧ್ಯೆ ಬಾಯಿ ಹಾಕಿದ, 'ಬರೇ ಹೀಂಗ ನಿಂದ, ಯಾವಾಗಿದ್ರೂ ಹೆಣ್ಮಕ್ಕಳ ಬಾಜೂನ ಮಾತಾಡಾವ ನೀನ'. 'ಅರೆ, ಸತ್ಯಾ ಹೇಳಾಕಹತ್ತೇನೋ ಶ್ರೀ, ಇನ್ ಮುಂದ ಮುಂದ ಹೋದಂಗ ನೋಡ್ತಿರು, ಈ ಮದ್ವಿ, ಕುಟುಂಬ ಪದ್ದತಿ ಎಲ್ಲಾ ನಾಶ ಆಕ್ತಾವು, ಯಾಕಂದ್ರ ಇಲ್ಲಿ ಮುಖ್ಯ ನಡಿಯೂದ ಹೆಣ್ಮಕ್ಕಳ ಶೋಷಣಿ' 'ಅರೆ! ಹಂಗ ಅನಬ್ಯಾಡೋ ಅಶೋಕ, ನನಗ ಅಂಜಿಕಿ ಬರ್ತಾವು, ನಾನೂ ನನ ಮಗಾ ಟೆಕ್ಸ್‌ಟೈಲ್ ಎಂಜಿನಿಯರಿಂಗ್ ಮುಗ್ಸಿ ಬಂದು, ನಮ್ ಅಂಗಡೀನ ಹೊಸಾ ಥರದಾಗ ಡಿಸೈನ್ ಮಾಡ್ತಾನ, ಅವ್ನೀಗ ಮದ್ವಿ ಗಿದ್ವಿ ಮಾಡಿ ಸೊಸೀನ ಮನೀಗ ತಂದು ಆರಾಮ್‌ದಾಗ ಕೂತು ಟೀವಿ ಗೀವಿ ನೋಡ್ಕೋತ ವಾಕಿಂಗ್ ಮಾಡ್ಕೊಂಡ್ ಆಲ್ಸೇಸಿಯನ್ ನಾಯೀನ್ ಸಾಕ್ಕೊಂಡ್ ಇರೋ ಕನಸ ಕಾಣಾಕ ಹತ್ತೇನಿ ನಾ'

'ಇಂಥ ಕನಸ ಕಂಡ ನಿಮ್ಮಂಥೋರು ಮಕ್ಕಳ ಜೀವ್ನಾ ಹಾಳ ಮಾಡ್ತೀರಿ, ಅಂವಗ ಏನ್ ಆಗೂದೈತಿ ಅದನ್ನ ಆಗಲಿ ಅಂವ ಅಂತ ಬಿಟ್ರ ನೀ ಉಳ್ಕೋತಿಲೇ, ಇಲ್ಲಿಕ್ರ ಇದ ಹೀಂಗ ಮುಂದವರೀತೇತಿ, ಒಂದಿನಾ ನಿನ್ನ ಸೊಸೀ ನಿನ್ನ ಹೆಂಡತೀಗ ನೀಡಿಲ್ಲ ಅಂತ ಬ್ಯಾಸರ ಮಾಡ್ಕೋಳೋದು, ಆಮ್ಯಾಗ ಇಬ್ರೂ ಕೂಡೇ ಕೊರಗೋದು'

'ಏನರ ಹೇಳಿ ನನಗ ಸಮಾಧಾನ ಮಾಡ್ತೀ ಅಂದ್ರ ಇನ್ನಷ್ಟು ಚಿಂತೀ ತಂದಿಟ್ಟೀಯಲ್ಲಲೇ' ಅನ್ನುತ್ತ ನಿಟ್ಟುಸಿರು ಬಿಟ್ಟು ಕೂತ ಶ್ರೀಧರ ಪುನಃ ಹೇಳಿದ, 'ಜೀವ್ನದಾಗ ಮುಕ್ತಿ ಸಿಗಾಕ ಹೆಣತೀ ಮಕ್ಳು ಕಾರಣಾ ಆಕ್ಕಾರ ಅಂತ ಶಾಸ್ತ್ರನ ಐತೋ ಮಾರಾಯ' ಎಂದೋ ಯಾರೋ ಹೇಳಿದ ಶಾಸ್ತ್ರ ಕೆದಕಿದ ಶ್ರೀಧರ.

ಅಶೋಕನಿಗೆ ತಲೆ ಗಿರಕ್ ಅಂತು.'ಅ ವೆಲ್ಲ ಸುಳ್‌ಲೇ, ಸಮಾಜದಾಗ ಇರೋ ಸ್ವಾರ್ಥಿ ಮಂದಿ ತಂತಮ್ಮ ಸ್ವಾರ್ಥಕ್ಕ ಹೀಂಗ ಏನರೆ ಒಂದೊಂದ್ ಕಟ್ಕೊಂಡ್ ಹೇಳ್ತಾರ, ಸಂಸಾರ ಜಂಜಾಟದಾಗ ಇಡೀ ಆಯುಷ್ಯಾನ ಹೀಂಗ ಕಳೀ ಅಂತ ನಿಮ್ ಶಾಸ್ತ್ರದಾಗ ಹೇಳ್ಯಾರೆನ?'


'ಅಲ್ಲ ಅಶೋಕ ಈ ಜೀವನಾನ ಬ್ಯಾಸರಾಗೇತಿ ನೋಡ, ಮನಿಯೊಳಗ ನೋಡೀದ್ರ ಹೀಂಗ, ಅಂಗಡೀನರೆ ಬೇಸಂಗ ನಡೀತದಪಾ ಅಂದ್ರ, ಎದುರಗಡೆ ಶಾಪಿಂಗ್ ಮಾಲ್ ಶುರೂವಾದ್ ಮ್ಯಾಗ ನಮ್ಮಡಿ ವ್ಯಾಪಾರಾನ ಕಮ್ಮಿ ಮಾಡ್ಯಾರ ಮಂದಿ' ಗೋಳು ತೆರೆದಿಟ್ಟುಕೊಂಡಿದ್ದ ಶ್ರೀಧರ. 'ಇದ್ದಿದರಾಗ ತೃಪ್ತಿಯಿಂದ್ ಇರೂದ ಕಲೀಲೇ ಮೊದ್ಲೇಕ, ಇಲ್ಲಿಕ್ರ ಹೀಂಗ ಕಡೀತನಾ ಅತೃಪ್ತಿಯೊಳಗ ಸಾಯ್ತಿ'. 'ಅಲ್ಲೋ, ಅದೇನೋ ಹಬ್ಬದ ಡಿಸ್ಕೌಂಟ್ ಸುಡಗಾಡ ಶುಂಟಿ ಇಟಕೊಂಡ್ ಅವ್ರು ಗ್ರಾಹಕರನ್ನ ತಮ್ ಕಡೀ ಜಕ್ಕೋಳೂದ್ ನೋಡ್ ಅಂತೇನಿ'

'ಬರೇ ಇದ ಆತ್ ನಿಂದ, ಅಂಗಳ ಇಳದು ಆಕಾಶ ನೋಡಪಾ ಅಂದ್ರ, ನೀ ಏನ್ ಹಂಗ ಕಿಟಕ್ಯಾಗ್ ಕುಂತು ಆಕಾಶಕ ಹಣಕಾಂವ, ಏಟ್ ಆಕಾಶ ಕಂಡೀ ಹೇಳ?'

ಅಶೋಕನಿಗೂ ಹೇಳಿ ಹೇಳಿ ಸಾಕಾಯ್ತು. 'ಅಂದ್ರ?' ಅಂದಿದ್ದ ಪುನಃ ಶ್ರೀಧರ. 'ಅಂದ್ರ ಅಂತ ಅಂದ್ರ, ಅಂದ್ರ ನಿನ್ ತಲೀ' ಅಶೋಕನಿಗೆ ಈಗ ಸಿಟ್ಟು ಬಂದಿದೆ ಅಂತ ಯಾಕೋ ಶ್ರೀಧರನಿಗೆ ಅನಿಸಿದ್ದರಿಂದ ಇದ್ದಲ್ಲೇ ತುಸು ಮೌನವಾದ. ಆಗ ಅಶೋಕನೇ 'ಇಳಸ ಇಲ್ಲೇ, ನಾ ಆಮ್ಯಾಗ್ ಬರತೇನಿ ನಿನ ಅಂಗಡೀಕಡೆ' 'ಯಾಕ? ಈಗ ಒಯ್ದ್ ಬಿಡಲಾ' 'ಈಗ್ ನನ್ಕಡಿ ರೊಕ್ ಇಲ್ಲಲೇ, ನಂ ಸಂಘಟನಿ ಮೆಂಬರ್ ಯಾಕೋಬನ ಕಡೆ ಏಸ್ ಅದಾವ ನೋಡಿ ಇಸಕೊಂಡ್ ಬರತೇನಿ'. ಮತ್ತೆ ಒಂದು ನಿಮಿಷ ಮೌನವಾಗಿದ್ದ ಶ್ರೀಧರ. ಆ ಮೌನದಲ್ಲೇ ಅವನಿಗೆ ಅಮೂಲ್ಯವಾದದ್ದೇನೋ ಹೊಳೆದುಬಿಟ್ಟಿತ್ತು. ಕಾರು ಅಂಗಡಿಯನ್ನು ಸಮೀಪಿಸುತ್ತಿತ್ತು.

'ನೋಡ್ ಅಶೋಕ, ಒಂದ್ ಮಾತ್ ಹೇಳ್ತೇನಿ, ನನಗ ನಿಮ್ ಸಮಾಜಸೇವಾ ಗೀವಾ ಎಲ್ಲಾ ಗೊತ್ತಾಗಂಗಿಲ್ಲ, ಆದ್ರೂ ಇವತ್ ನೀ ಬಂದು, ಬಾಲಬಳಗದ ಅನಾಥ ಮಕ್ಕಳೀಗೆ ಸಮವಸ್ತ್ರಕ್ಕಂತ ಬಟ್ಟೆ ಕೇಳೀಯಲಾ, ದೇವರೀಗ್ ಕೊಟ್ಟಂಗ್ ಆತೂ ಅಂತ ಫ್ರೀ ಕೊಡ್ತೇನಿ, ಆಯ್ತ? ರೊಕ್ಕಾ ಗಿಕ್ಕಾ ಬ್ಯಾಡಾ, ನಮ್ ಅವ್ವನ ಹೆಸರಾಗ ತೊಗೊಂಡ್ ಹೋಗ್ ಬಾ' ಅಂದಿದ್ದ ಶ್ರೀಧರ. ಅಶೋಕನಿಗೆ ಒಮ್ಮೆಲೇ ದಿಗ್ಭ್ರಮೆಯಾಯಿತು. ಅಲ್ಲೇ ಸಾವರಿಸಿಕೊಂಡ. ಆದರೂ ಸಣ್ಣಗೆ ನಗುತ್ತಲೇ "ಹೀಂಗಂತಿ? ಏಸ್ ಲಗೂನ ಅಂಗಳಾ ಇಳದ ಆಕಾಶಾ ನೋಡಾಕ ಹತ್ತೀಲೇ" ಅನ್ನುತ್ತ ಅಚ್ಚರಿಯಿಂದಲೇ ಕಾರನ್ನು ಇಳಿದಿದ್ದ. ಶ್ರೀಧರ ಈಗ ಸಮಾಧಾನಚಿತ್ತನಾಗಿ ಕಾರನ್ನು ಪಾರ್ಕ ಮಾಡುತ್ತಿದ್ದ.

ಅಂಗಡಿಯ ಸೇಲ್ಸಮನ್ ರಾಜು ಅದಾಗಲೇ ಬಂದು ಷೆಟರ್ಸ್ ಏರಿಸಿ ಧೂಳು ಹೊಡೆಯುತ್ತಿದ್ದ. ಆದರೆ ಇಡೀ ಲೈನಿಗೇ ವಿದ್ಯುತ್ ಕಡಿತದಿಂದ ಅಂಗಡಿ ಕತ್ತಲೆಯಲ್ಲಿತ್ತು. ಇಬ್ಬರೂ ನಿಧಾನ ನಡೆಯುತ್ತ ಜೊತೆಯಾಗೇ 'ಸಿಂಧೆ ಕ್ಲಾಥ್ ಸೆಂಟರ್'ನ ಒಳಹೊಕ್ಕರು. ಅಂಗಡಿಯಲ್ಲಿ ಆ ಕ್ಷಣವೇ ಇದ್ದಕ್ಕಿದ್ದಂತೆ ವಿದ್ಯುತ್ತು ಬೆಳಗಿ ಎಲ್ಲೆಡೆ ಬೆಳ್ಳನೆ ಬೆಳಕು ಹರಡಿಕೊಂಡಿತು, ಇಬ್ಬರ ಮುಖದಲ್ಲೂ ಮಾಸದ ನಸುನಗು ಮಿನುಗಿತು.



(ಹುಬ್ಬಳ್ಳಿಯ ಸುನಂದಾ ಕಡಮೆಯವರು ಈಗ ಕನ್ನಡದ ಹೆಸರಾಂತ ಕಥೆಗಾರ್ತಿ, ಕವಯತ್ರಿ ಹಾಗೂ ಅಂಕಣಕಾರರು)


ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೆಣ್ಣುತನದ ಹಾಜರಿ-ಗೈರುಹಾಜರಿಗಳು

-ಡಾ. ಎಚ್.ಎಸ್. ರಾಘವೇಂದ್ರ ರಾವ್

ಪುರುಷರ ಬರವಣಿಗೆಯಲ್ಲಿರುವ ಪ್ರಭುತ್ವದ ಧೋರಣೆಯನ್ನು ಪ್ರಶ್ನಿಸದ ವಿಮರ್ಶೆಯು, ಹೆಣ್ಣುಮಕ್ಕಳ ಬರವಣಿಗೆಯಲ್ಲಿ 'ಸ್ತ್ರೀವಾದ'ದ ಅಬ್ಬರಗಳನ್ನು ಕಾಣಲು ತುದಿಗಾಲಿನಲ್ಲಿ ನಿಂತಿರುತ್ತದೆ. ಮಹಿಳೆಯರಲ್ಲಿ ಅನೇಕರು ಸ್ತ್ರೀಯರ/ಸ್ತ್ರೀವಾದದ ಪರವಾದ ವಕೀಲಿಯನ್ನು ವಹಿಸಿ, ಸಮಗ್ರ ಸತ್ಯವನ್ನು ಕಾಣಲು ನಿರಾಕರಿಸುತ್ತಾರೆ. ಬೇರೆ ಕೆಲವರು ಪುರುಷನಿರ್ಮಿತ ಮೀಮಾಂಸೆಯ ಚೌಕಟ್ಟಿನಲ್ಲಿ ಅವರಿಗೆ ಇಷ್ಟವಾಗುವಂತೆ ಬರೆಯುತ್ತಾರೆ. ಈ ಎರಡೂ ಧೋರಣೆಗಳ ಪರಿಣಾಮವಾಗಿ 'ಸಾಹಿತ್ಯಸೃಷ್ಟಿ'ಗೆ ಅಗತ್ಯವಾದ 'ಪೂರ್ಣದೃಷ್ಟಿ'ಯು ಸೊರಗುತ್ತದೆ. ಆ ರೀತಿಯ ಸಮತೋಲನದಲ್ಲಿ ಬರೆಯುವ ನಿಜವಾದ ಲೇಖಕಿಯರು ಯಾವ ಗುಂಪಿನ ಬೆಂಬಲವೂ ಇಲ್ಲದೆ ಸೊರಗುತ್ತಾರೆ.

ಸಾಹಿತ್ಯವು ಲೋಕವನ್ನು ಗ್ರಹಿಸುವ ಮತ್ತು ಪ್ರತಿನಿಧಿಸುವ ಬಗೆಯನ್ನು ಕುರಿತ ಚರ್ಚೆಗಳು ಮೊದಲಿನಿಂದಲೂ ಇವೆ. ಸಾಹಿತ್ಯಕ ಗ್ರಹಿಕೆಯು, ವ್ಯಕ್ತಿಯ ನೆಲೆಯಲ್ಲಿ ಹಾಗೂ ಸಮುದಾಯಗಳ ನೆಲೆಯಲ್ಲಿ ಎಷ್ಟರ ಮಟ್ಟಿಗೆ ತನ್ನನ್ನು ಮೀರಿ ಅನ್ಯವನ್ನು ಒಳಗೊಳ್ಳಬಲ್ಲುದು ಎನ್ನುವುದು ಕೇವಲ ಪ್ರಾಮಾಣಿಕತೆ ಮತ್ತು ವಸ್ತುನಿಷ್ಠತೆಗಳ ಪ್ರಶ್ನೆಯಲ್ಲ. ಆ ಸಾಮರ್ಥ್ಯವು ಲೇಖಕನ ಐಂದ್ರಿಯಿಕ ಅನುಭವ, ಅವನಿಗೆ ದಕ್ಕಿರುವ ಹಾಗೂ ಅವನು ರೂಢಿಸಿಕೊಂಡಿರುವ ಭಾಷೆಯ ಸ್ವರೂಪ, ಅವನ ಲೋಕದೃಷ್ಟಿ ಮುಂತಾದ ಹಲವು ಸಂಗತಿಗಳನ್ನು ಒಳಗೊಂಡಿರುತ್ತದೆ. ಇದೆಲ್ಲದರ ಜೊತೆಗೆ, ಕಲಾವಿದನು ತನ್ನ ಒಳಮನಸ್ಸಿಗೆ ಅಧೀನವಾಗಿ, ತರ್ಕ-ವೈಚಾರಿಕತೆಗಳ ಸೆನ್ಸಾರ್ ಅನ್ನು ಬದಿಗಿಟ್ಟಾಗ, ಅಪ್ರಯತ್ನಪೂರ್ವಕವಾಗಿ ಪಡೆದುಕೊಳ್ಳುವ ಲಿಂಗಾತೀತವಾದ ತಿಳಿವಳಿಕೆಯನ್ನು ಹೊಂದಿರುವ ಕೃತಿಗಳೂ ಇರುತ್ತವೆ. ಬೇಂದ್ರೆಯವರ ಹಲವು ಕವಿತೆಗಳನ್ನು, ಮಾಸ್ತಿಯವರ ಕಥೆಗಳನ್ನು ಹೀಗಲ್ಲದೆ ಬೇರೆ ಹೇಗೆ ವಿವರಿಸುವುದೂ ಕಷ್ಟ. ಇಂಥ ವಿಚಾರಗಳನ್ನು ಕುರಿತು ಯೋಚಿಸುವಾಗ, ಸಾಹಿತ್ಯರಚನೆಯ 'ಮನಶ್ಶಾಸ್ತ್ರ' ಮತ್ತು 'ಸಮಾಜಶಾಸ್ತ್ರ'ಗಳ ನಡುವೆ ಅಗತ್ಯವಾದ ಸಮತೋಲನ ತರುವ ಹೊಣೆಗಾರಿಕೆಯು ಬಹಳ ಮುಖ್ಯ. ಒಟ್ಟು ಕನ್ನಡ ಸಾಹಿತ್ಯದಲ್ಲಿ, ಅದರಲ್ಲಿಯೂ ಆಧುನಿಕ ಸಾಹಿತ್ಯದಲ್ಲಿ 'ಹೆಣ್ಣುತನ'ವು ಮೂಡಿಬಂದಿರುವ ಬಗೆಯನ್ನು ಕುರಿತ ಆಲೋಚನೆಗಳು ಕೂಡ ಈ ದಿಕ್ಕಿನಲ್ಲಿಯೇ ಚಲಿಸಬೇಕು. 'ಹೆಣ್ಣುತನ'ವನ್ನು 'ತಾಯಿತನ'ವೆಂದು ಕರೆಯುವುದರಲ್ಲಿಯೇ ನಿರ್ದಿಷ್ಟವಾದ 'ಲಿಂಗ ರಾಜಕೀಯ'ವು ಕೆಲಸ ಮಾಡಿರುತ್ತದೆ. ಏಕೆಂದರೆ ತಾಯಿತನವು ಒಟ್ಟು ಹೆಣ್ಣುತನದ ಒಂದು ಆಯಾಮವಾಗಬೇಕೇ ಹೊರತು ಅದರ ಸಮಗ್ರವೂ ಆಗಬಾರದು. ಹಾಗೆ ನೋಡಿದರೆ ಅಕ್ಕಮಹಾದೇವಿಯ ವಚನಗಳು ಬಹುಮಟ್ಟಿಗೆ ತಾಯ್ತನದ ಹಂಗು ತೊರೆದ ಹೆಣ್ತನವನ್ನೇ ಕಟ್ಟಿಕೊಟ್ಟಿವೆ. ಹೆಣ್ಣು ಏಕಾಂಗಿಯಾಗಿ ಕುಟುಂಬವನ್ನು, ಲೋಕವನ್ನು ಪೊರೆಯಬೇಕು(ಸಾಕಮ್ಮ) ಎನ್ನುವ ನಿರೀಕ್ಷೆಯೇ ಅವಳ ಪಾಲಿನ ಶಿಲುಬೆಯಾಗಿರುವ ಸನ್ನಿವೇಶವು ನಮಗೆ ಅಪರಿಚಿತವಲ್ಲ. ಬದಲಾಗಿ ಇಂಥ ಗುಣಗಳು ಗಂಡು ಮತ್ತು ಹೆಣ್ಣು ಇಬ್ಬರಲ್ಲಿಯೂ ಇರಬಹುದು/ಇರಬೇಕು ಎನ್ನುವ ತಿಳಿವಳಿಕೆಯು ಹೆಚ್ಚು ಸರಿಯಾದುದು.

ದೊಡ್ಡ ಸಾಹಿತಿಗಳು ತಮ್ಮದೇ ಆದ ಮಿತಿಗಳೊಳಗೆ ಈ ಸತ್ಯವನ್ನು ತೋರಿಸಿಕೊಟ್ಟಿದ್ದಾರೆ. ಒಂದು ಸಂಗತಿಯು 'ವಾಸ್ತವ' ಎನ್ನುವುದಕ್ಕೂ ಅದು 'ಸರಿ' ಎನ್ನುವುದಕ್ಕೂ ಬಹಳ ಅಂತರವಿದೆ. ಈ ಪೊರೆಯುವ ಹೊಣೆ/ಹೊರೆಗಳು ನಿಧಾನವಾಗಿ ಗಂಡು, ಹೆಣ್ಣುಗಳಿಬ್ಬರಲ್ಲಿಯೂ ಹಂಚಿಕೆಯಾಗುತ್ತಿರುವುದನ್ನು ನಾವು ಗಮನಿಸಬಹುದು. ಅಡಿಗೆಮಾಡುವ, ಪುಟ್ಟ ಮಕ್ಕಳ ಕುಂಡೆ ತೊಳೆಯುವ ಹಾಗೂ ಆ ಬಗ್ಗೆ ಯಾವುದೇ ಕೀಳರಿಮೆಯನ್ನು ಅನುಭವಿಸದ ತರುಣರು ನಮ್ಮ ಮನೆಗಳಲ್ಲಿಯೇ ಕಾಣಿಸಿಕೊಳ್ಳುತ್ತಿದ್ದಾರೆ. ಇಂದು ಅಪವಾದವೆನಿಸುವ ಈ ಆಚರಣೆಗಳು ನಾಳೆ ನಿಯಮವಾಗಬಹುದು. ಹೆಣ್ಣಿಗೆ ವಿದ್ಯಾಭ್ಯಾಸ, ಉದ್ಯೋಗ, ಸಂಪಾದನೆ, ಅದನ್ನು ಖರ್ಚುಮಾಡುವ ಸ್ವಾತಂತ್ರ್ಯ ಮುಂತಾದವು ಸಿಕ್ಕಹಾಗೆಲ್ಲ ಈ ಸನ್ನಿವೇಶವು ಹೆಚ್ಚು ವ್ಯಾಪಕವಾಗಬಹುದು. ಜೀವವನ್ನು ಕೊಲ್ಲುವುದು ಗಂಡುಗುಣ ಅದನ್ನು ಪೊರೆಯುವುದು ಹೆಣ್ಣುಗುಣ ಎನ್ನುವುದು ನಾವು ಮಾಡಿಕೊಂಡಿರುವ ಸಮೀಕರಣ. ದೇಹಸಹಜವಾದ ಅನಿವಾರ್ಯತೆಗಳಾಚೆಗೆ ಗಂಡಸರು ಕೂಡ ಸಲಹುವ, ಕಟ್ಟುವ ಗುಣಗಳನ್ನು ತಮ್ಮದೇ ಆದ ರೀತಿಯಲ್ಲಿ ಹೊಂದಿದ್ದಾರೆ. ಹಾಗೆಯೇ ಹೆಂಗಸರು ಕೂಡ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಿಂದ ಮುಕ್ತರಾದ ಸಂತೆಯರೇನೂ ಅಲ್ಲ. ಅವರು



ಮಾಸ್ತಿ ಕುವೆಂಪು ದ.ರಾ. ಬೇಂದ್ರೆ ಶಿ.ಕಾರಂತ


ಹಾಗೆ ಇರಬೇಕೆಂಬ ನಿರೀಕ್ಷೆಯೂ ಸರಿಯಲ್ಲ. ಇಪ್ಪತ್ತನೆಯ ಶತಮಾನವು ಕಂಡಿರುವ ಈ ಗತಿಶೀಲತೆಯನ್ನು ನಮ್ಮ ಸಾಹಿತ್ಯವು ಎಷ್ಟು ಮತ್ತು ಹೇಗೆ ಕಂಡರಿಸಿದೆ ಎನ್ನುವುದನ್ನು ವಿವರವಾಗಿ ನೋಡಬೇಕಿದೆ.

ಯಾವುದೇ ಚಿಂತನವಿಧಾನ ಅಥವಾ ಹಕ್ಕುಸ್ಥಾಪನೆಯ ಚಳುವಳಿಗಳು ಕಾಣಿಸಿಕೊಂಡಾಗ, "ಇದು ನಮ್ಮಲ್ಲಿ ಮೊದಲಿನಿಂದಲೂ ಇತ್ತು. ಇದರಲ್ಲಿ ಹೊಸದೇನೂ ಇಲ್ಲ." ಎಂಬ ಮಾತುಗಳು ಕೇಳಿಬರುತ್ತವೆ. 'ಪಂಪನೇ ಮೊಟ್ಟಮೊದಲ ಬಂಡಾಯ ಕವಿ', 'ಬಸವಣ್ಣನವರೇ ಸಮತಾವಾದದ ರೂವಾರಿ', 'ಬೇಂದ್ರೆಯವರು ಕೂಡ ನವ್ಯಕಾವ್ಯದ ಆದ್ಯರೇ' ಮುಂತಾದ ಆಕರ್ಷಕವಾದ 'ಅರೆ ಸತ್ಯ'ಗಳು ಪ್ರಚಲಿತವಾಗುತ್ತವೆ. ಹೆಣ್ಣುತನದ ಅಭಿವ್ಯಕ್ತಿಯನ್ನು ಕೂಡ ಮೊದಲಿನಿಂದ ಅಥವಾ ಎಲ್ಲೆಡೆಯೂ ಹುಡುಕುವ ಪ್ರಯತ್ನವೂ ಈ ಬಗೆಯದೇ. ಒಂದು ಭಾಷೆಯ ಬಹುದೊಡ್ಡ ಲೇಖಕರ ಸರ್ವಂಕಷವಾದ ಪ್ರತಿಭೆಯು ಈ ಗುಣಗಳನ್ನು ಒಳಗೊಳ್ಳುತ್ತದೆ ಎನ್ನುವುದು ನಿಜ. ಆದರೆ, ಆ ಪ್ರತಿಭೆ ಕೂಡ ತನ್ನ ಕಾಲದ ಚೌಕಟ್ಟಿನೊಳಗಡೆಯೇ ಕೆಲಸ ಮಾಡಿರುತ್ತದೆ. ಅದು ಆ ಸಂಗತಿಗಳನ್ನು ಗಂಡಿನ ಬಗ್ಗೆ ಹೇಳುವುದಕ್ಕೆ ಬಳಸುವ ವಿಧಾನಗಳಿಗೂ ಹೆಣ್ಣಿನ ಬಗ್ಗೆ ಹೇಳುವಾಗ ಬಳಸುವ ವಿಧಾನಗಳಿಗೂ ವ್ಯತ್ಯಾಸವಿರುತ್ತದೆ. ಉದಾಹರಣೆಗೆ ಟಾಲ್‌ಸ್ಟಾಯ್ ಅವರ 'ಆನಾ ಕೆರಿನಿನಾ' ಕಾದಂಬರಿಯಲ್ಲಿ ಲೆವಿನ್ ಪಾತ್ರದಲ್ಲಿ ಕಾಣಿಸುವ ಆಲೋಚನೆ ಮಾಡುವ ಆಯಾಮವು ಹೆಣ್ಣು ಪಾತ್ರಗಳಲ್ಲಿ ಕಾಣಿಸುವುದಿಲ್ಲ. ಆ ಹೆಣ್ಣು ಪಾತ್ರಗಳು ನಿಜವಾಗುವುದು ತಮ್ಮ ಕ್ರಿಯಾಶೀಲತೆಯ ಮೂಲಕವೇ ಹೊರತು ವೈಚಾರಿಕತೆಯ ಮೂಲಕ ಅಲ್ಲ. ಹಾಗೆಯೇ ಕುವೆಂಪು ಅವರ ಕಾದಂಬರಿಯ ಸೀತೆಯು ದುರದೃಷ್ಟಶಾಲಿಯಾದರೂ ಹೂವಯ್ಯನಿಗಿಂತ ಗಟ್ಟಿ ಪಾತ್ರವೆಂದು ಭಾಸವಾಗುವುದು ತನ್ನ ದಿಟ್ಟತನ ಹಾಗೂ ಕ್ರಿಯೆಯ ಮೂಲಕವೇ ಹೊರತು ಆಲೋಚನಾಪರತೆಯ ಮೂಲಕ ಅಲ್ಲ. ಆ ಕಾದಂಬರಿಗಳ ದೇಶ-ಕಾಲಗಳಲ್ಲಿ ಅದು ಸರಿಯೂ ಇರಬಹುದು. ಆದರೆ, ಹಾಗೆಂದು ಹೆಣ್ಣು ವೈಚಾರಿಕತೆಗೆ ಬಾಹಿರಳೆಂದು ತೀರ್ಮಾನಿಸುವುದು ನೂರಕ್ಕೆ ನೂರರಷ್ಟು. ಸಾಮಾಜಿಕ ಸನ್ನಿವೇಶಗಳ ಪರಿಣಾಮವಾಗಿ ಭಾಸವಾಗುವ ಯಾವ 'ಮಾನುಷಿಕ ಸತ್ಯ'ವೂ 'ಸಾರ್ವಕಾಲಿಕ ಸತ್ಯ'ವಲ್ಲ. ವಾಸ್ತವತೆಯಿಂದ ಸಾಧ್ಯತೆಗಳ ಕಡೆಗೆ ಮಾಡುವ ಪಯಣವಾಗಿಯೇ ಸಾಮಾಜಿಕ ಚಳುವಳಿಗಳನ್ನು ಗ್ರಹಿಸಬೇಕು. ಸಮಾಜವಾದವಾದರೂ ಅಷ್ಟೆ, ಸ್ತ್ರೀವಾದವಾದರೂ ಅಷ್ಟೆ. ಆದ್ದರಿಂದ ಇನ್ನು ಮುಂದೆ ಇಪ್ಪತ್ತನೆಯ ಶತಮಾನದ ಆಧುನಿಕ ಕನ್ನಡ ಸಾಹಿತ್ಯವು, ತನ್ನ ಬೆಳವಣಿಗೆಯ ಬೇರೆಬೇರೆ ಹಂತಗಳಲ್ಲಿ, ಪ್ರಕಾರಗಳಲ್ಲಿ ಒಳಗೊಂಡಿರುವ/ಹೊರಗಿಟ್ಟಿರುವ ಸ್ತ್ರೀತ್ವದ ಬಗೆಗಳನ್ನು ಪರಿಶೀಲಿಸಲಾಗಿದೆ. ಈ ಹುಡುಕಾಟದಲ್ಲಿ ಬರವಣಿಗೆಯ ಆಶಯಗಳಿಗೆ ಸಿಗುವಷ್ಟೇ ಮಹತ್ವವು ಅದರ ಆಕೃತಿಗಳಿಗೂ ಸಿಗಬೇಕೆಂಬುದು ನನ್ನ ಆಸೆ. ಗಂಡಸರು ಬಳಸುತ್ತಿದ್ದ ಹಾಗೂ ನೀವು ಕೂಡ

ಹೀಗೆಯೇ ಬರೆಯಬೇಕೆಂದು ಹೆಂಗಸರ ಮೇಲೆ ಹೇರಲಾದ 'ಸಾಹಿತ್ಯಿಕ ಆಕೃತಿಗಳು' ಅವರಿಗೆ ಸಂಕೋಲೆಗಳಾದವೇ ಎನ್ನುವುದು ಕೇಳಿಕೊಳ್ಳಬೇಕಾದ ಪ್ರಶ್ನೆ. ಸಹಜವಾಗಿಯೇ ನನ್ನ ಬರವಣಿಗೆಗೂ ನನ್ನದೇ ಗ್ರಹಿಕೆಯ ಮಿತಿಗಳಿರುತ್ತವೆ. ಲೇಖಕಿಯೊಬ್ಬರು ಇದನ್ನು ಬರೆದರೆ ಬೇರೆಬಗೆಯ ಒಳನೋಟಗಳು ಮೂಡಿಬರಬಹುದು.

ಬ್ರಾಹ್ಮಣೇತರರು ಮತ್ತು ಹೆಣ್ಣುಮಕ್ಕಳು ಸಾಹಿತ್ಯರಚನೆಯ ಪ್ರಧಾನಧಾರೆಯಿಂದ ಹೊರಗಡೆಯೇ ಉಳಿದಿದ್ದು ಇಪ್ಪತ್ತನೆಯ ಹಂತದ ಮೊದಲ ಅರ್ಧದ ಲಕ್ಷಣ. ಅವರುಗಳು ಸೃಷ್ಟಿಸಿದ ಸಾಹಿತ್ಯವು 'ಮಾರ್ಜಿನಲೈಸ್ಡ್' ಆಯಿತು ಎನ್ನುವುದು ವಾಸ್ತವ. ಇದು ನಿಜವಾದರೂ ಆಧುನಿಕ ಸಾಹಿತ್ಯದ ಬಹುಪಾಲು ಕೃತಿಗಳು 'ಹೆಣ್ಣು ಕೇಂದ್ರಿತ'ವಾಗಿದ್ದವು. ಹೆಣ್ಣು ಒಟ್ಟು ಬದುಕಿನಲ್ಲಿ ವಹಿಸುವ ಪಾತ್ರ, ಅವಳಿಗೆ ಆರೋಪಿತವಾದ ನಿಗೂಢತೆ, ಪ್ರೇಮ-ಕಾಮಗಳ ಸಂಬಂಧದ ಅರ್ಥದ ಹುಡುಕಾಟದಲ್ಲಿ ಲೇಖಕರಿಗೆ ಇರುವ ಆಸಕ್ತಿ ಮುಂತಾದ ಕಾರಣಗಳಿದ್ದವು. ಹೆಣ್ಣಿನ ಸಾಮಾಜಿಕ ವ್ಯಕ್ತಿತ್ವ ಮತ್ತು ಅವಳ 'ಒಳಬಾಳು'ಗಳು ಬೇರೆ ಬೇರೆ ಪ್ರಮಾಣದಲ್ಲಿ ಚಿತ್ರಿತವಾದವು. 'ಇಂದಿರಾಬಾಯಿ', 'ಇಂದಿರೆ', 'ವಾಗ್ದೇವಿ'ಯರಿಂದ ಮೊದಲಾಗಿ ಬೇಂದ್ರೆಯವರ ಹತ್ತಾರು ಕವಿತೆಗಳವರೆಗೆ, 'ಮರಳಿ ಮಣ್ಣಿಗೆ', 'ಹೆಗ್ಗಡಿತಿ', 'ಸಂಧ್ಯಾರಾಗ'ಗಳಿಂದ ಹಿಡಿದು ಮಾಸ್ತಿಯವರ ಕಥೆ-ಕಾದಂಬರಿಗಳವರೆಗೆ ಹೆಣ್ಣುಮಕ್ಕಳ ಬದುಕಿನ ಆಗುಹೋಗುಗಳು ಬಹಳ 'ಅನುಕಂಪ'ದಿಂದ, 'ಅಪರಾಧೀಭಾವ'ದಿಂದ ಚಿತ್ರಿತವಾಗಿವೆ. ಈ ಅಪರಾಧೀ ಭಾವವು ಲೇಖಕನು ಚಿತ್ರಿಸುವ ಸಮಾಜದ್ದೇ ಹೊರತು ಸ್ವತಃ ಲೇಖಕನದಲ್ಲ. ಅವನು ತನ್ನನ್ನು ಸುಧಾರಣಾವಾದಿಯಾದ, 'ಹೆಣ್ಣುಜೀವ'ದ ತುಡಿತ-ಮಿಡಿತಗಳನ್ನು ಬಲ್ಲ ಪ್ರತಿಭಾವಂತನೆಂದೇ ತಿಳಿದುಕೊಂಡಿದ್ದ. ಅವನು ಹೆಂಗಸರಿಗೆ 'ಪ್ರಾಕ್ಸಿ'ಯಾಗಲು ಪ್ರಯತ್ನಿಸಿದನೇ ಹೊರತು ಹೆಣ್ಣಾಗಿರಲಿಲ್ಲ. ಸ್ವತಃ ಅವನ ಸೃಜನಶೀಲತೆಯಲ್ಲಿ ಹೆಣ್ತನದ ಅಂಶಗಳು ಯಾರಲ್ಲಿ ಹೇಗೆ, ಎಷ್ಟು ಅಂತರ್ಗತವಾಗಿದ್ದವು ಮತ್ತು ಹೇಗೆ ಅವು ಕಾಲದಿಂದ ಬದಲಾದವು ಎನ್ನುವುದು ಇನ್ನೂ ವಿಶ್ಲೇಷಿಸಬೇಕಾದ ಪ್ರಶ್ನೆ. ಶಿವರಾಮ ಕಾರಂತರ ಕಾದಂಬರಿಗಳನ್ನು ಹೊರತುಪಡಿಸಿದರೆ, ಉಳಿದಂತೆ ಗಂಡನ್ನು 'ಉದಾತ್ತ'ನಾಗಿಯೋ 'ಉದ್ಧಾರಕ'ನಾಗಿಯೋ ಕಾಣುವುದು ಸಹಜವೆನಿಸಿತು. ಮಾಸ್ತಿಯವರ 'ವೆಂಕಟಿಗ', ಪು.ತಿ.ನ. ಅವರ ಅಹಲ್ಯೋದ್ಧಾರಕನಾದ ಶ್ರೀರಾಮ, 'ಆಡದಿರು ಮನದನ್ನೆ ಎನಗೆ ಇದಿರಾಡದಿರು' ಎಂದು ಹೇಳಿಸಿಕೊಳ್ಳುವ ಬೇಂದ್ರೆಯವರ 'ಮನದನ್ನೆ', 'ಮಾಡಿದುಣ್ಣೋ ಮಹಾರಾಯ'ದ ಪತಿವ್ರತೆ ಸೀತಮ್ಮ ಮುಂತಾದ ಹಲವು ಸನ್ನಿವೇಶಗಳನ್ನು ನೆನಪು ಮಾಡಿಕೊಳ್ಳಬಹುದು. ಹೆಂಗಸರನ್ನು ಮೆಚ್ಚಿಕೊಂಡಾಗಲೂ ಅವರ ತ್ಯಾಗ, ಸಹನೆ ಹಾಗೂ ಕುಟುಂಬಪೋಷಕ ಗುಣಗಳು ಮುನ್ನೆಲೆಗೆ ಬಂದವೇ ವಿನಾ ಅವರ ಸ್ವಂತ ವ್ಯಕ್ತಿತ್ವದ ಅಪೇಕ್ಷೆ, ಅಭೀಪ್ಸೆಗಳಲ್ಲ. 'ಸರಸಮ್ಮನ ಸಮಾಧಿ'ಯಂತಹ ಸಂಕೀರ್ಣ ಕಾದಂಬರಿಯನ್ನು ಬರೆದ ಕಾರಂತರು ಕೂಡ ಸಾಮಾನ್ಯವಾಗಿ ವಿದ್ಯಾವಂತ ಮಹಿಳೆಯರು ಹಾಗೂ ಉದ್ಯೋಗಸ್ಥ ಮಹಿಳೆಯರ ಬಗ್ಗೆ ಅಸಹನೆಯನ್ನೇ ತೋರಿಸಿದ್ದಾರೆ. 'ಹೆತ್ತಳಾ ತಾಯಿ', 'ಒಡಹುಟ್ಟಿದವರು' ಮುಂತಾದ ಕಾದಂಬರಿಗಳ ಮರು ಓದು ಈ ಅನಿಸಿಕೆಯನ್ನು ಸ್ಥಿರಗೊಳಿಸುತ್ತದೆ. 'ಧರ್ಮರಾಯನ ಸಂಸಾರ'ವನ್ನು ಹೊರತುಪಡಿಸಿದರೆ ಉಳಿದ ಕಡೆ ಅವರು ಒಪ್ಪಿತವಾದ ಸಾಮಾಜಿಕ ಮೌಲ್ಯಗಳ ಆಚೆಗೆ ಚಲಿಸುವ ಹೆಂಗಸರ ಬಗ್ಗೆ 'ಅಯ್ಯೋ' ಎಂದಿರುವುದು ಬಹಳ ಕಡಿಮೆ. 'ಮೈಮನಗಳ ಸುಳಿಯಲ್ಲಿ' ಕಾದಂಬರಿಯ ಕೇಂದ್ರದಲ್ಲಿ ಒಬ್ಬ ವೇಶ್ಯೆ ಇರುವುದು ಕೇವಲ ತಾಂತ್ರಿಕ ಅವಶ್ಯಕತೆಯಲ್ಲ. ಮಂಜುಳೆಯ ಜಾಗದಲ್ಲಿ ಒಬ್ಬ ಗೃಹಿಣಿಯನ್ನು ಊಹಿಸಿಕೊಳ್ಳುವುದು ಕೂಡ ಕಾರಂತರಿಗೆ ಸಾಧ್ಯವಿರಲಿಲ್ಲ. (ಈಗ ನನಗೆ ವೀಣಾ ಶಾಂತೇಶ್ವರ ಅವರ 'ಗಂಡಸರು' ಕಾದಂಬರಿ ನೆನಪಾಗುತ್ತಿದೆ.) ಮಾಸ್ತಿಯವರ ಬಹಳ ಪ್ರಸಿದ್ಧವಾದ 'ಗೌತಮಿ ಹೇಳಿದ ಕಥೆ'ಯಲ್ಲಿ ಮಾಲಿನಿಯ ಯೌವನವನ್ನು ಕಾಡುಬೆಳುದಿಂಗಳಿನಂತೆ ವ್ಯರ್ಥವಾಗಿಸಿದ ಭಾರದ್ವಾಜನನ್ನು ಓದುಗರು ಕೂಡ ಮೆಚ್ಚಿಕೊಳ್ಳುವಂತೆ ಮಾಡುವ ಕಲಾಕೌಶಲ್ಯ ಕೂಡ ನೆನಪಿಗೆ ಬರುತ್ತದೆ.

ಸಾಹಿತ್ಯ ಕೃತಿಯ ಕಲಾತ್ಮಕತೆಯು ಅದರ ಆಶಯಗಳ ಪರಿಮಿತಿಗಳನ್ನು ಮರೆಯಲು, ನಿರ್ಲಕ್ಷಿಸಲು ಕಾರಣವಾಗಬಾರದು. ಈ ವಿಷಯದಲ್ಲಿ ಕುವೆಂಪು ಅವರನ್ನು ಬಹಳ ಎಚ್ಚರದಿಂದ ಓದಬೇಕಾಗುತ್ತದೆ. ಅವರ ಬರವಣಿಗೆಯ ಬದುಕಿನ ಬೇರೆ ಬೇರೆ ನೆಲೆಗಳಲ್ಲಿ ಅವರ ನಿಲುವುಗಳು ಬದಲಾದಂತೆ ಕಾಣುತ್ತದೆ. ಅವರು ರವೀಂದ್ರರನ್ನು ಓದಿದವರೇ ಹೊರತು ಶರಶ್ಚಂದ್ರರನ್ನಲ್ಲ. 'ಶೇಷಪ್ರಶ್ನೆ'ಯ ಕಮಲಾ, 'ಅಧಿಕಾರ'ದ ಸುಮಿತ್ರಾ ಮುಂತಾದ ಪಾತ್ರಗಳು ಅವರ ಚಿಂತನ ವಲಯವನ್ನು ಪ್ರವೇಶಿಸಲಿಲ್ಲ. ಅವರ ನಾಟಕ, ಕವಿತೆ ಹಾಗೂ ಕಾದಂಬರಿಗಳಲ್ಲಿ ಹೊರಹೊಮ್ಮುವ ಮನಃಸತ್ವಕ್ಕೂ ಕಾದಂಬರಿಗಳಿಗೂ ಖಚಿತವಾದ ವ್ಯತ್ಯಾಸವಿದೆ. ಅದರಲ್ಲೂ 'ಮಲೆಗಳಲ್ಲಿ



ಲಂಕೇಶ್ ಯಶವಂತ ಚಿತ್ತಾಲ ವ್ಯಾ. ಬಲ್ಲಾಳ ದೇ. ಮಹಾದೇವ

ಮದುಮಗಳು' ಹೆಣ್ಣಿಗೆ ಇರುವ ಹಲವು ಸಾಧ್ಯತೆಗಳ ಅನಾವರಣವಾಗಿದೆ. ಅಲ್ಲಿನ ಹೆಣ್ಣುಮಕ್ಕಳಿಗೆ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುವ ಛಲವಿದೆ, ಸಾಮರ್ಥ್ಯವಿದೆ. ಆ ಗುಣಗಳು ತಾಯ್ತನದಿಂದ ಮೂಡಿಬಂದವಲ್ಲ. ಇವರೆಲ್ಲರೂ ಅದುವರೆಗೆ ಬರವಣಿಗೆಗೆ ಬಾಹಿರವಾಗಿದ್ದ ಶೂದ್ರಲೋಕದಿಂದ ಬಂದಿರುವುದು ಕೂಡ ಇದಕ್ಕೆ ಕಾರಣವಾಗಿರಬಹುದು. ಕುವೆಂಪುರವರ ವೈಚಾರಿಕ ಬರವಣಿಗೆಯಲ್ಲಿ ಹೆಣ್ಣಿನ ಬವಣೆಗಳ ಪ್ರಸ್ತಾಪ ಬಹಳ ಕಡಿಮೆಯೆನ್ನುವುದು ಗಮನೀಯವಾದ ಸಂಗತಿ.

ಪ್ರಗತಿಶೀಲರೆನ್ನಿಸಿಕೊಂಡ ಲೇಖಕರ ಬರವಣಿಗೆಯ ಬಗ್ಗೆ ಹೆಚ್ಚಿಗೆ ಹೇಳುವುದೇನೂ ಇಲ್ಲ. ಚದುರಂಗರು 'ಸರ್ವಮಂಗಳ', 'ಉಯ್ಯಾಲೆ', 'ವೈಶಾಖ' ಮುಂತಾದ ಕಾದಂಬರಿಗಳಲ್ಲಿ ಹೆಣ್ಣಿನ ತಲ್ಲಣಗಳ ಬಗ್ಗೆ ಕುತೂಹಲ-ಅನುಕಂಪ-ತಿಳುವಳಿಕೆಗಳನ್ನು ತೋರಿಸಿದರು. ಅದಕ್ಕಿಂತ ಮುಂಬಯಿ ನಗರದ ಜೀವನಶೈಲಿಯ ಫಲವಾಗಿಯೇ ಉದ್ಯೋಗಸ್ಥ ಮಹಿಳೆಯ ಬವಣೆಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡ ವ್ಯಾಸರಾಯ ಬಲ್ಲಾಳ ಮತ್ತು ಯಶವಂತ ಚಿತ್ತಾಲರ ಬರವಣಿಗೆಯು ಉಳಿದವರಿಗಿಂತ ಭಿನ್ನವಾಗಿದೆ. ಕಳೆದ ಕೆಲವು ದಶಕಗಳಲ್ಲಿ ನಿರ್ಲಕ್ಷ್ಯಕ್ಕೆ ಪಾತ್ರವಾಗಿದ್ದರೂ 'ಉತ್ತರಾಯಣ'ದ ಹೇಮಾ, 'ಬಂಡಾಯ'ದ ಯಾಮಿನಿ, ನಯನಾ ಮುಂತಾದ ಪಾತ್ರಗಳು 'ಭಾವುಕತೆ'ಯಲ್ಲಿ ಅದ್ದಿತೆಗೆದಂತೆ ಕಂಡರೂ ಅವರ ಚಿಕ್ಕಟ್ಟುಗಳನ್ನು ಗ್ರಹಿಸಿರುವ ಬಗೆ ಸರಿಯಾಗಿಯೇ ಇದೆ. ಅದೇ ವಿ.ಎಂ. ಇನಾಂದಾರ್ ಅವರ ಕಾದಂಬರಿಗಳು ಖಚಿತವಾಗಿ ಹೆಣ್ಣಿನ ಬಗ್ಗೆ ಪ್ರತಿಗಾಮಿಯಾಗಿಯೇ ಇದೆ. ಚಿತ್ತಾಲರ 'ಮೂರುದಾರಿಗಳು' ಕಾದಂಬರಿಯ ನಿರ್ಮಲೆ ಕೂಡ ಲೇಖಕನ ಪರೇಂಗಿತ ಪ್ರಜ್ಞೆಯಿಂದಲೇ ಮೂಡಿಬಂದವಳು. ಮುಖ್ಯವಾದ ಮಾತೆಂದರೆ ಈ ಎಲ್ಲ ಪಾತ್ರಗಳು ತಾಯ್ತನ ಮತ್ತು ಕುಟುಂಬಪೋಷಣೆಯ ಹೊರಗೆಳಾಚೆಗಿನ ತಲ್ಲಣಗಳನ್ನು ಹೊಂದಿರುವವರು.

ನವ್ಯಸಾಹಿತ್ಯವು ಹೆಣ್ಣನ್ನು ಗ್ರಹಿಸಿದ ಬಗೆಯು ಅ-ಸೂಕ್ಷ್ಮವೆಂದು ಹೇಳದೆ ವಿಧಿಯಿಲ್ಲ. ಲಂಕೇಶ್ ಮತ್ತು ಚಿತ್ತಾಲರ ಕೊನೆಕೊನೆಯ ಬರವಣಿಗೆ ಮಾತ್ರ ಈ ಮಾತಿಗೆ ಅಪವಾದವೇನೋ. 'ಕಲ್ಲು ಕರಗುವ ಸಮಯ' ನಿಜಕ್ಕೂ ಒಂದು ಮೈಲಿಗಲ್ಲು. ಆಣೆಬಡ್ಡಿ ರಂಗಮ್ಮನಿಂದ ಮೊದಲಾದ ಸ್ತ್ರೀಗ್ರಹಿಕೆಯ ಪಯಣವು ಇಲ್ಲಿ ಸಾರ್ಥಕವಾಗಿದೆ. ನವ್ಯದಿಂದ ಹೊರಗುಳಿದ ನರಸಿಂಹಸ್ವಾಮಿಯವರನ್ನು ಬಿಟ್ಟು ಉಳಿದ ಕವಿಗಳು, ಕಾರ್ನಾಡರೂ ಸೇರಿದಂತೆ ಎಲ್ಲ ನಾಟಕಕಾರರು ಈ ನಿಟ್ಟಿನಲ್ಲಿ ನಿರಾಶೆ ಹುಟ್ಟಿಸುತ್ತಾರೆ.

ಗ್ರಾಮೀಣ/ಜಾನಪದ ಜೀವನದೊಂದಿಗೆ ನಿಕಟವಾದ ಸಂಬಂಧ ಪಡೆದ ದಲಿತ-ಬಂಡಾಯ ಲೇಖಕರಿಂದ ಹೆಚ್ಚಿನದನ್ನು ನಿರೀಕ್ಷಿಸಿದಾಗಲೂ ನಿರಾಶೆಯೇ ಕಾದಿತ್ತು. ಯಾವ ರೀತಿಯ ಹಣೆಪಟ್ಟಿಯನ್ನೂ ಅಂಟಿಸಲಾಗದ ದೇವನೂರ ಮಹಾದೇವರನ್ನು ಬಿಟ್ಟು ಉಳಿದವರೆಲ್ಲರೂ ತ್ಯಾಗವನ್ನು ವೈಭವೀಕರಿಸುವ ಹೆಣ್ಣುಮಕ್ಕಳನ್ನು ಸೃಷ್ಟಿಸಿದರೇ ಹೊರತು ಗಂಡಸರು ಮತ್ತು ಹೆಂಗಸರ ನಡುವಿನ ಸಂಘರ್ಷದ ಆಯಾಮಗಳನ್ನಲ್ಲ. ಸ್ವತಃ ಮಹಾದೇವರಿಗೂ ವಿದ್ಯಾವಂತ ಮಹಿಳೆಯರು ಅಪರಿಚಿತರಾಗಿಯೇ ಉಳಿದರು. ಸಿದ್ದಲಿಂಗಯ್ಯ ಅಲ್ಲ — ಶಿವಪ್ರಕಾಶ್ ಅವರೂ ಸೇರಿದಂತೆ ಬಹುಪಾಲು ಕವಿಗಳಿಗೆ ಈ ಲೋಕಗ್ರಹಿಕೆಯ/ಲೋಕಸೃಷ್ಟಿಯ ಸವಾಲುಗಳು ಮುಖ್ಯವೆನಿಸಲೇ ಇಲ್ಲ. ಈ ಚಳುವಳಿಗಳಿಗೂ ವರ್ಗ/ವರ್ಣಗಳ ಚಿಕ್ಕಟ್ಟುಗಳು ಮುಖ್ಯವೆನಿಸಿದಂತೆ 'ಲಿಂಗ' ಮೂಲವಾದ ತಲ್ಲಣಗಳು ತೋರಲಿಲ್ಲ. ಇವುಗಳಲ್ಲಿ ಮಹಿಳೆಯರ ಗೈರುಹಾಜರಿಯೇ ನಿಯಮ. 'ಮಹಿಳಾ ಚಳುವಳಿ'ಯ ಒಂಟಿತನ ಇಂದಿಗೂ ಕಣ್ಣಿಗೆ ಕಟ್ಟುತ್ತದೆ. ಒಟ್ಟಂದದಲ್ಲಿ ಹೇಳುವುದಾದರೆ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮೂಡಿಬಂದ ಆಧುನಿಕ ಮಹಿಳೆಯ ಗುರುತುಗೆರೆಗಳು ನಮ್ಮ ಕಾಲದ ಪುರುಷ ಲೇಖಕರು ಮೂಡಿಬಂದಿರುವುದು ಬಹಳ ಕಡಿಮೆ. ಒಂದೊಮ್ಮೆ ಬಂದಿದ್ದರೂ ಅವುಗಳ ಗ್ರಹಿಕೆ/ಅಭಿವ್ಯಕ್ತಿಗಳು ಅಸಮಗ್ರವಾಗಿವೆ.

ಈ ಅವಧಿಯಲ್ಲಿ ಹೆಂಗಸರೇ ಬರೆದಿರುವ ಸಾಹಿತ್ಯವನ್ನು ಪ್ರತ್ಯೇಕವಾಗಿ ಪರಿಶೀಲಿಸುವ ಅಗತ್ಯವಿದೆ. ಶಿಕ್ಷಣ, ಕಲಾತ್ಮಕತೆ, ಸಾಹಿತ್ಯತತ್ವ ಮುಂತಾದ ನೆಲೆಗಳಲ್ಲಿ



ಎಚ್.ವಿ.ಸಾವಿತ್ರಮ್ಮ ಗೀತಾ ನಾಗಭೂಷಣ ಪ್ರತಿಭಾ ಎಚ್ ನಾಗವೇಣಿ



ವಿನಯಾ ವಕ್ಕುಂದ ಬಿ.ಟಿ.ಜಾಹ್ನವಿ ಜ.ನಾ. ತೇಜಶ್ರೀ ದು. ಸರಸ್ವತಿ

ಅವರು 'ಫುಟ್‌ಬಾಲ್' ಆಟದ ನಿಯಮಗಳನ್ನು ಕಲಿತು ಕ್ರಿಕೆಟ್ ಆಟವನ್ನು ಆಡಬೇಕಾಯಿತು. ಎಂದರೆ ಪುರುಷನಿರ್ಮಿತವಾದ ಸಾಹಿತ್ಯತತ್ವ ಹಾಗೂ ವಿಮರ್ಶೆಗಳು ಅವರ ಬರವಣಿಗೆಯನ್ನು ನಿಯಂತ್ರಿಸಿದವು, ವಿಮರ್ಶಿಸಿದವು. ಇದು ಇಂದಿಗೂ ಸತ್ಯ. ಪುರುಷರ ಬರವಣಿಗೆಯಲ್ಲಿರುವ ಪ್ರಭುತ್ವದ ಧೋರಣೆಯನ್ನು ಪ್ರಶ್ನಿಸದ ವಿಮರ್ಶೆಯು, ಹೆಣ್ಣುಮಕ್ಕಳ ಬರವಣಿಗೆಯಲ್ಲಿ 'ಸ್ತ್ರೀವಾದ'ದ ಅಬ್ಬರಗಳನ್ನು ಕಾಣಲು ತುದಿಗಾಲಿನಲ್ಲಿ ನಿಂತಿರುತ್ತದೆ. ಮಹಿಳೆಯರಲ್ಲಿ ಅನೇಕರು ಸ್ತ್ರೀಯರ/ಸ್ತ್ರೀವಾದದ ಪರವಾದ ವಕೀಲಿಯನ್ನು ವಹಿಸಿ, ಸಮಗ್ರ ಸತ್ಯವನ್ನು ಕಾಣಲು ನಿರಾಕರಿಸುತ್ತಾರೆ. ಬೇರೆ ಕೆಲವರು ಪುರುಷನಿರ್ಮಿತ ಮೀಮಾಂಸೆಯ ಚೌಕಟ್ಟಿನಲ್ಲಿ ಅವರಿಗೆ ಇಷ್ಟವಾಗುವಂತೆ ಬರೆಯುತ್ತಾರೆ. ಈ ಎರಡೂ ಧೋರಣೆಗಳ ಪರಿಣಾಮವಾಗಿ 'ಸಾಹಿತ್ಯಸೃಷ್ಟಿ'ಗೆ ಅಗತ್ಯವಾದ 'ಪೂರ್ಣದೃಷ್ಟಿ'ಯು ಸೊರಗುತ್ತದೆ. ಆ ರೀತಿಯ ಸಮತೋಲನದಲ್ಲಿ ಬರೆಯುವ ನಿಜವಾದ ಲೇಖಕಿಯರು ಯಾವ ಗುಂಪಿನ ಬೆಂಬಲವೂ ಇಲ್ಲದೆ ಸೊರಗುತ್ತಾರೆ. ಅವರದು ತಂತಿಯ ಮೇಲಿನ ನಡಿಗೆ. ಸಾಹಿತಿಗೆ ಇರಬೇಕಾದ ವಿವೇಕ ಮತ್ತು ಕಲಾಪ್ರಜ್ಞೆಗಳೆರಡೂ ಇದ್ದರೆ ಮಾತ್ರ ಇದು ಸಾಧ್ಯವಾಗುತ್ತದೆ. ಸಂಕೀರ್ಣತೆ, ಬಹುಮುಖತೆ ಮತ್ತು ಸಾವಧಾನಗಳನ್ನು ಕಳೆದುಕೊಂಡವರಿಗೆ ಇದು ಸಾಧ್ಯವಾಗುವುದಿಲ್ಲ. ದಮನಿತ ವರ್ಗಗಳಿಂದಲೇ ಬಂದು, ಅಕ್ಷರವಿದ್ಯೆಯ ಬಲದಿಂದ ಮಧ್ಯಮವರ್ಗಕ್ಕೆ ನೋಂದಣಿಯಾಗಿರುವವರೂ ಸೇರಿದಂತೆ ಕೆಲವು ಲೇಖಕಿಯರಿಗೆ ಇದು ಸಾಧ್ಯವಾಗುತ್ತಿದೆ. ಇಂಥ ಕಡೆ ತಾಯ್ತನ ಮತ್ತು ಹೆಣ್ತನಗಳೆರಡಕ್ಕೂ ಎಡೆ ಸಿಕ್ಕಿರುತ್ತದೆ. ಅಷ್ಟೇ ಅಲ್ಲ, ಈ ಎರಡೂ ಗಡಿಗಳನ್ನು ಮೀರಿ ಮನುಷ್ಯಸಾಧ್ಯವಾದ ಎಲ್ಲ ಸೀಮೆಗಳನ್ನೂ ಕಾಣುವ ಕಂಡರಿಸುವ ಉಮೇದು ಅಲ್ಲಿರುತ್ತದೆ. ನನ್ನ ಮಾತು ಅರ್ಥವಾಗಬೇಕಾದರೆ, "'ತಂದೆತನ' ಮತ್ತು 'ಗಂಡುತನ'ಗಳ ಗಡಿಗೆರೆಗಳನ್ನು ಮೀರಿದ ಪುರುಷ ಲೇಖಕರು" ಎನ್ನುವ ಮಾತು ಎಷ್ಟು ಹಾಸ್ಯಾಸ್ಪದವಾಗಿ ಕಾಣುತ್ತದೆ ಎಂಬುದನ್ನು ಗಮನಿಸಿ. ಹೆಣ್ಣು ಕೂಡ ಹೀಗೆ ಮಾನುಷ ನೆಲೆಯಲ್ಲಿ ಬರೆಯಬಲ್ಲಳು, ಬರೆಯಬೇಕು ಎನ್ನುವುದು ಗಂಡಸರು ಮತ್ತು ಹೆಂಗಸರು ಇಬ್ಬರಿಗೂ ಗೊತ್ತಾಗಬೇಕು. ಇದು ಅನುಭವದ ಸೀಮೆಗಳ ವಿಸ್ತರಣೆಯೊಂದಿಗೆ ಸಾಧ್ಯವಾಗುತ್ತದೆ. ಅದರ ಜೊತೆಗೆ, ಹೆಣ್ಣು ತಾನು ಹೆಂಗಸರ, ಬಗ್ಗೆ ಹಾಗೂ ಅವರ ಪರವಾಗಿಯೇ ಬರೆಯಬೇಕು ಎಂಬ ಒತ್ತಡಗಳನ್ನು ಮೀರಬೇಕು. ಕೊಡಗಿನ ಗೌರಮ್ಮ, ಎಚ್.ವಿ. ಸಾವಿತ್ರಮ್ಮ, ತ್ರಿವೇಣಿ, ಇಂದಿರಾ, ಅನುಪಮಾ, ವೈದೇಹಿ, ಪ್ರತಿಭಾ ಮುಂತಾದವರು ಇಟ್ಟ ಹೆಜ್ಜೆಗಳ ದಿಟ್ಟತನವನ್ನು, ಮೌಲಿಕತೆಯನ್ನು ಒಪ್ಪಿಕೊಳ್ಳುತ್ತಲೇ ಅವುಗಳ ಪರಿಮಿತಿಗಳನ್ನು ಮೀರುವ ಪ್ರಯತ್ನದಲ್ಲಿ ಹೊಸ ಪೀಳಿಗೆಯ ಹೆಣ್ಣುಮಕ್ಕಳು ತೊಡಗಿಕೊಂಡಿದ್ದಾರೆ. ಸ್ತ್ರೀಪರವಾದ ಚಳುವಳಿಗಳಲ್ಲಿ ಭಾಗವಹಿಸುತ್ತಲೇ ತಮ್ಮ ಬರವಣಿಗೆಯನ್ನು ಅವುಗಳಿಗೆ ಮೀಸಲಾಗಿಸದೆ ಇರುವ ಕೊಂಡವನ್ನು ಹಲವು ಲೇಖಕಿಯರು ಹಾಯುತ್ತಿದ್ದಾರೆ. ಬೇರೆ ಕೆಲವರಲ್ಲಿ ಬರವಣಿಗೆಯೇ ಚಳುವಳಿಯೂ ಆಗಿ, ಪ್ರತಿಭಟನೆಯೂ ಆಗಿ ಅವೆರಡನ್ನೂ ಮೀರುವ ದೋಣಿಯೂ ಆಗಿ ಕೆಲಸ ಮಾಡುತ್ತದೆ. ಈ ಕೆಲಸವನ್ನು ಪ್ರತಿಯೊಬ್ಬರೂ ಅವರವರ ಸೃಜನಶೀಲ ಸಾಮರ್ಥ್ಯದ ಚೌಕಟ್ಟಿನೊಳಗೆ ಮಾತ್ರ ಸಾಧಿಸಲು ಆಗುತ್ತದೆ. ಅವರಿಗೆ ಅಗತ್ಯವಾದ ಮಾದರಿಗಳು ಕನ್ನಡದಲ್ಲಿ ಮಾತ್ರವಲ್ಲ, ಭಾರತೀಯ ಭಾಷೆಗಳಲ್ಲಿ ಹಾಗೂ ಅವುಗಳಾಚೆಗಿನ ವಿಶ್ವಸಾಹಿತ್ಯದಲ್ಲಿ ಸಿಗುತ್ತವೆ. ಮಹಾಶ್ವೇತಾದೇವಿ, ಅಮೃತಾ ಪ್ರೀತಂ, ಅರುಂಧತಿ ರಾಯ್, ಇಂದಿರಾ ಗೋಸ್ವಾಮಿಯವರ ಹಾಗೆಯೇ ಎಮಿಲಿ ಡಿಕಿನ್ಸನ್, ಮಾಯಾ ಏಂಜೆಲೋ, ಟೋನಿ ಮಾರಿಸನ್, ನದೀನ್ ಗಾರ್ಡಿಮರ್, ಇಸಬೆಲ್ ಅಯೆಂಡೆ, ಹಾನ್ ಕಾಂಗ್, ವಿಸ್ಲಾವ ಜಿಂಬೋರ್ಸ್ಕಾ ಮುಂತಾದ ದೈತ್ಯ ಪ್ರತಿಭೆಯ ಲೇಖಕಿಯರೂ ಇದ್ದಾರೆ. ಅವರು ಹೆಣ್ತನದ ಕೇಂದ್ರದ ಅನನ್ಯತೆಯನ್ನು ಬಿಟ್ಟುಕೊಡದೆ ಇಡೀ ಜಗತ್ತನ್ನು/ಜೀವನವನ್ನು ಅದರ ಸಮಗ್ರತೆಯಲ್ಲಿ ನೋಡುವ ಪ್ರತಿಭೆಯನ್ನು ತೋರಿಸಿದ್ದಾರೆ. ಮಹಿಳಾಸಾಹಿತ್ಯ ಇಂಥದೊಂದು ಉಲ್ಲಂಘನೆಯನ್ನು ಮಾಡಬೇಕು. ಕನ್ನಡದಲ್ಲಿಯೂ ಇಂಥದೊಂದು ಪ್ರಕ್ರಿಯೆ ಪ್ರಾರಂಭವಾಗಿದೆ. ಗೀತಾ ನಾಗಭೂಷಣ, ಎಚ್. ನಾಗವೇಣಿ, ಬಿ.ಟಿ. ಜಾಹ್ನವಿ, ದು. ಸರಸ್ವತಿ ಮುಂತಾದವರ ಕತೆ–ಕಾದಂಬರಿಗಳು, ಸವಿತಾ ನಾಗಭೂಷಣ, ತೇಜಶ್ರೀ, ವಿನಯಾ, ಕಾವ್ಯ ಕಡಮೆ ಮುಂತಾದವರ ಕವಿತೆಗಳು ಈ ನಿಟ್ಟಿನಲ್ಲಿ ಮುಖ್ಯರಾದವರು. ಇವರಲ್ಲಿ ಕೆಲವರು ಕನ್ನಡ ಸಾಹಿತ್ಯ ಹಾಗೂ ವಿಶ್ವಸಾಹಿತ್ಯದ ಎಚ್ಚರದ ಓದಿನಿಂದ ಹೊಸ ಆಶಯಗಳು ಮತ್ತು ಅಭಿವ್ಯಕ್ತಿ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಏಕಮುಖಿಯಾದ ಆಶಯಗಳ ಹುದುಲಿನಲ್ಲಿ ಸಿಕ್ಕಿಕೊಂಡಿಲ್ಲ. ಎಚ್.ಎಸ್. ಶ್ರೀಮತಿ, ಎಂ.ಆರ್. ಕಮಲ, ತೇಜಶ್ರೀ, ಎಚ್.ಎಸ್. ಅನುಪಮಾ ಮುಂತಾದವರು ಮಾಡಿರುವ ಅನುವಾದಗಳು ಅಗತ್ಯವಾದ ಓದಿನ ಹರಹನ್ನು ಒದಗಿಸಿಕೊಡುತ್ತವೆ. ಶ್ರೇಷ್ಠತೆಯ ವ್ಯಸನವಿರುವವರು ಕೂಡ ಇವರ ಬರವಣಿಗೆಯನ್ನು ಓದಬಹುದು.

ಇದುವರೆಗೆ ಮಾಡಿದ 'ಸರ್ವೆ' ಕೆಲಸದಲ್ಲಿ ನನಗೆ ನಿಜಕ್ಕೂ ಆಸಕ್ತಿಯಿಲ್ಲ. ಆದರೆ, ತಾತ್ವಿಕವಾದ ಸಂಗತಿಗಳನ್ನು ನಿದರ್ಶನಗಳಿಲ್ಲದೆ ಹೇಳಿದರೆ, ಉಡಾಫೆಯಾಗುತ್ತದೆ. ಇನ್ನು ಮುಂದೆ ನಾನು ಆಕೃತಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತೇನೆ.


ಸೃಜನಶೀಲತೆಯ ನೆಲೆಯಿಂದ ನೋಡಿದಾಗ ಹೆಂಗಸರು ಮತ್ತು ಗಂಡಸರು ಬಳಸುವ ಭಾಷಿಕ ಆಕರಗಳು ಬೇರೆಬೇರೆಯಾಗಿರುತ್ತವೆಯೇ ಎನ್ನುವುದು ಮುಖ್ಯವಾದ ಪ್ರಶ್ನೆ. ಹಾಗೆಯೇ ಅದೇ ಭಾಷಿಕ ಪರಿಕರಗಳನ್ನು ಹೆಂಗಸರು ಬಳಸುತ್ತಾರೆಯೇ ಎನ್ನುವುದು ಇನ್ನೊಂದು ಉಪಪ್ರಶ್ನೆ. ಇಲ್ಲಿ ಭಾಷೆಯೆಂದರೆ ಸಾಹಿತಿಗಳು ಬಳಸುವ ಎಲ್ಲ ಪರಿಕರಗಳೂ ಸೇರಿಕೊಳ್ಳುತ್ತವೆ. ಈ ಒಗಟುಗಳನ್ನು ಬಿಡಿಸುವ ನಿಟ್ಟಿನಲ್ಲಿ ದೈಹಿಕ ಮನಶ್ಶಾಸ್ತ್ರವು(Physiological Psychology) ಸಾಕಷ್ಟು ಹಾದಿ ಸವೆಸಬೇಕಾಗಿದೆ. ಆದರೆ, ಕನ್ನಡ ಸಾಹಿತ್ಯದಲ್ಲಿ ಲಭ್ಯವಾಗಿರುವ ಆಕರಗಳ ತುಲನೆಯಿಂದಲೂ ಕೆಲವು ತೀರ್ಮಾನಗಳಿಗೆ ಬರಬಹುದು. ಉದಾಹರಣೆಗೆ ಅಲ್ಲಮ ಮತ್ತು ಅಕ್ಕಮಹಾದೇವಿಯರ ವಚನಗಳನ್ನು ಶೈಲಿ ಮತ್ತು ಪರಿಕರಗಳ ದೃಷ್ಟಿಯಿಂದ ಹೋಲಿಸಿ ನೋಡಿದಾಗ, ಅವುಗಳ ನಡುವಿನ ವಿಭಿನ್ನತೆಯು ತಕ್ಷಣವೇ ಗೋಚರವಾಗುತ್ತದೆ. ಬಸವಣ್ಣನವರ ವಚನಗಳು ಇವೆರಡನ್ನೂ ಒಳಗೊಂಡು ಸಂಯೋಜಿತವಾದಂತೆ ತೋರುತ್ತದೆ. ಈ ಶೈಲಿಗಳನ್ನು ಕಂಡುಕೊಳ್ಳುವ, ಒಟ್ಟಾಗಿಸುವ, ಒಳಗಿಟ್ಟುಕೊಳ್ಳುವ ಕೆಲಸವು ಕವಿಯ ಅಂತರಂಗದ ಆಳಗಳಲ್ಲಿ ನಡೆಯುವುದೇ ವಿನಾ ವೈಚಾರಿಕವಾದ ತೀರ್ಮಾನವಲ್ಲ. ಪಂಪನಂತಹ ಮಹಾಕವಿಗೂ ಇದು ಆಗಿದೆಯೆಂದು ತೋರುವುದಿಲ್ಲ. ಇದು ಸಾಧ್ಯವಾಗಲು ಇರಬೇಕಾದ 'ತೆರೆದ ಮನಸ್ಸು' ಗಂಡುತನ ಮತ್ತು ಹೆಣ್ಣುತನ ಎರಡನ್ನೂ ಒಳಗೊಳ್ಳುತ್ತದೆ. ಇದು ಬೇಂದ್ರೆಯವರಿಗೆ ಸಾಧ್ಯವಾದಷ್ಟು ಅಡಿಗರಿಗೆ ಆಗಲಿಲ್ಲವೇನೋ. ದೇವನೂರು ಮಹಾದೇವರಿಗೆ ಆದ ಹಾಗೆ ಅನಂತಮೂರ್ತಿಯವರಿಗೆ ಆಗಲೇ ಇಲ್ಲ. ಲಂಕೇಶ್ ಅವರಿಗ ಸಾಧ್ಯವಾದ ಹಾಗೆ ತೇಜಸ್ವಿಯವರಿಗೆ ಆಗಲಿಲ್ಲವೆಂದೇ ನನಗೆ ತೋರುತ್ತದೆ. ಕೊನೆಗೂ ಇದು ಹೊರಗಿನಿಂದ ಪಡೆದುಕೊಳ್ಳುವುದಲ್ಲ, ನಮ್ಮೊಳಗಡೆಯೇ ಇರುವ ಸಾಧ್ಯತೆಗಳ ಅನ್ವೇಷಣೆ. 'ಅಹಂಕಾರ'ದ ಮುಸುಕು ತೆಗೆದಾಗ ಕಾಣಿಸಿಕೊಳ್ಳುವ ಅರ್ಧನಾರೀಶ್ವರ ಸತ್ಯ ಅದು. ಲೇಖಕಿಯರಿಗೆ ಇರುವ ಸಮಸ್ಯೆ ಬೇರೆಬಗೆಯದು. ಈಗಾಗಲೇ ಅವರು ಎದುರಿಸಬೇಕಾದ ಮೀಮಾಂಸೆಯೇ ಪುರುಷರಿಂದ ದತ್ತವಾದುದು. ಅದನ್ನು ಗೇಲಿಮಾಡಿ ನಿರಾಕರಿಸದೆ ಅವರಿಗೆ ವಿಧಿಯಿಲ್ಲ. ಇಂಥದೊಂದು ಅಣಕವನ್ನು ವೈದೇಹಿಯವರ 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆಯಲ್ಲಿ ನೋಡಬಹುದು. ಆದರೆ, ಅದಕ್ಕೆ ಪರ್ಯಾಯವಾಗಿ ಬೌದ್ಧಿಕತೆಯನ್ನು ಸಾರಾಸಗಟಾಗಿ ನಿರಾಕರಿಸುವುದು ಸರಿಯಲ್ಲ. ಇತಿಹಾಸ, ವಿಜ್ಞಾನ, ತತ್ವಶಾಸ್ತ್ರ, ರಾಜಕಾರಣ ಮುಂತಾದ ಸಂಸ್ಥೆಗಳು ತಮ್ಮದೇ ಆದ ಪ್ರಸ್ತುತತೆಯನ್ನು ಪಡೆದಿವೆ ಮತ್ತು ಹೆಣ್ಣು ಅವುಗಳನ್ನು ಒಳಗೊಳ್ಳುವುದು ಎರಡೂ ಸಾಧ್ಯವಿದೆ. ಕರ್ನಾಟಕದಲ್ಲಿಯೂ ಇದು ಸಾಧ್ಯವಾಗಬೇಕು. ಅಷ್ಟೇ ಮುಖ್ಯವಾಗಿ, ಅವರು ಬರೆಯುವ ಕಥೆ, ಕವಿತೆ, ನಾಟಕಗಳೂ ಇವುಗಳ ಅನುಸಂಧಾನದಲ್ಲಿ ತೊಡಗಬೇಕು.

ಭಾಷಣವಾಗದೆ, ವಾದವಾಗದೆ, ಕೃತಿಯ ಸ್ವಂತಿಕೆಗೆ ಭಾರವಾಗದೆ ಬರಬೇಕು. ಅವರು ಗಂಡಿನ ಅಭಿವ್ಯಕ್ತಿ ವಿಧಾನಗಳನ್ನು ಬಿಟ್ಟುಕೊಟ್ಟರೂ ಅವನ ಹುಡುಕಾಟದ ನೆಲಗಳನ್ನು ಬಿಡಬೇಕಾಗಿಲ್ಲ. ಏಕೆಂದರೆ, ಅವು ಗಂಡು 'ಅಪ್ರೋಪ್ರಿಯೇಟ್' ಮಾಡಿಕೊಂಡಿರುವ ಲಿಂಗಾತೀತವಾದ ಅರಸುವಿಕೆಗಳೇ ಆಗಿವೆ. ವೀಣಾ ದಾಸ್, ಇರಾವತಿ ಕರ್ವೆ, ರುತ್ ಬೆನೆಡಿಕ್ಟ್ ಮುಂತಾದವರು ಈ ಬಗೆಯ ಮಾದರಿಗಳು. ಆಗ ನಮ್ಮ ವೈಚಾರಿಕತೆ ಮತ್ತು ಸಾಹಿತ್ಯ ಎರಡೂ ಇನ್ನಷ್ಟು ಆರ್ದ್ರವಾಗಬಹುದು, ನೆಲಮೂಲಕ್ಕೆ ಹತ್ತಿರವಾಗಬಹುದು. ಯುದ್ಧವಿರೋಧಿಯಾಗಬಹುದು. ಖಂಡಿತವಾಗಿಯೂ ಇದು ಸಾಹಿತಿಗಳ ಪ್ರಶ್ನೆಯಲ್ಲ. ಸಾರ್ವಜನಿಕ ಜೀವನದಲ್ಲಿ ಹೆಣ್ಣಿನ ಭಾಗವಹಿಸುವಿಕೆಯು ಇನ್ನಷ್ಟು ಮತ್ತಷ್ಟು ವ್ಯಾಪಕವಾಗಬೇಕು. ಈ ಒಳಗೊಳ್ಳುವಿಕೆಯು ವರ್ಗ–ವರ್ಣಗಳ ಸಂಗಡವೂ ತಳುಕು ಹಾಕಿಕೊಂಡಿರಬೇಕು. 'ಗಂಡುತತ್ವ' ಮತ್ತು 'ಹೆಣ್ಣುತತ್ವ'ಗಳು ದೈಹಿಕ ಗಡಿಗೆರೆಗಳನ್ನು ಮೀರಿ, ಇಬ್ಬರಲ್ಲಿಯೂ ನೆಲೆಗೊಳ್ಳಬೇಕು. ಇದು ಅನನ್ಯತೆಯನ್ನು ಉಳಿಸಿಕೊಂಡು ಅನ್ಯವನ್ನು ಒಳಗೊಳ್ಳುವ ಬಗೆ. ಗಾಂಧಿಯೆಂಬ ಹಟಮಾರಿ ಹೆಣ್ಣಿಗೆ ಮೇರಿ ಕ್ಯೂರಿ ಎಂಬ ದಿಟ್ಟ ಗಂಡಿಗೆ ಇದು ಸಾಧ್ಯವಾಗಿತ್ತೆಂದು ನಾನು ಭಾವಿಸಿದ್ದೇನೆ.

ಈಗ ಇನ್ನೊಂದು ವಿಚಾರ. ಹೆಣ್ಣಿಗೆ ಸಹಜವಾದ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಅವಳಿಗೆ ಅಧೀನಸ್ಥಾನ ಸಿಕ್ಕಿದ್ದು ಯಾಕೆ? ಎಂಬ ಪ್ರಶ್ನೆ ನನ್ನನ್ನು ಮೊದಲಿನಿಂದಲೂ ಕಾಡಿದೆ. ಉದಾಹರಣೆಗೆ ಸುಗಮ ಸಂಗೀತವನ್ನು ನೂರಾರು ಹೆಂಗಸರು ಹಾಡುತ್ತಾರೆ. ಆದರೆ ಅವರು ಹಾಡುವ ಕವಿತೆಗಳಲ್ಲಿ ನೂರಕ್ಕೆ ತೊಂಬತ್ತು ಗಂಡಸು ಕವಿಗಳು ಬರೆದವು. ಸಂಗೀತ ಸಂಯೋಜನೆ ಮಾಡಿರುವವರೂ ಗಂಡಸರೇ. ಹಾಡಲ್ಲದ ಕವಿತೆಯಲ್ಲಿಯೂ ನಾದ–ಲಯಗಳು ಕಾಣೆಯಾಗುತ್ತಿವೆ. ಇದು ಯಾಕೆ ಹೀಗೆ? ನೃತ್ಯದಲ್ಲೂ ಅಷ್ಟೆ. ಈಚೆಗೆ ಈ ಸನ್ನಿವೇಶ ಕೊಂಚ ಬದಲಾಗಿದ್ದರೂ ಸಾಮಾನ್ಯವಾಗಿ ಗಂಡು ಕುಣಿಸಬೇಕು, ಹೆಣ್ಣು ಕುಣಿಯಬೇಕು. ಮಾಯೆ ಕುಣಿಯುವುದು, ಅಲ್ಲಮ ಮದ್ದಲೆ ಬಾರಿಸಿ ಕುಣಿತವನ್ನು ನಿಯಂತ್ರಿಸಬೇಕು. ಮಾಧವಿ ದೇಸಾಯಿಯವರ ಮರಾಠೀ ಕಾದಂಬರಿಯ ಶೀರ್ಷಿಕೆಯು 'ನಾಚ್ ಗ ಘುಮಾ' (ಕುಣಿಯೆಲೆ ಗೊಂಬೆ) ಎಂದೇ ಇದೆ. ಸಾಹಿತ್ಯದಲ್ಲಿಯೂ ಇದು ಇನ್ನಷ್ಟು ಸೂಕ್ಷ್ಮವಾಗಿ ನಡೆದಿದೆಯೇ? ಹೆಂಗಸರು ಹೇಳುತ್ತಿದ್ದ ಕಥೆಗಳನ್ನು 'ಅಡುಗೂಲಜ್ಜಿ ಕಥೆ' ಎಂದೋ 'ಜನಪ್ರಿಯ ಸಾಹಿತ್ಯ' ಎಂದೋ 'ಅಡಿಗೆಮನೆ ಸಾಹಿತ್ಯ' ಎಂದೋ ನಿರಾಕರಿಸಿದ್ದು ತೀರ ಈಚೆಗೆ ಕೂಡ. ನಾವು ತಲೆಯ ಮೇಲೆ ಹೊತ್ತುಕೊಂಡು ಮೆರೆಸುತ್ತಿದ್ದ ಅ.ನ.ಕೃ., ತ.ರಾ.ಸು. ಮುಂತಾದವರ ಬರವಣಿಗೆಯು ಅಂಚಿಗೆ ಸರಿದ ನಂತರವೂ ಕೊಡಗಿನ ಗೌರಮ್ಮನವರಂಥ ಲೇಖಕರು ಉಳಿದುಕೊಂಡಿದ್ದಾರೆ. ಎಚ್.ವಿ. ಸಾವಿತ್ರಮ್ಮನವರು ಮಾಡಿದ ಅನುವಾದಗಳು ಪ್ರಸ್ತುತವಾಗಿವೆ. ತಪ್ಪು ಕಂಡ ಕಣ್ಣಿನದೋ, ಕಾಣಿಸಿದ ನೋಟದ್ದೋ?

ಆಧುನಿಕತೆಯ ಸಂಗಡವೇ ಬಂದಿರುವ ಜಾಗತೀಕರಣ ಎಂಬರೆ ವ್ಯಾಪಾರೀಕರಣವು ಹೆಣ್ಣಿನ ಜೀವನಕ್ರಮಕ್ಕೆ ಮತ್ತು ಕಲಾತ್ಮಕ ಅಭಿವ್ಯಕ್ತಿಗೆ ಹೊಸ ಸವಾಲುಗಳನ್ನು ಒಡ್ಡಿವೆ. ವಾಣಿಜ್ಯವೇ ಕೇಂದ್ರವಾಗಿರುವ ಜಗತ್ತು ಹೆಣ್ಣನ್ನು 'ಕಮೋಡಿಟಿ'ಯಾಗಿ ಮಾರ್ಪಡಿಸಿದೆ. ಅವಳು ಮಾರಾಟವಾಗಲು ನೆರವು ನೀಡುವ ಜಾಹೀರಾತಿಗೂ ಬೇಕು, ಆ ಸರಕನ್ನು ಕೊಳ್ಳುವ ಗ್ರಾಹಕಿಯಾಗಿಯೂ ಬೇಕು. ತೇಜಸ್ವಿಯವರ 'ಸೀರೆಯಂಗಡಿಯಲ್ಲಿ ಮಾದರಿಗೆ ನಿಲ್ಲಿಸಿರುವ ಪ್ರತಿಮೆಗೆ' ಎಂಬ ಕವಿತೆಯನ್ನು ನಾವೆಲ್ಲರೂ ಇನ್ನೊಮ್ಮೆ ಓದಬೇಕು. ನಾವು ನಡೆಸುವ ಸಾಹಿತ್ಯಕ ಸಮಾರಂಭಗಳನ್ನು ಕಾಂಪೀರ್ ಮಾಡಲು ಕೂಡ ನಮಗೆ ಸುಂದರಿಯರು ಬೇಕು. (ಅವರಿಗೆ ಭಾಷಣಗಾರರಿಗಿಂತಲೂ ಹೆಚ್ಚು ಹಣ ಸಿಗುತ್ತದೆ.) ಸಾಹಿತ್ಯ–ಸಂಸ್ಕೃತಿಗೆಂದೇ ಮೀಸಲಾದ ಪುಟಗಳಲ್ಲಿ ಪ್ರತಿದಿನ ಮುಂಜಾನೆಯೂ ಹೊಸ ಹೊಸ ಚೆಲುವೆಯರ ಮೈ–ಮುಖಗಳು ಕಾಣಿಸಿಕೊಳ್ಳುತ್ತವೆ. ಕವಿತೆಯ ಜೊತೆಗೂ ಫೋಟೋ ಕಡ್ಡಾಯ. ನಾವು ಎಲ್ಲಿದ್ದೇವೆ!! ಆಯ್ಕೆಯ ಸ್ವಾತಂತ್ರ್ಯವೆಂಬ ಭ್ರಮೆಯಲ್ಲಿ ಅನುಪಯುಕ್ತವಾಗುವ ದುರಂತವನ್ನು ತಪ್ಪಿಸಿಕೊಳ್ಳುವುದು ಹೇಗೆ? ಇದು ಬೇಡವೆಂದರೆ ಸಂಪ್ರದಾಯವಾದಿ ರಣಹದ್ದುಗಳು ಲಾಠಿ ಹಿಡಿದು ಕಾಯುತ್ತಿದ್ದಾರೆ. ಹುಲಿ ದರಿಗಳ ನಡುವೆ ಹೆಂಗಸರ ಆಯ್ಕೆ ಯಾವುದು? ಅದು ಕಥೆ–ಕವಿತೆಗಳೊಳಗೆ ಹೇಗೆ ಕಾಣಿಸಿಕೊಳ್ಳಬೇಕು.

ನಾನು ನಿರಾಸೆಯ ವಕ್ತಾರನಾಗಿ ಮಾತಾಡುತ್ತಿಲ್ಲ. ಕಳೆದ ಕಾಲಕ್ಕಿಂತ ಇಂದು ಆರೋಗ್ಯವಾಗಿದೆ. ನಮ್ಮ ಸಾಹಿತ್ಯದಲ್ಲಿ ಗಂಡಸರೇ ದ್ವಿಪಾತ್ರಾಭಿನಯ ಮಾಡಿ ಮೂಡಿಸುತ್ತಿದ್ದ ಹೆಣ್ತನ, ತಾಯ್ತನಗಳನ್ನು ಇಂದು ಹೆಂಗಸರು ಕೂಡ ಕಟ್ಟಿಕೊಡುವ ಅವಕಾಶ ಸಿಗುತ್ತಿದೆ. ಈ ಎರಡು ತತ್ವಗಳನ್ನೂ ಎರಡು ಲಿಂಗಗಳಿಗೆ ಸೇರಿದ ಕಲಾವಿದರೂ ಒಳಗೊಳ್ಳುವ ದಿನಗಳು ಬರಲೆಂಬ ಹಂಬಲ ಮತ್ತು ಬರಬಹುದೆಂಬ ಭರವಸೆ ನನಗಿದೆ.



(ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರಾಗಿದ್ದು ಕನ್ನಡದ ಪ್ರಮುಖ ಸಾಹಿತ್ಯ ಚಿಂತಕರಲ್ಲೊಬ್ಬರಾಗಿದ್ದಾರೆ)

ಅಸಂಘಟಿತ ವಲಯದ ಕಾರ್ಮಿಕರ ಸಂಘಟನೆಯ ಕಷ್ಟ ಸುಖಗಳು

–ಶಾರದಾ ಗೋಪಾಲ

ಜೆ.ಸಿ.ಕುಮಾರಪ್ಪ ಅವರ ಗ್ರಾಮೀಣ ಆರ್ಥಿಕತೆಯನ್ನು ವಿಶ್ವ ಬ್ಯಾಂಕಿನ ಜಾಗತೀಕರಣದ ಆರ್ಥಿಕತೆ ಸೋಲಿಸಿದ ದಿನಗಳವು. ಜಾಗತೀಕರಣದ ನೆರೆಪ್ರವಾಹದಲ್ಲಿ ಕೊಚ್ಚಿ ಹೋದ ಅನೇಕ ಸಂಘಟನಾ ಪ್ರಯತ್ನಗಳಲ್ಲಿ ಇದೂ ಒಂದು. ಸ್ಥಳೀಯ, ಸುಸ್ಥಿರ ಎನ್ನುವ ಮಹಾತ್ಮಾ ಗಾಂಧಿಯವರ ಕನಸನ್ನದು ನುಚ್ಚು ನೂರು ಮಾಡಿತ್ತು. ಸ್ವಸಹಾಯ, ಸ್ತ್ರೀ ಶಕ್ತಿಯೆಲ್ಲವನ್ನೂ ಮೈಕ್ರೋ ಫೈನಾನ್ಸ್ ಸಾಲದ ಕಂಪನಿಗಳು ನೆಲಕ್ಕುರುಳಿಸಿದ್ದವು. ಅಸಂಘಟಿತ ಗ್ರಾಮೀಣ ಮಹಿಳೆಯರು ಸಂಘಟಿತರಾಗುವ ಕನಸು ಛಿದ್ರವಾಗಿತ್ತು.



೮೦ರ ದಶಕದಲ್ಲಿ 'ಗ್ರಾಮ ಜಾಗೃತಿ' ಎಂಬ ಸಂಸ್ಥೆ ಮಾಡಿಕೊಂಡು ಬೆಳಗಾಂ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಗ್ರಾಮಾಭಿವೃದ್ಧಿ ಕೆಲಸಕ್ಕೆ ಇಳಿದಾಗ ಹಳ್ಳಿಗಳಲ್ಲಿ ರಾತ್ರಿ ಶಾಲೆ ಮಾಡುತ್ತ ಮಹಿಳೆಯರೊಂದಿಗೆ ಅವರ ಕೂಲಿ, ಅವರ ಜೀವನ ಪದ್ಧತಿ ಎಂದೆಲ್ಲ ರಾತ್ರಿಯೆಲ್ಲ ಮಾತಾಡುತ್ತ ಕುಳಿತಿದ್ದಾಗ ಹುಟ್ಟಿದ್ದು ಸ್ವಸಹಾಯ ಸಂಘಗಳು. ದಿನಕ್ಕೆ ೫ ರೂ. ಕೂಲಿ ಗಳಿಸುತ್ತಿದ್ದ ಹೆಣ್ಣುಮಕ್ಕಳು ವಾರಕ್ಕೆ ಐವತ್ತು ಪೈಸೆಯಿಂದ ಎರಡು ರೂಪಾಯಿವರೆಗೆ ಉಳಿತಾಯ ಮಾಡುತ್ತ ಸಂಘಟನೆಯ ಹಾದಿಯಲ್ಲಿ ಮೊದಲ ಹೆಜ್ಜೆ ಇಟ್ಟಿದ್ದರು. ಕೂಡಿಟ್ಟ ಹಣ ಕುಟುಂಬದವರ ಅನಾರೋಗ್ಯ, ಬೆಳೆಸಾಲ ತೀರಿಸಲಿಕ್ಕೆ, ಮಕ್ಕಳ ಶಾಲೆ ಖರ್ಚಿಗೆ ಎಂದು ಕೈಗಡವಾಗಿ ಸಿಕ್ಕಾಗ ಅವರಿಗೆಲ್ಲ ಹೊಸದೊಂದು ಸಾಧ್ಯತೆಯ ಬಾಗಿಲು ತೆರೆದಿತ್ತು.

ಹಳ್ಳಿಯ ಅನಕ್ಷರಸ್ಥ ಮಹಿಳೆಯರು ಸಂಘಟನೆಯತ್ತ ಹಾಕಿದ್ದ ಹೆಜ್ಜೆಗಳು ಬಹಳ ದೂರ ಸಾಗಲಿಲ್ಲ. ದಾರಿ ಬಲುಬೇಗ ಕವಲೊಡೆದು ಎತ್ತ ಸಾಗುವುದೆಂಬ ದ್ವಂದ್ವ. ಹೆಣ್ಣುಮಕ್ಕಳ ಸ್ವಸಹಾಯ ಸಂಘಗಳ ಯಶೋಗಾಥೆಗಳು ಗ್ರಾಮಗಳ ಗಡಿ ದಾಟಿ ಹೊರಗೆಲ್ಲ ದೊಡ್ಡ ಸುದ್ದಿ ಮಾಡಿದ್ದೇ ಅವಕ್ಕೆ ದೊಡ್ಡ ಮುಳುವಾಯ್ತು. ಸ್ವಸಹಾಯ ಸಂಘಗಳ ಯಶಸ್ಸಿನ ಸೂತ್ರವನ್ನು ಗುರುತಿಸಿದ ಸರಕಾರವು ಹಳ್ಳಿ ಹಳ್ಳಿಗಳಲ್ಲಿ ಸ್ತ್ರೀ ಶಕ್ತಿ ಸಂಘಗಳನ್ನು ತೆರೆಯಲು ಅಂಗನವಾಡಿ ಕಾರ್ಯಕರ್ತೆಯರಿಗೆ ತಾಕೀತು ಮಾಡಿತು. ಕಾರ್ಯಕರ್ತೆಯರಿಗೆ ಒಂದೊಂದು ಸಂಘಕ್ಕೂ ೫೦/ ರೂ. ಪ್ರೋತ್ಸಾಹ ಧನ. ಸ್ತ್ರೀ ಶಕ್ತಿ ಸಂಘ ಮಾಡಿದರೆ ಸರಕಾರದಿಂದ ಸ್ವ ಉದ್ಯೋಗಕ್ಕೆ ಸಾಲ ಸಿಗುತ್ತದೆಂಬ ಆಶೆ. ಹಾದಿ ಹೋಳಾಗಿತ್ತು. ಸ್ವಸಹಾಯ ಸಂಘಟನೆ ಹೊರಗಿನ ಸಾಲದ ಸುಳಿಯಲ್ಲಿ ಸಿಕ್ಕಿತ್ತು. ಸಾಲ ಕೊಡುವ ಸೂತ್ರ ದೂರದ ಕಂಪನಿಗಳ ಕೈಗೆ ಸಿಕ್ಕ ಮೇಲಂತೂ ಮೈಕ್ರೋ ಫೈನಾನ್ಸ್ ಕಂಪನಿಗಳ ಮೇಲೆ ಕಂಪನಿಗಳು ಹಳ್ಳಿಗಳ ಮೇಲೆ ದಾಳಿ ಇಟ್ಟವು. ಬಾಂಗ್ಲಾ ದೇಶದ ಯೂನಸ್ ಅವರ ಮೈಕ್ರೋಫೈನಾನ್ಸ್ ಕೆಲಸಕ್ಕೆ ನೋಬೆಲ್ ಪ್ರಶಸ್ತಿ ಬಂದಾಗ ತನ್ನಷ್ಟಕ್ಕೆ ತಾನು ಹಳ್ಳಿ ಮಟ್ಟದಲ್ಲಿ ಬೆಳೆದು ಹೆಮ್ಮರವಾಗಿ ಹಳ್ಳಿಗಾಡಿನ ಮಹಿಳೆಯರಿಗೆ ಗಟ್ಟಿ ಆಧಾರವಾಗಿ ನಿಂತಿದ್ದ ಸ್ಥಳೀಯ ಆರ್ಥಿಕತೆಯನ್ನು ಮುಂಖಾನು ಮುಂಖವಾಗಿ ಜಗಜ್ಜಾಹೀರು ಮಾಡಿದ್ದು ಈ ನೋಬೆಲ್ ಪ್ರಶಸ್ತಿಯೋ ಅಥವಾ ಸ್ಥಳೀಯ ಮಟ್ಟದಲ್ಲಿ ಗಟ್ಟಿಯಾಗುತ್ತಿದ್ದ ವ್ಯವಸ್ಥೆಯನ್ನು ಮಟ್ಟ ಹಾಕಲೆಂದೇ ಈ ಪ್ರಶಸ್ತಿಯನ್ನು ಕೊಡಲಾಯಿತೋ ಗೊತ್ತಿಲ್ಲ. ನೋಬೆಲ್ ಪ್ರಶಸ್ತಿಯ ರಾಜಕೀಯದ ಬಗೆಗೂ ಇತ್ತೀಚೆಗೆ ಗುಲ್ಲೆದ್ದಿರುವುದಂತೂ ಸುಳ್ಳಲ್ಲ.

ಇರಲಿ, ನಮ್ಮ ಚಿಂತೆ, ಚಿಂತನೆ ನೋಬೆಲ್ ರಾಜಕೀಯದ್ದಲ್ಲ. ಆದರೆ ಅದು ಮಾಡಿದ ಹಾವಳಿ ಮಾತ್ರ ಖಂಡನೀಯವೇ. ಮೊದಲು ಹತ್ತಿರದ ಪಟ್ಟಣ, ಹೋಬಳಿಗಳಲ್ಲಿ ನೆಲಸಿ ಸ್ಥಳೀಯರಿಗೆ ಸಾಲ ಕೊಟ್ಟು ಬಡ್ಡಿಯ ಮೂಲಕ ರಕ್ತ ಹೀರುತ್ತಿದ್ದ ಬಡ್ಡಿ ಕಂಪನಿಗಳಿಗೆ ಸ್ವಸಹಾಯ ಸಂಘಗಳು ದೊಡ್ಡ ಸವಾಲಾಗಿದ್ದುವಷ್ಟೇ. ಈಗ ಅವೇ ಫೈನಾನ್ಸ್ ಕಂಪನಿಗಳ ವೇಷ ತೊಟ್ಟು ಹಳ್ಳಿ ಹಳ್ಳಿಗೆ ಓಡಿ ಓಡಿ ಬಂದವು. ಓಣಿ ಓಣಿಯನ್ನು ಒಂದೊಂದು ಕಂಪನಿ ತನ್ನದಾಗಿಸಿಕೊಂಡಿತು. ಎಷ್ಟೋ ಮಹಿಳೆಯರು ಸ್ವಸಹಾಯ ಸಂಘದಿಂದ ಸ್ತ್ರೀಶಕ್ತಿಗೆ, ಸ್ತ್ರೀ ಶಕ್ತಿ ಸಂಘದಿಂದ ರಕ್ತ ಹೀರುವ ಸಾಲದ ಸಂಘಗಳಿಗೆ ದಾಟುತ್ತ ಹೋದರು. ಎಲ್ಲಾ ಸಂಘಗಳಲ್ಲೂ ಖಾತೆ ತೆರೆದು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಹಣವನ್ನು ವರ್ಗಾಯಿಸತೊಡಗಿದರು. ಎಲ್ಲ ಸಾಲದ ಸಂಘದಲ್ಲೂ ಸದಸ್ಯಳಾದ ಮಹಿಳೆ ಒಂದಲ್ಲ ಒಂದರಲ್ಲಿ ಸಾಲ ಪಡೆದು ಇನ್ನೊಂದರ ಬಡ್ಡಿ ತೀರಿಸುತ್ತ ಆ ಸಾಲಕ್ಕೆ ಮತ್ತೊಂದರಲ್ಲಿ ಸಾಲ ತೆಗೆಯುತ್ತ ಸಾಲದ ವಿಷವೃತ್ತದೊಳಗೆ ಸಿಕ್ಕು ಹೊರಬರಲಾಗದೆ ಒದ್ದಾಡತೊಡಗಿದಳು. ತಮ್ಮ ಉಳಿತಾಯ ಹಣದಿಂದ ಬೇರೆಯವರಿಗೆ ಸಾಲ ಕೊಡುವಷ್ಟು ಶಕ್ತಿ ಪಡೆದಿದ್ದ ಸಂಘಗಳು ಸದಸ್ಯೆಯರು ಸಾಲದ ಆಸೆಗೆ ಬಿದ್ದುದರಿಂದ ಕ್ರೂಢೀಕೃತ ಶಕ್ತಿಯನ್ನು ಕಳೆದುಕೊಂಡವು. ಮಹಿಳೆಯರ ಸಂಘಟನೆಗೆ ಬಿದ್ದ ದೊಡ್ಡ ಏಟು ಅದು.

ಜೆ.ಸಿ.ಕುಮಾರಪ್ಪ ಅವರ ಗ್ರಾಮೀಣ ಆರ್ಥಿಕತೆಯನ್ನು ವಿಶ್ವ ಬ್ಯಾಂಕಿನ ಜಾಗತೀಕರಣದ ಆರ್ಥಿಕತೆ ಸೋಲಿಸಿದ ದಿನಗಳವು. ಜಾಗತೀಕರಣದ ನೆರೆಪ್ರವಾಹದಲ್ಲಿ ಕೊಚ್ಚಿ ಹೋದ ಅನೇಕ ಸಂಘಟನಾ ಪ್ರಯತ್ನಗಳಲ್ಲಿ ಇದೂ ಒಂದು. ಸ್ಥಳೀಯ, ಸುಸ್ಥಿರ ಎನ್ನುವ ಮಹಾತ್ಮಾ ಗಾಂಧಿಯವರ ಕನಸನ್ನದು ನುಚ್ಚು ನೂರು ಮಾಡಿತ್ತು. ಸ್ವಸಹಾಯ, ಸ್ತ್ರೀ ಶಕ್ತಿಯೆಲ್ಲವನ್ನೂ ಮೈಕ್ರೋ ಫೈನಾನ್ಸ್ ಸಾಲದ ಕಂಪನಿಗಳು ನೆಲಕ್ಕುರುಳಿಸಿದ್ದವು. ಅಸಂಘಟಿತ ಗ್ರಾಮೀಣ ಮಹಿಳೆಯರು ಸಂಘಟಿತರಾಗುವ ಕನಸು ಛಿದ್ರವಾಗಿತ್ತು.

ಒಂದು ಬಾಗಿಲು ಮುಚ್ಚಿಕೊಳ್ಳುವ ಹೊತ್ತಿಗೆ ಇನ್ನೊಂದು ಅವಕಾಶದ ಬಾಗಿಲು ತೆರೆಯುತ್ತಿರಬೇಕೇ? ರಾಜಸ್ಥಾನದ ಬಿಕಾನೇರು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಮಾಜಿ ಐ.ಎ.ಎಸ್. ಅಧಿಕಾರಿ ಅರುಣಾ ರಾಯ್ ಜನರ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಗ್ರಾಮೀಣ ಕೃಷಿ ಕಾರ್ಮಿಕರನ್ನು ಸಂಘಟಿಸಿ ಬರಗಾಲವನ್ನೆದುರಿಸಲು, ಸುಗ್ಗಿಯ ನಂತರದ ದಿನಗಳಲ್ಲಿ ದುಡಿಯಲು ಉದ್ಯೋಗಾವಕಾಶವಿರಬೇಕೆಂದು ಗ್ರಾಮೀಣ ಉದ್ಯೋಗ ಭರವಸೆ ಯೋಜನೆಯನ್ನು ರಾಜಸ್ತಾನ ಸರಕಾರ ಜಾರಿಯಲ್ಲಿ ತರುವಂತೆ ಮಾಡಿದ್ದರು. ಮಹಾರಾಷ್ಟ್ರದಲ್ಲಿಯೂ ಕೂಡ ಉದ್ಯೋಗ ಭರವಸೆ ಯೋಜನೆ ಜಾರಿಯಲ್ಲಿತ್ತು. ಅದನ್ನೇ ದೇಶದಲ್ಲಿ ಕಾನೂನಾಗಿ ಬರುವಲ್ಲಿ ಶ್ರಮಿಸಿ ಗೆದ್ದಿತ್ತು ಅರುಣಾ ರಾಯ್ ಅವರ 'ಮಜ್ದೂರ್ ಕಿಸಾನ್ ಶಕ್ತಿ ಸಂಘಟನೆ'. ೨೦೦೫ರಲ್ಲಿ ಉದ್ಯೋಗ ಖಾತರಿಯು ಕಾನೂನಾಗಿ ಬಂತು. ಹಳ್ಳಿಗಳಲ್ಲಿ ಮಹಿಳೆಯರನ್ನು ಸಂಘಟಿಸಿ ಸೋಲನುಭವಿಸಿದ್ದ ಸಂಘ ಸಂಸ್ಥೆಗಳಿಗೆ ಉದ್ಯೋಗ ಖಾತರಿಯು ಹೊಸ ಸಾಧನವಾಗಿ ಕೈಗೆ ಸಿಕ್ಕಿತ್ತು.

ಖಾನಾಪುರದಲ್ಲಿ ಜನಸಂಘಟನೆಯಲ್ಲಿ ತೊಡಗಿದ್ದ 'ಜಾಗೃತಿ' ಸಂಸ್ಥೆಗೆ ಕೂಡ ಇದೊಂದು ದೊಡ್ಡ ಅವಕಾಶ. ಸಿಕ್ಕ ಅವಕಾಶವನ್ನು ಬಳಸಿಕೊಂಡು ೨೦೦೬ರಿಂದಲೇ ಅಶೋಕ ಹೆರೇಕರ, ಸುವರ್ಣ ಕುರಾಳೆ, ಮಹಾನಂದಾ ತಳವಾರ, ಯಲ್ಲಪ್ಪ ಕೋಲಕಾರ ಇವರುಗಳು ಮತ್ತೊಮ್ಮೆ ಉತ್ಸಾಹದಿಂದ ಜನರಿಗೆ ಸಂಘಟನೆಯ ಪಾಠ ಹೇಳತೊಡಗಿದರು. ನೋಡ ನೋಡುತ್ತಲೇ ಖಾನಾಪುರದ ಹಳ್ಳಿ ಹಳ್ಳಿಗಳಲ್ಲಿ ಸಂಘಟನೆಯ ಅಲೆಯು ಕನ್ನಡ ಭಾಷಿಕರ ಎಲ್ಲೆ ಮೀರಿ ಮರಾಠಿ ಭಾಷಿಕರನ್ನೂ ತನ್ನತ್ತ ಸೆಳೆಯತೊಡಗಿತ್ತು.

ಗ್ರಾಮೀಣ ಭಾಗದ ಜನರಿಗೆ ಗ್ರಾಮ ಪಂಚಾಯತಿಯೇ ಸ್ಥಳೀಯ ಸರಕಾರ. ಆದರೆ ಬಹುತೇಕ ಗ್ರಾಮಸ್ಥರಿಗೆ ಪಂಚಾಯತಿಯ ಇರುವು ಕೂಡಾ ಗಮನಕ್ಕಿಲ್ಲ. ಇನ್ನು ಭಾಗವಹಿಸುವಿಕೆ ದೂರದ ಮಾತು. ಮಹಿಳೆಯರು ಹತ್ತಬಾರದ ಮೆಟ್ಟಿಲುಗಳವು. ಪಂಚಾಯತಿಯು ಇವರನ್ನೂ, ಇವರು ಪಂಚಾಯತಿಯನ್ನೂ ಗಾವುದ ದೂರವೇ ಇಟ್ಟಿದ್ದರು. ಗ್ರಾಮಾಭಿವೃದ್ಧಿಗಾಗಿ ಬರುವ ಹಣವನ್ನೆಲ್ಲ ಮೆಂಬರುಗಳೇ ಮೇಯುತ್ತ ಬೈಕು ಕಾರು ಖರೀದಿಸುತ್ತ, ಮನೆಯ ಮೇಲೆ ಮಹಡಿಯನ್ನೇರಿಸುತ್ತ ಯಾರನ್ನೂ ಪಂಚಾಯತಿಯ ಸನಿಹ ಹಾಯಗೊಡದೆ



ಹಾಯಾಗಿದ್ದರು. ಹೀಗಾಗಿ ಮೊದಲೆರಡು ವರ್ಷ ಜನರು ಒಟ್ಟಿಗೆ ಸೇರಿದರೂ ಕೂಡ ಅವರು ಬಯಸಿದಾಗ ಕೆಲಸ ಸಿಗುವುದು ಬಲು ದುಸ್ತರವಾಯಿತು. ಬದಲಿಗೆ, 'ಊರ ಅಭಿವೃದ್ಧಿ ಆಗಬೇಕೆಂದರೆ, ನಿಮ್ಮ ಮನೆಯ ಎದುರು ರಸ್ತೆ ಆಗಬೇಕೆಂದರೆ ಚೆಕ್ಕಿಗೆ ಸಹಿ ಹಾಕಿಕೊಡಿ' ಎಂದು ಆ ಅಭಿವೃದ್ಧಿಯ ಹರಿಕಾರರು ಜನರನ್ನು ಎಚ್ಚರಿಸತೊಡಗಿದ್ದರು.

ಬಲು ಕಠಿಣ ಹಾದಿ ಅದು. ಒಂದೆಡೆ ಸಂಜೆಯಾಯಿತೆಂದರೆ ಸಾಲದ ಸಂಘಗಳ ಮೀಟಿಂಗ್ ಇದ್ದುದರಿಂದ ಬೇರೆ ಕಡೆ ಬರಲು ಮಹಿಳೆಯರು ಒಪ್ಪದಿರುವುದು, ಇನ್ನೊಂದೆಡೆ ಸಂಘಟನೆಯೊಳಗೆ ಬಂದವರಿಗೂ ಕೂಡ ಕೆಲಸ ಸಿಗದಂತೆ ಪಂಚಾಯತಿಯ ಸತತ ಪ್ರಯತ್ನ. ಖಾನಾಪುರ ತಾಲೂಕಿನ ಹಳ್ಳಿ ಹಳ್ಳಿಗಳನ್ನು ತಲುಪಿ ಜಾಥಾ, ಸರಿರಾತ್ರಿಯವರೆಗೂ ಜನರೊಂದಿಗೆ ಮಾತುಕತೆ, ಬೆಳಗಾಯಿತೆಂದರೆ ಪಂಚಾಯತಿಯ ಮುಂದೆ ಧರಣಿ, ಸತ್ಯಾಗ್ರಹ ಎಂದು ಹಗಲು ರಾತ್ರಿಗಳನ್ನು ಒಂದುಮಾಡಿ ದುಡಿದಾಗ ಸ್ವಲ್ಪ ಸ್ವಲ್ಪವೇ ಫಲಕೊಡತೊಡಗಿತು ಸಂಘಟನಾ ವೃಕ್ಷ. ಕೆಲವೊಮ್ಮೆ ಹಳ್ಳಿಯಲ್ಲಿ ಸಭೆ ಮಾಡತೊಡಗಿದಾಗ ಸುತ್ತೆಲ್ಲ ಬೈಕುಗಳಲ್ಲಿ ಊರಿನ ಲೀಡರುಗಳು ಬಂದು ನಮ್ಮನ್ನು ಸುತ್ತುವರೆಯುತ್ತಿದ್ದುದುಂಟು. ಆಗ ಉಪಾಯವಾಗಿ ನಮ್ಮ ಮಾತಿನ ಧ್ರುಡನ್ನೇ ಬದಲಿಸಿ ಮಹಿಳೆಯರು ಅಕ್ಷರ ಕಲಿಯುವ, ಹೆಣ್ಣುಮಕ್ಕಳಿಗೆ ಶಾಲೆಗೆ ಕಳಿಸುವ ಮಹತ್ವದ ಬಗ್ಗೆ ನಮ್ಮ ಭಾಷಣ ಜೋರಾಗುತ್ತಿತ್ತು. ಇನ್ನೊಮ್ಮೆಯಂತೂ ಊರಲ್ಲಿ ಸಂಘಟನೆಯ ಬಗ್ಗೆ ತೀವ್ರ ಪ್ರತಿರೋಧವಿದೆಯೆಂದು ನಾಲ್ಕಾರು ಮಂದಿ ಬಂದು ನಮ್ಮನ್ನೊಯ್ದು ಸುರಕ್ಷಿತ ಜಾಗಕ್ಕೆ ತಲುಪಿಸಿ ಹಿಂದಿರುಗಿದ್ದರು. ಎಷ್ಟು ವಿಚಿತ್ರ! ನಮ್ಮದೇ ಸ್ವತಂತ್ರ ದೇಶದಲ್ಲಿ ಕಾನೂನು ಕೊಡಮಾಡಿದ್ದನ್ನು ಪಡೆಯಲು ಜೀವ ಬೆದರಿಕೆ. ನಾವೇನೋ ತಪ್ಪು ಮಾಡುತ್ತಿದ್ದೇವೆಂಬಂತೆ ಅಡಗಿಕೊಂಡು ಓಡಿಬರಬೇಕು.


ಎರಡು ಮೂರು ವರ್ಷ ಈ ಸರ್ಕಸ್ ನಡೆಯಿತು. ಜನರಿಗಾದರೂ, ಅದರಲ್ಲೂ ಮಹಿಳೆಯರಿಗೆ ಪಂಚಾಯತಿಗೆ ಹೋಗಿ ಕೆಲಸ ಕೇಳುವುದು, ಅವರಿಂದ ಅನ್ನಿಸಿಕೊಳ್ಳುವುದು ಬಲು ಕಷ್ಟದ ಕೆಲಸವಾಗಿತ್ತು. ಆದರೆ ಪ್ರತಿವರ್ಷ ಸುಗ್ಗಿ ಮುಗಿಯುತ್ತಲೇ ಗಂಡ ಕೊಲ್ಹಾಪುರಕ್ಕೋ, ಗೋವಾಕ್ಕೋ ದೌಡಾಯಿಸುವುದು, ತಾನೊಬ್ಬಳೇ ಮನೆಯ ಜವಾಬ್ದಾರಿಯನ್ನೆಲ್ಲ ಹೊರುವಂತಾಗುವುದು ಬಹಳಷ್ಟು ಮಹಿಳೆಯರಿಗೆ ಸಾಕಾಗಿ ಹೋಗಿತ್ತು. ಇಲ್ಲಿ ತನಗೇನು ಕೆಲಸವಿಲ್ಲ. ಗಂಡ ದುಡ್ಡು ಕಳಿಸಿದರಷ್ಟೇ ಆ ವಾರದ ಸಂತೆ. ಈಗ ಊರಲ್ಲಿಯೇ ಉದ್ಯೋಗ ಸಿಗುತ್ತಿದೆಯೆಂದಾದರೆ ಯಾಕೆ ಬಿಡಬೇಕು? ಧೈರ್ಯ ಮಾಡಿ ಕೆಲವು ಮಹಿಳೆಯರು ಪಂಚಾಯತಿ ಕೆಲಸಕ್ಕೆ ಅರ್ಜಿ ಹಾಕಿದ್ದೇ, ಹೆಚ್ಚೆಚ್ಚು ಮಹಿಳೆಯರು ಜೊತೆಗೂಡಿದರು. ಊರ ಹಿರಿಯರ ಬೆದರಿಕೆ, 'ಆ ಮಂದಿಯ ಮಾತು ಕೇಳುತ್ತ ಹೊರಟರೆ ನಾಳೆ ಸತ್ತಾಗ ಹೊರಲು ಯಾರು ಬರ್ತಾರೆ?' ಗೆ 'ಸತ್ತ ಮೇಲಿನ ಮಾತು ಸತ್ತಾಗ ನೋಡಿಕೊಳ್ಳುವಾ, ಈಗ ಬದುಕಲಿಕ್ಕಾಗಿ ಕೆಲಸ ಮಾಡುತ್ತೇವೆ' ಎಂದು ಉತ್ತರ ಕೊಟ್ಟರು. ಪಂಚಾಯತಿಯವರು ಮಹಿಳೆಯರಿಗೆ ನೀಗಲಾರದಂಥ ಕಠಿಣ ಕೆಲಸವನ್ನು ಕೊಟ್ಟು ನೋಡಿದರು. ಕೈಗಳಲ್ಲಿ ಬೊಬ್ಬೆ ಎದ್ದರೂ ಬಿಡದೇ ಮಹಿಳೆಯರು ಗುಡ್ಡವನ್ನೂ ಕಡಿದು ತೋರಿಸಿದರು. ತುಂಬಿದ ಗಟಾರ ಬಳಿದರು. ಅದು ಉದ್ಯೋಗ ಖಾತರಿಯ ಕೆಲಸವಲ್ಲ ಎಂದು ಸಂಘಟನೆ ಎಚ್ಚರಿಸಿದಾಗ ಪಂಚಾಯ್ತಿಯು ಬಾಲ ಮುದುರಿಕೊಂಡಿತು. ಊರಿನವರೆಲ್ಲ ಸಂಡಾಸು ಮಾಡುವ ಜಾಗದಲ್ಲಿ ಕೆಲಸ ಕೊಟ್ಟಾಗ ಮಹಿಳೆಯರು ಮೂಗಿಗೆ ಬಟ್ಟೆ ಮುಚ್ಚಿಕೊಂಡು ಕೆಲಸ ಮಾಡಿದರು. ಮಾಡಿದ ಕೆಲಸಕ್ಕೆ ಪಗಾರು ಹಾಕದೇ, ಉದ್ಯೋಗ ಕೇಳಿದರೂ ಕೊಡದೇ ಸತಾಯಿಸಿತು ಆಡಳಿತ. ಆಗಲೂ ಧೃತಿಗೆಡದೆ ಮಹಿಳೆಯರು ಎಂಟಾನೆಂಟು ದಿನ ಜಿಲ್ಲಾ ಪಂಚಾಯತಿಯ ಮುಂದೆ ಶಾಂತಿಯುತ ಸತ್ಯಾಗ್ರಹ ನಡೆಸಿದರು. ಊರ ಹಿರಿಯರೆಲ್ಲ ಬಂದು ಬೆದರಿಕೆ ಒಡ್ಡಿದರೂ, ಸಂಘಟನೆಯ ನಾಯಕರನ್ನು ದಿನಪೂರ್ತಿ ಪೊಲೀಸ್ ಸ್ಟೇಷನ್ನಿನಲ್ಲಿ ಕುಳ್ಳಿರುವಂತೆ ಮಾಡಿದರೂ ಬೆದರಲಿಲ್ಲ, ಬಗ್ಗಲಿಲ್ಲ. ಜಿಲ್ಲಾ ಪಂಚಾಯತಿಯನ್ನೇ ಬಗ್ಗಿಸಿದರು. ಅಂದಿನಿಂದ ಪಂಚಾಯತಿಗಳಲ್ಲಿ ಜನರು ಕೆಲಸ ಕೇಳಿದಾಗ ಕೊಡಬೇಕೆಂಬ ಪಾಠವನ್ನು ಅಧಿಕಾರಿಗಳು ಕಲಿತರು.

ಈ ಹೊತ್ತಿಗೆ ರಾಜ್ಯಾದ್ಯಂತ ಬೇರೆ ಬೇರೆ ಹತ್ತು ಜಿಲ್ಲೆಗಳಲ್ಲಿ ಉದ್ಯೋಗ ಖಾತರಿಯ ಬಗ್ಗೆ ಕೆಲಸ ಮಾಡುತ್ತಿದ್ದ ಎಲ್ಲಾ ಸಂಘಟನೆಗಳನ್ನೂ ಜೊತೆ ಸೇರಿಸಿ 'ಗ್ರಾಮೀಣ ಕೂಲಿಕಾರರ ಸಂಘಟನೆ' ಟ್ರೇಡ್ ಯೂನಿಯನ್ನಾಗಿ ಬೆಳಗಾವಿಯಲ್ಲಿ ನೋಂದಣಿ ಆಯಿತು. ಈ ಹೊತ್ತಿಗೆ ಕಾನೂನಿನ ಪ್ರಕಾರ ಜನರು ಕೆಲಸ ಕೇಳುತ್ತಿದ್ದರ ಅರಿವು ಸರಕಾರಕ್ಕೂ ಆಗಿತ್ತು. ತಮ್ಮದೊಂದು ರಾಜ್ಯ ಮಟ್ಟದ ಸಂಘಟನೆ ಎಂಬ ಅರಿವು ಈ ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸಿತು.

ನಮ್ಮ ಕನಸು ಮಾತ್ರ ಇನ್ನೂ ದೊಡ್ಡದೇ ಇತ್ತು. ಗ್ರಾಮೀಣ ಜನರಿಗೆ ಉದ್ಯೋಗ ಕೊಡಿಸುವುದಾಗಿರಲಿಲ್ಲ ಅದು. ಸ್ಥಳೀಯ ಸರಕಾರವಾದ ಗ್ರಾಮ ಪಂಚಾಯತಿಯನ್ನು ಕೈಗೆ ತೆಗೆದುಕೊಳ್ಳುವುದಾಗಿತ್ತು. ಆಹಾರ, ಪ್ರಾಥಮಿಕ ಆರೋಗ್ಯ, ಶಿಕ್ಷಣ ಇವೆಲ್ಲ ಗ್ರಾಮೀಣ ಜನರ ಕೈಗೆಟಕುವಂತಾಗಬೇಕು. ಜನರು ಗ್ರಾಮ ಸಭೆಗಳಲ್ಲಿ ಭಾಗವಹಿಸಿ ತಮ್ಮ ಬೇಡಿಕೆಗಳನ್ನು ಇಟ್ಟು ಪಂಚಾಯತಿ ತೆಗೆದುಕೊಳ್ಳುವ ನಿರ್ಧಾರಗಳಲ್ಲಿ ಭಾಗಿಗಳಾಗಬೇಕು. ಪಡಿತರ ಇರಬಹುದು, ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟವಿರಬಹುದು, ಗರ್ಭಿಣಿ, ಬಾಣಂತಿಯರಿಗೆ, ಪುಟ್ಟ ಮಕ್ಕಳಿಗೆ ಅಂಗನವಾಡಿಯಲ್ಲಿ ಕೊಡುವ ಪೂರಕ ಪೌಷ್ಟಿಕ ಆಹಾರವಿರಬಹುದು ಇವುಗಳ ಆಯ್ಕೆಯಲ್ಲಿ ಸ್ಥಳೀಯರ ಪಾತ್ರವಿರಬೇಕು. ಸ್ಥಳೀಯ, ಪೌಷ್ಟಿಕ, ಆಹಾರ ಸಿಗುವಂತಾಗಬೇಕು. ಅದೇ ರೀತಿ ಅಲ್ಮಾ ಆಟಾ ಘೋಷಣೆಯಂತೆ ಪ್ರಾಥಮಿಕ ಆರೋಗ್ಯ ಜನರಿಗೆ ಸಿಗುವಂತಾಗಬೇಕು. ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿ ಮಕ್ಕಳು ಶಾಲೆ ಬಿಡದಂತಾಗಬೇಕು. ಗ್ರಾಮೀಣ ಜನರ ಸಂಘಟನೆಯ ಮೂಲಕವೇ ಇದೆಲ್ಲ ಸಾಧ್ಯ ಎನ್ನುವುದು ನಮ್ಮ ಕನಸು.

ಈ ಕಾರಣಕ್ಕೆ ಸಂಘಟನೆಯ ಹೋರಾಟಗಳು ಪಂಚಾಯತಿಯ ಮುಂಭಾಗಕ್ಕೆ ಮಾತ್ರ ಕೂಡ್ರಲಿಲ್ಲ. ಒಮ್ಮೆ ಜಿಲ್ಲಾಧಿಕಾರಿಗಳ ಕಚೇರಿ, ಒಮ್ಮೆ ಜಿಲ್ಲಾ ಪಂಚಾಯತಿ, ಇನ್ನೊಂದು ಸಾರೆ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಎಂದು ಸಾವಿರ ಸಾವಿರ ಸಂಖ್ಯೆಯಲ್ಲಿ ನ್ಯಾಯಕ್ಕಾಗಿ ಬೇಡಿಕೆ ಇಟ್ಟು ಕುಳಿತುಕೊಳ್ಳುವುದು ಸಾಮಾನ್ಯವಾಯಿತು. ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿಯ ಸುತ್ತ ಕಬ್ಬಿಣದ ಗೇಟು ನಿರ್ಮಿಸಿರುವುದಕ್ಕೆ ಕ್ರೆಡಿಟ್ಟನ್ನು ನಾವೇ ತೆಗೆದುಕೊಳ್ಳುತ್ತೇವೆ. ಮೊದಲು ಕಚೇರಿಯ ಬಾಗಿಲವರೆಗೂ ಹೋಗಿ ಕೂಡ್ರುತ್ತಿತ್ತು ನಮ್ಮ ಸೈನ್ಯ. ಈಗ ಜನರನ್ನು ಗೇಟಿನ ಹೊರಗೆ ತಳ್ಳಿದ್ದಾರೆ, ಜನರ ಕೂಗು ಜಿಲ್ಲಾಧಿಕಾರಿಗೂ ಕೇಳದಿರಲಿ ಎಂದು. ಆಹಾರ ಭದ್ರತೆ ಕಾನೂನು ತರುವುದರಲ್ಲಿ ಸಂಘಟನೆ ಮುಖ್ಯ ಪಾತ್ರ ವಹಿಸಿತು. ಈಗ ಅದರ ಜಾರಿಗಾಗಿ ಹೋರಾಡುತ್ತಿದೆ. ಗ್ರಾಮ ಪಂಚಾಯತಿಗಳಲ್ಲಿ ಅಧಿಕಾರಿಯ ನೇಮಕವಾಗಲು ಕಾರಣವಾಯಿತು. ಕಾನೂನು ಜಾರಿಗೆ ಯಾವ ತೊಡಕು ಬಂದರೂ ಸರಕಾರದ ಗಮನಕ್ಕೆ ತಂದು ಅದನ್ನು ಪರಿಹರಿಸುವುದರಲ್ಲಿ ನೆರವಾಯಿತು. ಪಂಚಾಯತಿಯ ದಿಕ್ಕು ದೆಸೆಯನ್ನು ಬದಲಿಸಲು ಅಲ್ಲಿರುವ ಜನಪ್ರತಿನಿಧಿಗಳು ನಮ್ಮವರಾಗಬೇಕೆಂದು ಪಂಚಾಯತಿ ಚುನಾವಣೆಗೆ ನಿಲ್ಲುವ ಪ್ರಯತ್ನವೂ ನಡೆಯಿತು. ಚುನಾವಣೆಯಲ್ಲಿ ಭಾಗವಹಿಸುವುದರ ಮೂಲಕ ಸರಕಾರದಲ್ಲಿ ಜನರ ಭಾಗವಹಿಸುವಿಕೆಯ ಪರಿಚಯವಾಯಿತು ಜನರಿಗೆ. ಊಟ, ಉಡುಗೊರೆ, ಮೇಜವಾನಿಗಳ ಖರ್ಚಿಲ್ಲದೆಯೇ, ಚುನಾವಣೆಗಳನ್ನು ನಡೆಸಬಹುದು ಎಂದು ಗೊತ್ತಾದಂತಾಯಿತು.

ಪಂಚಾಯತಿಯನ್ನು ಪ್ರವೇಶಿಸಿದಾಕ್ಷಣ ಮುಗಿಯಲಿಲ್ಲ. ಆಡಳಿತದ ಸೂತ್ರ ಜನರದ್ದಾಗಬೇಕು. ಗ್ರಾಮ ಸಭೆಗೆ ಹೋದರೆ ಸಾಲದು, ವಿಷಯಗಳ ಮಾಹಿತಿಯರಿತು ಜನರು ಭಾಗವಹಿಸುವಂತಾಗಬೇಕು. ಆಗಲೇ ಬದಲಾವಣೆ ಸಾಧ್ಯ. ಆಗಲೇ ಗಾಂಧೀಜಿಯವರು ಕನಸಿದ್ದ ಗ್ರಾಮ ಸ್ವರಾಜ್ಯ ನನಸಾಗಲು ಸಾಧ್ಯ. ಕನಸು ದೊಡ್ಡದಿದೆ, ನನಸಾಗಿಸಿಕೊಳ್ಳಲು ಸಂಘಟನೆಯನ್ನು ಸತತವಾಗಿ ಮುನ್ನಡೆಸುವುದು ಇನ್ನೂ ಬಾಕಿಯಿದೆ.



(ಮೂಲತಃ ಉ.ಕ. ಜಿಲ್ಲೆಯವರಾದ ಲೇಖಕಿ, ಸದ್ಯ ಧಾರವಾಡದಲ್ಲಿ ನೆಲೆಸಿದ್ದು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಉದ್ಯೋಗ ಖಾತರಿ ಯೋಜನೆ, ಆಹಾರ ಭದ್ರತೆ, ಪಾನ ನಿಷೇಧ, ಮಹಿಳಾ ದೌರ್ಜನ್ಯ ವಿಷಯಗಳಿಗೆ ಸಂಬಂಧಪಟ್ಟಂತೆ ಮಹಿಳೆಯರ ಸಂಘಟನೆ ಮಾಡುತ್ತಿದ್ದು ಈ ವಿಷಯಗಳ ಬಗ್ಗೆ ಪತ್ರಿಕೆಗಳಿಗೆ ನಿಯಮಿತವಾಗಿ ಲೇಖನಗಳನ್ನೂ ಬರೆಯುತ್ತಾರೆ.)

ಅಧ್ಯಯನ ಪ್ರವಾಸದ ಒಂದು ಪುಟ

ಪ್ಯಾಲೇಸ್ತೀನ್‌ನೊಳಕ್ಕೊಂದು ಇಣುಕು ನೋಟ

–ಪ್ರಿಯಾಂಕ ಮಧುಕರ್



ನಾವು ಭೇಟಿ ಮಾಡಿದ ಪ್ಯಾಲೆಸ್ತೀನಿ ಕುಟುಂಬದ ಮನೆಯ ಮುಂದೆ

ನಾನು ಇಂಗ್ಲೀಷ್ ಸಾಹಿತ್ಯದ ವಿದ್ಯಾರ್ಥಿನಿ. ನನ್ನ ಸಂಶೋಧನೆಗೆಂದು ವಿಷಯವನ್ನು ಆರಿಸಿಕೊಳ್ಳುವಾಗ ನನ್ನ ಇದುವರೆಗಿನ ಓದಿನ ಹಿನ್ನೆಲೆಯಿಂದ ನನಗೆ ಹೆಚ್ಚು ಕುತೂಹಲಕರ ಎನಿಸಿದ ಪ್ಯಾಲಸ್ತೀನ್ ಮಹಿಳಾ ಬರಹ ಹಾಗೂ ಬದುಕನ್ನು ಕುರಿತು ಅಧ್ಯಯನ ಮಾಡಬೇಕು ಎಂದು ಅನಿಸಿದ ಕಾರಣ ಅಲ್ಲಿನ ಲೇಖಕಿ ಸಹಾರಾ ಖಲೀಫೆ ಅವರ ಸಾಹಿತ್ಯ ಕುರಿತು ಸಂಶೋಧನೆ ಪ್ರಾರಂಭಿಸಿದೆ. ಆಗ ಈ ಎಲ್ಲ ಸಂಗತಿಗಳು ನನ್ನ ಅನುಭವಲೋಕಕ್ಕೆ ನಿಲುಕದ ಬರೀ ಪುಸ್ತಕದಲ್ಲಿನ ಮಾಹಿತಿಯನ್ನೇ ಆಧಾರವಾಗಿಟ್ಟುಕೊಂಡು ಹಾಗೂ ನಮ್ಮ ಅನುಭವಗಳಿಗೆ ಹೋಲಿಕೆ ಮಾಡಲಾಗದ ಸಂಗತಿಗಳೇ ಆಗಿದ್ದವು. ಆ ಪ್ರದೇಶವನ್ನು ಸ್ವಲ್ಪವಾದರೂ ಕಣ್ಣಿಂದ ನೋಡುವ ಆ ನೆಲವನ್ನು ಕಾಲಿನಿಂದ ಮೆಟ್ಟುವ ಅಲ್ಲಿನ ಗಾಳಿಯನ್ನು ಉಸಿರಾಡುವ ಅಲ್ಲಿನ ನೀರನ್ನು ಕುಡಿಯುವ ಆಸೆ ಮೊಳಕೆಯೊಡೆದು ಕಾಡುತ್ತಲೇ ಇತ್ತು. ಅದು ಸಾಕಾರಗೊಂಡದ್ದು 'First International Youth camp' ಅನ್ನು ಸರ್ಕಾರ ಆಯೋಜಿಸಿ ನಮ್ಮ ಒಂದಷ್ಟು ಜನರನ್ನು ಆಯ್ಕೆ ಮಾಡಿದಾಗ ನನ್ನ ಕನಸು ನನಸಾಯಿತು.

ಮೊದಲಿಗೆ ನಾನು ಅಲ್ಲಿಗೆ ಹೋದಾಗ ಅಲ್ಲಿ ವಲಸೆ ವಿಚಾರಣೆಯಲ್ಲಿಯೇ ಹೈರಾಣಾದೆ. ಬಹುಶಃ ನನ್ನ ಪಾಸ್‌ಪೋರ್ಟ್‌ನಲ್ಲಿನ ನನ್ನ ತಂದೆಯ ಮುಸ್ಲಿಂ ಹೆಸರು ಆ ವಲಸೆ ವಿಚಾರಣೆಯ ವಿಭಾಗದ ಸಿಬ್ಬಂದಿಯನ್ನು ಈ ಹುಡುಗಿಗೆ ಒಂದಿಷ್ಟು ಕಿರಿಕಿರಿ ಮಾಡುವಂತೆ ಉತ್ತೇಜಿಸಿರಬೇಕೆಂದು ನನ್ನ ಊಹೆ. ನನ್ನ ಜತೆಯಲ್ಲಿದ್ದವರೆಲ್ಲರನ್ನೂ ಐದು ನಿಮಿಷದಲ್ಲಿ ತಪಾಸಿಸಿ ಕಳಿಸುತ್ತಿದ್ದ ಸಿಬ್ಬಂದಿ ನನ್ನನ್ನು ಸುಮ್ಮನೆ ನಿಲ್ಲಿಸಿ ಕಾಯಿಸಿ ಉದ್ವಿಗ್ನಳನ್ನಾಗಿ ಮಾಡಲಾದ ಕಾರಣವಾದರೂ ಏನು?

ಪ್ರವಾಸದುದ್ದಕ್ಕೂ ಹೆಜ್ಜೆ ಹೆಜ್ಜೆಗೆ ಬಂದೂಕುಧಾರಿಗಳೇ ಅಲ್ಲಲ್ಲಿ ಕಾಣಸಿಗುತ್ತಿದ್ದರು. ಭಯಭೀತಿಯ ವಾತಾವರಣ ಅಲ್ಲಿತ್ತು. ಪ್ರವಾಸವಲ್ಲ ಇದು ಪ್ರಯಾಸವೇ ಎನಿಸಿತು. ಬರಬಾರದಿತ್ತು ಅಂತಲೂ ಅನಿಸುತ್ತಿತ್ತು. ಅದರೂ ಇದ್ದ ಹತ್ತು ದಿನಗಳಲ್ಲೇ ಸಾಕಷ್ಟು ಅನುಭವಗಳನ್ನು ನನ್ನದಾಗಿಸಿಕೊಳ್ಳಲು ಕಾತರಳಾಗಿದ್ದೆ. ಹನ್ಸಿ ಎಂಬ ಕುಟುಂಬವೊಂದನ್ನು ಭೇಟಿ ಮಾಡುವ ಒಂದು ಅವಕಾಶ



ಗ್ರಾಮದ ಸುತ್ತಣ ಗೋಡೆ

ದೊರೆಯಿತು. ಅವರ ಗ್ರಾಮವನ್ನು ಇಸ್ರೇಲ್ ವಶಪಡಿಸಿಕೊಂಡಿತ್ತು. ನಂತರ ಈ ಗ್ರಾಮವನ್ನು ಮುಖ್ಯಭೂಭಾಗದಿಂದ ಪ್ರತ್ಯೇಕಿಸುವ ಒಂದು ಮಹಾಗೋಡೆಯನ್ನು ನಿರ್ಮಿಸಿತು. ಇದನ್ನು ಅವರು 'Segregation Wall' ಎನ್ನುತ್ತಾರೆ. ಆದರೆ ಪ್ಯಾಲಸ್ತೀನಿಯರು 'Aparthied Wall' (ಜನಾಂಗೀಯ ಗೋಡೆ) ಎನ್ನುವರು. ಇದರ ನಿರ್ಮಾಣ ಹಂತದಲ್ಲಿ ಪ್ಯಾಲಸ್ತೀನಿಯರು ತಮ್ಮ ಬದುಕನ್ನು ಕಳೆದುಕೊಂಡಿದ್ದಾರೆ. ಸಾವಿರಾರು ಮನೆಗಳು, ಕಟ್ಟಿಕೊಂಡ ಬದುಕು, ಕೃಷಿ ಭೂಮಿ, ರೈತರ ಬದುಕು ನುಚ್ಚುನೂರಾಗಿದೆ.. ಅದೇ ನೆಲದಲ್ಲಿ ಅವರು ನಿರಾಶ್ರಿತರಾಗಿ ಬದುಕುತ್ತಿದ್ದಾರೆ. ಈ ಮಧ್ಯೆ ಹನ್ಸಿ ಕುಟುಂಬ ಮಾತ್ರ ಅಂತಾರಾಷ್ಟ್ರೀಯ ಸುದ್ದಿಸಂಸ್ಥೆಗಳ ನೆರವಿನಿಂದ ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಾ ತಮ್ಮ ಕುಟುಂಬದೊಂದಿಗೆ ನೆಲೆಸಿದ್ದಾರೆ. ಇದು ನಿಜಕ್ಕೂ ಅವರ ಧೈರ್ಯ ಮತ್ತು ಸ್ಥೈರ್ಯಗಳ ಫಲ. ಅವರ ಮನೆಯ ಎದುರಿಗೆ ಎತ್ತರವಾದ ಅಭೇದ್ಯವಾದ ಮಾನವ ನಿರ್ಮಿತ ಗೋಡೆ ಮಾನವೀಯತೆಗೆ ಹಾಕಿದ ಗೋಡೆಯಂತೆ ಗೋಚರಿಸಿತು. ಸುತ್ತಲೂ ನಿರ್ಜನ ಪ್ರದೇಶ. ಇತ್ತ ಕಡೆ ಇಸ್ರೇಲಿ ಆಕ್ರಮಿತ ಪ್ರದೇಶವಾದ್ದರಿಂದ ಅಲ್ಲಿ ಇಸ್ರೇಲಿ ಸೈನ್ಯದ ನೆಲೆ. ಒಂದು ಭಯಾನಕ ಸನ್ನಿವೇಶದಲ್ಲಿ ಈ ಕುಟುಂಬ ತಮ್ಮ ಬಂಧು ಬಳಗ ಸ್ನೇಹಿತರ ಒಡನಾಟದಿಂದ ದೂರವಾಗಿ ಜೀವಿಸುತ್ತಿದ್ದಾರೆ. ಇಷ್ಟೇ ಅಲ್ಲದೇ ಶಿಕ್ಷಣ ಆರೋಗ್ಯ ನಾಗರೀಕ ಜೀವನದಿಂದಲೂ ವಂಚಿತರಾಗಿ ಬದುಕು ಕಟ್ಟಿಕೊಂಡಿರುವುದು ಅಚ್ಚರಿಯ ಸಂಗತಿ.




ಶ್ರೀಮತಿ ಹನ್ಸಿ

ನಮ್ಮ ತಂಡ ಇಸ್ರೇಲಿ ಸೈನಿಕರ ಅನುಮತಿ ಪಡೆದು(ಅನುಮತಿ ಕಡ್ಡಾಯ) ಅವರ ಕುಟುಂಬದೊಂದಿಗೆ ಬೆರೆತು ಚರ್ಚಿಸಿ ಕೆಲವು ಸಮಯ ಕಳೆಯಿತು.. ಈ ಮಧ್ಯೆ ಸೈನಿಕ ತುಕಡಿಯೊಂದು ಅನಿರೀಕ್ಷಿತವಾಗಿ ಬಂದು ಒಂದು ಭಯ ಭೀತಿಯ ವಾತಾವರಣ ಸೃಷ್ಟಿಯಾಗಿತ್ತು. ಆದರೆ ಹನ್ಸಿ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ನಿರರ್ಗಳವಾಗಿ ತಮ್ಮ ಹೋರಾಟ ಮತ್ತು ಅನುಭವವನ್ನು ಬಿಚ್ಚಿಟ್ಟರು. ಚಹಾ ಬಿಸ್ಕತ್ತುಗಳನ್ನು ನೀಡಿ ನಮ್ಮ ಆತಂಕವನ್ನು ದೂರಮಾಡಿದರು. ಹನ್ಸಿ ಕುಟುಂಬ ಅತ್ಯಂತ ದಾರುಣ ಹಿಂಸೆಯನ್ನು ಅನುಭವಿಸಿತ್ತು. ಆದರೂ ಅವರಲ್ಲಿ ಮಾನವೀಯ ಮೌಲ್ಯಗಳು ಇನ್ನೂ ಜೀವಂತವಾಗಿರುವುದನ್ನು ಕಂಡೆ. ಅವರ ಮನದ ಮೂಲೆಯಲ್ಲಿ ಎಲ್ಲೋ ಹತಾಶೆಯೂ ಸುಳಿದಂತಿತ್ತು. ನಾವು ಎಷ್ಟು ಮಾತನಾಡಿದರೂ ಅನುಕಂಪ ಮಾತ್ರವಲ್ಲದೇ ಏನೂ ಕೊಡಲು ನಮ್ಮಿಂದ ಸಾಧ್ಯವಿಲ್ಲ ಎಂಬ ಅಸಹಾಯಕತೆ ನನ್ನಲ್ಲಿ ಮೂಡಿತು.

ತಮ್ಮ ನೆಲವನ್ನು ಉಳಿಸಿಕೊಳ್ಳುವ ಹಂಬಲ, ತಮ್ಮ ಇಸ್ರೇಲಿ ಹಿಡಿತದಿಂದ ಬಿಡುಗಡೆಗೊಳಿಸಿಕೊಳ್ಳುವ ಸತತ ಪ್ರಯತ್ನವನ್ನು ಅವರು ಮಾಡುತ್ತಲೇ ಬಂದಿದ್ದಾರೆ. ಹನ್ಸಿ ಎಂಬ ಒಂದು ಕುಟುಂಬವನ್ನು ಭೇಟಿಯಾದರೂ ಉಳಿದ ಕುಟುಂಬಗಳ ಕಥೆ ಇವರದ್ದಕ್ಕಿಂತ ಭಿನ್ನವಾಗೇನೂ ಇರದು ಎಂದೆನಿಸಿತು.

ಈ ಪ್ರವಾಸದಲ್ಲಿ ಅಲ್ಲಿನ ಹೆಣ್ಣು ಮಕ್ಕಳು ಕೇವಲ ಭೋಗ ವಸ್ತುಗಳಂತೆ ಮಕ್ಕಳನ್ನು ಹೆರುವ ಯಂತ್ರವಾಗಿ ಮಾತ್ರ ನನಗೆ ಕಂಡರು. ಅತಿ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ ಅತಿ ಹೆಚ್ಚು ಮಕ್ಕಳನ್ನು ಹೊಂದಿದ ತಾಯಂದಿರನ್ನು ಕಂಡು ಈ ಸಂದರ್ಭದಲ್ಲಿ ನನಗೆ ಬೇಸರವೂ ಆಯಿತು.



(ಮೂಲತಃ ಶಿವಮೊಗ್ಗದವರಾದ ಲೇಖಕಿ ಕುವೆಂಪು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದು ಈಗ ಸುರತ್ಕಲ್‌ನ ರಾಷ್ಟ್ರೀಯ ತಾಂತ್ರಿಕ ಅಧ್ಯಯನ ಸಂಸ್ಥೆಯಲ್ಲಿ ಪಿಎಚ್‌ಡಿ ಮಾಡುತ್ತಿದ್ದಾರೆ.)

ಪರಿಸರ ಪ್ರವಾಸದ ಒಂದು ಪುಟ

ಚಿರತೆಯೊಂದರ ಭಕ್ಷ್ಯ ಭೋಜನ

–ಡಾ. ಶೇಖರ್ ಗೌಳೇರ್



'ಮಸೈಮಾರಾ' ಕೀನ್ಯಾದ ಜಗತ್ ಪ್ರಸಿದ್ಧ ನ್ಯಾಶನಲ್ ಪಾರ್ಕ್. ಶಿವಮೊಗ್ಗದ ಆರು ಜನ ಛಾಯಾಗ್ರಾಹಕರು ಸಫಾರಿಗಾಗಿ ೨೦೧೬ರ ಡಿಸೆಂಬರ್ ತಿಂಗಳಲ್ಲಿ ಕೀನ್ಯಾಕ್ಕೆ ಹೊರಟೆವು. ಈ ದೇಶದ ರಾಜಧಾನಿ ನೈರೋಬಿಯ ಪಶ್ಚಿಮಕ್ಕೆ ೨೫೮ ಕಿ.ಮೀ. ದೂರದಲ್ಲಿರುವ ಈ ರಾಷ್ಟ್ರೀಯ ಉದ್ಯಾನವನದ ಕಿಕೊರಾಕ್ ಲಾಡ್ಜ್‌ನಲ್ಲಿ ನಾವು ತಂಗಿದೆವು. ಮೊದಲ ದಿನದ ಸಫಾರಿಯಲ್ಲಿಯೇ ಆಫ್ರಿಕಾದ ಅತಿ ದೊಡ್ಡ ಐದು ಪ್ರಾಣಿಗಳೆಂದು ಪ್ರಸಿದ್ಧವಾದ ಆಫ್ರಿಕಾದ ಆನೆ, ಸಿಂಹ, ಭೂಶಿರ ಕಾಡೆಮ್ಮೆ, ಚೀತಾ ನೋಡಿ ರೋಮಾಂಚನಗೊಂಡಿದ್ದೆವು. ಈ ಐದರಲ್ಲಿ ಚಿರತೆಯ(ಲೆಪರ್ಡ್) ದರ್ಶನವಾಗಿರಲಿಲ್ಲ.. ಒಂದು ಕಾಲಕ್ಕೆ ಈ ಐದೂ ಪ್ರಾಣಿಗಳನ್ನು ಭಯಾನಕವೆಂದು ಪರಿಗಣಿಸಿ ಬೇಟೆಗಾರರು ಬೆನ್ನಟ್ಟಿ ಕೊಲ್ಲುತ್ತಿದ್ದರಂತೆ. ಆದರೀಗ ಪ್ರತಿವರ್ಷ ಮಸೈಮಾರಾಕ್ಕೆ ಬರುವ ಸಾವಿರಾರು ಪ್ರವಾಸಿಗರು ಕೂಡ ಇಂದಿಗೂ ಇವುಗಳನ್ನು ತಮ್ಮ ಕ್ಯಾಮೆರಾಗಳಲ್ಲಿ 'ಬೇಟೆ'ಯಾಡಿ(ಛಾಯಾಚಿತ್ರ ತೆಗದು!) ಖುಷಿಪಡುತ್ತಾರೆ.

ಮೊದಲ ದಿನ ನಾವು ನೋಡಿದ್ದು ಕೇವಲ ಆ ನಾಲ್ಕೇ ಪ್ರಾಣಿಗಳಲ್ಲ. ಜಿಂಕೆಯ ಜಾತಿಗೇ ಸೇರಿದ ಈ ಕಾಡಿಗೇ ವಿಶಿಷ್ಟವಾದ ಇಂಪಾಲ, ಗಜೆಲ್, ಇಲಾಂಡ್ಸ್, ಮತ್ತೆ ಕಾಡು ದನ (ವೈಲ್ಡ್ ಬೀಸ್ಟ್) ಕಾಡುಮೇಕೆ(ಟೋಪಿ), ಝೀಬ್ರಾ, ಝರಾಫೆ ಹಾಗೂ ಬಸ್ಟರ್ಡ್, ರೋಲರ್, ಸೆಕ್ರೇಟರಿ ಬರ್ಡ್ ಹಾಗೂ ಗ್ರೇಕ್ರೆಸ್ಟೆಡ್ ಕ್ರೌನ್ ಕ್ರೇನ್ ಮುಂತಾದ ಪ್ರಾಣಿ ಪಕ್ಷಿಗಳೂ ನಮಗೆ ಅವುಗಳ ಸಹಜ ಪರಿಸರದಲ್ಲಿ ಕಂಡು ಇಲ್ಲಿಗೆ ಬಂದದ್ದು ಸಾರ್ಥಕವೆನಿಸಿತ್ತು.

ಎರಡನೇ ದಿನ ನಾವು ಬೆಳಗಿನ ಸಫಾರಿ ಮುಗಿಸಿ ಲಾಡ್ಜ್‌ಗೆ ವಾಪಾಸಾಗುತ್ತಿದ್ದೆವು. ಡ್ರೈವರ್ ಡೆವಿಡ್ 'ಚಿರತೆ ಕಾಣಿಸಿಕೊಂಡಿದೆ' ಎಂದಾಗ ಎಲ್ಲರ ಕಿವಿಗಳು ಚುರುಕಾದವು. ಮತ್ತೊಬ್ಬ ಡ್ರೈವರ್ ಡೌಗ್ಲಾಸ್ ಮಧ್ಯಾಹ್ನ ಬೇಗ ಊಟ ಮುಗಿಸಿ ಸಫಾರಿಗೆ ಹೋಗೋಣ ಎಂದರು. ಮಧ್ಯಾಹ್ನ ೩:೩೦ಕ್ಕೆ ಹೊರಟಾಗ ಉರಿ ಬಿಸಿಲಿದ್ದರೂ ಕಿಟಕಿಯಿಂದ ತಂಪು ಗಾಳಿ ಬೀಸುತ್ತಿತ್ತು. ಎರಡು ತೆರೆದ ವಾಹನದಲ್ಲಿ ನಾವು ಮೂರು ಮೂರು ಜನ ಪ್ರಯಾಣಿಸುತ್ತಿದ್ದೆವು. ವಾಹನಕ್ಕೆ ಗಾಜಿನ ಕಿಟಕಿಗಳು, ಮೇಲ್ಛಾವಣಿ ಎತ್ತಿದರೆ ವೀಕ್ಷಣೆ ಮತ್ತು ಛಾಯಾಗ್ರಹಣಕ್ಕೆ ಅನುಕೂಲವಿತ್ತು. ಛಾಯಾ ಚಿತ್ರ ತೆಗೆಯಲು ಎರಡೆರಡು ಕ್ಯಾಮರಾ ಮತ್ತು ಎಲ್ಲ ಪೂರಕ ಸಲಕರಣೆಗಳನ್ನು ಸಿದ್ಧ ಮಾಡಿಕೊಂಡಿದ್ದೆವು. ಸಾಗುವಾಗ ಹೆಜ್ಜೆ ಹೆಜ್ಜೆಗೂ ಡ್ರೈವರ್‌ಗಳು ಪ್ರಾಣಿ – ಪಕ್ಷಿಗಳ ರೋಚಕ ವಿವರ ನೀಡುತ್ತಿದ್ದರು. ಎರಡೂ ವಾಹನಗಳು ವಿಭಿನ್ನ ದಾರಿಗಳಲ್ಲಿ ಹೋಗುತ್ತಿದ್ದುದ್ದರಿಂದ ನೋಟ ಮತ್ತು ಫೋಟೋಗಳಲ್ಲಿ ವಿಭಿನ್ನತೆ ಇತ್ತು. ಕುರುಚಲು ಕಾಡಿನ ವಿಶಾಲ ಸವನ್ನಾ ಹುಲ್ಲುಗಾವಲಿನ ಮಧ್ಯ ಮಧ್ಯ ಛತ್ರಿಯಾಕಾರದ ಮರಗಳು ಸಫಾರಿಯನ್ನು ಮನೋಹರಗೊಳಿಸಿದ್ದವು. ಕಚ್ಚಾ ರಸ್ತೆಯ ತಗ್ಗು, ದಿಣ್ಣೆಗಳನ್ನು ದಾಟಿ ಧೂಳೆಬ್ಬಿಸುತ್ತ ವಾಹನಗಳು ಓಡುತ್ತಿದ್ದವು. ಕ್ಯಾಮರಾದ ಕ್ಲಿಕ್ ಶಬ್ದ ಬಿಟ್ಟರೆ ಎಲ್ಲವೂ ನಿಶಬ್ದ, ಎಲ್ಲೆಲ್ಲೂ ನೀರವ ಮೌನ.

ಅರ್ಧಘಂಟೆ ಕಳೆದಿರಬಹುದು, ೩೦ ಕಿ.ಮೀ ದೂರದ ಟಾಂಜಾನಿಯಾ ಗಡಿಯ ತಲೇಕ್ ಪ್ರದೇಶದ ದಿಣ್ಣೆಯಲ್ಲಿ ಡ್ರೈವರ್ ಡೌಗ್ಲಾಸ್ ವಾಹನ ನಿಲ್ಲಿಸಿದ. ಬೆರಳು ತೋರಿಸಿ ಮೌನವಾಗಿ 'ಚಿರತೆ ಶಿಕಾರಿ' ಎಂದು ಉಸುರಿದ. ನೋಡಿದರೆ ೧೫-೨೦ ಅಡಿ ದೂರದ ಪೊದೆಯ ನೆರಳಲ್ಲಿ ರಾಜ ಗಾಂಭೀರ್ಯದಿಂದ ಚಿರತೆ ಮಲಗಿತ್ತು. ಅದರ ಮುಂದೆಯೇ ಬೇಟೆಯ ಗಜೆಲ್ (ದೊಡ್ಡ ಗಾತ್ರದ ಜಿಂಕೆ) ಸತ್ತು ಬಿದ್ದಿತ್ತು. ವಾಹನ ಶಬ್ದಕ್ಕೆ ಚಿರತೆ ಎದ್ದು ಕುಳಿತು ಒಮ್ಮೆ ನಮ್ಮನ್ನು ಕೆಕ್ಕರಿಸಿ ನೋಡಿದ್ದೇ ತಡ, ಕ್ಯಾಮರಾಗಳು ಚಕ ಚಕನೇ ಕ್ಲಿಕ್ಕಿಸಿದವು. ಕಪ್ಪು ಮಚ್ಚೆಯ ಕಂದು ಜಿಳಿ ಬಣ್ಣದ ಚಿರತೆ ಉತ್ಸಾಹ ತುಂಬುವ ಹರೆಯದ ಪ್ರಾಣಿ. ಅದು ಜಿಂಕೆಯ ಕಿಬ್ಬೊಟ್ಟೆ, ತೊಡೆ, ವೃಷಣಗಳನ್ನು ಕಿತ್ತು ಕಿತ್ತು ತಿನ್ನತೊಡಗಿತ್ತು. ರಕ್ತ ಒಸರುತ್ತಿತ್ತು. ಕರಳುಗಳು ಕಿತ್ತು ಹೊರಬಂದಿದ್ದವು. ಬಾಯಿಗೆ ಬಿಡುವಿಲ್ಲದ ಕೆಲಸ. ಸುತ್ತ ಯಾರಿದ್ದಾರೆಂಬ ಭಯವೂ ಅದಕ್ಕಿರಲಿಲ್ಲ. ಸುಮಾರು ಒಂದು ಘಂಟೆಯವರೆಗೆ ಅದರ ಭಕ್ಷ ಭೋಜನ ನಡದೇ ಇತ್ತು.

ಸಫಾರಿ ಡ್ರೈವರ್‌ಗಳು ಕೂಡಲೇ ಇತರ ಪ್ರವಾಸಿಗಳಿಗೆ ಈ ಬಗ್ಗೆ ಸುದ್ದಿ ಮುಟ್ಟಿಸಿದರು. ಸಂಜೆ ಐದು ಘಂಟೆಯ ಹೊತ್ತಿಗೆ ಒಟ್ಟು ಹದಿನಾಲ್ಕು ಜೀಪುಗಳು ಈ ಅಪರೂಪದ ದೃಶ್ಯವನ್ನು ನೋಡಲು ಸುತ್ತುವರಿದಿದ್ದವು. ಮಸೈಮಾರಾ ಗೇಮ್ ರಿಜರ್ವ್ ಮೇಲಧಿಕಾರಿಗಳು ತಕ್ಷಣ ಎಲ್ಲಾ ವಾಹನಗಳ ಡ್ರೈವರ್‌ಗಳಿಗೆ ಚಿರತೆಯ ಭೋಜನಕ್ಕೆ ಭಂಗ ತರಬೇಡಿ, ಹತ್ತಿರ ಹೋಗಬೇಡಿ ಎಂದು ಸಂದೇಶ ರವಾನಿಸಿದ್ದರು. ಎಲ್ಲರೂ ದೂರ ಸರಿದರು. ಸದ್ದುಗದ್ದಲ ಸ್ವಲ್ಪ ಕಡಿಮೆಯಾಯಿತು.

ಅಷ್ಟರಲ್ಲಿ ಚಿರತೆ ಹತ್ತಿರದ ಬ್ಲಾಕ್ ಕ್ರೋಟನ್ ಮರ ಹತ್ತಲು ಪ್ರಯತ್ನ ನಡೆಸಿತು. ತನ್ನ ಬೇಟೆಯನ್ನು ಬಾಯಿಯಿಂದ ಕಚ್ಚಿ ದರ ದರ ಎಳೆದುಕೊಂಡು ಮರದ ಬುಡಕ್ಕೆ ಹೋಯಿತು. ಒಂದೆರಡು ಬಾರಿ ಬೇಟೆಯನ್ನು ಬಾಯಲ್ಲಿ ಕಚ್ಚಿಕೊಂಡು ಮರ ಹತ್ತಲು ಪ್ರಯತ್ನಿಸಿ ಕೆಳಗೆ ಬಿತ್ತು. ಬೇಟೆಯ ಜಿಂಕೆ ಚಿರತೆ ಗಾತ್ರದ ಎರಡರಷ್ಟಿತ್ತು. ಅಷ್ಟು ಭಾರದ ಬೇಟೆಯನ್ನು ಅದು ಹೇಗೆ ಮರದ ಮೇಲೆ ಒಯ್ಯಬಲ್ಲದು ಎಂಬುದು ನಮಗೆ ಕುತೂಹಲದ ಸಂಗತಿಯಾಗಿತ್ತು. ಕುಳಿತು ಸ್ವಲ್ಪ ಸುಧಾರಿಸಿಕೊಂಡ ಚಿರತೆ ನೋಡು ನೋಡುತ್ತಿದ್ದಂತೆ ಬೇಟೆಯನ್ನು ಬಾಯಲ್ಲಿ ಕಚ್ಚಿಕೊಂಡು ತನ್ನ ಎಲ್ಲಾ ಶಕ್ತಿಯನ್ನು ಒಗ್ಗೂಡಿಸಿಕೊಂಡು ಮಿಂಚಿನ ವೇಗದಲ್ಲಿ ೨೦ ಅಡಿ ಎತ್ತರದ ಮರ ಏರಿತು. ಎರಡು ಟೊಂಗೆಗಳ ಮಧ್ಯ ಬೇಟೆಯ ಜಿಂಕೆ ನೇತಾಡತೊಡಗಿತ್ತು. ಕೆಳಕ್ಕೆ ಬಿದ್ದು ಹೋಗಬಾರದೆಂದು ಚಿರತೆ ತನ್ನ ಬೇಟೆಯನ್ನು ಅತ್ತ ಇತ್ತ ಸರಿಪಡಿಸುವಷ್ಟರಲ್ಲಿ ಜಿಂಕೆಯ ದೇಹ ದೊಪ್ಪನೆ ಕೆಳಗೆ ಬಿತ್ತು! ನಿರಾಸೆಗೊಂಡ ಚಿರತೆ ನಿಧಾನವಾಗಿ ಕೆಳಗಿಳಿದು ಬಂದು ಬೇಟೆಯ ಮುಂದೆ ಕುಳಿತು ವಿಶ್ರಾಂತಿ ಪಡೆಯತೊಡಗಿತು.

ಹೊತ್ತು ಮುಳುಗಿತ್ತು, ಎಲ್ಲಾ ವಾಹನಗಳೂ ಅಲ್ಲಿಂದ ಜಾಗ ಖಾಲಿಮಾಡಿದ್ದವು. ನಾವೂ ಕೂಡ ಕಿಕೋರಾಕ್ ಲಾಡ್ಜ್‌ನತ್ತ ವಾಹನ ಓಡಿಸಿದೆವು. ರಾತ್ರಿ ಊಟ ಮಾಡಿ ಮಲಗಿದರೂ ನಿದ್ರೆ ಬಾರದೇ ಚಿರತೆ ಬೇಟೆ ಹೊತ್ತುಕೊಂಡು ಮರ ಹತ್ತಿರಬಹುದೇ? ಎಂಬ ಯೋಚನೆ. ಬೆಳಕು ಹರಿಯಿತು. ಕುತೂಹಲ ತಡೆಯದೇ ಮತ್ತೆ ನಮ್ಮ ಸಫಾರಿ ಹಿಂದಿನ ದಿನದ ಚಿರತೆ ಬೇಟೆಯ ತಾಣ ತಲುಪಿತು. ನೋಡಿದರೆ ಚಿರತೆ ತನ್ನ ಜಾಗ ಬದಲಿಸಿ ಬೇರೊಂದು ಮರದ ಮೇಲೆ ಬೇಟೆಯನ್ನಿಟ್ಟುಕೊಂಡು ಆರಾಮಾಗಿ ಕುಳಿತು ಮಾಂಸ ತಿನ್ನುತ್ತಿತ್ತು. ಅಷ್ಟರಲ್ಲಿ ವಾಸನೆ ಹಿಡಿದು ಬಂದ ಕತ್ತೆ ಕಿರುಬಗಳು ಮರದ ಕೆಳಕ್ಕೆ ಬಿದ್ದ ಮಾಂಸದ ತುಂಡುಗಳನ್ನು ಆಯ್ದು ತಿನ್ನುತ್ತಿದ್ದವು. ಹತ್ತಿರದ ಮರಗಳ ಮೇಲೆ ರಣಹದ್ದು, ಗರುಡಗಳು ಉಳಿದ ಮಾಂಸಕ್ಕೆ ಹಸಿವಿನಿಂದ ಕಾದಿದ್ದವು.

ಇಂತಹ ದೃಶ್ಯಗಳನ್ನು ನಾವು ಟಿವಿ ಸಾಕ್ಷ್ಯಚಿತ್ರಗಳಲ್ಲಿ ನೋಡಿ ಅನಂದಿಸಿದ್ದೇವೆ. ಆದರೆ ಇಂತಹ ಘಟನೆಯನ್ನು ಜೀವಂತವಾಗಿ ಅತಿ ಹತ್ತಿರದಿಂದ ನೋಡುವ ಅನುಭವವೇ ಬೇರೆ! ಅದು ರೋಚಕ, ರೋಮಾಂಚನ ಇತ್ಯಾದಿ ಶಬ್ದಗಳಿಂದ ವರ್ಣಿಸಲಾಗುವ ಅನುಭವವನ್ನು ಮೀರಿದ್ದು.



(ಪ.ಪೂ. ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಲೇಖಕರು ಪರಿಸರವಾದಿಗಳೂ, ವಿಜ್ಞಾನ ಲೇಖಕರೂ ಹೌದು)

ಅಧ್ಯಾತ್ಮ

ಝೆನ್ ಕಥೆಗಳು

ಆಯ್ಕೆ: ಡಿ.ಎಸ್. ನಾಗಭೂಷಣ
ಕನ್ನಡಕ್ಕೆ: ಓ.ಎಲ್ ನಾಗಭೂಷಣ ಸ್ವಾಮಿ



ಝೆನ್ ಬೌದ್ಧ ಧರ್ಮದ ಒಂದು ವಿಶಿಷ್ಟ ಶಾಖೆ. ಬೌದ್ಧ ಇತಿಹಾಸದ ಪ್ರಕಾರ ಇದನ್ನು ಬೋಧಿಧರ್ಮನೆಂಬ ಬೌದ್ಧ ಸಂನ್ಯಾಸಿ ಭಾರತದಿಂದ ಚೀನಾಗೆ ಒಯ್ದನೆಂದೂ, ಅದು ಜಪಾನ್‌ವರೆಗೆ ಹರಡಿ ಜನಮನ್ನಣೆ ಪಡೆಯಿತೆಂದೂ ಝೆನ್ ಎನ್ನುವುದು ಧ್ಯಾನ ಎಂಬ ಶಬ್ದದಿಂದ ಉತ್ಪತ್ತಿಯಾದ ಶಬ್ದ ಎಂದು ಹೇಳಲಾಗುತ್ತದೆ. ಆದರೆ ಇದೊಂದು ವಿಶಿಷ್ಟ ಧ್ಯಾನ ಮಾರ್ಗ. ಲೋಕದ ಸದ್ದಿನ ಹಿಂದಿನ ಮೌನವನ್ನು ಸಾಧಿಸುವ (ಇದನ್ನು ಝೆನ್ ಪರಿಭಾಷೆಯಲ್ಲಿ, ಒಂದು ಕೈನ ಚಪ್ಪಾಳೆಯ ಸದ್ದನ್ನು ಕೇಳಬಲ್ಲ) ಕುಶಲ ಮಾರ್ಗವಿದು. ಶಿಸ್ತಿನ ಜೊತೆ ಪ್ರೀತಿ ಮತ್ತು ಕರುಣೆಗಳಿಂದ ಆರ್ದ್ರವಾದ ಮನಸ್ಸು ವಿಶಿಷ್ಟ ಸನ್ನಿವೇಶಗಳಲ್ಲಿ ಮಿಂಚಿನಂತೆ ಹೊಳೆಯುವ ಜಗದ ಆದಿ ಸತ್ಯವನ್ನು–ಬದುಕಿನ ತುಂಬು ಶೂನ್ಯತೆಯನ್ನು–ಅರಿಯುವ ಮಾರ್ಗವೂ ಇದೆಂದು ಹೇಳಬಹುದು. ಇದರ ತರಬೇತಿಗಾಗಿ ಝೆನ್ ಗುರುಗಳೂ, ಶಾಲೆಗಳೂ ಇದ್ದು ಅಲ್ಲಿನ ಘಟನೆ, ಅನುಭವಗಳ ನಿರೂಪಣೆಗಳು ಝೆನ್ ಕಥೆಗಳೆಂದು ಜಗತ್ತಿನಾದ್ಯಂತ ಪ್ರಸಿದ್ಧವಾಗಿವೆ. ಇವು ಆಸಕ್ತರಿಗೆ ಝೆನ್ ಸಾಧನೆಯ ಕೀಲಿಕೈಗಳಂತೆಯೂ ಕೆಲಸ ಮಾಡಿದ್ದುಂಟು. ಅಂತಹ ಕೆಲವನ್ನು ಆಯ್ದು ಇಲ್ಲಿ ನೀಡಿದ್ದೇವೆ–ಸಂ.

ಧೂಳಿನ ರಸ್ತೆಯಲ್ಲಿ ವಜ್ರ ಕಂಡದ್ದು

ಗುರು ಗುಡೋ ಚಕ್ರವರ್ತಿಯ ಗುರುವಾಗಿದ್ದವನು. ಆದರೂ ಅವನು ಒಬ್ಬನೇ ಅಲೆಮಾರಿ ಸಂನ್ಯಾಸಿಯ ಹಾಗೆ ಪ್ರಯಾಣ ಮಾಡುತ್ತಿದ್ದ. ಒಂದು ಸಾರಿ, ಎಡೋ ಊರಿಗೆ ಹೋಗುತ್ತಿದ್ದ. ಅದು ಶೋಗನ್ನರು ಇದ್ದ ರಾಜಕೀಯ, ಸಾಂಸ್ಕೃತಿಕ ಕೇಂದ್ರ. ದಾರಿಯಲ್ಲಿ ಪುಟ್ಟ ಹಳ್ಳಿ ಹುಚ್ಚು ತಾಕೇನಕ ಸಿಕ್ಕಿತು.

ಸಂಜೆಯಾಗಿತ್ತು. ಮಳೆ ಜೋರಾಗಿತ್ತು. ಗುಡೋ ಪೂರಾ ನೆನೆದು ಹೋದ. ಮೆಟ್ಟಿದ್ದ ಹುಲ್ಲಿನ ಚಪ್ಪಲಿ ಛಿದ್ರವಾಗಿತ್ತು. ಊರಾಚೆಯ ತೋಟದ ಮನೆಯ ಕಿಟಕಿಯಲ್ಲಿ ನಾಲ್ಕೈದು ಜೊತೆ ಹುಲ್ಲಿನ ಚಪ್ಪಲಿ ಜೋಡಿಸಿಟ್ಟಿದ್ದರು. ಹೊಸ ಚಪ್ಪಲಿ ಖರೀದಿ ಮಾಡಬೇಕು ಅಂದುಕೊಂಡ. ಹೆಂಗಸೊಬ್ಬಳು ಅವನಿಗೆ ಚಪ್ಪಲಿ ಕೊಟ್ಟಳು. ಅವನು ಪೂರಾ ತೊಯ್ದು ಹೋಗಿದ್ದು ಕಂಡು ಇವತ್ತು ರಾತ್ರಿ ನಮ್ಮ ಮನೆಯಲ್ಲೇ ಉಳಿಯಿರಿ ಎಂದು ಹೇಳಿದಳು.

ಗುಡೋ ಒಪ್ಪಿಕೊಂಡ. ಅವಳಿಗೆ ಧನ್ಯವಾದ ಹೇಳಿ, ದೇವರ ಮನೆಯಲ್ಲಿ ಕೂತು ಸೂತ್ರ ಪಠಣ ಮಾಡಿದ. ಹೆಂಗಸು ತನ್ನ ತಾಯಿಯನ್ನೂ ಮಕ್ಕಳನ್ನೂ ಕರೆದು ಪರಿಚಯ ಮಾಡಿಸಿದಳು. ಮನೆಯವರೆಲ್ಲ ದುಃಖದಲ್ಲಿರುವುದು ಕಂಡು ಕಾರಣವೇನು ಎಂದು ಗುಡೋ ಕೇಳಿದ.

'ನನ್ನ ಗಂಡ ಜೂಜು ಕೋರ, ಕುಡುಕ. ಆಟ ಗೆದ್ದರೆ ಕುಡಿಯುತ್ತಾನೆ. ಬಾಯಿಗೆ ಬಂದ ಹಾಗೆ ಬೈಯುತ್ತಾನೆ. ಆಟ ಸೋತರೆ ಬೇರೆಯವರ ಹತ್ತಿರ ಸಾಲ ಮಾಡುತ್ತಾನೆ. ಒಂದೊಂದು ಸಾರಿ ಸಿಕ್ಕಾಪಟ್ಟೆ ಕುಡಿದು ಮನೆಗೇ ಬರುವುದಿಲ್ಲ. ನಾನೇನು ಮಾಡಲಿ,' ಎಂದು ಹೆಂಗಸು ಕೇಳಿದಳು.

'ಅವನಿಗೆ ನಾನು ಸಹಾಯ ಮಾಡುತ್ತೇನೆ. ಈ ದುಡ್ಡು ತೆಗೆದುಕೋ. ಕುಡಿಯುವುದಕ್ಕೆ ಹೆಂಡ ಮತ್ತೆ ತಿನ್ನುವುದಕ್ಕೆ ಏನಾದರೂ ತರಿಸು. ಆಮೇಲೆ ಎಲ್ಲರೂ ಹೋಗಿ ಮಲಗಿ. ನಾನು ಇಲ್ಲೇ ಕೂತು ಧ್ಯಾನ ಮಾಡುತ್ತೇನೆ,' ಎಂದು ಹೇಳಿದ ಗುಡೋ.

ಮನೆಯ ಒಡೆಯ ಮಧ್ಯರಾತ್ರಿಯ ಹೊತ್ತಿಗೆ ಬಂದ. ಕುಡಿದಿದ್ದ. 'ಲೇ, ಎಲ್ಲಿದ್ದೀಯಾ? ತಿನ್ನುವುದಕ್ಕೆ ಏನಿದೆ?' ಎಂದು ಕೂಗಾಡಿದ.

'ಇಗೋ ಇಲ್ಲಿದೆ. ನಾನು ಮಳೆಯಲ್ಲಿ ಸಿಕ್ಕಿಬಿದ್ದೆ. ನಿನ್ನ ಹೆಂಡತಿ ದೊಡ್ಡ ಮನಸ್ಸು ಮಾಡಿ ಮನೆಯೊಳಗೆ ಆಶ್ರಯ ಕೊಟ್ಟಳು. ನನ್ನ ಹತ್ತಿರ ಹೆಂಡ ಇದೆ, ಮೀನು ಇದೆ. ನೀನೇ ತಗೋ ಅದನ್ನ,' ಎಂದ ಗುಡೋ.

ಮನೆಯೊಡೆಯನಿಗೆ ಖುಷಿಯಾಯಿತು. ತಕ್ಷಣವೇ ಹೆಂಡ ಕುಡಿದ. ಎಚ್ಚರ ತಪ್ಪಿ ನೆಲದ ಮೇಲೇ ಮಲಗಿಬಿಟ್ಟ. ಗುಡೊ ಅವನ ಪಕ್ಕದಲ್ಲೇ ಕೂತು ಧ್ಯಾನ ಮಾಡಿದ.

ಮಾರನೆಯ ಬೆಳಿಗ್ಗೆ ಮನೆಯೊಡೆಯ ಎದ್ದಾಗ ರಾತ್ರಿ ನಡೆದದ್ದೆಲ್ಲವೂ ಅವನಿಗೆ ಮರೆತು ಹೋಗಿತ್ತು.

'ಯಾರು ನೀನು? ಎಲ್ಲಿಂದ ಬಂದೆ?' ಇನ್ನೂ ಧ್ಯಾನ ಮಾಡುತ್ತಿದ್ದ ಗುಡೋನನ್ನು ಕೇಳಿದ.

'ನಾನು ಗುಡೋ. ಕ್ಯೋಟೋದವನು. ಎಡೋ ಊರಿಗೆ ಹೋಗುತ್ತಿದ್ದೇನೆ,' ಎಂದ ಝೆನ್ ಗುರು.

ಮನೆಯೊಡೆಯನಿಗೆ ತೀರಾ ನಾಚಿಕೆಯಾಯಿತು. ಚಕ್ರವರ್ತಿಯ ಗುರುವಿನ ಕ್ಷಮೆ ಯಾಚಿಸಿದ.

ಗುಡೋ ನಕ್ಕ. 'ಈ ಜೀವನದಲ್ಲಿ ಎಲ್ಲವೂ ಅಶಾಶ್ವತ. ಬದುಕು ಕಿರಿದು. ನೀನು ಜೂಜಾಡುತ್ತ, ಕುಡಿಯುತ್ತ ಇದ್ದುಬಿಟ್ಟರೆ ಬೇರೆ ಏನನ್ನು ಸಾಧಿಸುವುದಕ್ಕೂ ಸಮಯವಿರುವುದಿಲ್ಲ. ನಿಮ್ಮ ಮನೆಯವರೂ ನರಳುತ್ತಾರೆ,' ಎಂದು ವಿವರವಾಗಿ ಹೇಳಿದ.

ಕನಸಿನಿಂದ ಎಚ್ಚರವಾಗುವ ಹಾಗೆ ಆ ಮನುಷ್ಯನ ಒಳ ಮನಸ್ಸು ಎಚ್ಚರಗೊಂಡಿತು.

'ನೀವು ಹೇಳುವುದು ಸರಿ. ನಿಮ್ಮ ಅದ್ಭುತವಾದ ಬೋಧನೆಗೆ ಪ್ರತಿಯಾಗಿ ನಾನೇನು ಕೊಡಲಿ? ನಿಮ್ಮ ವಸ್ತುಗಳನ್ನು ಒಂದಷ್ಟು ದೂರ ಹೊತ್ತುಕೊಂಡು ಬರುತ್ತೇನೆ,' ಅಂದ.

'ನಿನ್ನಿಷ್ಟ,' ಅಂದ ಗುಡೋ.

ಇಬ್ಬರೂ ಹೊರಟರು. ಮೂರು ಮೈಲು ನಡೆದರು. ವಾಪಸ್ಸು ಹೋಗು ಎಂದ ಗುಡೋ.

'ಇನ್ನೈದು ಮೈಲು ಬರುತ್ತೇನೆ,' ಅಂದ ಮನೆಯೊಡೆಯ. ನಡೆದರು.

'ಈಗ ವಾಪಸ್ಸು ಹೋಗಬಹುದಲ್ಲಾ,' ಗುಡೋ ಸೂಚಿಸಿದ.

'ಇನ್ನೊಂದು ಹತ್ತು ಮೈಲು ಆದಮೇಲೆ,' ಅಂದ ಆ ಮನುಷ್ಯ.

ಹತ್ತು ಮೈಲು ನಡೆದಾದಮೇಲೆ 'ಈಗ ವಾಪಸ್ಸು ಹೋಗು,' ಎಂದ ಗುಡೋ.

'ಜೀವನ ಪೂರ್ತಿ ನಿಮ್ಮ ಹಿಂದೆಯೇ ಇರುತ್ತೇನೆ,' ಆ ಮನುಷ್ಯ ಘೋಷಣೆ ಮಾಡಿದ.

ಜಪಾನಿನ ಆಧುನಿಕ ಝೆನ್ ಗುರುಗಳೆಲ್ಲ ಗುಡೋನ ನಂತರ ಗುರುವಾದ ಆ ಪ್ರಸಿದ್ಧ ಗುರುವಿನ ಶಿಷ್ಯರು. ಅವನ ಹೆಸರು ಮು–ನಾನ್. ಅಂದರೆ 'ಮತ್ತೆ ವಾಪಸ್ಸು ಹೋಗದವನು.'

ವಿಧೇಯತೆ

ಗುರು ಬಾಂಕೆಯ ಭಾಷಣ ಕೇಳಲು ಝೆನ್ ವಿದ್ಯಾರ್ಥಿಗಳಷ್ಟೇ ಅಲ್ಲ, ಇತರ ಪಂಥಗಳಿಗೆ ಸೇರಿದವರೂ ಸಮಾಜದ ಎಲ್ಲ ವರ್ಗಗಳ ಜನರೂ ಬರುತ್ತಿದ್ದರು. ಅವನು ಭಾಷಣದಲ್ಲಿ ಯಾವುದೇ ಸೂತ್ರ ಹೇಳುತ್ತಿರಲಿಲ್ಲ, ವಿದ್ವತ್ತಿನ ಪ್ರತಿಪಾದನೆ ಮಾಡುತ್ತಿರಲಿಲ್ಲ. ಅವನ ಮನಸಿನ ಮಾತು ಕೇಳುವವರ ಮನಸಿಗೆ ಮುಟ್ಟುತ್ತಿತ್ತು. ಅವನ ಮಾತು ಕೇಳಲು ಸೇರುತ್ತಿದ್ದ ಜನ ಸಮೂಹವನ್ನು ಕಂಡು ನೈಚೇರಿಯನ್ ಪಂಥದ ಪೂಜಾರಿಗೆ ಸಿಟ್ಟು ಬರುತ್ತಿತ್ತು. ಅವನ ಹಿಂಬಾಲಕರೆಲ್ಲ ಝೆನ್ ಮಾತು ಕೇಳಲು ಹೇಗುತ್ತಿದ್ದರು. ಬಾಂಕೆಯೊಡನೆ ಚರ್ಚೆ ಮಾಡಬೇಕೆಂಬ ಉದ್ದೇಶವಿಟ್ಟುಕೊಂಡು ಆ ಪೂಜಾರಿ ಕೂಡ ಒಮ್ಮೆ ಬಂದಿದ್ದ.

'ಏಯ್ ರ್ಝೆನ್ ಗುರು, ಒಂದು ನಿಮಿಷ ತಾಳು. ನಿನ್ನನ್ನು ಗೌರವಿಸುವವರೆಲ್ಲ ನಿನ್ನ ಮಾತು ವಿಧೇಯತೆಯಿಂದ ಪಾಲಿಸುತ್ತಾರೆ. ಆದರೆ ನನಗೆ ನಿನ್ನ ಮೇಲೆ ಗೌರವ ಇಲ್ಲ. ನಾನು ಕೂಡ ನಿನಗೆ ವಿಧೇಯನಾಗುವಂತೆ ಮಾಡಬಲ್ಲೆಯಾ?'

'ನನ್ನ ಹತ್ತಿರಕ್ಕೆ ಬಾ, ತೋರಿಸುತ್ತೇನೆ,' ಎಂದ ಬಾಂಕೆ.

ಪೂಜಾರಿ ಎದ್ದು ಜನಗಳ ಮಧ್ಯೆ ಜಾಗ ಮಾಡಿಕೊಳ್ಳುತ್ತ ಜಂಬದಿಂದ ನಡೆದು ಬಾಂಕೆಯ ಹತ್ತಿರಕ್ಕೆ ಬಂದ.

ಬಾಂಕೆ ನಗುತ್ತ, 'ನನ್ನ ಎಡ ಬದಿಗೆ ಬಾ,' ಎಂದ.

ಪೂಜಾರಿ ವಿಧೇಯನಾಗಿ ಎಡ ಬದಿಗೆ ಬಂದು ನಿಂತ.

'ಇಲ್ಲ, ಸರಿಯಾಗಿ ಮಾತಾಡಬೇಕಾದರೆ ನನ್ನ ಬಲಗಡೆಗೆ ಬಾ.'

ಪೂಜಾರಿ ಬಲಕ್ಕೆ ಬಂದು ಬೀಗುತ್ತ ನಿಂತ.

'ನೋಡಿದೆಯಾ, ನನ್ನ ಮಾತು ವಿಧೇಯನಾಗಿ ಪಾಲಿಸುತ್ತಿದ್ದೀಯ. ನೀನು ತುಂಬ ಸಭ್ಯ ಸಜ್ಜನ. ಹೋಗಿ ಕೂತು ನನ್ನ ಮಾತು ಕೇಳಿಸಿಕೋ,' ಅಂದ ಬಾಂಕೆ.

ಹೀಗೊಬ್ಬ ಬುದ್ಧ

ಮೆಜಿ ಯುಗದಲ್ಲಿ ಟೋಕಿಯೋ ನಗರದಲ್ಲಿ ಇಬ್ಬರು ಪ್ರಮುಖ ಗುರುಗಳಿದ್ದರು. ಇಬ್ಬರದೂ ತೀರ ಬೇರೆ ಬೇರೆ ಸ್ವಭಾವ. ಅವರಲ್ಲಿ ಒಬ್ಬ ಉನ್‌ಶೋ. ಶಿನ್‌ಗನ್‌ನಲ್ಲಿ ಬೋಧಿಸುತ್ತಿದ್ದ. ಅವನು ಬುದ್ಧ ನಿಯಮಗಳನ್ನು ತಪ್ಪದೆ ಪಾಲಿಸುತ್ತಿದ್ದ. ಅಮಲು ಪಾನೀಯ ಕುಡಿಯುತ್ತಿರಲಿಲ್ಲ, ಬೆಳಗಿನ ಹನ್ನೊಂದು ಗಂಟೆಯ ನಂತರ ಉಣ್ಣುತ್ತಿರಲಿಲ್ಲ.

ಇನ್ನೊಬ್ಬ ಗುರು ಟಾನ್‌ಜಾನ್ ರಾಜ ಕಟ್ಟಿಸಿದ್ದ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಬೋಧನೆ ಮಾಡುತ್ತಿದ್ದ. ಬುದ್ಧನ ನಿಯಮ ಯಾವುದೂ ಪಾಲಿಸುತ್ತಿರಲಿಲ್ಲ. ಉಣ್ಣಬೇಕು ಅನ್ನಿಸಿದಾಗ ಉಣ್ಣುತ್ತ ಹಗಲಲ್ಲೇ ನಿದ್ರೆ ಮಾಡಬೇಕು ಅನ್ನಿಸಿದರೆ ನಿದ್ರೆ ಮಾಡುತ್ತ ಇದ್ದ.

ಒಂದು ದಿನ ಟಾನ್‌ಜಾನ್‌ನನ್ನು ಭೇಟಿ ಮಾಡಲೆಂದು ಉನ್‌ಶೋ ಹೋದ. ಬೌದ್ಧನಾದವನು ಮುಟ್ಟಲೂ ಬಾರದ ಪಾನೀಯವನ್ನು ಟಾನ್‌ಜಾನ್ ಕುಡಿಯುತ್ತಿದ್ದ.

'ಅಣ್ಣಾ ನೀನೂ ಕುಡಿಯುತ್ತೀಯಾ? ಕೊಡಲೇ?' ಟಾನ್‌ಜಾನ್ ಕೇಳಿದ.

'ನಾನು ಎಂದೂ ಕುಡಿದಿಲ್ಲ, ಕುಡಿಯುವುದಿಲ್ಲ!' ಉನ್‌ಶೋ ಗಂಭೀರವಾಗಿ ಹೇಳಿದ.

'ಕುಡಿಯದೆ ಇರುವವರು ಮನುಷ್ಯರೇ ಅಲ್ಲ,' ಎಂದ ಟಾನ್‌ಜಾನ್.

'ಅಮಲೇರಿಸುವ ಹೆಂಡ ಕುಡಿಯುವುದಿಲ್ಲ ಅಂದ ಮಾತ್ರಕ್ಕೆ ನನ್ನನ್ನು ಮನುಷ್ಯನೇ ಅಲ್ಲ ಅನ್ನುತ್ತೀಯಾ? ಹಾಗಾದರೆ ನಾನು ಯಾರು?' ಉನ್‌ಶೂ ಸಿಟ್ಟಿನಲ್ಲಿ ಕೇಳಿದ.

'ನೀನೊಬ್ಬ ಬುದ್ಧ,' ಅಂದ ಟಾನ್‌ಜಾನ್.

ಹೃದಯ ಬೆಂಕಿಯ ಹಾಗೆ ಉರಿದಿದೆ

ಅಮೆರಿಕಕ್ಕೆ ಬಂದ ಮೊದಲ ಝೆನ್ ಗುರು ಸೋಯೆನ್ ಶಾಕು ಹೇಳಿದ:

'ನನ್ನ ಹೃದಯ ಬೆಂಕಿಯ ಹಾಗೆ ಉರಿಯುತ್ತದೆ, ನನ್ನ ಕಣ್ಣು ಬೂದಿಯ ಹಾಗೆ ತಣ್ಣಗಿವೆ.' ಅವನು ತನ್ನ ದಿನ ನಿತ್ಯದ ಬದುಕಿನಲ್ಲಿ ಅನುಸರಿಸುವುದಕ್ಕೆ ಕೆಳಗಿನ ನಿಯಮಗಳನ್ನು ಪಾಲಿಸುತ್ತಿದ್ದ.

ಬೆಳಿಗ್ಗೆ ಡ್ರೆಸ್ ಮಾಡಿಕೊಳ್ಳುವ ಮೊದಲು ಧೂಪ ಹಚ್ಚಿ ಧ್ಯಾನ ಮಾಡು.

ನಿಗದಿಯಾದ ಹೊತ್ತಿನಲ್ಲಿ ವಿಶ್ರಾಂತಿ,

ನಿಯಮಿತವಾದ ಹೊತ್ತಿನಲ್ಲಿ ವಿಶ್ರಾಂತಿ.

ಆಹಾರ ಸ್ವೀಕಾರದ ನಡುವೆ ನಿಗದಿಯಾದ ಮಧ್ಯಂತರ.

ತಿನ್ನುವುದರಲ್ಲಿ ಮಿತಿ ಇರಬೇಕು, ತೃಪ್ತಿಯಾಗುವಷ್ಟು ಉಣ್ಣಬಾರದು.

ಒಬ್ಬನೇ ಇರುವಾಗ ಹೇಗಿರುತ್ತೇನೋ ಹಾಗೆಯೇ ಅತಿಥಿಯನ್ನು ಸ್ವಾಗತಿಸಬೇಕು. ಒಬ್ಬನೇ ಇರುವಾಗಲೂ ಅತಿಥಿಗಳು ಇರುವಾಗ ಹೇಗೆ ಇರುತ್ತೇನೋ ಹಾಗಿರಬೇಕು.

ಆಡುವ ಮಾತಿನ ಬಗ್ಗೆ ಎಚ್ಚರವಿರಲಿ. ನುಡಿದಂತೆ ನಡೆ.

ಅವಕಾಶ ಬಂದಾಗ ಬಿಡಬಾರದು. ಆದರೂ ಕೆಲಸಕ್ಕೆ ತೊಡಗುವ ಮೊದಲು ಎರಡು ಬಾರಿ ಯೋಚಿಸಬೇಕು.

ಆಗಿ ಹೋದದ್ದರ ಬಗ್ಗೆ ಪಶ್ಚಾತ್ತಾಪ ಬೇಡ. ಆಗಬೇಕಾದದ್ದನ್ನು ನೋಡು.

ವೀರನ ನಿರ್ಭಯ ಧೋರಣೆ, ಮಗುವಿನ ಹೃದಯ ಇರಲಿ.

ಮಲಗುವಾಗ ಇದೇ ಕೊನೆಯ ನಿದ್ರೆ ಅನ್ನುವ ಹಾಗೆ ಮಲಗು. ಎಚ್ಚರಗೊಳ್ಳುವಾಗ ಹಳೆಯ ಚಪ್ಪಲಿ ಬಿಸಾಕುವ ಹಾಗೆ ಹಾಸಿಗೆ ಬಿಟ್ಟು ಏಳು.

ನಿಖರ ಪ್ರಮಾಣಬದ್ಧತೆ

ಚಹಾ ಗುರು ಎಂದೇ ಪ್ರಸಿದ್ಧನಾದ ಸೆನ್ ನೊ ರಿಕ್ಯು ಒಂದು ಹೂಬುಟ್ಟಿಯನ್ನು ಕಂಭವೊಂದಕ್ಕೆ ತೂಗು ಹಾಕಲು ನೆರವಿಗಾಗಿ ಒಬ್ಬ ಬಡಗಿಯನ್ನು ಕರೆದು ಸ್ವಲ್ಪ ಮೇಲೆ, ಸ್ವಲ್ಪ ಕೆಳಗೆ, ಸ್ವಲ್ಪ ಬಲಕ್ಕೆ, ಸ್ವಲ್ಪ ಎಡಕ್ಕೆ ಹೀಗೆ ತನಗೆ ಸರಿ ಎಂದು ಕಂಡ ಜಾಗ ಸಿಗುವವರೆಗೆ ಸೂಚನೆಗಳನ್ನು ಕೊಡುತ್ತಾ ಹೋದ. ಕೊನೆಗೆ 'ಅದು ನೋಡು ಅದರ ಜಾಗ' ಎಂದ ಸೆನ್ ರಿಕ್ಯು.

ಗುರುವನ್ನು ಪರೀಕ್ಷಿಸಲು ಬಡಗಿ ಆ ಜಾಗವನ್ನು ಗುರುತಿಟ್ಟುಕೊಂಡು, ಆದರೆ ಅದನ್ನು ಮರೆತವನಂತೆ 'ನೀವೂ ಹೇಳಿದ್ದು ಈ ಜಾಗವಾ? ಅಥವಾ ಈ ಜಾಗವಾ?' ಎಂದು ಕಂಬದ ಲೇಲೆ ಹಲವು ಜಾಗಗಳನ್ನು ತೋರಿಸುತ್ತಾ ಕೇಳುತ್ತಾ ಹೋದ.

ಆದರೆ ಈ ಚಹಾ ಗುರುವಿನ ಪ್ರಮಾಣ ಬದ್ಧತೆಯ ಅರಿವು ಎಷ್ಟು ನಿಖರವಾಗಿತ್ತೆಂದರೆ, ಬಡಗಿ ಮತ್ತೆ ಅದೇ ನಿರ್ದಿಷ್ಟ ಜಾಗವನ್ನು ಮುಟ್ಟುವವರೆಗೆ ಜಾಗವನ್ನು ಅನುಮೋದಿಸಲಿಲ್ಲ

ಸಂತೋಷದ ದನಿ

ಬಾಂಕೆ ತೀರಿ ಹೋಗಿದ್ದ. ಅವನಿದ್ದ ದೇವಸ್ಥಾನದ ಆಚೆ ಒಬ್ಬ ಕುರುಡ ಇದ್ದ. ಅವನು ತನ್ನ ಗೆಳೆಯನಿಗೆ ಹೇಳಿದ:

'ನಾನು ಕುರುಡ. ಮನುಷ್ಯರ ಮುಖ ಕಾಣಲಾರೆ. ಮನುಷ್ಯರ ಗುಣವನ್ನು ಅವರ ಮಾತಿನ ದನಿಯಲ್ಲಿ ನಿರ್ಣಯ ಮಾಡುತ್ತೇನೆ. ಯಾರಿಗಾದರೂ ಒಳ್ಳೆಯದಾಯಿತು, ಯಶಸ್ಸು ಸಿಕ್ಕಿತು ಎಂದು ಅಭಿನಂದನೆ ಹೇಳುವವರ ದನಿಯಲ್ಲಿ ಅಸೂಯೆ ಗುಟ್ಟಾಗಿ ಅಡಗಿರುವುದು ಕೇಳಿಸುತ್ತದೆ. ದುರದೃಷ್ಟವೋ ದುಃಖವೋ ಆಗಿ ನರಳುತ್ತಿರುವವರನ್ನು ಸಮಾಧಾನ ಮಾಡುವವರ ದನಿಯಲ್ಲಿ ಸಂತೋಷ ಗುಟ್ಟಾಗಿ ಅಡಗಿರುವುದು ಕೇಳಿಸುತ್ತದೆ. ನನ್ನ ಅನುಭವದಲ್ಲಿ ಬಾಂಕೆ ಮಾತ್ರ ಪ್ರಾಮಾಣಿಕವಾಗಿದ್ದ. ಅವನ ದನಿ ಯಾವಾಗಲೂ ನಿಜವಾದ ದನಿಯಾಗಿರುತ್ತಿತ್ತು. ಅವನು ಸಂತೋಷ ಅಂದರೆ ಸಂತೋಷ ಬಿಟ್ಟು ಇನ್ನೇನೂ ಕೇಳುತ್ತಿರಲಿಲ್ಲ, ಅಯ್ಯೋ ಅಂದರೆ ನನಗೆ ದುಃಖ ಮಾತ್ರ ಕೇಳುತ್ತಿತ್ತು.'

ನೀರು ಇಲ್ಲ, ಚಂದ್ರ ಇಲ್ಲ

ಎಂಗಾಕುವಿನ ಬುಕ್ಕೋನ ಶಿಷ್ಯಳಾಗಿ ಸಂನ್ಯಾಸಿನಿ ಚಿಯೊನೊ ಸಾಧನೆ ಮಾಡುತ್ತಿದ್ದಳು. ಬಹಳ ಕಾಲ ಕಳೆದರೂ ಧ್ಯಾನದ ಫಲ ಅವಳಿಗೆ ದೊರೆತಿರಲಿಲ್ಲ.

ಒಂದು ದಿನ ಹುಣ್ಣಿಮೆಯ ರಾತ್ರಿ ಮರದ ಬಾನಿಗೆ ನೀರು ತುಂಬಿ, ಎರಡು ಬಾನಿಗಳನ್ನು ಬಿದಿರು ಕೋಲಿಗೆ ಕಟ್ಟಿ ಹೆಗಲ ಮೇಲೆ ಹೊತ್ತು ಒಯ್ಯುತ್ತಿದ್ದಳು. ಬಿದಿರ ಕೋಲು ಮುರಿಯಿತು. ಬಾನಿಯ ತಳದ ಹಲಗೆ ಜಾರಿತು. ನೀರು ಚೆಲ್ಲಿತು. ಚಿಯೊನೊಗೆ ಬಿಡುಗಡೆ ದೊರೆಯಿತು!

ಆಕೆ ಆಗ ಒಂದು ಪದ್ಯ ಬರೆದಳು:

ಹಳೆಯ ಬಾನಿ
ಬಿದಿರು ಹಳತಾಗಿತ್ತು,
ಇನ್ನೇನು ಮುರಿಯುತ್ತಿತ್ತು.
ಬಾನಿ ಕಾಪಾಡಬೇಕೆಂದು ಏನೆಲ್ಲ ಮಾಡಿದೆ.
ಕೊನೆಗೆ ತಳ ಕಿತ್ತು ಬಂತು.
ಇನ್ನು
ಬಾನಿಯಲ್ಲಿ ನೀರಿಲ್ಲ
ನೀರಿನಲ್ಲಿ ಚಂದ್ರನಿಲ್ಲ.

ಮೋಕುಸೆನ್ ಮುಷ್ಟಿ

ತಾಂಬಾ ಪ್ರಾಂತ್ಯದ ದೇವಸ್ಥಾನವೊಂದರಲ್ಲಿ ಮೋಕುಸೆನ್ ಹೀಕಿ ಇದ್ದ. ಅವನ ಶಿಷ್ಯರಲ್ಲಿ ಒಬ್ಬಾತ ತನ್ನ ಹೆಂಡತಿಯ ಜಿಪುಣತನದ ಬಗ್ಗೆ ಗೋಳಾಡುತ್ತಿದ್ದ.

ಮೋಕುಸೆನ್ ಹೋಗಿ ಶಿಷ್ಯನ ಹೆಂಡತಿಯನ್ನು ಭೇಟಿ ಮಾಡಿದ. ಕೈಯನ್ನು ಮುಷ್ಟಿ ಕಟ್ಟಿ ಅವಳ ಮುಖದ ಮುಂದೆ ಆಡಿಸಿದ.

'ಏನಿದರ ಅರ್ಥ?' ಹೆಂಗಸು ಆಶ್ಚರ್ಯದಿಂದ ಕೇಳಿದಳು.

'ನನ್ನ ಕೈ ಯಾವಾಗಲೂ ಹೀಗೆ ಮುಷ್ಟಿ ಕಟ್ಟಿಕೊಂಡಿದ್ದರೆ ಏನನ್ನುತ್ತೀ?'

'ವಿಕಾರ.' ಅಂದಳು ಹೆಂಗಸು.

ಅವನು ಮುಷ್ಠಿ ಬಿಚ್ಚಿ ಹಸ್ತ ಅಗಲಿಸಿ ಅವಳ ಮುಖದ ಮುಂದೆ ಆಡಿಸುತ್ತ, 'ನನ್ನ ಕೈ ಯಾವಾಗಲೂ ಹೀಗೇ ಇದ್ದರೆ ಏನನ್ನುತ್ತೀ?' ಅಂದ.

'ಇನ್ನೊಂದು ಥರ ವಿಕಾರ.' ಅಂದಳು ಆ ಹೆಂಗಸು.

'ನಿನಗೆ ಇಷ್ಟು ಅರ್ಥವಾದರೆ ನೀನು ಒಳ್ಳೆಯ ಹೆಂಡತಿ ಆಗುತ್ತೀಯ.' ಎಂದು ಹೇಳಿ ಮೋಕುಸೆನ್ ಹೊರಟು ಹೋದ.

ಅವನ ಈ ಭೇಟಿಯ ನಂತರ ಆಕೆ ದಾನ ಮಾಡುವುದಕ್ಕೂ, ದುಡ್ಡು ಉಳಿಸುವುದಕ್ಕೂ ಗಂಡನಿಗೆ ಸಹಾಯ ಮಾಡುವುದಕ್ಕೆ ಶುರು ಮಾಡಿದಳು.

ಪರಮ ಬೋಧನೆ ಜೀವಂತ

ತನ್ನ ಗೆಳೆಯನ ಮನೆಗೆ ಹೋಗಿದ್ದ. ಒಬ್ಬ ಕುರುಡ ರಾತ್ರಿ ಅವನು ವಾಪಸ್ಸು ಹೊರಟಾಗ ಗೆಳೆಯ ಅವನ ಕೈಗೆ ಲಾಟೀನು ಕೊಟ್ಟ.

'ನನಗೆ ಲಾಟೀನು ಬೇಡ. ನನ್ನ ಪಾಲಿಗೆ ಕತ್ತಲು ಬೆಳಕು ಎರಡೂ ಒಂದೇ.' ಎಂದ ಕುರುಡ.

'ನಿನಗೆ ಲಾಟೀನು ಬೇಡ, ನಿನ್ನದಾರಿ ನೀನೇ ಹುಡುಕಿಕೊಳ್ಳುತ್ತೀಯ ಅನ್ನುವುದು ಗೊತ್ತು. ನಿನ್ನ ಕೈಯಲ್ಲಿ ಲಾಟೀನು ಇರದಿದ್ದರೆ ಬೇರೆಯವರು ನಿನಗೆ ಢಿಕ್ಕಿ ಹೊಡೆಯುತ್ತಾರೆ. ಹಿಡಿದುಕೋ ಇದನ್ನ' ಎಂದ ಗೆಳೆಯ.

ಕುರುಡ ಒಂದಷ್ಟು ದೂರ ಹೋಗಿದ್ದ. ಯಾರೋ ಅಪರಿಚಿತ ಬಂದು ಢಿಕ್ಕಿ ಹೊಡೆದೇಬಿಟ್ಟ.

'ನೋಡಿಕೊಂಡು ಹೋಗಬಾರದೆ? ಈ ಲಾಟೀನು ಕಾಣಲಿಲ್ಲವೇ?' ಕುರುಡ ಆಶ್ಚರ್ಯದಿಂದ ಕೇಳಿದ.

'ನಿನ್ನ ಲಾಟೀನಿನೊಳಗಿನ ದೀಪ ಆರಿ ಹೋಗಿದೆ ಅಣ್ಣಾ.' ಅಂದ ಅಪರಿಚಿತ.

ಹಗಲು ನಿದ್ರೆ

ಜೆನ್ ಪರಂಪರೆಗೆ ಅಮೂಲ್ಯವೆನಿಸುವ ಕೊಡುಗೆ ನೀಡಿದ ಹೋದ ಗುರು ಸೊಯೆನ್ ಶಾಕು ತಮ್ಮ ಶಿಷ್ಯ ಬೇಸಿಗೆ ದಿನಗಳ ಮಧ್ಯಾಹ್ನದ ಹೊತ್ತು ತಮ್ಮ ಶಿಷ್ಯ ಮಲಗಿದರೆ ನಿರ್ಲಕ್ಷಿಸುತ್ತಾ ತಮ್ಮ ಪಾಡಿಗೆ ತಮ್ಮ ಕೆಲಸ ಮಾಡುತ್ತಿದ್ದರು

ಹನ್ನೆರಡನೇ ವಯಸ್ಸಿನಲ್ಲೇ ತೆಂಡೈನಂತಹ ಉನ್ನತ ದರ್ಶನಗಳ ಅಭ್ಯಾಸ ಮಾಡುತ್ತಿದ್ದ ಬಾಲಕ ಸೋಯೆನ್ ಒಂದು ಬಿರು ಬಿಸಿಲಿನ ಮಧ್ಯಾಹ್ನದ ಬೇಗೆ ತಾಳಲಾಗದೆ ಕಾಲು ನೀಡಿದ್ದಕೆ ಮಲಗಿಬಿಟ್ಟರು. ಆಗ ಗುರುಗಳಿರಲಿಲ್ಲ.

ಮೂರು ತಾಸುಗಳ ನಂತರ ಸೊಯೆನ್‌ಗೆ ಎಚ್ಚರವಾದಾಗ ಗುರುಗಳು ಕೊಠಡಿ ಪ್ರವೇಶಿಸುವ ಸದ್ದು ಕೇಳಿಸಿತು. ಆದರೆ ಎದ್ದು ಕೂರಲು ಸಮಯವಿರಲಿಲ್ಲ ಬಾಗಿಲಿಗೆ ಅಡ್ಡವಾಗಿ ಅವರ ದೇಹ ಚಾಚಿ ಬಿದ್ದಿತ್ತು.

'ಕ್ಷಮಿಸು ಮಗು, ದಯವಿಟ್ಟು ಕ್ಷಮಿಸು' ಎಂದು ಪಿಸುಗುಡುತ್ತಾ ಅವರ ಗುರು, ಅಲ್ಲಿ ಮಲಗಿರುವುದು ಯಾರೋ ವಿಶೇಷ ಅತಿಥಿಯೆಂಬಂತೆ ಸೋಯೆನ್‌ರ ದೇಹವನ್ನು ಸದ್ದಿಲ್ಲದೆ ಎಚ್ಚರಿಕೆಯಿಂದ ದಾಟಿ ಹೋದರು. ಆನಂತರ ಸೋಯೆನ್ ಎಂದೂ ಮಧ್ಯಾನದ ಹೊತ್ತು ಮಲಗಲಿಲ್ಲ.

ಸೂತ್ರಗಳ ಪ್ರಕಟಣೆ

ತೆತ್ಸುಜೆನ್ ಜಪಾನಿನ ಒಬ್ಬ ಝೆನ್ ಭಕ್ತ. ಬುದ್ಧ ಹೇಳಿದ ಸೂತ್ರಗಳನ್ನು ಪ್ರಕಟಿಸುವ ಸಂಕಲ್ಪ ಮಾಡಿದ. ಆ ಕಾಲದಲ್ಲಿ ಅವು ಚೀನೀ ಭಾಷೆಯಲ್ಲಿ ಮಾತ್ರ ದೊರೆಯುತ್ತಿದ್ದವು. ಒಂದೊಂದು ಅಕ್ಷರಕ್ಕೂ ಮರದ ಅಚ್ಚು ಮಾಡಿ ಮುದ್ರಿಸಬೇಕಾಗಿತ್ತು. ಏಳು ಸಾವಿರ ಪ್ರತಿಗಳನ್ನು ಸಿದ್ಧಮಾಡುವುದು ತೀರ ಶ್ರಮದ ಕೆಲಸವಾಗಿತ್ತು.

ತೆತ್ಸುಜೆನ್ ಊರೂರು ಅಲೆದು ಹಣ ಸಂಗ್ರಹಿಸಿದ. ಕೆಲವರು ನೂರು ಚಿನ್ನದ ನಾಣ್ಯ ಕೊಡುತ್ತಿದ್ದರು. ಹೆಚ್ಚಿನವರು ತಮ್ಮ ಕೈಯಲ್ಲಿದ್ದ ಚಿಲ್ಲರೆ ಕಾಸು ಕೊಟ್ಟರು. ಪ್ರತಿಯೊಬ್ಬರಿಗೂ ಅವನು ಕೃತಜ್ಞತೆಯಿಂದ ನಮಸ್ಕಾರ ಮಾಡುತ್ತಿದ್ದ. ಹತ್ತು ವರ್ಷ ಕಳೆಯುವ ಹೊತ್ತಿಗೆ ಪ್ರಕಟಣೆಗೆ ಬೇಕಾಗುವಷ್ಟು ಹಣ ಕೂಡಿತು.

ಆ ಹೊತ್ತಿನಲ್ಲಿ ಉಜಿ ನದಿಯಲ್ಲಿ ಪ್ರವಾಹ ಬಂದಿತು. ಆಮೇಲೆ ಕ್ಷಾಮ. ತೆತ್ಸುಜೆನ್ ತಾನು ಸಂಗ್ರಹಿಸಿದ್ದ ಹಣವನ್ನೆಲ್ಲ ಖರ್ಚುಮಾಡಿ ಹಸಿದವರಿಗೆ ಊಟವಿಕ್ಕಿದ. ಮತ್ತೆ ದುಡ್ಡು ಕೂಡಿಸಲು ಹೊರಟ.

ಹಲವು ವರ್ಷ ಕಳೆದವು. ದೇಶದಲ್ಲಿ ಸಾಂಕ್ರಾಮಿಕ ರೋಗ ಹರಡಿತು. ತೆತ್ಸುಜೆನ್ ತಾನು ಸಂಗ್ರಹಿಸಿದ್ದ ದುಡ್ಡನ್ನೆಲ್ಲ ಜನರ ಸೇವೆಗೆ ಖರ್ಚು ಮಾಡಿದ.

ಮೂರನೆಯ ಬಾರಿ ಹಣ ಸಂಗ್ರಹಕ್ಕೆ ತೊಡಗಿದ. ಇಪ್ಪತ್ತು ವರ್ಷ ಕಳೆದವು. ಅವನ ಆಸೆ ನೆರವೇರಿತು. ಅವನು ಮುದ್ರಿಸಲು ಬಳಸಿದ ಮರದ ಅಚ್ಚುಗಳು ಈಗಲೂ ಕ್ಯೂಟೋದ ಒಬಾಕು ಮಠದಲ್ಲಿವೆ.

'ತೆತ್ಸುಜೆನ್ ಬುದ್ಧ ಸೂತ್ರಗಳನ್ನು ಮೂರು ಬಾರಿ ಪ್ರಕಟಿಸಿದ. ಮೊದಲ ಎರಡು ಅದೃಶ್ಯ ಆವೃತ್ತಿಗಳು, ಈಗ ದೊರೆಯುವ ಆವೃತ್ತಿಗಿಂತ ಉತ್ತಮವಾದವು.' ಎಂದು ಜಪಾನೀಯರು ತಮ್ಮ ಮಕ್ಕಳಿಗೆ ಹೇಳುತ್ತಾರೆ.

ಶಿಷ್ಯನಾದ ಕಳ್ಳ

ಒಂದು ದಿನ ಸಾಯಂಕಾಲ ಶಿಚಿರಿ ಕೋಜುನ್ ಸೂತ್ರ ಪಠಣ ಮಾಡುತ್ತಿದ್ದ. ಕಳ್ಳನೊಬ್ಬ ಬಂದು, ಕತ್ತಿ ಹಿರಿದು, 'ದುಡ್ಡು ಕೊಡದಿದ್ದರೆ ಜೀವ ತೆಗೆಯುವೆ.' ಎಂದ.

'ನನಗೆ ತೊಂದರೆ ಕೊಡಬೇಡ. ದುಡ್ಡು ಆ ಅಲಮಾರಿನಲ್ಲಿದೆ.' ಅಂದ ಶಿಚಿರಿ ಸೂತ್ರ ಪಠಣ ಮುಂದುವರೆಸಿದ. ಸ್ವಲ್ಪ ಹೊತ್ತಾದ ಮೇಲೆ, 'ದುಡ್ಡೆಲ್ಲಾ ತೆಗೆದುಕೊಳ್ಳಬೇಡ. ನಾಳೆ ತೆರಿಗೆ ಕಟ್ಟುವುದಕ್ಕೆ ದುಡ್ಡು ಬೇಕು' ಅಂದ ಶಿಚಿರಿ.

ಕಳ್ಳ ದುಡ್ಡೆತ್ತಿಕೊಂಡು ಹೊರಟ.

'ಉಡುಗೊರೆ ಪಡೆದಾಗ ಕೊಟ್ಟವರಿಗೆ ವಂದನೆ ಹೇಳಬೇಕು.' ಅಂದ ಶಿಚಿರಿ. ಕಳ್ಳ ವಂದನೆ ಹೇಳಿ ಹೊರಟು ಹೋದ.

ಕೆಲವು ದಿನವಾದ ಮೇಲೆ ಕಳ್ಳ ಸಿಕ್ಕಿಬಿದ್ದ. ತನ್ನ ತಪ್ಪು ಒಪ್ಪಿಕೊಂಡ, ಶಿಚಿರಿಯ ದುಡ್ಡು ಕದ್ದದ್ದು ಕೂಡ ಹೇಳಿದ.

ಶಿಚಿರಿಯನ್ನು ಸಾಕ್ಷಿ ಹೇಳಲು ಕರೆದರು. 'ಕೊನೆಯ ಪಕ್ಷ ನನ್ನ ಮಟ್ಟಿಗೆ ಈ ಮನುಷ್ಯ ಕಳ್ಳ ಅಲ್ಲ. ಅವನಿಗೆ ದುಡ್ಡುಕೊಟ್ಟೆ, ಅವನು ವಂದನೆ ಹೇಳಿದ.' ಅಂದ ಶಿಚಿರಿ.

ಜೈಲು ಅನುಭವಿಸಿ ಹೊರಬಂದ ಕಳ್ಳ ಶಿಚಿರಿಯ ಬಳಿಗೆ ಹೋಗಿ ಅವನ ಶಿಷ್ಯನಾದ.

ಬುದ್ಧ ಮತ್ತು ತೊಟ್ಟಿ ಮಾಡುವವನು

ಝೆನ್ ಗುರುಗಳು ತಮ್ಮ ಶಿಷ್ಯರಿಗೆ ಏಕಾಂತ ಉಪದೇಶ ನೀಡುವುದಿತ್ತು. ಅಂಥ ಹೊತ್ತಿನಲ್ಲಿ ಯಾರೂ ಗುರುವಿನ ಕೋಣೆಗೆ ಹೋಗಿ ತೊಂದರೆ ಕೊಡುತ್ತಿರಲಿಲ್ಲ.

ಕ್ಯೋಟೋದಲ್ಲಿದ್ದ ಕೆನ್ನಿನ್ ದೇವಸ್ಥಾನದ ಝೆನ್ ಗುರು ಮೊಕುರಾಯ್ ಎಲ್ಲ ಥರದ ಜನರ ಜೊತೆ ಮಾತಾಡಲು ಇಷ್ಟಪಡುತ್ತಿದ್ದ. ಹಾಗೆ ಅವನ ಬಳಿಗೆ ಬರುತ್ತಿದ್ದವರಲ್ಲಿ ಸ್ನಾನದ ತೊಟ್ಟಿ ಮಾಡುವವನು ಒಬ್ಬನಿದ್ದ. ಅವನು ಅನಕ್ಷರಸ್ಥ. ಮೊಕುರಾಯ್‌ನಿಗೆ ಎಲ್ಲ ಥರದ ಮೂರ್ಖ ಪ್ರಶ್ನೆ ಕೇಳುತ್ತಿದ್ದ, ಚಹಾ ಕುಡಿದು ಹೊರಟು ಹೋಗುತ್ತಿದ್ದ.

ಒಂದು ದಿನ ಈ ತೊಟ್ಟಿ ಮಾಡುವ ಮನುಷ್ಯ ಬಂದಾಗ ಮೊಕುರಾಯ್ ತನ್ನ ಶಿಷ್ಯನಿಗೆ ಏಕಾಂತ ಉಪದೇಶ ನೀಡುತ್ತಿದ್ದ. ಇನ್ನೊಂದು ಕೋಣೆಗೆ ಹೋಗಿ ಕಾಯುತ್ತಿರು.' ಎಂದು ತೊಟ್ಟಿ ಮಾಡುವವನಿಗೆ ಹೇಳಿದ.

'ನಿನ್ನನ್ನು ಜೀವಂತ ಬುದ್ಧ ಎಂದೇ ತಿಳಿದಿದ್ದೇನೆ. ದೇವಸ್ಥಾನದ ಕಲ್ಲು ಬುದ್ಧ ತನ್ನನ್ನು ಕಾಣಲು ಬರುವ ಯಾರನ್ನೂ ಹೋಗಿ, ಕಾಯಿರಿ ಅನ್ನುವುದಿಲ್ಲ. ಹೀಗಿರುವಾಗ ನೀವು ಯಾಕೆ ನನ್ನ ದೂರ ಇರಿಸಬೇಕು?' ತೊಟ್ಟಿ ಮಾಡುವವನು ಕೇಳಿದ.

ಮೊಕುರಾಯ್ ಹೊರಗೆ ಬಂದು ತನ್ನ ಶಿಷ್ಯನನ್ನು ಕಾಣಲೇಬೇಕಾಯಿತು.

ಹೂ ಮಳೆ

ಸುಭೂತಿಯು ಬುದ್ಧನ ಶಿಷ್ಯ. ಶೂನ್ಯದ ಶಕ್ತಿ ಅವನಿಗೆ ಅರಿವಾಗಿತ್ತು. ವ್ಯಕ್ತಿನಿಷ್ಠ, ವಸ್ತುನಿಷ್ಠ ಸಂಬಂಧಗಳು ಮಾತ್ರ ಇವೆ, ಇನ್ನೇನೂ ಇಲ್ಲ ಅನ್ನುವುದು ಅರಿವಾಗಿತ್ತು.

ಒಂದು ದಿನ ಸುಭೂತಿ ಅತ್ಯುನ್ನತ ಶೂನ್ಯ ಸ್ಥಿತಿಯಲ್ಲಿ ಮರದ ಕೆಳಗೆ ಕೂತಿದ್ದ. ಅವನ ಮೇಲೆ ಹೂ ಸುರಿದವು.

'ಶೂನ್ಯವನ್ನು ಕುರಿತ ನಿನ್ನ ಬೋಧನೆಗಾಗಿ ನಿನ್ನ ಶ್ಲಾಘಿಸುತ್ತಿದ್ದೇವೆ.' ದೇವತೆಗಳು ಮೆಲುದನಿಯಲ್ಲಿ ಅಂದರು.

'ನಾನು ಶೂನ್ಯದ ಬಗ್ಗೆ ಮಾತೇ ಆಡಿಲ್ಲ.' ಎಂದ ಸುಭೂತಿ.

'ಶೂನ್ಯದ ಬಗ್ಗೆ ನೀನು ಮಾತಾಡಿಲ್ಲ, ಶೂನ್ಯದ ಬಗ್ಗೆ ನಾವು ಕೇಳಿಲ್ಲ. ಇದೇ ನಿಜವಾದ ಶೂನ್ಯ.' ಎಂದರು ದೇವತೆಗಳು. ಸುಭೂತಿಯ ಮೇಲೆ ಹೂ ಮಳೆ ಸುರಿಯಿತು.

(ಕೃಪೆ: **Zen Flesh, Zen bones,** compiled by **Paul Reps**, Penguin)

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು

ಮೊದಲು ದೇವರು ಬೆಳಕನ್ನು ಸೃಷ್ಟಿಸಿದ.
ಆ ನಂತರ ಆ ಬೆಳಕಿನಿಂದಲೇ ನಮ್ಮನ್ನೆಲ್ಲ ಆತ ಸೃಷ್ಟಿಸಿದ.
ಇಡೀ ಜಗತ್ತೇ ಆ ದೇವದೇವನ ಪ್ರಕಾಶದಿಂದಲೇ ಮೂಡಿತೆಂದ ಮೇಲೆ
ಯಾವುದನ್ನು ಒಳ್ಳೆಯದೆಂದು, ಯಾವುದನ್ನು ಕೆಟ್ಟದೆಂದು ಕರೆಯಲಿ?

–ಕಬೀರ



ಮೈನುದ್ದೀನ್ ಐ ನದಾಫ್ ,


ಟೀಮ್ ವರ್ಕ್ ಸ್ಪ್ರೇ ಪೇಂಟಿಂಗ್ ಸಲ್ಯೂಷನ್ಸ್,

ಸಾರಸ್ವತಪುರ ಬಡಾವಣೆ,

ಕಲಘಟಗಿ ರಸ್ತೆ, ಧಾರವಾಡ.

ಒಂದು ನುಡಿ ನಮನ

ಕಾವ್ಯ ಜೋಗಿ ಎಸ್. ಮಂಜುನಾಥ್



ನಮ್ಮ ಸಮಕಾಲೀನ ಕನ್ನಡ ಸಾಹಿತ್ಯ ಲೋಕ ಎಷ್ಟು ಶಿಥಿಲವಾಗಿದೆ ಎಂದರೆ, ಈ ಶಿಥಿಲತೆಗೆ ಕಾರಣವಾಗಿರುವ ಸಾಹಿತ್ಯೇತರ ಅಂಶಗಳನ್ನು ಗಮನಿಸಿದಾಗ ಈ ಸಾಹಿತ್ಯದ ಸಾವಯವತೆಯೇ ಒಮ್ಮೊಮ್ಮೆ ಪ್ರಶ್ನಾರ್ಹವೆನಿಸಿಬಿಡುತ್ತದೆ. ಎಸ್. ಮಂಜುನಾಥ್ ಅಸುನೀಗಿದ ಜನವರಿ ೩೧ರ ಆ ಸಂಜೆ (ಅಂದು ವರಕವಿ ಬೇಂದ್ರೆಯವರ ಹುಟ್ಟು ಹಬ್ಬವೂ ಆಗಿದ್ದು ಎಂಥ ಸೋಜಿಗ!) ನಾನು ನನ್ನ ಹತ್ತಾರು ಸಾಹಿತ್ಯ ಮಿತ್ರರಿಗೆ 'ಸಮಕಾಲೀನ ಕನ್ನಡ ಕಾವ್ಯದ ಅತ್ಯುತ್ತಮ ಧ್ವನಿ ಇನ್ನಿಲ್ಲ' ಎಂಬ ಸಂದೇಶ ಕಳಿಸಿದೆ. ಕೆಲವೇ ಕ್ಷಣಗಳಲ್ಲಿ ನಮ್ಮ ಹಿರಿಯ ಸಾಹಿತಿ ಚಂಪಾರಿಂದ ಕರೆ ಬಂತು. ಅವರು ಕೇಳಿದ ಪ್ರಶ್ನೆ: 'ಈ ಎಸ್. ಮಂಜುನಾಥ್ ಯಾರು? ಎಲ್ಲಿಯವರು? ಅವರೇನು ಬರೆದಿದ್ದಾರೆ?'

ಇದು ಕನ್ನಡ ಸಾಹಿತ್ಯಲೋಕದ ಇಂದಿನ ದುರಂತ. ಮಂಜುನಾಥ್ ಬಲಿಯಾದದ್ದೂ ಇಂತಹ ದುರಂತದ ಒಂದು ಪರಿಣಾಮವೇ ಎಂದು ನಾನು ಭಾವಿಸಿದ್ದೇನೆ. ನಮ್ಮ ಪತ್ರಿಕೆಯ ಮಹಾ ಅಭಿಮಾನಿಯಾಗಿದ್ದ ಮಂಜುನಾಥ್ ಈ ಪತ್ರಿಕೆಗಾಗಿ ಹಲವು ಲೇಖನಗಳನ್ನು ಬರೆದುಕೊಟ್ಟಿದ್ದನ್ನೂ, ಅವರ ಹಲವಾರು ಪದ್ಯಗಳು ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನೂ ಓದುಗರು ಗಮನಿಸಿರಬಹುದು. ಅವರಿಗೆ ನಮ್ಮ ಪತ್ರಿಕೆಯ 'ನುಡಿ ನಮನ'ವಾಗಿ 'ದ ಹಿಂದೂ' ಗಾಗಿ ಆ ಪತ್ರಿಕೆಯವರ ಕೋರಿಕೆಯ ಮೇರೆಗೆ ಮಂಜುನಾಥ್ ಬಗ್ಗೆ ನಾನು ಬರೆದ ಒಂದು ಶ್ರದ್ಧಾಂಜಲಿ ಲೇಖನದ (ಅದು ಆ ಪತ್ರಿಕೆಯ ೧೦.೨.೨೦೧೭ರ 'ಫ್ರೈಡೇ ರಿವ್ಯೂ' ಪುರವಣಿಯಲ್ಲಿ ಪ್ರಕಟವಾಗಿದೆ) ಪೂರ್ಣ ಕನ್ನಡ ರೂಪವನ್ನು ಇಲ್ಲಿ ನೀಡುತ್ತಿದ್ದೇನೆ.–ಸಂ.

ಎಸ್. ಮಂಜುನಾಥ್‌ರೊಂದಿಗೆ ಒಮ್ಮೆ ಹೀಗೇ ಲೋಕಾಭಿರಾಮವಾಗಿ ಮಾತನಾಡುತ್ತಾ, ನಿಮ್ಮ ಕಾವ್ಯ ಶಿನ್‌ಜುನ ಮಾಂಸದಂಗಡಿ ಇದ್ದಂತೆ ಎಂದೆ. ಸ್ವಲ್ಪ ಗಾಬರಿಯಿಂದಲೂ, ಸ್ವಲ್ಪ ಕುತೂಹಲದಿಂದಲೂ ಅವರು 'ಹಾಗೆಂದರೇನು?' ಎಂದು ಪ್ರಶ್ನಿಸಿದರು. ನಾನು ಆಗ ತಾನೇ ಓದಿದ್ದ ಆ ಜೆನ್ ಕಥೆಯನ್ನು ಅವರಿಗೆ ಹೇಳಿದೆ. ಜೆನ್ ಗುರು ಶಿನ್‌ಜು ಒಂದು ಮಾಂಸದಂಗಡಿ ಇಟ್ಟಿದ್ದಾನೆ. ಗಿರಾಕಿಗಳು ಬಂದು ಒಳ್ಳೆಯ ಮಾಂಸ ಕೊಡು ಎಂದು ಕೇಳಿದಾಗಲೆಲ್ಲ ಆತ ನಿರ್ಲಿಪ್ತನಾಗಿ ಹೇಳುವುದು ಒಂದೇ ಮಾತು. 'ಇಲ್ಲಿರುವುದರಲ್ಲಿ ಯಾವುದನ್ನಾದರೂ ತೆಗೆದುಕೊಳ್ಳಿ. ಇಲ್ಲಿರುವುದೆಲ್ಲ ಒಳ್ಳೆಯದೇ!' ಮಂಜುನಾಥ್‌ರ ಮುಖ ಅರಳಿತು. ಅವರು ತಮ್ಮ ಕಾವ್ಯದ ಬಗ್ಗೆ ಎಷ್ಟೇ ವಿಶ್ವಾಸ ಮತ್ತು ಹೆಮ್ಮೆಗಳನ್ನು ಹೊಂದಿದ್ದರೂ ಅವರ ಒಳಗೊಂದು ನೋವು ಹಾವಿನಂತೆ ಸರಿದಾಡುತ್ತಿತ್ತು. ಅದು ತಾನು ತುಂಬ ಒಳ್ಳೆಯ ಕಾವ್ಯವನ್ನೇ ಬರೆದಿದ್ದರೂ ಅದನ್ನು ಹಾಗೆ ಯಾರೂ ಗುರುತಿಸುತ್ತಿಲ್ಲ ಎಂಬ ನೋವು. ಹಾಗಾಗಿಯೋ ಏನೋ ಅವರು ಹೇಳಿದರು, 'ಅಲ್ಲಾ ನೀವು ನನ್ನ ಕಾವ್ಯದ ಬಗ್ಗೆ ತಕರಾರುಗಳನ್ನೂ ಮಾಡುತ್ತೀರಿ. ಹೀಗೂ ಹೇಳುತ್ತೀರಲ್ಲ?' ನಾನು ಹೇಳಿದೆ: 'ನಿಮ್ಮ ಅಂಗಡಿಯಲ್ಲಿರುವುದೆಲ್ಲ ಒಳ್ಳೆಯದೇ ಅಂದರೆ, ಬೇರೆ ಅಂಗಡಿಗಳಲ್ಲಿ ಅದಕ್ಕಿಂತ ಒಳ್ಳೆಯದಿಲ್ಲ ಅಂತಲ್ಲವಲ್ಲ? ಅಲ್ಲದೆ ನೀವು ಅತ್ಯುತ್ತಮವಾದದ್ದನ್ನು ಬರೆದುಬಿಟ್ಟಿದ್ದೀರಿ ಎಂದೂ ಅಲ್ಲವಲ್ಲ?' ತನ್ನ ಕಾವ್ಯದ ಬಗ್ಗೆ ಸದಾ ವಿಶ್ವಾಸ ಮತ್ತು ಹೆಮ್ಮೆಗಳನ್ನು ಹೊಂದಿದ್ದ ಮಂಜುನಾಥ್ ಏನೋ ಯೋಚಿಸಿ ಹೇಳಿದರು, 'ಹಾಗಾದರೆ ನೀವೇಕೆ ನನ್ನ ಕಾವ್ಯದ ಬಗ್ಗೆ ಒಂದು ಲೇಖನ ಬರೆಯಬಾರದು? ನನಗೂ ಸಹಾಯವಾದೀತು.'

ನಾನು ಹೇಳಿದೆ, 'ನಿಮಗೆ ಗೊತ್ತಿರಬಹುದು ಮಂಜುನಾಥ್, ನಾನು ವೃತ್ತಿಪರ ವಿಮರ್ಶಕನಲ್ಲ. ಈವರೆಗೆ ನಾನಾಗಿ ನಾನು ಯಾವ ಸಾಹಿತ್ಯ ವಿಮರ್ಶೆಯನ್ನೂ ಬರೆದಿಲ್ಲ. ಅವರಿವರು ನಿರ್ದಿಷ್ಟ ಸಂದರ್ಭಗಳಿಗಾಗಿ ಕೇಳಿದರೆಂದು ಮಾತ್ರ ಬರೆದಿರುವುದು. ಆಯಿತು ಈಗ ನೀವು ಕೇಳಿದಿರೆಂದು ಬರೆಯುವೆ. ಆದರೆ ಕೊನೆಯಲ್ಲಿ, ಮಂಜುನಾಥ್ ಕೇಳಿದರು ಎಂದಷ್ಟೇ ಇದನ್ನು ಬರೆದಿರುವೆ ಎಂದು ಹಾಕಬೇಕಾಗುತ್ತದೆ!' ಎಂದೆ. ಒಂದು ಕ್ಷಣ ತಡವರಿಸಿದ ಮಂಜುನಾಥ್, 'ಅಯ್ಯೋ! ಹಾಗೆ ಮಾತ್ರ ಮಾಡಬೇಡಿ' ಎಂದು ನಕ್ಕರು. ಮಹಾ ಸ್ವಾಭಿಮಾನಿ ಆತ.

ಆದರೆ ಅನತಿ ಕಾಲದಲ್ಲೇ ಮಂಜುನಾಥ್ ನನ್ನನ್ನು ತಮ್ಮ ಬಲೆಗೆ ಕೆಡವಿಕೊಂಡರು. ೨೦೦೫ರಲ್ಲಿ ಪ್ರಕಟವಾದ ಅವರ ಕವನ ಸಂಕಲನ 'ಕಲ್ಲ ಪಾರಿವಾಳಗಳ ಬೇಟ'ದ ಬಿಡುಗಡೆ ಸಮಾರಂಭವನ್ನು ತಮ್ಮೂರು ಕೆ.ಆರ್. ನಗರದಲ್ಲಿ ಏರ್ಪಡಿಸಿದ್ದ ಅವರು ಅದರ ಆಹ್ವಾನ ಪತ್ರಿಕೆಯಲ್ಲಿ ಅಧ್ಯಕ್ಷತೆ ನನ್ನದೆಂದು ಅಚ್ಚು ಹಾಕಿಸಿ ಆಹ್ವಾನಿಸಿದರು. ಸ್ನೇಹಕ್ಕೆ ಕಟ್ಟು ಬಿದ್ದು ನಾನು ಹೋದೆ. ಪುಸ್ತಕ ಬಿಡುಗಡೆಗೆ ಜಯಂತ್ ಕಾಯ್ಕಿಣಿ ಬಂದಿದ್ದ ನೆನಪು. ಅಂದು ಕೂಡ ನಾನು ಹೇಳಿದ್ದು ನನ್ನ ಅದೇ ಮಾತುಗಳನ್ನೇ. ಆದರೆ ಬೇರೆ ನುಡಿಗಟ್ಟಿನಲ್ಲಿ. ನಾನು ಹೇಳಿದ್ದಿಷ್ಟು: 'ಮಂಜುನಾಥ್ ನಮ್ಮ ನಡುವಿನ ಅಪರೂಪದ ಅಪ್ಪಟ ಕವಿ. ಅವರ ಮನಸ್ಸಿನಲ್ಲಿ ಕವಿತೆ ಬಿಟ್ಟು ಇನ್ನೇನೂ ಹುಟ್ಟದ ಸ್ಥಿತಿಯನ್ನು ಅವರು ತಲುಪಿದ್ದಾರೆ. ನೀವು ಕುವೆಂಪು ಅವರ ಕಾವ್ಯರಾಶಿಯಲ್ಲಿ ಹತ್ತಾರು ಹುಸಿ ಕವನಗಳನ್ನು ಹುಡುಕಬಹುದು. ಹಾಗೇ ಬೇಂದ್ರೆ ಕಾವ್ಯ ರಾಶಿಯಲ್ಲೂ ನಾಲ್ಕಾರು ಹುಸಿ ಕವನಗಳು ಕಂಡಾವು. ಆದರೆ ಮಂಜುನಾಥ್ ಬರೆದುದರಲ್ಲಿ ಒಂದೂ ಹುಸಿ ರಚನೆಯೆಂಬುದಿಲ್ಲ. ಪ್ರಯತ್ನದಲ್ಲಿ ಕೆಲವು ಸೋತಿರಬಹುದು; ಕೆಲವು ಗೆದ್ದಿರಬಹುದು. ಆದರೆ ಯಾವುವೂ ಕವನದ ಹೊರತಾಗಿ ಇನ್ನೇನೂ ಆಗಲು ಹೊರಟಂತೆ ಕಾಣುವುದಿಲ್ಲ'

ಇದು ಕೆಲವರಿಗೆ ತುಂಬ ದುಸ್ಸಾಹಸದ ಮಾತಾಗಿ ಕಂಡಿದ್ದು ನಿಜ. ಆದರೆ ನಾನು ಮಂಜುನಾಥರ ಆವರೆಗಿನ ಸುಮಾರು ಇಪ್ಪತ್ತು ವರ್ಷಗಳ ಕಾವ್ಯ ತಪಸ್ಸನ್ನು ತುಂಬ ಹತ್ತಿರದಿಂದ ಕಂಡಿದ್ದೆ. **'ಎಲ್ಲವನ್ನೂ ಮುಟ್ಟಿ ಜುಮ್ಮೆನಿಸಿಕೊಂಡು/ ಎಲ್ಲವೂ ತಾನೇ ಆಗಿ ನಕ್ಕು ಕಂಡು/ ಜಗದ ನೆದರೇ ಇಲ್ಲದ ಉಡಾಳ ಹುಡುಗನ ಹಾಗೆ/ ನಡೆದು ಹೋಗುತ್ತಿದೆ ಸೀಟಿ ಹಾಕಿಕೊಂಡು'** ಎಂದು ತಮ್ಮ ಅಂದಿನ ಕವಿತೆಯನ್ನು ತಾವೇ ವರ್ಣಿಸಿಕೊಳ್ಳಬಲ್ಲಷ್ಟು ಆತ್ಮವಿಶ್ವಾಸವನ್ನು ಅವರಿಗೆ ನೀಡಿದ್ದ ಹಲವು ಕವಿತೆಗಳನ್ನು ಹೊತ್ತಿದ್ದ ಈ ಐದನೇ ಕವನ ಸಂಕಲನದ ಮುನ್ನ ಅವರು 'ಸುಮ್ಮನಿರುವ ಸುಮ್ಮಾನ' ಹೆಸರಿನಲ್ಲಿ ತಾವೋ ಕವಿತೆಗಳನ್ನು ಅನುವಾದಿಸಿ, ನಂತರ 'ಬಾಹುಬಲಿ', 'ನಂದ ಬಟ್ಟಲು' ಹಾಗೂ 'ಮೌನದ ಮಣಿ' ಎಂಬ ಕವನ ಸಂಕಲನಗಳ ಮೂಲಕ ಸಾಕಷ್ಟು ಪ್ರಯೋಗಗಳನ್ನು ಮಾಡಿದ್ದರು. ಮೇಲೆ ಉಲ್ಲೇಖಿಸಿದ ಅವರ ಕವಿತೆಯೇ ಸೂಚಿಸುವಂತೆ, ಜಗತ್ತನ್ನು ಇಡಿಯಾಗಿ ಗ್ರಹಿಸಿ, ಮುಟ್ಟುವ, ರೋಮಾಂಚನಗೊಳ್ಳುವ ಕಾವ್ಯ ಸಿದ್ಧಿಯನ್ನು ಅವರು ಪಡೆದಿದ್ದರು. ಅವರು ಯಾವಾಗಲೂ ಪ್ರತಿಪಾದಿಸುತ್ತಿದ್ದ, 'ತಾನು ಬಳಸುವ ಭಾಷೆಯನ್ನು ಮತ್ತು ತಾನು ಮುಟ್ಟ ಬಯಸುವ ಮನಸ್ಸನ್ನು ಕಿಂಚಿತ್ತಾದರೂ ಹಿಗ್ಗಿಸದ್ದನ್ನು ಕವಿತೆ ಎಂದು ಕರೆಯಲಾಗದು' ಎಂಬ ಮಾತಿಗೆ ಹಲವು ಸ್ತರಗಳ ಪ್ರಾತ್ಯಕ್ಷಿಕೆಗಳಂತಿದ್ದವು ಅವರ ಕವನಗಳು. ಈಗ ಅವರ ಈ ಬೆಳವಣಿಗೆಗೆ ನಾನು ಪ್ರತ್ಯಕ್ಷ ಸಾಕ್ಷಿಯಾಗಿದ್ದೆ.

*** *** ***

ನಾನು ಮತ್ತು ಮಂಜುನಾಥ್ ಮುವ್ವತ್ತು ವರ್ಷಗಳ ಗೆಳೆಯರು. ಅವರು ನನಗಿಂತ ಎಂಟು ವರ್ಷ ಚಿಕ್ಕವರು. ಆದರೆ ನಾನಾಗಲೀ ಅವರಾಗಲೀ ಎಂದಾದರೂ ಈ ವಯಸ್ಸಿನ ಅಂತರದಲ್ಲಿ ಮಾತಾಡಿದ ನೆನಪು ನನಗಿಲ್ಲ. ಏಕೆಂದರೆ ನಾವು ಸೇರಿದಾಗಲೆಲ್ಲ ಬಹುಪಾಲು ಮಾತನಾಡುತ್ತಿದ್ದುದು ಸಾಹಿತ್ಯದ ಬಗ್ಗೆಯೇ; ನಿರ್ದಿಷ್ಟವಾಗಿ ಕಾವ್ಯದ ಬಗ್ಗೆಯೇ. ನಾನು ವಯಸ್ಸಿನಲ್ಲಿ

ಹಿರಿಯನಾದರೂ, ಕಾವ್ಯ ಕುರಿತ ಅವರ ಶ್ರದ್ಧೆ, ಪರಿಶ್ರಮ, ಅರಿವು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬದ್ಧತೆ ನನ್ನಲ್ಲಿ ಅವರ ಬಗ್ಗೆ ಗೌರವಪೂರ್ಣ ಪ್ರೀತಿ ಹುಟ್ಟಿಸಿತ್ತು. ಹಾಗೇ ನನ್ನ ಬಗ್ಗೆಯೂ ಅವರಿಗೆ ವಿಶೇಷ ಪ್ರೀತಿ–ಅದರಗಳಿದ್ದಂತಿತ್ತು. ಅವರಿನ್ನೂ ತಮ್ಮ ಮೊದಲ ಕವನ ಸಂಕಲನ 'ಹಕ್ಕಿ ಪಲ್ಟಿ' ಪ್ರಕಟಿಸಿದ್ದಾಗ ಅವರನ್ನು ನಾನು ೧೯೮೭ರಲ್ಲಿ ಮಹಾ ಘಟಾನುಘಟಿಗಳೊಂದಿಗೆ–ಎಚ್. ಎಸ್. ಶಿವಪ್ರಕಾಶ್, ಸುಬ್ರಾಯ ಚೊಕ್ಕಾಡಿ, ಸ. ಉಷಾ, ಎಚ್. ಗೋವಿಂದಯ್ಯ ಮುಂತಾದವರೊಂದಿಗೆ–ಮಂಗಳೂರು ಆಕಾಶವಾಣಿಯ ರಾಜ್ಯೋತ್ಸವ ಕವಿಗೋಷ್ಠಿಗೆ ಆಹ್ವಾನಿಸಿದ್ದೆ. (ಇದಕ್ಕಾಗಿ ಮಂಜುನಾಥ್‌ರ ಹೆಸರಿಗೆ ನನ್ನ ಮೇಲಧಿಕಾರಿಗಳಿಂದ ಅನುಮೋದನೆ ಪಡೆಯಲು ಪಟ್ಟ ಪಾಡಿನ ಕಥೆ ಬೇರೆಯೇ ಇದೆ!) ಆಗ ನಾನು ಅಲ್ಲಿ ಸಾಹಿತ್ಯ ವಿಭಾಗದ ಕಾರ್ಯಕ್ರಮ ನಿರ್ವಾಹಕನಾಗಿದ್ದೆ. ಅವರ 'ಹಕ್ಕಿ ಪಲ್ಟಿ'ಯ ಬಹಳ ಪದ್ಯಗಳು ನಡೆಯಲು ಕಲಿಯುವ ಮಗುವೊಂದರ ತಿಪ್ಪ ತಿಪ್ಪ ಹೆಜ್ಜೆಗಳಂತಿದ್ದರೂ, ಅಲ್ಲಿ ಕನ್ನಡ ಕಾವ್ಯಕ್ಕೆ ಹೊಸ ಸಂವೇದನೆಯೊಂದನ್ನು ನೀಡಬಲ್ಲ 'ಅಸಲಿಯತ್ತಿನ' ಕವಿಯೊಬ್ಬನನ್ನು ನಾನು ಗುರುತಿಸಿದ್ದೆ. 'ಹಕ್ಕಿ ಪಲ್ಟಿ' ಪದ್ಯದ '... **ಮರು ಕ್ಷಣ ಈ ಪ್ರಶ್ನೆ : ಏನಾದರೂ ಆಗಬೇಕೇಕೆ / ಹಕ್ಕಿಪಲ್ಟಿಯಂಥ ಘಟನೆಗಳ ಗಮನಿಸಲು ಶಕ್ಯವಿದ್ದರೆ ಸಾಲದೆ/ ಇನ್ನುಳಿದಂತೆ ನಾವು ಆಗಲೆಳೆಸುವುದೆಲ್ಲ ಜಗಮೆಚ್ಚುಗೆಗಲ್ಲವೆ?**' ಎಂಬ ಸಾಲುಗಳು ನನ್ನನ್ನು ಹಿಡಿದು ನಿಲ್ಲಿಸಿದ್ದವು. ಇಲ್ಲಿನ ತನ್ನನ್ನು ತಾನು ಹೊಸದಾಗಿ ನೋಡಿಕೊಳ್ಳುವ ಪರಿ ಮತ್ತು ಧೈರ್ಯ ಬೆರಗು ಹುಟ್ಟಿಸಿತ್ತು. ಮತ್ತು ಕವನ ಸಂಕಲನಕ್ಕೆ ಈ ಪದ್ಯದ ಶೀರ್ಷಿಕೆಯನ್ನು ಕೊಡುವಲ್ಲಿ ಕೆಲಸ ಮಾಡಿದ ಅವರ ಕವಿಮನಸ್ಸಿನ ಸ್ವರೂಪವೂ ನನ್ನಲ್ಲಿ ಕುತೂಹಲಹುಟ್ಟಿಸಿತ್ತು. ಈ ಬಗ್ಗೆ ನನಗೆ ಈಗಲೂ ಹೆಮ್ಮೆ ಇದೆ.

ಅಂದು ಕವಿಗೋಷ್ಠಿಯ ನಂತರ ಗೋಷ್ಠಿಯ ಕೆಲವು ಕವಿಗಳು ಮತ್ತು ನನ್ನ ಇತರ ಕೆಲವು ಗೆಳೆಯರೂ ಸೇರಿ ನಡೆಸಿದ 'ಭೋಜನ ಕೂಟ'ದ ಮಾತುಕತೆಯಲ್ಲಿ ಅವರಾಡಿದ ಈ ಒಂದು ಮಾತು ನನ್ನನ್ನು ಸೆಳೆಯಿತು. 'ಕಾವ್ಯಕ್ಕೆ ಕಾವ್ಯವಾಗುವ ಗುರಿ (function) ಬಿಟ್ಟರೆ ಬೇರೆ ಗುರಿ ಇಲ್ಲ; ಇರಬಾರದು'. ಅದು 'ಬಂಡಾಯ'ದ ಉಬ್ಬರದ ಕಾಲ. ಕಾವ್ಯಕ್ಕೆ ಸಾಮಾಜಿಕ ಕಳಕಳಿ ಮುಖ್ಯ, ಅದು ಜನಪರವಾಗಿರಬೇಕು, ಜೀವಪರವಾಗಿರಬೇಕು ಇತ್ಯಾದಿ ಘೋಷಣೆಗಳೂ, ನಂಬಿಕೆಗಳೂ, ಒತ್ತಾಯಗಳೂ ಪ್ರಚಲಿತವಾಗಿದ್ದ ಕಾಲ. ಈ ಪ್ರವಾಹದ ವಿರುದ್ಧ ಸೆಟೆದು ಈಜಬಯಸುವ ಈ ಕಿರಿಯನ ಕಾವ್ಯಬದ್ಧತೆ ನನ್ನನ್ನು ಸೆಳೆಯಿತು. ನಾನವರಿಗೆ ಹೇಳಿದ್ದೆ: 'ನೀವು ಪ್ರವಾಹದ ವಿರುದ್ಧ ಈಸಿ ಜಯಿಸಬೇಕಾದರೆ, ಮೊದಲು ನಿಮ್ಮ ಕಾವ್ಯ ನವ್ಯದ ಜಟಿಲತೆಗಳನ್ನು ಬಿಟ್ಟು ಹೊರಬರಬೇಕಿದೆ.' ಏಕೆಂದರೆ ಆವರೆಗಿನ ಅವರ ಕವಿತೆಗಳ ಭಾಷೆ ಒಡೆದು ಹೋದಂತಿದ್ದು, ಅವರ ಲೋಕ ಗ್ರಹಿಕೆಯ ಪ್ರಕ್ರಿಯೆಯಲ್ಲಿ ಕೆಲವು ಕಂದಕಗಳು ಕಾಣುತ್ತಿದ್ದವು. ಇದರ ಫಲವಾಗಿ ಅವರ ಹಲವು ಕವನಗಳನ್ನು ಅವಿಶದತೆ ಆವರಿಸಿದಂತಿತ್ತು.

ಅಂದು ನನ್ನ ಆ ಮಾತಿಗೆ ಅರ್ಧ ಸಮ್ಮತಿಯ ತಲೆಯಾಡಿಸಿದ್ದ ಮಂಜುನಾಥ್‌ಗೆ ನಂತರದ ದಿನಗಳಲ್ಲಿ ಅದು ಪೂರ್ತಿ ಮನವರಿಕೆಯಾದಂತೆ (ಅದನ್ನು ಅವರು ನಂತರದ ತಮ್ಮ 'ಬಾಹುಬಲಿ' ಸಂಕಲನದ ಮುನ್ನುಡಿಯಲ್ಲಿ ಬರೆದುಕೊಂಡಿದ್ದಾರೆ) ತಮ್ಮ ಕಾವ್ಯ ಗುರುವನ್ನು ಬದಲಾಯಿಸಿಕೊಂಡರು. ಯು. ಆರ್ ಅನಂತಮೂರ್ತಿಯವರನ್ನು ಬಿಟ್ಟು ಪು.ತಿ.ನ. ಬಳಿಗೆ ಹೋದರು. (ನಂತರ ಇದನ್ನು ಅವರು ನನ್ನ ಬಳಿ ತೋಡಿಕೊಂಡಿದ್ದು ಹೀಗೆ : 'ಅಲ್ಲಾ ನೋಡಿ ನಾಗಭೂಷಣ್ ಈ ನವ್ಯದವರ ಸಣ್ಣತನ. ಅನಂತಮೂರ್ತಿ ಎಂದೂ ನನಗೆ, ನೋಡಯ್ಯಾ ಮೈಸೂರಿನಲ್ಲಿ ಕುವೆಂಪು, ಪುತಿನರಂತಹ ದೊಡ್ಡ ಕವಿಗಳಿದ್ದಾರೆ. ಅವರನ್ನೂ ನೋಡಿ ಮಾತಾಡಿಸಿಕೊಂಡು ಬಾ ಅಂತ ಎಂದೂ ಹೇಳಲಿಲ್ಲ!') ಅವರು ಅವರಿಗೆ 'ದೇಶೀಯತೆ, ಪ್ರಸನ್ನತೆ ಮತ್ತು ವಿಶದತೆ' ಎಂಬ ಕಾವ್ಯ ಕುರಿತ ಅವರ ಮೂರು ಮುಖ್ಯ ಪಾಠಗಳನ್ನು ಹೇಳಿದರು. ಅದರ ಪರಿಣಾಮಗಳನ್ನು ನಾವು ಅವರ ಮುಂದಿನ ಸಂಕಲನಗಳಲ್ಲಿ ಮಸುಕು ಮಸುಕಾಗಿಯಾದರೂ ಕಾಣಬಹುದು. ಜೊತೆಗೆ *ತಾವೋ* ಪದ್ಯಗಳ ಅನುವಾದದ ಮೂಲಕ ಗಳಿಸಿದ ಹೊಸ ಲೋಕದೃಷ್ಟಿ ಮತ್ತು ಭಾಷಾ ಕೌಶಲ್ಯವನ್ನೂ. ಆ ಮೂಲಕ ಅವರು ವಿಶೇಷವಾಗಿ ಮನಗಂಡದ್ದು, ಈ ಭೂಮಿಯೇ ಆಕಾಶವನ್ನು ಸೃಷ್ಟಿಸಿರುವುದು ಎಂಬ ಸತ್ಯವನ್ನು. ಹಾಗಾಗಿಯೇ 'ಬಾಹುಬಲಿ' ಸಂಕಲನದ 'ಸೇಬು' ಎಂಬ ಕವನದ ಅವರ '**ಅವಳನ್ನೂ ಅವಳ ಹಲ್ಲನ್ನೂ / ನಾಲಗೆ ಎಂಜಲನ್ನೂ ದೇವರೇ ಮಾಡಿದ / ದುಂಡಗೆ ಫಳ ಫಳ ಹೊಳೆವ / ರಸಭರಿತ ಕೆಂಪು ಫಲ / ಈ ಸೇಬನ್ನೂ / ಆದರೂ ದೇವರು ಮಾಡಿದ ಹಣ್ಣಿಗೆ ಬೆಲೆಯಿಲ್ಲ / ಅವಳು ಕಚ್ಚಿದ ಸೇಬಿಗೆ ಸಾಟಿಯಿಲ್ಲ**' ಎಂಬ ಹಾಗೂ 'ನಂದ ಬಟ್ಟಲು' ಸಂಕಲನದ 'ವಸ್ತು' ಕವನದ '**ವಸ್ತುಗಳ ಜೀವ ಯಾರಿಗೆ ಕಾಣುವುದು?/ ಬಲ್ಲವರು ಕಣ್ಣಲ್ಲಿ ಅದ ಭೋಗಿಸುವರು / ಅವರು ಕಣ್ಣು ಹೊರಳಿಸಲು ಬೇಸರಗೊಂಡ ಅಪ್ಸರೆಯರು / ಮರಳಿ ನಮ್ಮ ಪಾಲಿಗೆ ವಸ್ತುಗಳಾಗುವರು**' ಎಂಬ ಲೌಕಿಕ–ಅಲೌಕಿಕಗಳನ್ನು ಏಕತ್ರಗೊಳಿಸುವ ಅದ್ಭುತ ಸಾಲುಗಳು ಸೃಷ್ಟಿಯಾದದ್ದು.

ಹೀಗೆ '**ಮಾತು ಮಂತ್ರ ಕವಿತೆಯೆಂಬೆಲ್ಲ ಕರಣಗಳಿಂದ / ನಿನ್ನಾಕೃತಿಯ ತಡವಲು ಹವಣಿಸುತ್ತಿರುವ / ಮೂಕ ಮಕ್ಕಳು ನಾವು –ನುಡಿಯೇ / ನಿನ್ನ ಸುಳಿವೆಂತು ದೊರಕೀತು ನಮಗೆ?**' ಎಂದು ಆರ್ತಿಸುತ್ತಾ ಕಾವ್ಯವನ್ನು ಅದರ ಇಡಿತನದಲ್ಲಿ ಪಡೆಯಲು ಹವಣಿಸಿದ ಮಂಜುನಾಥ್, ಆ ಸುಮಾರು ಇಪ್ಪತ್ತು ವರ್ಷಗಳಲ್ಲಿ ಕಾವ್ಯಜೋಗಿಯಂತೆ ತಮ್ಮ ಕವನಗಳನ್ನು ಕೇಳಬಯಸುವವವರ ಮನ–ಮನೆಗಳಿಗೆಲ್ಲ ತಿರುಗಿದರು. ನಾವಿದ್ದೆಡೆಯಲ್ಲೆಲ್ಲ ಬಂದು ದಿನಗಟ್ಟಲೆ ಠಿಕಾಣಿ ಹೂಡಿ ದಣಿವರಿಯದೆ ಕವಿತೆಗಳನ್ನು ಓದುತ್ತಿದ್ದರು. ಹೋದ ಮನೆಗಳ ಮಕ್ಕಳನ್ನೂ ಬಿಡದೆ ಕವಿತೆ ಹಂಚುತ್ತಿದ್ದರು. (ಅವರ 'ಬಾಹುಬಲಿ' ಮತ್ತು 'ನಂದಬಟ್ಟಲು'ಗಳಲ್ಲಿ ಮಕ್ಕಳನ್ನುದ್ದೇಶಿಸಿ ಬರೆದ ಕವಿತೆಗಳು ಇವೆ) ಆಗಲೇ ಅವರು '**ಸಂತಸದಲ್ಲಿರುವ ಮನುಷ್ಯನತ್ತ / ಬಿಡದೆ ಮುಗುಳ್ನಗಬೇಕು /ಹಾಡಿಗಾಗಿ ಹಾತೊರೆದವನ /ಬಳಿ ಹೋಗಿ ಹಾಡಬೇಕು / ಕವಿತೆಗಾಗಿ ಹಸಿದವನ ಬಾಗಿಲ / ನಡುರಾತ್ರಿಯಲ್ಲಿ ತಟ್ಟಬೇಕು**' ಎಂದು ಬರೆದದ್ದು. ('ಕಲ್ಲ ಪಾರಿವಾಳಗಳ ಬೇಟ')

ಎಂಥ ಹುಚ್ಚಿದು! ಆಗಲೇ ನಾವು 'ಮಂಜುನಾಥ್ ತಿಂದುಂಡು ಹಾಸಿ ಹೊದೆಯುವುದೆಲ್ಲ ಕಾವ್ಯವನ್ನೇ!' ಎಂದು ಹಾಸ್ಯ ಮಾಡುತ್ತಿದ್ದುದು. ಆದರೆ ಈ ಹುಚ್ಚು ಒಮ್ಮೊಮ್ಮೆ ಮೇರೆ ಮೀರುತ್ತಿತ್ತು. ಅದು ಅವರ ತಮ್ಮ ಕವಿತೆಗಳನ್ನು ಓದಿ ಸುಮ್ಮನಾಗದೆ ತಮ್ಮದೇ ಕಾವ್ಯ ಮೀಮಾಂಸೆಯ ಬಗ್ಗೆ ಗಂಟೆಗಟ್ಟಲೆ ಕೊರೆಯಲು ಶುರುಮಾಡಿದಾಗ. ಅದು ಹಲವರಿಗೆ ಅವರ ಕಾವ್ಯದ ಸಮರ್ಥನೆಯಂತೆಯೂ ಕೇಳಿಸತೊಡಗಿತ್ತು. ಅದಕ್ಕೆ ಕಾರಣವೂ ಇತ್ತು. ನಾನು ನನ್ನ ಈ ಲೇಖನದ ಆರಂಭದಲ್ಲಿ ಸೂಚಿಸಿದಂತೆ, ತಮ್ಮ ಕಾವ್ಯವನ್ನು, ಅದರ ಅನನ್ಯತೆಯನ್ನು ಯಾರೂ ಗುರುತಿಸುತ್ತಿಲ್ಲ ಎಂಬ ನೋವು ಅವರನ್ನು ತೀವ್ರವಾಗಿ ಕಾಡತೊಡಗಿತ್ತು. ಸಹಜವಾಗಿಯೇ ಅವರ ಕವನಗಳನ್ನು ಮೆಚ್ಚಿ, ಪ್ರೋತ್ಸಾಹಿಸಿ, ತಮ್ಮ ಪತ್ರಿಕೆಯಲ್ಲಿ ವೇದಿಕೆ ಒದಗಿಸಿ ಅವರಲ್ಲಿ ಹೆಮ್ಮೆ (ಮತ್ತು ಸ್ವಲ್ಪ ಹಮ್ಮೂ) ಹುಟ್ಟಿಸಿದ್ದ ಪಿ. ಲಂಕೇಶ್‌ರ ಹಠಾತ್ ನಿಧನ ಅವರನ್ನು ಕಂಗೆಡಿಸಿತ್ತು. ಅವರಿಗೆ ಕಾವ್ಯಕ್ಷೇತ್ರದ ಯಾವ ಸಾರ್ವಜನಿಕ ಮಾನ್ಯತೆಗಳೂ–ಸಾಂಸ್ಕೃತಿಕ ಉತ್ಸವಗಳ ಅಥವಾ ಅಕಾಡೆಮಿಗಳ ಕವಿ ಗೋಷ್ಠಿಗಳಾಗಲೀ, ಪುರಸ್ಕಾರಗಳಾಗಲೀ–ಸಿಕ್ಕಿರಲಿಲ್ಲ. ದೊರೆತ ಏಕೈಕ ಮಾನ್ಯತೆಯಾಗಿದ್ದ ಪುತಿನ ಪ್ರಶಸ್ತಿಯನ್ನೂ ಇನ್ನೋರ್ವ ಕವಿಯೊಂದಿಗೆ ಹಂಚಿ ಕೊಡಲಾಗಿತ್ತು. ಇದಕ್ಕೆಲ್ಲ ಮುಖ್ಯ ಕಾರಣ, ಕಾವ್ಯ ಎಂದರೇನು ಎಂಬ ಪ್ರಶ್ನೆ ಕುರಿತ ಅವರ ವ್ರತನಿಷ್ಠೆಯ ಕಟುನಿಷ್ಠುರ ಎಂಬಂತಹ ನಿಲುವು. ಈ ವ್ರತನಿಷ್ಠೆ ಒಮ್ಮೊಮ್ಮೆ ಮಾತಿನ 'ಹದ' ತಪ್ಪಿ ದೊಡ್ಡವರ (ಉದಾ: ಕುವೆಂಪು) ಕಾವ್ಯವನ್ನೂ ಎದುರು ಹಾಕಿಕೊಂಡು ಮಂಜುನಾಥ್ ಅನುಚಿತವಾಗಿ ಸಾಹಿತ್ಯ ಕ್ಷೇತ್ರದ ಸಾಮಾಜಿಕ ನ್ಯಾಯವಾದಿಗಳ ಬಹಿಷ್ಕಾರಕ್ಕೂ ಒಳಗಾದದ್ದುಂಟು. ಮಂಜುನಾಥ್‌ಗೆ ಸ್ಥಳೀಯವಾದ ಕಾವ್ಯ ರಸಿಕ ಗೆಳೆಯರ ಒಂದು ಸಣ್ಣ ಗುಂಪಿನ ಅಭಯವಿತ್ತಾದರೂ ಒಳ್ಳೆಯದನ್ನು ಬರೆದವನ ಸಹಜ ದೊಡ್ಡ ನಿರೀಕ್ಷೆಗಳೂ ಅವರಲ್ಲಿದ್ದವು. ಅವರೂ ಉಪ್ಪು ಹುಳಿ ಖಾರ ಉಣುವ ಹುಲು ಮಾನವರೇ ತಾನೆ? ಆದರೆ ಸಾಹಿತ್ಯ ಕ್ಷೇತ್ರದ ಪಾರುಪತ್ತೇದಾರರ ಕೆಟ್ಟ ಕಣ್ಣು ಅವರ ಮೇಲೆ ಬಿದ್ದಂತಿತ್ತು. ಅದರಿಂದ ಅವರು ಹಲವು ಬಾರಿ 'ಖಿನ್ನತೆ'ಗೆ ಜಾರುತ್ತಿದ್ದುದನ್ನು ನಾನು ಬಲ್ಲೆ.

ಈ ಸಂದರ್ಭದಲ್ಲೇ, ಅವರ ಕಾವ್ಯದ ನಿರ್ಣಾಯಕ ಸಾಲುಗಳೆಂದು ಇತ್ತೀಚೆಗೆ ಕೆಲವರು ಉಲ್ಲೇಖಿಸುವ 'ಭಕ್ತಿ' ಎಂಬ ಕವನದ '**ಮಾನಿನಿಯ ಮೊಲೆ ಹಿಡಿದ ಹಸ್ತಗಳಿಂದ / ನಿನ್ನ ಅಡಿ ಮುಟ್ಟಿರುವೆ / ಆ ಪುಲಕ ನಿನ್ನಡಿಯ ಮಿಡುಕಿಸಲಿ**' ಮುಂತಾದ ಸಾಲುಗಳು ಅವರಿಂದ ಹೊರಬಂದುದು. ಇವು ನನ್ನ ಪ್ರಕಾರ ಮಂಜುನಾಥ್‌ರ ನಿಜ ಸಾಲುಗಳಲ್ಲ. ಅವರೆಂದೂ ಇಷ್ಟು ಒರಟಾದ ಸಾಲುಗಳನ್ನು ಬರೆಯುವವರಲ್ಲ. (ನನ್ನ ಕವಿಪತ್ನಿ ಸವಿತಾ ಪ್ರಕಾರ ಮಂಜುನಾಥ್ ನಮ್ಮ ಮನೆಗೆ ಬಂದಿದ್ದಾಗ ಅವಳ 'ದೇವರಿಗೆ' ಪದ್ಯವನ್ನೋದಿ ಮೆಚ್ಚಿದ ನಂತರ ಅದನ್ನು ಬರೆದದ್ದು.) ನನ್ನ ಊಹೆಯ ಪ್ರಕಾರ ಅವರು ಈ ಸಾಲುಗಳನ್ನು ಬರೆದದ್ದು ಕನ್ನಡ ಕಾವ್ಯ ಕ್ಷೇತ್ರದ 'ಪ್ರತಿಷ್ಠಿತ'ರನ್ನು ಮೆಚ್ಚಿಸಲು; ಎಚ್ಚರಿಸಲು! ಸಹಜವಾಗಿಯೇ ಅವರೆಲ್ಲರೂ ಆ ಸಾಲುಗಳನ್ನೋದಿ 'ಪುಲಕ'ಗೊಂಡರು. ಅದರ ಬಗ್ಗೆ, ಅವರ ಬಗ್ಗೆ ತಂತಮ್ಮ 'ಗುಂಪು'ಗಳಲ್ಲಿ ಮಾತಾಡಿಕೊಂಡರು,

ಅಲ್ಲಿಲ್ಲಿ ನಾಲ್ಕು ಸಾಲು ಬರೆದರು ಕೂಡ. ಆಗಲೇ ಮಂಜುನಾಥ್‌ಗೆ ಬೆಂಗಳೂರಿನ ಪ್ರಕಾಶಕರೂ ಸಿಕ್ಕಿದ್ದು! ಅವರೆಲ್ಲ ಕಪಿಯನ್ನು ಸ್ವಲ್ಪಕಾಲ ಮೆರೆಸಿ, ನಂತರ ಇಂತಹುದೇ ಇನ್ನಿತರ ಕೆಲಸಗಳ ಮಧ್ಯೆ ಮರೆತರು. ಆಗಲೇ ಸ್ವಲ್ಪ ಕಾಲ ಮಂಜುನಾಥ್ ನಮ್ಮಿಂದ ಮರೆಯಾಗಿ ಬೆಂಗಳೂರಿನ ತಾರಾ ಲೇಖಕರ ಬಿಸಿ ಸಹವಾಸದಲ್ಲಿ ಮೈಮರೆತಿದ್ದುದು! ಎಚ್ಚರವಾದೊಡನೆ ಅದೆಲ್ಲ ಕನಸೆಂಬಂತೆ ಅವರು ತಮ್ಮೂರು ಕೆ.ಆರ್. ನಗರಕ್ಕೆ ವಾಪಸ್ ಬಂದರು. ತಮ್ಮನ್ನು ತಾವು ಮತ್ತೆ ಹುಡುಕಿಕೊಳ್ಳುವಂತೆ **'ಬೆಟ್ಟ ಬಳಿಗೆ ಬಂದಂತಿರುವ/ ಹೊಳೆ ಸಾಗಿ ಅದನು ಮುಟ್ಟಿದಂತಿರುವ/ ಪೊದೆಗಳೆಲ್ಲವೂ ಮಣಿಯನೆಣಿಸುವ/ ತೋಪಿನ ಮರಗಳೆಲ್ಲವು ಮುನಿಗಳಾಗುವ / ಒಡೆದ ಮಣೆಗಳು ಇಡಿಯಾಗುವ'** 'ಜಪದ ಕಟ್ಟೆ'ಯಲ್ಲಿ ಪಟ್ಟಾಗಿ ಕೂತು ತಮ್ಮ ಆತ್ಮಚರಿತ್ರಾತ್ಮಕ ಕಾವ್ಯ 'ಜೀವಯಾನ' ಬರೆದರು.

'ಜೀವಯಾನ' ಮಂಜುನಾಥ್‌ರ ಒಟ್ಟೂ ಕಾವ್ಯದ ವ್ಯಕ್ತಿತ್ವವನ್ನು ಬಿಚ್ಚಿಟ್ಟ ಕಾವ್ಯ. ಅವರು ಆಗಾಗ ತಮ್ಮ ಬಾಲ್ಯದ ಬದುಕಿನ ಅನಿಶ್ಚಿತತೆ ಮತ್ತು ಕಷ್ಟ ಕಾರ್ಪಣ್ಯಗಳ ಬಗ್ಗೆ ಹೇಳುತ್ತಿದ್ದರಾದರೂ, ಅವರ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದ್ದ ಸ್ವಾಭಿಮಾನ ಅದನ್ನೆಲ್ಲ ವಿವರವಾಗಿ ಹೇಳಲು ಬಿಡುತ್ತಿರಲಿಲ್ಲ. ಅದೆಲ್ಲ 'ಜೀವಯಾನ'ದಲ್ಲಿ ಅಗಲಿಕೆ, ಹಸಿವು, ಕೆಟ್ಟ ಕನಸು, ಕನವರಿಕೆಗಳ ರೂಪದಲ್ಲಿ ಸ್ಫೋಟಗೊಂಡಿವೆ. ಅದರಲ್ಲಿ ಅಲ್ಲಲ್ಲಿ ಕೇಳುವ ವ್ಯಕ್ತಿತ್ವ ಒಡೆವ ಆತಂಕದ ಆರ್ತನಾದಗಳು ಹೃದಯ ಕಲಕುತ್ತವೆ. ಮೂಲತಃ ಮಂಜುನಾಥ್ ಕುಟುಂಬದ ವ್ಯಕ್ತಿ. ಅದರ ಛಿದ್ರೀಕರಣ ಅವರ ವ್ಯಕ್ತಿತ್ವದ ಛಿದ್ರೀಕರಣವೇ ಆಗಿದೆ. ಅವರ ಈ ಮೊದಲ ಸಂಕಲನಗಳಲ್ಲೂ ಅವರು ಬಾಲಕರಿದ್ದಾಗ ಅವರ ಕುಟುಂಬ ಎದುರಿಸಿದ ದುರಂತದ ಒಂದೆರಡು ಬಿಡಿ ಚಿತ್ರಗಳಿವೆಯಾದರೂ, 'ಜೀವಯಾನ'ದಲ್ಲಿ ಈ ದುರಂತ ಒಂದು ಅಖಂಡ ಕಾವ್ಯವಾಗಿ ಹೆಪ್ಪುಗಟ್ಟಿ ಓದುಗರನ್ನು ತಲ್ಲಣಗೊಳಿಸುತ್ತದೆ. 'ಒತ್ತುತಿದೆ ಹಾರೆ ಎದೆಯೊಳಗಿನ್ನೂ' ಎಂಬ ಭಾಗ ಈ ಇಡೀ ಕಾವ್ಯದ ಕೇಂದ್ರ ರೂಪಕವಾಗಿ ನಮ್ಮ ಎದೆಯನ್ನೂ ಇರಿಯುತ್ತದೆ. ಅವರ ಒಟ್ಟೂ ಕಾವ್ಯದ ಕೇಂದ್ರದಲ್ಲಿ ಇರುವುದು ಹಲವು ರೀತಿಗಳಲ್ಲಿ ತನಗೆ ತಾನೇ ಸಮಾಧಾನ ಮಾಡಿಕೊಳ್ಳುತ್ತಿರುವ ಈ 'ಜೀವಯಾನದ'ದ ಮಂಜುನಾಥ್ ಎಂಬ ಮಗು ಎಂಬುದು ನಮಗೆ ಈ ಇರಿತದ ನೋವಿನಲ್ಲಿ ಅರಿವಿಗೆ ಬರುತ್ತದೆ. ಅವರ ಇಡೀ ಕಾವ್ಯ ಒಂದು ವಿಚಿತ್ರ melonchollyಯನ್ನು ಪಡೆದುಕೊಂಡುಬಿಡುತ್ತದೆ. ಈ ಬಿಂದುವಿನಲ್ಲಿ ಮಂಜುನಾಥ್ ಒಬ್ಬ ಪೂರ್ಣ ಕವಿಯಾಗಿ ನಮ್ಮನ್ನು ತಾಕುತ್ತಾರೆ. ಈ ಪೂರ್ಣತೆಯ ಸಾಧನೆ ಹಿಂದೆ ಅವರು ಪುತಿನ ವ್ಯಸನದ ನಂತರ ಹಿಂಬಾಲಿಸಿದ್ದ ಅಲ್ಲಮ ಮತ್ತು ಕುಮಾರವ್ಯಾಸರ ವ್ಯಾಪಕ ಓದು ಇತ್ತೆಂಬುದೂ ನಿಜ.

ಹಾಗಾಗಿಯೇ ನಂತರದ ಅವರ 'ಮಗಳು ಸೃಜಿಸಿದ ಸಮುದ್ರ' ಮತ್ತು 'ಬೊಗಸೆ ಜಲ ಒಂದು ಬೀಜಕ್ಕಾಗಿ' ಎಂಬ ಸಂಕಲನಗಳ ಕವಿತೆಗಳು ಹೆಚ್ಚು ಆತ್ಮೀಯವೂ, ಸರಳವೂ, ಸಮಾಧಾನದವೂ ಆಗಿ ಕಾಣುತ್ತವೆ. ಪುತಿನ ಹೇಳಿದ ದೇಶೀಯತೆ, ಪ್ರಸನ್ನತೆ ಮತ್ತು ವಿಶದತೆಗಳು ಇಲ್ಲಿ ಪೂರ್ಣವಾಗಿ ಫಲಿಸಿವೆ. ಈ ಫಲಿತಗಳ ಮಾರ್ದನಿಯಂತೆ 'ಮಗಳು ಸೃಜಿಸಿದ ಸಮುದ್ರ'ಕ್ಕೆ 'ಕೊಟ್ಟ ಕುದುರೆಯನೇರಿ...' ಎಂಬ ಒಂದು ಹೊಸ ಮನವರಿಕೆಯನ್ನು ಸೂಚಿಸುವಂತಿರುವ ಮುನ್ನುಡಿಯಲ್ಲಿ 'ನನ್ನ ಕವಿತೆಯ ಪರಿವಾರ ಈಗ ಬಹಳ ಪುಟ್ಟದು. ದೊಡ್ಡ ಜಗತ್ತಿಗೋಸ್ಕರ ಬರೆಯುತ್ತಿದ್ದೇನೆ ಎಂದು ಭಾವಿಸುವುದು ಕಡಿಮೆ. ನಾನು ಒಂದು ಪುಟ್ಟ ಪದ್ಯ ಬರೆದರೆ ಮೊದಲು ಅದನ್ನು ನನ್ನ ಈ ಪುಟ್ಟ ಜಗತ್ತಿನಲ್ಲಿ ಚಲಾವಣೆಗೆ ಬಿಡುತ್ತೇನೆ. ಅಲ್ಲಿ ಅದು ಒಂದು ಶಬ್ದ, ಒಂದು ಸಾಲು ಅಥವಾ ಒಂದು ಭಾವನೆಯಲ್ಲಿ ಸಿದ್ಧಿಸಿಕೊಂಡು ಮರಳಿದದಷ್ಟಕ್ಕೆ ನನ್ನ ಕವಿತೆ ಲೋಕಕ್ಕೆ ಸಂಪೂರ್ಣ ಪ್ರಕಟವಾಯಿತು ಎಂದು ತೃಪ್ತನಾಗಿಬಿಡುತ್ತಿದ್ದೇನೆ, ಈಚೀಚೆಗೆ.' ಎಂದು ಬರೆಯುತ್ತಾರೆ. ನಾನು ಮತ್ತು ಮಂಜುನಾಥ್ ಇತ್ತೀಚಿನ ದಿನಗಳಲ್ಲಿ ಮುಖತಃವೋ ಅಥವಾ ದೀರ್ಘ ದೂರವಾಣಿ ಮಾತುಕತೆಗಳಲ್ಲೋ (ಕರೆ ಬಹುಪಾಲು ಬರುತ್ತಿದ್ದುದು ಅವರ ಕಡೆಯಿಂದಲೇ) ಚರ್ಚಿಸುತ್ತಿದ್ದ ಗಾಂಧೀಜಿಯ 'ಹಿಂದ್ ಸ್ವರಾಜ್'ನಿಂದ ಪಡೆದ ಅರಿವು ಇದು. ತೃಪ್ತಿಯ ಹುಡುಕಾಟ ಎಂಬುದು ಹಪಾಹಪಿಯಾಗಿ ಬೆಳೆಯದೆ ಸಂತೃಪ್ತಿಯಾಗಿ ಕೊನೆಗೊಳ್ಳುವುದು 'ನೆರೆಹೊರೆ' ಎಂಬ ಪರಿಕಲ್ಪನೆ ಇದ್ದಾಗ ಎಂಬುದೇ ಸ್ವರಾಜ್ಯದ ತಳಹದಿಯ ತತ್ವ. ಮಂಜುನಾಥರ ಕಾವ್ಯ ಮೀಮಾಂಸೆ ಹೀಗೆ ಸ್ವರಾಜ್ಯ ತತ್ವದಲ್ಲಿ ತನ್ನ ಸಾರ್ಥಕತೆ ಕಂಡುಕೊಳ್ಳತೊಡಗಿತ್ತು. ಅದೂ ನಾನು ಸಂಪಾದಿಸುವ 'ಹೊಸ ಮನುಷ್ಯ' ಎಂಬ ಸಮಾಜವಾದಿ ಮಾಸಿಕಕ್ಕಾಗಿ ವಿಶೇಷವಾಗಿ! 'ಅತಿ ಶ್ರೀಮಂತನ ಊಟದ ಮೇಜು', 'ಅಧಿಕಾರ' 'ನಾಯಕ' ಮುಂತಾದವು. (ನೋಡಿ: ಬೊಗಸೆ ಜಲ ಒಂದು ಬೀಜಕ್ಕಾಗಿ') ಇತ್ತೀಚೆಗೆ ಈ ಬಗ್ಗೆ 'ಹೊಸ ಮನುಷ್ಯ'ಕ್ಕಾಗಿ ಮೂರ್ನಾಲ್ಕು ಅದ್ಭುತ ಲೇಖನಗಳನ್ನೂ ಅವರು ಬರೆದಿದ್ದರು. ಹಾಗಾಗಿಯೇ ಅವರೀಗ ಯಾವ ಸಂಕೋಚಗಳೂ ಇಲ್ಲದೆ ರಾಜಕೀಯ-ಸಾಮಾಜಿಕ ಎನ್ನಬಹುದಾದ ಪದ್ಯಗಳನ್ನೂ ಬರೆದರು. ಅಲ್ಲದೆ 'ಹೊಸ ಮನುಷ್ಯ'ಕ್ಕಾಗಿಯೇ ಸಾಮಾಜಿಕ-ರಾಜಕೀಯ ವಿಷಯಗಳನ್ನು ಕುರಿತ ವಿಶೇಷ ಲೇಖನಗಳನ್ನೂ ಬರೆದರು.

ಹೀಗೆ ತಮ್ಮ ಕಾವ್ಯಕರ್ಮ ಮತ್ತು ತತ್ವದ ಒಂದು ಪೂರ್ಣ ಸುತ್ತು ಮುಗಿಸಿದ್ದ ಮಂಜುನಾಥ್‌ರ ಕವಿ ಜೀವ ನಿರಾಳವಾಗುತ್ತಿರುವಾಗಲೇ ಅವರು ಹಠಾತ್ತನೇ ನಮ್ಮನ್ನಗಲಿ ಹೋಗಿದ್ದಾರೆ. ಇತ್ತೀಚೆಗೆ ತಾನೇ ತಮ್ಮ ಹುಟ್ಟೂರು ತಾಳಗುಪ್ಪಕ್ಕೆ ಬಂದು ಅಲ್ಲಿನ ಪರಿಸರದಲ್ಲಿನ ತನ್ನ ಬಾಲ್ಯದ ನೆನಪುಗಳನ್ನೊಮ್ಮೆ ನವೀಕರಿಸಿಕೊಂಡು, ನೆನಪಿಗಾಗಿ ಅಲ್ಲಿಂದ ಕಲ್ಲೊಂದನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಿದ್ದ ಮಗುತನದ ಮಂಜುನಾಥ್ ತಮ್ಮೀ ಭೇಟಿಯ ಬಗ್ಗೆ ನನ್ನೊಂದಿಗೆ ಮನದುಂಬಿ ಮಾತಾಡಿ ತೃಪ್ತಿಪಟ್ಟಿದ್ದರು. (ಅವರು ಈ ಹಿಂದೆ ಅಲ್ಲಿ ತಾವು ಓದಿದ ಕನ್ನಡ ಶಾಲೆಯ ಬಗ್ಗೆ ಒಂದು ಭಾವಪೂರ್ಣ ಲೇಖನವೊಂದನ್ನು 'ಹೊಸ ಮನುಷ್ಯ' ಪತ್ರಿಕೆಗಾಗಿ ಬರೆದುಕೊಟ್ಟಿದ್ದರು.) ಅವರು ಆಕಾಶವಾಣಿಯ ರಾಷ್ಟ್ರೀಯ ಕವಿಗೋಷ್ಠಿಗೆಂದು ಸಂಸಾರ ಸಮೇತ ವಾರಾಣಾಸಿಗೆ ಹೋಗಿ ಬಂದ ನಂತರದಲ್ಲೇ ಆಸ್ಪತ್ರೆ ಸೇರಿ, ನಾವೆಲ್ಲ ಅವರು ಅಲ್ಲಿಂದ ಹೊರಬರುವುದನ್ನು ಕಾಯುತ್ತಿರುವಂತೆಯೇ ಬಾರದ ಊರಿಗೆ ತೆರಳಿಬಿಟ್ಟಿದ್ದಾರೆ. ಅವರು ವಾರಾಣಾಸಿಗೆ ಹೋಗುವ ಮುನ್ನ ನನಗೆ ಕರೆ ಮಾಡಿದ್ದರು. ನಾನು ಯಾವುದೋ ಒಂದು ಸಭೆಯಲ್ಲಿದ್ದ ಕಾರಣ 'ನಾನು ಆ ಮೇಲೆ ಮಾತಾಡುತ್ತೇನೆ' ಎಂದೆ. ಆದರೆ ಅವರು ಮತ್ತೆ ಕರೆಗೆ ಸಿಗಲೇ ಇಲ್ಲ! ಸಿಕ್ಕಿದ್ದರೆ ನಾನು ಅವರಿಗೆ 'ಈ ರಾಷ್ಟ್ರೀಯ ಕವಿಗೋಷ್ಠಿ ಎಂಬುದೆಲ್ಲ ಈಗ ಬರಿ ಬುರ್ನಾಸು' ಎಂದು ಹೇಳಿ, ವಾರಾಣಾಸಿಗೆ ಹೋಗದಂತೆ ಸೂಚಿಸುತ್ತಿದ್ದೆ. ಏಕೆಂದರೆ ಆ ಹೊತ್ತಿಗಾಗಲೇ ಅವರ ಆರೋಗ್ಯ ಸೂಕ್ಷ್ಮವಾಗಿತ್ತು. ನಿರಂತರ ಚಿಕಿತ್ಸೆಯಲ್ಲಿದ್ದರು. ಆದರೆ ಆ ಕುಟುಂಬದ ಮನುಷ್ಯ ತನ್ನ ಕುಟುಂಬದ ಸಮ್ಮುಖದಲ್ಲಿ ರಾಷ್ಟ್ರೀಯ ಕವಿಗೋಷ್ಠಿಯಲ್ಲಿ ಭಾಗವಹಿಸುವ ಆಳದಲ್ಲೆಲ್ಲೋ ಇನ್ನೂ ಉಳಿದುಕೊಂಡಿದ್ದ ಸುಪ್ತ ಆಸೆಯನ್ನು ತಣಿಸಿಕೊಳ್ಳಲೆಂದೋ ಅಥವಾ ತನ್ನನ್ನು ಸಾಕಿ ಬದುಕುಳಿಸಿದ 'ಚಿಕ್ಕಿ'ಯ(ಸಾಕು ತಾಯಿ) ಕಾಶಿ ಯಾತ್ರೆಯ ಆಸೆಯನ್ನು ನೆರವೇರಿಸುವ ಪವಿತ್ರ ಕರ್ತವ್ಯಕ್ಕಾಗಿಯೋ ಅಲ್ಲಿಗೆ ಹೋಗಿ ಅಲ್ಲಿ ಮಸಣ ಕಾಯುವವನಿಗೆ ಪ್ರಿಯರಾದವರಂತೆ ಅವನ ಕೈ ತುತ್ತಾದರು. ಆದರೆ ಕನ್ನಡದ ಕಾವ್ಯಾಭಿಮಾನಿಗಳು ಇನ್ನೂ ಹಲವು ವರ್ಷಗಳ ಕಾಲ ಓದಿ, ಚರ್ಚಿಸಿ ಆನಂದಿಸುವಷ್ಟು ಕಾವ್ಯರಾಶಿಯನ್ನು ಅವರು ಬಿಟ್ಟು ಹೋಗಿದ್ದಾರೆ. ಅದೇ ಸದ್ಯಕ್ಕೆ ನಮ್ಮ ಸಮಾಧಾನ. ಹಾಗಾಗಿ ಇಷ್ಟಂತೂ ನಿಜ: ಮಂಜುನಾಥ್ ಸದ್ಯಕ್ಕಂತೂ ನಮ್ಮ ನಡುವೆ ಬದುಕಿದ್ದಾರೆ.

ಮಂಜುನಾಥ್ ಸಾವು-ಬದುಕುಗಳ ನಡುವೆ ತುಯ್ಯುತ್ತಾ ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿದ್ದ ದಿನಗಳುದ್ದಕ್ಕೂ ನನ್ನನ್ನು ಇರಿಯುತ್ತಿದ್ದುದು, ಅವರು ನಮ್ಮ 'ಹೊಸ ಮನುಷ್ಯ' ಪತ್ರಿಕೆಯ ಹೋದ ವರ್ಷದ ವಿಶೇಷಾಂಕಕ್ಕಾಗಿ ಕಳಿಸಿದ್ದ, ಇವರಂತೆಯೇ ಆಸ್ಪತ್ರೆಯ ಹಾಸಿಗೆಯಲ್ಲಿ ಸಾವು ಬದುಕುಗಳ ನಡುವೆ ತುಯ್ಯುತ್ತಾ ಮಲಗಿದ್ದ ಸಮಾಜವಾದಿ ನಾಯಕ ಶಾಂತವೇರಿ ಗೋಪಾಲಗೌಡರನ್ನು ನೋಡಲು ಕವಿ ಗೋಪಾಲಕೃಷ್ಣ ಅಡಿಗರು ಬಂದು ಭೇಟಿಯಾದ ಸಂದರ್ಭವನ್ನನುಸರಿಸಿ ಅವರು ಬರೆದಿದ್ದ ಈ ಪುಟ್ಟ ಪದ್ಯ:

ಅವನ ಹಾಸಿಗೆ ಮೇಲೆ ಹದ್ದು
ಹಾರಾಡುವಾಗಲೂ
ಕವಿತೆಯ ಸಾಲೊಂದ ಧ್ಯಾನಿಸುವುದು
ಆಶ್ಚರ್ಯವೆನಿಸಿದರು ಸಹಜ
ತಳದಲ್ಲಿ ಕೊನೆಗುಟುಕು ಗಂಜಿ ಇರುವರೆಗೆ
ಕವಿತೆಯಭಿವ್ಯಕ್ತಿ ಅಂಥವರಿಗೆ–
ಜೀವನ ಪ್ರೀತಿಗೆ ವ್ಯಂಗ್ಯಕ್ಕೆ
ವಿಷಾದಕ್ಕೆ ಮರುಕಕ್ಕೆ ಎಲ್ಲಾ

ಹಾಗಿಲ್ಲದಿದ್ದೇಗೆ?
ಕವಿತೆಯಂಥಾ ಕವಿತೆ–ಅದು
ಒಂದುಸಿರ ಹೆಚ್ಚಿಸದಿದ್ದರೆ?

*

ಕವಿತೆ ಕುರಿತು ಎಸ್. ಮಂಜುನಾಥ್ ಮಾತುಗಳು...

(ಇವು ಕರ್ನಾಟಕ ಸಾಹಿತ್ಯ ಅಕಾಡೆಮಿ ೧೧.೩.೨೦೧೬ರಂದು ಹಾಸನದಲ್ಲಿ ಏರ್ಪಡಿಸಿದ್ದ 'ಯುವಕಾವ್ಯ ಸ್ಪಂದನ' ವಿಚಾರ ಸಂಕಿರಣದಲ್ಲಿ ಮಂಜುನಾಥ್ ಮಾಡಿದ ಉದ್ಘಾಟನಾ ಭಾಷಣವನ್ನು ಸ್ವತಃ ಅವರೇ ಸಾರ ಸಂಕ್ಷಿಪ್ತ ರೂಪದಲ್ಲಿ ಬರೆದ ಮಾತುಗಳು.-ಸಂ.)

'ೇಂದ್ರ ಸಾಹಿತ್ಯ ಅಕಡೆಮಿ ಪ್ರಶಸ್ತಿ ಬಂದಿರುವ ನಾಲ್ಕು ಜನ 'ಯುವ ಕವಿ'ಗಳ ಕವಿತೆಯ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ. ಕುಮಾರವ್ಯಾಸ ಕರ್ಣಾಟ ಕಥಾಮಂಜರಿ ಬರೆದಾಗ ಅವನಿಗೆ ನಲವತ್ತು ವರ್ಷ, ಬೇಂದ್ರೆಯವರು ಸಖೀಗೀತ ಬರೆದಾಗ ಅವರಿಗೆ ಇಪ್ಪತ್ತು ವರ್ಷ ಎಂದು ಕೇಳಿದೇನೆ. ಅಂದರೆ ನಮ್ಮ ಮಾನದಂಡದಿಂದ ಅವರು ಯುವಕವಿಗಳು! ಅವರ ಆ ಕೃತಿಗಳನ್ನು ನಮಗೆ ತೋರಿಸಿದ್ದರೆ 'ಹಿರಿಯ' ಕವಿಗಳಾದ ನಾವೇ ಒಂದೆರಡು ತಿದ್ದುಪಡಿ ಹಾಕಬಹುದಿತ್ತೇನೋ!

ನಾನು ಮೊದಲ ಕವಿತೆ ಬರೆದಿದ್ದು ಇದೇ ಹಾಸನದಲ್ಲಿ, ನಾನು ಆರೋ ಏಳೋ ತರಗತಿಯಲ್ಲಿದ್ದಾಗ. ನನ್ನ ತರಗತಿಯ 'ವೈರಿ'ಯ ಬಗ್ಗೆ ನಾನು 'ನೀನು ಹಸುವಿನ ವೇಷದ ಹುಲಿ, ಹೂವಿನ ವೇಷದ ಮುಳ್ಳು' ಎಂದೆಲ್ಲ ಬರೆದಿದ್ದನ್ನು 'ಕವಿತೆ' ಎಂದೂ ಲೆಕ್ಕಿಸದೆ ನಮ್ಮ ಟೀಚರ್ ಕ್ಲಾಸಲ್ಲಿ ನನ್ನನ್ನು ನಿಲ್ಲಿಸಿ ಬೈದಿದ್ದರು. (ಕವಿತೆಗೆ ಸಿಗುವ ಮನ್ನಣೆ ಏನು ಎಂದು ನಾನು ಅವತ್ತೇ ತಿಳಿಯಬೇಕಿತ್ತು! ಆದರೆ ಹಾಗಾಗಲಿಲ್ಲ.)

ಅಂದು ನಮ್ಮ ಟೀಚರ್‌ಗೂ ಗೊತ್ತಾಗಲಿಲ್ಲ, ಇಂದು ಅನೇಕರಿಗೂ ಗೊತ್ತಾಗುತ್ತಿಲ್ಲ. ಹಾಗಾಗಿ ಇದು ರೂಪಕದ ಕಾಲವಲ್ಲ ಅನಿಸುತ್ತಿದೆ. ನೇರವಾಗಿ ಹೇಳಿಬಿಡು, ಲಯ-ವಕ್ರೋಕ್ತಿ-ಅಲಂಕಾರಗಳ ಗೋಜೇಕೆ, ಮಾತಾಡುವ ರೀತಿ ಗದ್ಯಕವಾಗಿ ಹೇಳು, ಈಗಿನ ಬದುಕೇ ಇರುವುದು ಹಾಗೆ, ಇತ್ಯಾದಿ.

ನನ್ನ ನಂಬಿಕೆ ಏನೆಂದರೆ ಕವಿತೆ ನನ್ನದರ್ಥ, ಭಾಷೆಯದು ಅರ್ಥ. ಬರೀ ನನ್ನ ಕವಿತೆ ಅರ್ಥವನ್ನಷ್ಟೇ ಕೊಡುತ್ತೆ. ಮನದ ಪರಿಣಾಮ ಉಂಟು ಮಾಡಲ್ಲ. ಬರೀ ಭಾಷೆಯ ಕವಿತೆಗೆ ನನ್ನ ಅನುಭವದ ಚಹರೆಯೇ ಇರಲ್ಲ. ನನ್ನ ಚಹರೆ ಬಿಡದೆ ಭಾಷೆಯ ಕವಿತೆ ಬರೆಯೋದು ಸವಾಲಿನ ವಿಷಯ. ಹಾಗಾಗಿ ನನ್ನ ಮೊದಲ ಅಪೇಕ್ಷೆ ಸಹಜತೆ. ಗಿಡಕ್ಕೆ ಎಲೆ ಬಂದಂತಿರಬೇಕು ಎನ್ನುತ್ತಾನೆ ಒಬ್ಬ ಕವಿ. ಹಾಗೇ ಎಲೆಯೊಳಗಿಂದ ಹಸಿರು ತುಂಬಿದಂತಿರಬೇಕು ಎಂದೂ ಸೇರಿಸಿಕೊಳ್ಳಬಹುದು. ಮನಸ್ಸಿನ ಸಹಜ ಚಲನೆಯಷ್ಟೇ ನನಗೆ ಅನುಭವ ನೀಡಬಲ್ಲದು.

ನಾನು ಒಂದು ಕವಿತೆ ಓದಿದಾಗ-ಇದು ತಾನಾಗೇ ಅರ್ಥವಾಗುತ್ತಾ, ಅರ್ಥ ಹಚ್ಚಬೇಕ ಎನ್ನುವುದು ಮುಖ್ಯವಾಗುತ್ತೆ. ಬಹಳ ಹೋಂ ವರ್ಕ್ ಮಾಡಿ ಎಲಿಯಟ್‌ನ 'ದಿ ವೇಸ್ಟ್ ಲ್ಯಾಂಡ್' ಓದಿದ ನಂತರ ಕುವೆಂಪು 'ಒಂದು ಒಗಟು ಬಿಡಿಸಿದ ಖುಷಿಯಾಯಿತು' ಎಂದು ನಿಟ್ಟುಸುರುಬಿಟ್ಟರಂತೆ. 'ಅರ್ಥದಲಿ ರಮಿಸಿಯೂ ವಿರಮಿಸದ ತೆರದೊಳಗೆ ಭಾವ ಸಾರಥ್ಯದೊಳೆ ಚಲಿಸುವಂತೆ' ಎನ್ನುತ್ತಾರೆ ಪುತಿನ. ಉದಾಹರಣೆಗೆ-'ಬೇಸಿಗೆಯನಟ್ಟಲು ಬೀಸಣಿಗೆ ಬೀಸ್ಯಾಡಿ ಮರುಳಾಟದಲಿ ಜನ ನರಳ್ಯಾಡಿರೆ' ಎಂದು ಬೇಂದ್ರೆ ಬರೆದಾಗ, ಅದರ ಅರ್ಥಕ್ಕೆ ಯಾರ ಮಧ್ಯಸ್ಥಿಕೆ ಬೇಕು?

ಇಲ್ಲಿ ಮುಖ್ಯ ಎಂದರೆ, ಸೆಖೆಗೆ ಗಾಳಿ ಬೀಸಿಕೊಳ್ಳುವುದು ಬೀಸಣಿಗೆಯಲ್ಲಿ ಯಾರನ್ನೋ ಹೊಡೆದಟ್ಟಿದಂತೆ ಕಾಣುವ ಇಂದ್ರಿಯ ವಿವರ. ಆ ವಿವರದ ಸಾಧನವಿಲ್ಲದೆ ಕವಿತೆ ಕುಸಿಯುತ್ತದೆ.

ಕವಿತೆಯ ಹಿಂದೆ ತಾರ್ಕಿಕವಾದ ಸಮಂಜಸವಾದ ಅನುಭವ ಇರಲೇಬೇಕು. ಆ ತರ್ಕ ವ್ಯಾವಹಾರಿಕ ತರ್ಕವಾಗಿರಬೇಕಿಲ್ಲ, ಪ್ರತಿಭಾತರ್ಕವಾಗಿರಬಹುದು. ಹಾಗೆ ಸಮಂಜಸ ಅನುಭವದ ಕವಿತೆ ಓದುಗನಿಗೆ ಕನ್ನಡಿಯಂತಾದರೆ ಹಾಗಿಲ್ಲದ್ದು ಬರೆದವನ ಕೇಸ್ ಷೀಟ್ ಆಗಿರುತ್ತದೆ! ಅಂದರೆ, ಕವಿತೆ ಕಟ್ಟಿದ್ದೇ ಹುಟ್ಟಿದ್ದೇ ಎನ್ನುವ ಪ್ರಶ್ನೆ. ಕವಿತೆ ಎನ್ನುವುದು ನಾನು 'ಮಾಡು'ವಂಥದಲ್ಲ, 'ಆಗು'ವಂಥದು. ಎಚ್ಚರ=ಮೈಮರೆವುಗಳ ಮಿಶ್ರ ಸ್ಥಿತಿಯಲ್ಲಿ ನನ್ನಲ್ಲಿ ಉಂಟಾಗುವಂಥದು. ಹೇಗೆ ಕುಡುಕನ, ಪಾತ್ರಿಯ ವಾಕ್ಯ ವಿನ್ಯಾಸ ಬೇರೆಯೋ ಹಾಗೆ ಕವಿತೆಯ ವಚೋವಿನ್ಯಾಸವೂ ಬೇರೆಯೇ.

ಕಡೆಯದಾಗಿ, ಹೀಗೆಲ್ಲ ನನಗೆ ಒಪ್ಪಿಗೆಯಾದ ಕವಿತೆಯ ಅನುಭವ ನನಗೆ ಮೌಲಿಕವೇ? ಈ ಪರೀಕ್ಷೆಯಲ್ಲೂ ಅದು ಗೆಲ್ಲಬೇಕು.

ಆದರೆ ಈಗ ಬಹು ಮಂದಿಗೆ ಧೋರಣೆ, ವಿಚಾರ, ಅಭಿಪ್ರಾಯ ಮುಖ್ಯ. ಇದು ಡೆಮಾಕ್ರಸಿಯ ಕಾಲ. ನೀವು ಅಂದರೆ ನಿಮ್ಮ ರಾಜಕೀಯ ನಿಲುವು ಎಂಬಂಥ ಪೊಲಿಟಿಕಲ್ ನಿಲುವಿನ ಯುಗ. ಕೆಲವು ವರ್ಷಗಳ ಹಿಂದೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಹೇಳಿದರು: ನೀವು ಶೋಷಕರ ಪರವೋ ಶೋಷಿತರ ಪರವೋ-ಈಗ ಸ್ಪಷ್ಟಪಡಿಸಬೇಕಾಗಿದೆ, ಎಂದು. ಅದು ನೀನು ಒಳ್ಳೆಯ ಸಾಹಿತಿಯೋ ಅಲ್ಲವೋ ಎಂಬುದನ್ನು ತೀರ್ಮಾನಿಸಿಬಿಡುತ್ತದೆ. ಅಂದರೆ ಕೃತಿಯ ಅಭಿಪ್ರಾಯವಷ್ಟೇ ಸಾಕು, ಅದರ ರೂಪಕತೆ ಬೇಕಾಗಿಲ್ಲ-ಹೀಗೆ.

ಧಾರವಾಡದಲ್ಲಿ ನಡೆದ ಸಾಹಿತ್ಯ (ಸಂಭ್ರಮ) ಸಭೆ ಆರಂಭವಾಗಿದ್ದೇ ಸದ್ಯದ 'ಅಸಹಿಷ್ಣುತೆ'ಯ ಚರ್ಚೆಯಿಂದ. ಅದೇ ಅತಿ ಮುಖ್ಯ ಸಾಹಿತ್ಯ ಚರ್ಚೆ ಎಂಬಂತೆ. ಅದರ ನಂತರ ಬಹು ಪಾಲು ಮಾತು ಅದರ ಸುತ್ತಲೇ ನಡೆಯಿತು. ನೋಡಿದವರಿಗೆ ತಾವು ಯಾವುದಾದರೂ ರಾಜಕೀಯ ಪಕ್ಷದ ಸಭೆಗೆ ಸಾಕ್ಷಿಯಾಗಿದ್ದೇವೋ, ಮಾತುಗಳು ಪಕ್ಷದ ನಾಯಕರ ಬಾಯಿಂದ ಬರುತ್ತಿವೆಯೇನೋ ಅನಿಸಿರಲು ಸಾಕು. ಸಾಹಿತ್ಯದ ರಾಜಕೀಯ ಬೇರೆಯೇ. ಹೆಚ್ಚು ಆಳವಾದ್ದು. ಅದು ಸಂವೇದನೆಯನ್ನು ಬೆಳೆಸುವಂಥದೋ ಹೊರತು ವಿಚಾರಗಳ ಪ್ಯಾಕೇಜ್ ನೀಡುವುದಲ್ಲ. ಕವಿತೆ ಕಾಣುವ ರಾಜಕೀಯ ಕೂಡ ಮನುಷ್ಯನ ಅಸ್ತಿತ್ವದೊಳಗೆ ಕರಗಿಕೊಂಡಿರುವಂಥದು. ಹೊರಚಾಚಿಕೊಂಡು ಪಾಕ್ಷಿಕ ನಿಲುವಲ್ಲ. 'ಲೋಕವನ್ನು ನೋಡುವ ಕಣ್ಣು ಕೊಡುತ್ತದೆ ಕವಿತೆ. ಇಂತಿಂಥದೇ ನೋಡು ಎನ್ನುವುದಿಲ್ಲ. ಹಾಗನ್ನುವುದು ಮೂಲಭೂತವಾದ'

ಕವಿತೆ ದೇಶಕಾಲಾಬಾಧಿತ ಎನ್ನುವುದು ನನ್ನ ಅಭಿಪ್ರಾಯವಲ್ಲ. ಕಾಲ ದೇಶದ ವಾತಾವರಣವೇ ಅದರದ್ದೂ. ಆದರೆ ಅದರ ಉಸಿರು ಬೇರೆ. ಅನುಭವ ಮನಸ್ಸೊಳಗೆ ಬಿದ್ದು ಮನೋದ್ರವ್ಯದ ರೂಪಕವಾಗದೇ ಅದಕ್ಕೆ ವಿಧಿಯಿಲ್ಲ. ನಮಸ್ಕಾರ.

ಕಥೆಗಾರ್ತಿ ಎಂ.ಪಿ. ಉಮಾದೇವಿಯವರನ್ನು ನೆನೆಯುತ್ತಾ...




ಏಪ್ಪತ್ತರ ದಶಕದಲ್ಲಿ 'ಓ ಗಂಡಸೇ ನೀವೆಷ್ಟು ಒಳ್ಳೆಯವನು!' ಎಂಬ ಕಥೆಯ ಮೂಲಕ ಯುವಕರಲ್ಲಿ ರೋಮಾಂಚನ ಮೂಡಿಸಿದ್ದ ಕಥೆಗಾರ್ತಿ ಎಂ.ಪಿ ಉಮಾದೇವಿಯರನ್ನು ಹಳೆಯ ತಲೆಮಾರಿನ ಕನ್ನಡ ಓದುಗರಾರೂ ಮರೆತಿರಲಾರರು. ಗಂಡು ಪ್ರೀತಿಗೆ ಹಂಬಲಿಸುತ್ತಾ ಗಂಡಸನ್ನು ಮುಕ್ತವಾಗಿ ಆರಾಧಿಸುವಂತೆ ತೋರುತ್ತಿದ್ದ (ಆಗಿನ್ನೂ ಕನ್ನಡ ಸಾಹಿತ್ಯ ಲೋಕಕ್ಕೆ ಸ್ತ್ರೀವಾದಿಗಳ ಆಗಮನವಾಗಿರಲಿಲ್ಲವೆಂಬುದು ಅವರ-ಆಂದರೆ ಯಾರ?-ಅದೃಷ್ಟವಾಗಿತ್ತು!) ಇದೇ ಲಹರಿಯ ಎರಡು ಮೂರು ಕಥೆಗಳನ್ನು ಪ್ರಕಟಿಸಿ. ಗಂಡಸರ ಕೆಟ್ಟ ಕುತೂಹಲವನ್ನು ಕೆರಳಿಸಿ, ನಂತರ ಕಥಾಲೋಕದಿಂದಲೇ ಮಾಯವಾಗಿದ್ದ ಈ ಲೇಖಕಿ ಮತ್ತೆ ಈಗ ನಮ್ಮ ಗಮನ ಸೆಳೆದಿರುವುದು ಅವರ ದಿಢೀರ್ ಸಾವಿನ ಸುದ್ದಿಯಿಂದ. ಕಣ್ಣಿನ ವೈದ್ಯರಾಗಿದ್ದ ಡಾ. ಎಂ.ಪಿ. ಉಮಾದೇವಿ ದಾವಣಗೆರೆಯಲ್ಲಿ ಇತ್ತೀಚೆಗೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆ.

ಆದರೆ ಬಹಳ ಜನಕ್ಕೆ ಗೊತ್ತಿಲ್ಲದ ಸಂಗತಿ ಎಂದರೆ ಉಮಾದೇವಿಯವರು ಆ ಕಥೆಗಳನ್ನು ಬರೆದ ಎಷ್ಟೋ ವರ್ಷಗಳ ನಂತರ ಮತ್ತೆ ಗಂಭೀರ ಬರವಣಿಗೆಗೆ ತೊಡಗಿಕೊಂಡು 'ಬದುಕಲಾರದ ಬಲವಂತರು' ಎಂಬ ಸಾಮಾಜಿಕ ಕಾದಂಬರಿಯನ್ನೂ, 'ಶೈವ ವಾತ್ಸಲ್ಯ' ಎಂಬ ಮಹಾಕಾವ್ಯವನ್ನೂ, ಇತ್ತೀಚೆಗೆ ಆತ್ಮ ಕಥೆ ಆಧರಿಸಿದ ಕಾದಂಬರಿ ಎಂದು ವರ್ಣಿತವಾಗಿರುವ 'ಕಾಮದೇವನ ಪಗಡೆಯಾಟ' ಎಂಬ ಕಾದಂಬರಿಯನ್ನೂ ಬರೆದಿದ್ದಾರೆ. ಅವಿವಾಹಿತರಾಗಿ ಉಳಿದಿದ್ದ ಅವರು ಮಹಾನ್ 'ಶಿವ ಪ್ರೇಮಿ'ಯಾಗಿ, ಇತರ ಯಾರನ್ನೂ ಸೇರದ ಒಂಟಿ ಮಹಿಳೆಯಾಗಿ ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ತಾವು ಸಾಕಿದ ನಾಯಿಗಳ ನಡುವೆಯೇ ಬಾಳಿ ಅಸು ನೀಗಿದ್ದಾರೆ. ಹೀಗಾಗಿ ಇವರ ಈ ಕಾದಂಬರಿ/ ಮಹಾಕಾವ್ಯ ಕನ್ನಡ ಸಾಹಿತ್ಯ ಓದುಗರಿಗೆ ಸುಲಭವಾಗಿ ಲಭ್ಯವಾಗಿಲ್ಲ. ಆದರೆ ಓದಿದ ಕೆಲವು ಲೇಖಕಿಯರು ಹೇಳುವಂತೆ ಈ ಮೂರೂ ಒಂದೊಂದು ರೀತಿಯಲ್ಲಿ ಕನ್ನಡ ನುಡಿ ಲೋಕಕ್ಕೆ ಅನನ್ಯ ಕೊಡುಗೆಗಳು. ಹಾಗಾಗಿ ಈಗಲಾದರೂ, ಇವರ ಈ ಕೃತಿಗಳ ಅಧ್ಯಯನ ಅಗತ್ಯವಾಗಿದೆ. ಇದರಿಂದ ಕನ್ನಡ ಸ್ತ್ರೀ ಸಂವೇದನೆಗೊಂದು ಹೊಸ ಆಯಾಮ ದೊರಕಿದರೂ ಆಶ್ಚರ್ಯವಿಲ್ಲ.-ಸಂ.

ಪುಸ್ತಕಾವಲೋಕನ

ಪು: ಉತ್ತರ ಕಾಂಡ (ಕಾದಂಬರಿ) ಲೇ: ಎಸ್.ಎಲ್. ಭೈರಪ್ಪ ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು-೫೩ ಪು : ೩೨೯ ಬೆಲೆ: ರೂ. ೩೭೫/-

ಭೈರಪ್ಪನವರ ಯು-ಟರ್ನ್



ಎಸ್ ಎಲ್ ಭೈರಪ್ಪನವರ ಹೊಸ ಕಾದಂಬರಿ 'ಉತ್ತರ ಕಾಂಡ'ದ ಓದು ಹಲವು ಪ್ರಶ್ನೆಗಳಿಗೆ ನಮ್ಮನ್ನು ಮುಖಾಮುಖಿಯಾಗಿಸುತ್ತದೆ. ಭೈರಪ್ಪನವರ ಈ ತನಕದ ಬರವಣಿಗೆಯ ಮೂಲಧಾತುಗಳಲ್ಲಿ ಒಂದಾಗಿದ್ದ ಹೆಣ್ಣಿನ ಪ್ರಶ್ನೆಯು ಇಲ್ಲಿಯೂ ಮುಂದುವರೆದಿದೆ. ಆದರೆ ಹೆಣ್ಣನ್ನು ಕುರಿತಂತೆ ಭೈರಪ್ಪನವರ ನೋಟ ನಿಲುವುಗಳೇ ಯು ಟರ್ನ್ ತೆಗೆದು ಕೊಂಡಂತೆ ಭಾಸವಾಗುವ ನೆಲೆಯೊಂದನ್ನು ಇಲ್ಲಿ ಭೈರಪ್ಪನವರು ಕಟ್ಟುತ್ತಿರುವಂತೆ ಕಾಣಿಸುತ್ತಿದೆ. ಭೈರಪ್ಪನವರೂ ಸೇರಿದಂತೆ ಪುರುಷರಲ್ಲಿ ಸಾಧ್ಯವಾಗಬೇಕೆಂದು ಪ್ರಜ್ಞಾವಂತರು ಬಯಸುವ ಮತ್ತು ಈ ಕಾಲದ ಅನಿವಾರ್ಯ ಅಗತ್ಯವೂ ಹೌದೆಂದು ತಿಳಿಯಲಾಗಿರುವ ಸಂವೇದನೆಯ ಪಲ್ಲಟವೊಂದು ಘಟಿತವಾಗುತ್ತಿದೆಯೇ ಎನ್ನುವ ಪ್ರಶ್ನೆಯನ್ನು ಈ ಕಾದಂಬರಿಯ ಓದು ನಮ್ಮೆದುರಿಗೆ ಇಡುತ್ತದೆ.ಈ ದೃಷ್ಟಿಯಿಂದ ಇದು ಅಪೇಕ್ಷಣೀಯವಾದ ಬೆಳವಣಿಗೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ಈ ವಿರುದ್ಧ ಧ್ರುವದೆಡೆಗಿನ ಚಲನೆಯು ಅದೆಷ್ಟು ಅಧಿಕೃತ, ಸಹಜ ಎನ್ನುವ ಪ್ರಶ್ನೆಯೂ ಅಷ್ಟೇ ಅಯಾಚಿತವಾಗಿ ನಮ್ಮೆದುರಿಗೆ ಬರುತ್ತದೆ.

ಕನ್ನಡದ ಮತ್ತು ಭಾರತದ ಅತ್ಯಂತ ಜನಪ್ರಿಯ ಲೇಖಕರೆಂದು ಬಿಂಬಿಸಲಾಗಿರುವ ಇವರ ಬರವಣಿಗೆ, ಆಲೋಚನಾಕ್ರಮ ಈ ಎಲ್ಲವೂ ಕಾಲಾನುಕಾಲದಲ್ಲಿ ಒಂದು ನಿರಂತರವಾದ ಸತತ ಎನ್ನುವಂತೆ ಕಾಣಿಸಿಕೊಳ್ಳುತ್ತಲೇ ಬಂದಿದೆ. ಹೆಣ್ಣನ್ನು ಕುರಿತ ಇವರ ನಿಲುವುಗಳನ್ನೇ ನೋಡುವುದಾದರೆ, 'ವಂಶವೃಕ್ಷ'ದಿಂದಲೇ ಆರಂಭವಾಗಿರುವಂತೆ ತೋರುವ 'ಪ್ರತಿಗಾಮಿ' ನಿಲುವು ಇವರ ತೀರ ಇತ್ತೀಚಿನ 'ಯಾನ'ದಲ್ಲಿಯೂ ಅಷ್ಟೇ ತೀವ್ರವಾಗಿ ಪ್ರತಿಪಾದಿಸಲ್ಪಟ್ಟಿದೆ.

ಏರು ಯೌವ್ವನದಲ್ಲಿ ಗಂಡನನ್ನು ಕಳೆದುಕೊಂಡ ಕಾತ್ಯಾಯಿನಿಯು ಮತ್ತೊಂದು ಮದುವೆಯಾಗಿ, ಅದನ್ನು ಸ್ವತಃ ಅವಳೇ ಜೀರ್ಣಿಸಿಕೊಳ್ಳಲಾಗದೇ, ಹೊರಬರಲಾಗದ ಪಾಪಪ್ರಜ್ಞೆಯಲ್ಲಿ ತನ್ನ ಜೀವವನ್ನೇ ನೀಗಿಕೊಳ್ಳುವ ಕಥನವು ಆಳದಲ್ಲಿ ಧ್ವನಿಸುವ ಸತ್ಯ ಯಾವುದು? 'ಪಾಪಪ್ರಜ್ಞೆ'ಯು ಕಾತ್ಯಾಯನಿಯ ಒಳಗಿನದ್ದೋ, ಮೌಲ್ಯವ್ಯವಸ್ಥೆಯು ಅವಳ ಮೇಲೆ ಹೇರುತ್ತಿರುವುದೋ? ಏಕೆಂದರೆ, ತನ್ನ ಹುಟ್ಟಿನ ಬಗೆಗಿನ ಸತ್ಯಗಳನ್ನು ಮುಖಾಮುಖಿಯಾಗುವ ಶ್ರೋತ್ರೀಯರು ಧೀಮಂತರಾಗಿ ಕಾಣುತ್ತಾ ಉದಾತ್ತ ನಾಯಕನ ಸ್ಥಾನಕ್ಕೆ ಏರುತ್ತಾ ಹೋದರೆ, ದುರ್ದಮ್ಯ ಪ್ರಾಕೃತಿಕತೆಗೆ ತನ್ನನ್ನು ಒಪ್ಪಿಸಿಕೊಂಡ ಕಾತ್ಯಾಯಿನಿಯು 'ಹುಲುಮಾನವ'ಳಾಗಿ ಪಾತಾಳಕ್ಕೆ ಇಳಿಯುವ ವಿಪರ್ಯಾಸ ಇಲ್ಲಿದೆ. ಇದೇ ವಿಪರ್ಯಾಸದ, ಅಪ್ರಾಕೃತಿಕವಾದ, ಪಿತೃಸಂಸ್ಕೃತಿಯ ವಕ್ತಾರಿಕೆಯು ಇವರ ಮುಂದಿನ ಕಾದಂಬರಿಗಳಲ್ಲಿ ಇನ್ನೂ ಆಳವಾಗುತ್ತಾ , ಗಟ್ಟಿಯಾಗುತ್ತಾ ಹೋಗಿದೆ.

ಅಂಚು, ಆವರಣ, ಕವಲು ಮತ್ತು ಯಾನ ಕಾದಂಬರಿಗಳು ಇದಕ್ಕೆ ಸ್ಪಷ್ಟವಾದ ನಿದರ್ಶನಗಳು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಇವು ಪಿತೃಸಂಸ್ಕೃತಿಯದು ಎಂದು ಮಾತ್ರ ಹೇಳಿ ಮುಗಿಸಿಬಿಡಲಾಗದ ವಿಕೃತಿಯೇ ಇಲ್ಲಿ ಎದ್ದು ಕಾಣುತ್ತದೆ.ಈ ವಿಕೃತಿಯು ಆರಂಭದಿಂದಲೂ ಇವರ ಬರವಣಿಗೆಯಲ್ಲಿದೆ. ಅದು ಹೆಚ್ಚುತ್ತಲೇ ಹೋಗಿದೆಯೇ ಹೊರತು ಕಡಿಮೆಯಾದದ್ದಿಲ್ಲ. ಹಾಗಿದ್ದಾಗ 'ಉತ್ತರ ಕಾಂಡ'ದ ನೋಟ ಪಲ್ಲಟವನ್ನು ಹೇಗೆ ಅರ್ಥೈಸಬೇಕು? ಇದು ಭೈರಪ್ಪನವರ ನಿಲುವಿನ ಉತ್ತರ ಕಾಂಡವೇ ಆದರೆ ಅದು ನಿಜಕ್ಕೂ ಸಂತೋಷದ ಸಂಗತಿ.

ಇಲ್ಲಿ ಪ್ರಧಾನವಾಗಿ ಎರಡು ಪ್ರಶ್ನೆಗಳಿವೆ. ಮೊದಲನೆಯದು ಇದರ ಪ್ರಾಮಾಣಿಕತೆ. ಎರಡನೆಯದು ಇದರ ಹೊಸತನವೇನು ಎನ್ನುವುದು.


ಕೃತಿಯ ನಿಲುವೊಂದರ ಪ್ರಾಮಾಣಿಕತೆಯನ್ನು ಗುರುತಿಸುವುದು ಮೂರ್ತ ಮತ್ತು ಅಮೂರ್ತವಾದ ಸಂಗತಿ. ಅದರ ಸಾಚಾತನವನ್ನು ಆ ಕೃತಿಯ ಓದಿನ ಅನುಭವದ ಮೇಲೆಯೇ ನಿರ್ಧರಿಸಲಾಗುತ್ತದೆ. ಅದು ಆ ಒಂದು ಕೃತಿಯ ಓದಿಗೆ ಸಂಬಂಧಪಟ್ಟದ್ದು ಮಾತ್ರ ಆಗಬಹುದು ನಿಜ. ಆದರೆ ಭೈರಪ್ಪನವರ ಕೃತಿಗೆ ಸಂಬಂಧಪಟ್ಟಂತೆ ಇದು ಅಷ್ಟು ಸ್ವಾಯತ್ತ ಓದು ಆಗುವುದು ಸಾಧ್ಯವಿಲ್ಲ, ಅದೂ ಹೆಣ್ಣಿಗೆ ಸಂಬಂಧ ಪಟ್ಟಂತೆ. ಏಕೆಂದರೆ ಕೃತಿಯೊಂದು ಪ್ರಕಟವಾದ ಆರೇಳು ತಿಂಗಳಲ್ಲಿಯೇ ಆರೇಳು ಮರುಮುದ್ರಣಗಳನ್ನು ಕಾಣುವ ಅದೃಷ್ಟಶಾಲಿ ಇವರು. ಹೆಣ್ಣು ಅತ್ಯಾಚಾರವನ್ನು ಸುಖಿಸುತ್ತಾಳೆ ಎನ್ನುವ ಹೇಳಿಕೆಯಿಂದ ಹಿಡಿದು ವೃತ್ತಿನಿರತ ಹೆಣ್ಣುಮಕ್ಕಳೆಲ್ಲರೂ ತಮ್ಮ ದೇಹವನ್ನು ಬಂಡವಾಳವಾಗಿ ಹೂಡಿಯೇ ವೃತ್ತಿಯಲ್ಲಿ ಮೇಲೇರುತ್ತಾರೆ ಎನ್ನುವುದನ್ನು ಸಾರಾಸಗಟು ಎನ್ನುವಂತೆ ಚಿತ್ರಿಸುವ ವಿಕೃತಿಯನ್ನು ಅದು ಕೌಟುಂಬಿಕ ವಿಘಟನೆ ಎನ್ನುವ ತಾತ್ವಿಕತೆಯ ಹೆಸರಿನಲ್ಲಿ ಪ್ರತಿಪಾದಿಸಿದವರ ಹೊಸ ಕೃತಿಯನ್ನು ಸ್ವಾಯತ್ತ ಓದಿಗೆ ಒಳಪಡಿಸುವುದು ಸಾಧ್ಯವೇ ಇಲ್ಲ. ಆದ್ದರಿಂದಲೇ 'ಉತ್ತರ ಕಾಂಡ'ವನ್ನು ಓದುವವರು ಗಲಿಬಿಲಿಗೆ ಒಳಗಾಗುತ್ತಾರೆ. ಇದರ ಹಿಂದೆ ಇನ್ನೇನು ಉದ್ದೇಶವಿದ್ದಿರಬೇಕು ಎನ್ನುವ ಪ್ರಶ್ನೆ ಓದುಗರಿಗೆ ಬಂದರೆ ಅದು ಸಕಾರಣವಾದುದು. ಕ್ಷುದ್ರಳೂ, ತನ್ನ ದೇಹವನ್ನು ಯಾರಿಗೆ ಬೇಕಾದರೂ ಕೊಟ್ಟು ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವಂತಹ, ನೈತಿಕತೆಯ ಹಂಗೇ ಇಲ್ಲದ ಹೆಣ್ಣು ಇದ್ದಕ್ಕಿದ್ದಂತೆ ಅಪಾರ ಆತ್ಮಘನತೆಯ, ಸ್ವಪ್ರಜ್ಞೆಯ ಹೆಣ್ಣಾಗಿ ಕಾಣಿಸಿಕೊಂಡರೆ ಅದನ್ನು ಒಪ್ಪುವುದು ಸುಲಭವಲ್ಲ. ಹೀಗೆ ಹೇಳುತ್ತಿರುವಾಗ ಪ್ರಜ್ಞಾವಂತ ಮತ್ತು ಸ್ತ್ರೀವಾದಿ ಓದುಗರು ಸಿನಿಕರೆಂದು ತಿಳಿಯಬೇಕಿಲ್ಲ. ಸ್ಥಾಪಿತ ನಿಲುವೊಂದು ತನ್ನ ಬದಲಾವಣೆಯನ್ನು ಸ್ಥಾಪಿಸುವುದರ ಕಷ್ಟವೇನೆಂದು ಚರ್ಚಿಸಬೇಕು. ಮತ್ತು ಇದು ಅನಿವಾರ್ಯ ಹಾಗೂ ಮುಖ್ಯ. ಈ ನಮ್ಮ ಕಾಲವೇ ಛದ್ಮವೇಷಗಳ ಕಾಲವಾಗಿರುವಾಗ ಈ ಅಗ್ನಿಪರೀಕ್ಷೆಯನ್ನು ಬಿಟ್ಟುಬಿಡಲಾಗದು.

ಇನ್ನು ಕಥಾವಸ್ತುವಿನ ಹೊಸತನ. ಸೀತೆಯನ್ನು ಅವಳ ಬೌದ್ಧಿಕ ಸ್ಪಷ್ಟತೆ, ವ್ಯಕ್ತಿತ್ವದ ಘನತೆಯಲ್ಲಿ ಚಿತ್ರಿಸುವ ಸಂಗತಿಯಲ್ಲಿ ಹೊಸದೇನೂ ಇಲ್ಲ ಭಾರತದ ಹಲವು ಭಾಷೆಗಳಲ್ಲಿ, ನಮ್ಮ ಜನಪದ ಕಾವ್ಯ-ಕಥನಗಳಲ್ಲಿ ಕಾಣಿಸುವ ಸೀತೆ ಅಪ್ಪಟ ಆಧುನಿಕ ಹೆಣ್ಣಾಗಿ ಮಾತ್ರವಲ್ಲ, ಸ್ತ್ರೀವಾದಿಯಂತೆಯೂ ಚಿತ್ರಿತಳಾಗಿದ್ದಾಳೆ.. ಅದು ಭೈರಪ್ಪನವರ ಕಣ್ಣಿಗೆ ಕಾಣಿಸಿತು ಎನ್ನುವುದು ಹೊಸದು. ಕಾದಂಬರಿಯ ಕೆಲವು ಭಾಗಗಳಲ್ಲಿ ಸೀತೆ ಅದೆಷ್ಟು ಪ್ರಖರವಾಗಿದ್ದಾಳೆ ಎಂದರೆ, ತನ್ನ ಮಕ್ಕಳನ್ನು ರಾಮನ ಮಕ್ಕಳೆಂದು ಗುರುತಿಸುವುದನ್ನೇ ಸೀತೆ ಸ್ಪಷ್ಟವಾಗಿ ವಿರೋಧಿಸುತ್ತಾಳೆ. ತನ್ನನ್ನು ಪರಿತ್ಯಜಿಸಿದ ರಾಮ, ತನ್ನ ಹೊಟ್ಟೆಯಲ್ಲಿದ್ದ ಮಕ್ಕಳನ್ನೂ ಪರಿತ್ಯಜಿಸಿದಂತೆ ಅಲ್ಲವೆ ಎಂದು ಕೇಳುವ ಸೀತೆ, ತಂದೆಯಾಗಿ ರಾಮ ಮಕ್ಕಳಿಗೆ ಏನೂ ಆಗಲೇ ಇಲ್ಲವಲ್ಲ ಎನ್ನುವ ಮೂಲಭೂತವಾದ ಪ್ರಶ್ನೆಯನ್ನು ಎತ್ತುತ್ತಾಳೆ. ಈಗ ಅದನ್ನು ಚಲಾಯಿಸಲು ಬಯಸುತ್ತಿರುವ ರಾಮನ ನೈತಿಕತೆಯ ಬುಡವನ್ನೇ ಸೀತೆ ಕಿತ್ತು ಹಾಕುತ್ತಾಳೆ. ಕಾದಂಬರಿಯುದ್ದಕ್ಕೂ ಸೀತೆ ಎಲ್ಲೂ ಆತ್ಮಮರುಕದ ಹೆಣ್ಣಿನಂತೆ ಕಾಣಿಸುವುದಿಲ್ಲ. ಲಕ್ಷ್ಮಣ ಮತ್ತು ಊರ್ಮಿಳೆಯರು ಇಲ್ಲಿ ಸೀತೆಗೆ ಪೂರಕವಾಗಿ ಬೆಳೆದಿದ್ದಾರೆ ಎನ್ನುವುದೊಂದು ಆಸಕ್ತಿಯ ಅಂಶ. ಊರ್ಮಿಳೆಯಂತೂ ಸೀತೆಯ ಒಂದು ಅಭಿನ್ನ ಭಾಗವಾಗಿಯೇ ಕಾದಂಬರಿಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಲಕ್ಷ್ಮಣ ಮತ್ತು ಸೀತೆಯ ಕೃಷಿಯ ಜೊತೆಗಿನ ನಂಟು, ಲಕ್ಷ್ಮಣ ಮತ್ತು ಸೀತೆಯ ನಡುವಿನ ಸಂಬಂಧದ ಮಾನವೀಯ ಆಯಾಮಗಳಿಗೆ ನೀಡಿರುವ ಒತ್ತು ಕುತೂಹಲಕರವಾಗಿ ಕಾಣಿಸುತ್ತದೆ.

ಆದರೆ ಕೊನೆಗೂ ಒಂದು ಪ್ರಶ್ನೆ ಉಳಿಯುತ್ತದೆ, ಇಷ್ಟು ದಿನ ಹೆಣ್ಣಿನ ವಿಷಯಕ್ಕೆ ಮಾಡಿರುವ ಪಾಪ ಇದೊಂದರಿಂದ ಪರಿಹಾರವಾಗುವುದು ಸಾಧ್ಯವೆ? ಅದೂ ಸೀತೆಯಂತಹ ಸುರಕ್ಷಿತ ಸ್ತ್ರೀಪಾತ್ರವನ್ನು ಇಟ್ಟುಕೊಂಡು? ಇದು ಆರಂಭ ಎನ್ನುವುದಾದರೆ ಅದೇ ಸಮಾಧಾನದ ಸಂಗತಿ. ಇನ್ನೊಂದು ವ್ಯಂಗ್ಯವಿದೆ ಇಲ್ಲಿ. ಈ ತನಕ ಸಮಕಾಲೀನ ಪಾತ್ರಗಳ ಮೂಲಕ ಹೆಣ್ಣಿನ 'ಭೇದ'ವನ್ನು ಮಾಡಿ ಈಗ ಪೌರಾಣಿಕ ಪಾತ್ರವೊಂದರ ಮೂಲಕ ಅದನ್ನು ಸರಿಪಡಿಸುವ ಪ್ರಯತ್ನವು ಭೈರಪ್ಪನವರ ಜಾಣ ನಡೆಯ ಹಾಗೇ ಕಾಣಿಸುತ್ತದೆ. ಹಾಗೆಯೇ ಇದರ ರಾಜಕೀಯ ಅಜೆಂಡಾ ಓದುಗರಿಗೆ ತಿಳಿಯುವುದಿಲ್ಲ ಎಂದೂ ಭೈರಪ್ಪನವರು ತಿಳಿಯಬೇಕಿಲ್ಲ.

-ಡಾ. ಎಂ.ಎಸ್. ಆಶಾದೇವಿ

ತಿಂಗಳ ಸಾಲುಗಳು...



ನಿಜಕ್ಕೆ ಶೃಂಗಾರದ ಹಂಗಿಲ್ಲ
ಒಳಿತಿಗೆ ತರ್ಕದ ಹಂಗಿಲ್ಲ
ಅರಿವಿಗೆ ಜ್ಞಾನದ ಹಂಗಿಲ್ಲ
–ತಾವೋ ಗುರು ಲಾವೋತ್ಸೆ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963



Regd. News Paper RNI No. KARKAN/2012/47568
Rgd No. KA/SK/SMG-1209/2016-18

ಇವರಿಗೆ \ To

638. ಡಿ.ಎಸ್. ನಾಗಭೂಷಣ
ಎಚ್.ಐ.ಜಿ.-5, 'ನುಡಿ', ಕಲ್ಲಹಳ್ಳಿ ಬಡಾವಣೆ,
ವಿನೋಬ ನಗರ, ಶಿವಮೊಗ್ಗ-577 204

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)